

ಪವಹಿತ

■ ಡಾ.ಆನಂದರಾಮ ಉಪಾಧ್ಯ

ಸಮಾಹಿತ

(ಲೇಖನಗಳು)

ಡಾ. ಆನಂದರಾಮ ಉಪಾಧ್ಯ

ನೃಪತುಂಗ ಪ್ರಕಾಶನ

ನಂ. 796, ಇ ಡಬ್ಲ್ಯೂ ಎಸ್.
ಎಂ.ಬ್ಲಾಕ್, ಕುವೆಂಪು ನಗರ
ಮೈಸೂರು–570023

Samahita

A collection of articles by: Dr.Anandarama upadhya
No.317, Lasya, 7th Cross
Avalahalli BDA Layout, BSK 3rd Stage
Bengaluru – 560085, Mob : 98800 32560.

Published by : Nrupatunga Prakashana
No 796, EWS, M Block, Kuvempunagar
Mysore- 570023, Phone: 0821-4287558

Inner Pages : Maplitho
Size : 1/8th Demmy
First impression : 2021
Pages: 200+iv = 204 Price : ₹ 185

ಸಮಾಹಿತ

ಮೊದಲನೇ ಮುದ್ರಣ: ೨೦೨೧

ಪುಟಗಳು: ೨೦೦+iv = ೨೦೪

ಬೆಲೆ: ₹ ೧೮೫

ಮುಖಪುಟ ವಿನ್ಯಾಸ: ಶ್ರೀಕಂಠಮೂರ್ತಿ

ಪ್ರಕಾಶನ: ನೃಪತುಂಗ ಪ್ರಕಾಶನ

ನಂ. 796, ಇ ಡಬ್ಲ್ಯೂ ಎಸ್. ಎಂ.ಬ್ಲಾಕ್, ಕುವೆಂಪು ನಗರ

ಮೈಸೂರು–570023 ಫೋ. 0821-4287558

ಮುದ್ರಣ: ಶ್ರೀ ವಿನಾಯಕ ಪ್ರಿಂಟರ್ಸ್, ಮೈಸೂರು–೫೭೦ ೦೦೪

ಅರ್ಪಣೆ

ಯಕ್ಷಗಾನ ಸಾಹಿತ್ಯ ಅಧ್ಯಯನಕ್ಕೆ
ಪ್ರೇರಕರೂ ಹಾಗೂ ವಿದ್ಯಾಗುರುಗಳೂ ಆದ

ಡಾ.ಕೆ.ಎಂ.ಕೃಷ್ಣರಾವ್
ಅವರ ಪುಣ್ಯ ಸ್ಮರಣೆಗೆ
ಈ ಕೃತಿ

Samahita

A collection of articles by: Dr.Ananderama upadhya

No.317, Laaya, 7th Cross

Avalahalli BDA Layout, BSK 3rd Stage

Bengaluru – 560085, Mob : 98800 32560

Published by : Nrupatunga Prakashana

No 796, EWS, M Block, Kuvempunagar

Mysore- 570023, Phone: 0821-4287558

Inner Pages : Maplitho

Size : 1/8th Demmy

First impression : 2021

Pages: 200+iv = 204 Price: ₹ [illegible]

ಸಮಾಹಿತ

ಮೊದಲನೇ ಮುದ್ರಣ: ೨೦೨೧

ಪುಟಗಳು: ೨೦೦+iv = ೨೦೪

ಬೆಲೆ: ₹ [illegible]

[illegible]

ಪ್ರಕಾಶಕರು: ನೃಪತುಂಗ ಪ್ರಕಾಶನ

ನಂ. 796, [illegible], ಕುವೆಂಪು ನಗರ

ಮೈಸೂರು-570023 ಫೋನ್: 0821-4287558

ಮುದ್ರಣ: [illegible]

ಮುನ್ನುಡಿ

ಡಾ.ಆನಂದರಾಮ ಉಪಾಧ್ಯರ ಬರೆಹಗಳ ಸಂಗ್ರಹ "ಸಮಾಹಿತ" ಅಚ್ಚಾಗಿ ಬೆಳಕು ಕಾಣುತ್ತಿದೆ. ಈ ಸಂಗ್ರಹ ಬರೆಹಗಳು ಹಲವು ಕಾರಣಕ್ಕಾಗಿ ಮಹತ್ವದವುಗಳು ಎಂಬುದು ನನ್ನ ಅನ್ನಿಸಿಕೆ. ಯಕ್ಷಗಾನ ಸಾಹಿತ್ಯದ ಜೊತೆಗೆ ಇತರ ಸಾಹಿತ್ಯಿಕ ಬರೆಹಗಳೂ ಜೊತೆ ಗೂಡಿದ ಚಿಂತನೆಗಳು ಇಲ್ಲಿವೆ. ಡಾ.ಆನಂದರಾಮ ಉಪಾಧ್ಯರಿಗೆ ಬರಹ ನಿತ್ಯದ ಅಭ್ಯಾಸ. ಈಗಾಗಲೇ ಅನೇಕ ಚಿಂತನ, ಸಂದರ್ಶನ, ಸಂಶೋಧನ ಕೃತಿಗಳನ್ನು ಉಪಾಧ್ಯರು ಪ್ರಕಟಿಸಿದ್ದಾರೆ. ಅವುಗಳೆಲ್ಲ ಅಧ್ಯಯನಾರ್ಹಕೃತಿಗಳೆಂದೂ ಮಾನಿತವಾಗಿವೆ. ಇವರಬರಹಗಳು ಪ್ರಧಾನವಾಗಿ ಯಕ್ಷಗಾನಕ್ಕೆ ಸಂಬಂಧಿಸಿದವುಗಳೇ ಆಗಿದ್ದು, ಈ ಕಲೆಯ ಒಳಹೊರಗನ್ನು ಸಮಗ್ರವಾಗಿ ಚಿತ್ರಿಸುತ್ತವೆ. ಇವರು ನಡೆಸಿದ ಅನೇಕ ಕಲಾವಿದರ ಸಂದರ್ಶನ, ಮಹಾಭಾರತ, ರಾಮಾಯಣ ಪ್ರಸಂಗಗಳ ಮೇಲೆ ನಡೆಸಿದ ಅಧ್ಯಯನ ಹಾಗೆ ನಡೆಸಿ ಪ್ರಕಟಿಸಿದ ಕೃತಿಗಳು ಯಕ್ಷಗಾನ ಸಾಹಿತ್ಯಚರಿತ್ರೆಯಲ್ಲಿ ಗಮನಾರ್ಹಕೃತಿಗಳೆಂದು ಪ್ರಖ್ಯಾತವೂ ಆಗಿವೆ. ಅದೇ ಬಗೆಯ ಅಧ್ಯಯನದ ಮುಂದುವರಿದ ಭಾಗ ಈಪ್ರಬಂಧಗಳ ಸಂಕಲನ ಎನ್ನಬಹುದು.

ಡಾ.ಆನಂದರಾಮ ಉಪಾಧ್ಯರ ಈ ಸಂಕಲನದಲ್ಲಿ ಎರಡು ವಿಭಾಗದಲ್ಲಿ ಇಪ್ಪತ್ತನಾಲ್ಕು ಲೇಖನಗಳಿವೆ. ಮೊದಲ ಭಾಗದಲ್ಲಿ ಹದಿನಾರು ಯಕ್ಷಗಾನ ಸಂಬಂಧಿತ ಬರೆಹಗಳಿದ್ದರೆ ಎರಡನೆಯ ಭಾಗದಲ್ಲಿ ಎಂಟು ಬೇರೆಬೇರೆ ಸಾಹಿತ್ಯಿಕ ಬಿಡಿ ಬರಹಗಳಿವೆ. ಈ ಎಲ್ಲ ಬರವಣಿಗೆಗಳೂ ಗಂಭೀರ ಚಿಂತನೆಗಳಾಗಿದ್ದು ಸರಳ ನಿರೂಪಣೆಯಿಂದ ಸೊಗಸಾಗಿದ್ದು ವಿಮರ್ಶೆ ಎಂದರೆ ಕೃತಕ ಶಬ್ದಾಡಂಬರ ಎಂಬ ಅಪವಾದದಿಂದ ದೂರವಾಗಿವೆ.

ಯಕ್ಷಗಾನ ಸಾಹಿತ್ಯವನ್ನು ಅದರಲ್ಲೂ ಪ್ರಸಂಗ ಸಾಹಿತ್ಯವನ್ನು ಕನ್ನಡ ಸಾಹಿತ್ಯದ ವಿಮರ್ಶಕರು ಉಪೇಕ್ಷಿಸಿದ್ದು ಅಮೂಲ್ಯವಾದ ಈ ಸಾಹಿತ್ಯ ಪರಂಪರೆಗೆ ದೊಡ್ಡ ಅನ್ಯಾಯ ಎಂಬುದು ಸರ್ವವಿದಿತ. ಗಂಭೀರ ಸಾಹಿತ್ಯದ ನಡುವೆ ಅದಕ್ಕಿಂತಲೂ ಉನ್ನತವಾದ ಸ್ಥಾನದಲ್ಲಿ ನಿಲ್ಲುವ ಯೋಗ್ಯತೆ ಇದ್ದೂ ಅವಗಣನೆಗೆ ಒಳಗಾದುದು

ಯಕ್ಷಗಾನಕ್ಕಿಂತಲೂ ಕನ್ನಡ ಸಾಹಿತ್ಯಕ್ಕಾದ ದೊಡ್ಡನಷ್ಟ. ಸುಮಾರು ಆರು ಸಾವಿರದಷ್ಟು ಯಕ್ಷಕಾವ್ಯಗಳು ಕಳೆದ ಆರುಶತಮಾನಗಳಲ್ಲಿ ನಿರ್ಮಾಣವಾಗಿವೆ. ರಂಗಕಲೆಯೊಂದರ ಮೇಲೆ ರೂಪುಗೊಂಡ ದಾಖಲೆಯ ರಚನೆ ಇದು. ಇವಲ್ಲದೆ ಅಷ್ಟೇ ಸಂಖ್ಯೆಯ ಇತರ ಕೃತಿಗಳೂ ಪ್ರಕಟಗೊಂಡಿರುವುದನ್ನು ಗಮನದಲ್ಲಿಟ್ಟುಕೊಂಡರೆ ಯಾವುದೇ ಕಲಾಪ್ರಕಾರದ ಮೇಲಾದರೂ ನಿರ್ಮಾಣಗೊಂಡುದಕ್ಕಿಂತ ಹೆಚ್ಚು ಕೃತಿಗಳು ಯಕ್ಷಗಾನವನ್ನು ಕುರಿತು ನಿರ್ಮಾಣವಾದಂತಿದೆಯಲ್ಲವೆ? ನಮ್ಮ ವಿಮರ್ಶಕರು ಹೊತ್ತು ಕುಣಿಯಬೇಕಾದ ಸಾಹಸ ಇದು. ಕರಾವಳಿ ಮಲೆನಾಡಭಾಗದ ಕೆಲವೇ ಪ್ರದೇಶದಲ್ಲಿ ಈ ಕಲೆ ಇದೆ ಎಂಬ ಉಪೇಕ್ಷೆಯೋ, ರಂಗಕಲೆಯಾದುದರಿಂದ ಗಂಭೀರವಲ್ಲವೆಂಬ ಅವಗಣನೆಯೋ, ಒಟ್ಟು ಒಂದು ಕಲಾಪ್ರಕಾರದ ಸಾಧನೆ ಅವಗಣಿತವಾಗಿ ಬಿಟ್ಟಿತು. ಈಗೀಗ ಈ ಪ್ರಯತ್ನ ತಕ್ಕಮಟ್ಟಿಗೆ ತೊಡಗಿದೆ ಎಂಬುದೇ ಸಂತೋಷದ ವಿಚಾರ. ಡಾ.ಆನಂದರಾಮ ಉಪಾಧ್ಯರಂತಹ ಹಲವರು ತಮ್ಮ ಬರಹದಲ್ಲಿ ಯಕ್ಷಗಾನಕ್ಕೂ ಮಹತ್ವದ ಸ್ಥಾನವನ್ನು ನೀಡಿ ಬರೆಯುತ್ತಿದ್ದಾರೆ. ಯಕ್ಷಗಾನ ಪ್ರೌಢಪ್ರಬಂಧಗಳ ವಿಷಯವೂ ಆಗಿದೆ. ಡಾ.ಉಪಾಧ್ಯರೂ ಯಕ್ಷಗಾನದ ವಿಷಯದ ಮೇಲೆಯೇ ಪಿ.ಹೆಚ್.ಡಿ. ಉಪಾಧಿಯನ್ನುಗಳಿಸಿದುದು ಪ್ರಶಂಸನೀಯ ವಿಚಾರವೇ.

ಈ ಸಂಕಲನದ ಮೊದಲ ಭಾಗದಲ್ಲೇ 'ಯಕ್ಷಗಾನಸಾಹಿತ್ಯ' ಎಂಬ ಪ್ರಬಂಧವಿರುವುದುನ್ನು ಗಮನಿಸಬೇಕು. ಈ ಲೇಖನದಲ್ಲಿ ಯಕ್ಷಸಾಹಿತ್ಯದ ವಿಸ್ತಾರವಾದ ಮಗ್ಗುಲುಗಳನ್ನು ಪರಿಚಯಿಸಿ ಯಕ್ಷಗಾನದ ಸ್ಥಿರಪಠ್ಯವಾದ ಪ್ರಸಂಗಸಾಹಿತ್ಯ, ಅದರ ಪ್ರಸಿದ್ಧ ಕವಿಗಳನ್ನು ಗುರುತಿಸಿದ್ದಾರೆ. ಯಕ್ಷಗಾನದ ಚರಪಠ್ಯವಾದ ಆಶುಸಂಭಾಷಣಾ ವ್ಯವಸ್ಥೆ ಅದರ ಉನ್ನತಸ್ತರದ ಹೊರೆಯಾಳುಗಳ ವಿಚಾರಗಳನ್ನು ಪ್ರಸ್ತಾಪಿಸಿದ್ದಾರೆ. ಈ ವಿಚಾರಗಳು ಯಕ್ಷಕಲೆಯೊಳಗೆ ಲೇಖಕರು ಇಳಿದು ನಡೆಸಿದ ಅಧ್ಯಯನದ ವ್ಯಾಪ್ತಿಯ ವಿಸ್ತಾರದ ಪರಿಚಯವಾಗುತ್ತದೆ. ಇಲ್ಲಿಯ ಇತರ ಲೇಖನಗಳಲ್ಲಿ ಉತ್ತರಕರ್ನಾಟಕದ ರಂಗಸಂಪ್ರದಾಯಗಳು, ದೇರಾಜೆಯವರ ಯಕ್ಷಗಾನ ವಿವೇಚನೆ, ಯಕ್ಷಗುರು ಸಂಜೀವ ಸುವರ್ಣರ ಜೀವನ ಕಥನದ ಸುವರ್ಣ ಸಂಜೀವನ ಕೃತಿಯ ಮೇಲಿನ ಚಿಂತನಗಳೂ ಗಮನಿಸಬೇಕಾದ ಲೇಖನಗಳು. ಮತ್ತೊಂದು ಆಯಾಮದಲ್ಲಿ ಪ್ರಸಂಗಸಾಹಿತ್ಯದ ಅಧ್ಯಯನದ ಹಲವು ಬರೆಹಗಳಿವೆ. ಯಕ್ಷಗಾನದಲ್ಲಿ ರಾಮಾಯಣದ ಬೆಳೆ, ಪಾರ್ತಿಸುಬ್ಬನ ಕೃತಿ ಪರಿಚಯ, ಯಕ್ಷಗಾನದಲ್ಲಿ ಹನೂಮದ್ವಿಲಾಸ ಸುಮಾರಾಗಿ ಒಂದೇ ವಿಚಾರದ ಹಲವು ಮುಖಗಳಾಗಿ ಮೂಡಿ ಬಂದಿವೆ.

ಕಡಂದಲೆ ರಾಮರಾಯರ ದ್ರೌಪದೀ ಪ್ರತಾಪ, ಯಕ್ಷಕವಿ ಶ್ರೀಧರರ ಪ್ರಸಂಗ ಸಾಹಿತ್ಯ, ಯಕ್ಷಗಾನದಲ್ಲಿ ವೈಭವದ ವೀರಾಂಜನೇಯ ವೈಭವ, ಸೌಭರಿಚರಿತಂ,

ರಾಮಭಟ್ಟರ ಪ್ರಸಂಗಗಳಲ್ಲಿ ಹಾಸ್ಯ, ಪಾಂಗಾಳರ ಯಕ್ಷಗಾನಕೃತಿಗಳಲ್ಲಿ ವಸ್ತುವಿನ್ಯಾಸ ಇವೆಲ್ಲ ಪ್ರಸಂಗ ಸಾಹಿತ್ಯದ ಅಧ್ಯಯನಗಳ ಬರಹಗಳು. ಇಲ್ಲಿ ಲೇಖಕರು ಪ್ರಸಂಗದೊಳಗೆ ಬರುವ ಛಂದೋವೈಶಿಷ್ಟ್ಯ, ನಿರೂಪಣಾ ವಿಧಾನ, ಕಥೆಯನ್ನು ನಿರೂಪಿಸಿದ ಬಗೆ, ಭಾವನಾ ವಿಲಾಸಕ್ಕೆ ನೀಡಿದ ಮಹತ್ವ ಮುಂತಾದ ಹಲವು ಮುಖಗಳನ್ನು ಬಿಡಿಬಿಡಿಯಾಗಿ ವಿವೇಚಿಸಿದ್ದಾರೆ. ಈ ಪ್ರಸಂಗಗಳನ್ನು ಅಧ್ಯಯನಕ್ಕಾಗಿ ಆಯ್ದುಕೊಂಡ ಕ್ರಮವೂ ಸಮಂಜಸವಾಗಿದೆ. ಸೌಭರಿಚರಿತ, ದ್ರೌಪದೀಪ್ರತಾಪಗಳು ಪ್ರತ್ಯೇಕ ಪ್ರಸಂಗವಾದರೆ ಉಳಿದವುಗಳು ಸಮಗ್ರ ಪ್ರಸಂಗ ಸಂಗ್ರಹವೋ, ಪ್ರಸಂಗ ಸಂಪುಟಗಳೋ ಆಗಿದ್ದು ವಿಸ್ತಾರವಾಗಿಯೇ ವಿವೇಚಿಸಲ್ಪಟ್ಟಿವೆ. ಉತ್ತರ ಕರ್ನಾಟಕದ ರಂಗಪ್ರಸಂಗಗಳಲ್ಲಿ ವಿಶೇಷವಾದ ಶ್ರೀಕೃಷ್ಣ ಪಾರಿಜಾತ ಎಂಬ ಪ್ರಕಾರವನ್ನು ವಿಶೇಷವಾಗಿ ಪರಿಗಣಿಸಿ ರಚಿಸಿದ ಪ್ರಬಂಧ ಗಮನಿಸುವಂತಿದೆ.

ಹೊಸ್ತೋಟ ಮಂಜುನಾಥ ಭಾಗವತರ 'ವೀರಾಂಜನೇಯವೈಭವ'ದ ಇಪ್ಪತ್ತೇಳು ಪ್ರಸಂಗಗಳ ವಿಮರ್ಶೆ, ಶ್ರೀಧರರ ಯಕ್ಷಗಾನ ಪ್ರಸಂಗಗಳ ಹದಿಮೂರು ಪ್ರಸಂಗಗಳ ಚಿಂತನ, ರಾಮಭಟ್ಟರ ಪ್ರಸಂಗದಲ್ಲಿ ಹಾಸ್ಯ. ಇವು ಪ್ರಸಂಗ ಸಾಹಿತ್ಯದ ವಿವೇಚನೆಗೆ ಮಾರ್ಗದರ್ಶಿಯಾಗುವ ಬರಹಗಳು. ಡಾ. ಆರ್.ಪಾಂಗಾಳರು ಕರಾವಳಿಯವರಾದರೂ ಬೆಂಗಳೂರಿನಲ್ಲಿ ನಡೆಸುತ್ತಿರುವ ಯಕ್ಷಗಾನ, ಸಾಹಿತ್ಯ, ಮುಂತಾದ ಸಾಂಸ್ಕೃತಿಕ ಚಟುವಟಿಕೆಗಳು ವಿಶೇಷವೆಂದೇ ಮಾನ್ಯವಾದವುಗಳು. ಅವರು ನಾಟಕರೂಪದಲ್ಲಿ ರಚಿಸಿದ ಎರಡು ಕೃತಿಗಳು ದ್ರೋಣ, ನಹುಷರ ಕಥೆಗಳು. ಭಿನ್ನಚಿಂತನೆಗಳಿಂದ ಕೂಡಿವೆ. ಅವುಗಳನ್ನು ಕಂದಾವರ ರಘುರಾಮಶೆಟ್ಟರು, ಶ್ರೀಧರಡಿ.ಎಸ್. ಇವರುಗಳಿಂದ ಯಕ್ಷಗಾನ ಪ್ರಸಂಗವಾಗಿ ರಚಿಸಿ ಯಶಸ್ವಿಯಾಗಿ ಪ್ರಯೋಗಿಸಿದ ವಿಚಾರಗಳನ್ನು ಇಲ್ಲಿ ವಿವರಿಸಲಾಗಿದೆ.

ಇನ್ನೊಂದು ವಿಶೇಷ ಲೇಖನ ಯಕ್ಷಗಾನ ಅಕಾಡೆಮಿಯ ನಿಕಟಪೂರ್ವ ಅಧ್ಯಕ್ಷರಾಗಿದ್ದು ನಮ್ಮನ್ನಗಲಿದ ಪ್ರೊ.ಎಂ.ಎ.ಹೆಗಡೆಯವರನ್ನು ಕುರಿತು ಬರೆದ ಆತ್ಮೀಯ ಬರೆಹ. ಹೆಗಡೆಯವರು ಯಕ್ಷಗಾನಕ್ಕೆ, ಕನ್ನಡ ಸಂಸ್ಕೃತ ಸಾಹಿತ್ಯಕ್ಕೆ ನೀಡಿದ ಕೊಡುಗೆಯ ವಿಸ್ತಾರವಾದ ವಿವರಣೆ ಈ ಬರಹದಲ್ಲಿದೆ. ಹೆಗಡೆಯವರ ಕಲಾಭಿರುಚಿಯ ವಿವಿಧ ಆಯಾಮಗಳನ್ನು ಹೃದ್ಯವಾಗಿ ಚಿತ್ರಿಸಿ ಅವರನ್ನು ಸ್ಮರಿಸಿಕೊಂಡ ಲೇಖನ ಇದು.

ಹೀಗೆ ಮೊದಲ ಭಾಗದ ಬರೆಹಗಳು ಯಕ್ಷಗಾನದ ಹಲವು ಮುಖಗಳ ಚಿತ್ರಣಗಳಾಗಿದ್ದು ಒಟ್ಟೂ ಕೃತಿಗಳ ವಿವರಗಳನ್ನು ಕ್ರೂಢೀಕರಿಸಿದರೆ ಸಮಗ್ರ ಯಕ್ಷಗಾನದ ಚಿಂತನೆಗಳು ಏಕತ್ರವಾಗುತ್ತವೆ. ಸಂಕಲನದ ಉತ್ತರಾರ್ಧದಲ್ಲಿ ಯಕ್ಷಗಾನೇತರ ವಿಚಾರಗಳಿಗೆ ಸಂಬಂಧಿಸಿದ ಎಂಟು ಪ್ರಬಂಧಗಳಿವೆ.

ಇವುಗಳೆಲ್ಲ ನಿರ್ದಿಷ್ಟ ಲೇಖಕರ ಸಮಗ್ರಸಾಹಿತ್ಯಗಳ ಅಧ್ಯಯನವಾಗಿದ್ದೂ ಕೆಲವು ಕೃತಿಗಳಿಗೆ ವಿಶೇಷಗಮನವಿರಿಸಿಬರೆದಂತಿವೆ. ಅನಕೃ ಕನ್ನಡನಾಡು ಕಂಡ ಮಹಾನ್ ಕಾದಂಬರಿಕಾರರು. ಅವರು ರಚಿಸಿದ ಕಲಾಸಂಬಂಧಿ ಕಾದಂಬರಿ ಇಲ್ಲಿಯ ವಿವೇಚನೆಯ ವಸ್ತು. "ಅನಕೃ ಕಾದಂಬರಿಯಲ್ಲಿ ಕಲಾ ಬದುಕಿನ ಚಿತ್ರಣ" ಎಂಬ ಹೆಸರಿನಲ್ಲಿ ಇವುಗಳನ್ನು ವಿವೇಚಿಸಿದ್ದಾರೆ. ಅದೇನೂ ಸಣ್ಣ ವಿಷಯವಲ್ಲ. ನಟಸಾರ್ವಭೌಮ ಕೃತಿ ಅನಕೃ ಅವರ ಶ್ರೇಷ್ಠ ಕೃತಿ ಎಂದೇ ಪ್ರಖ್ಯಾತ. ಅದನ್ನು ಪ್ರಧಾನ ವಿವಕ್ಷೆಯಾಗಿಟ್ಟು ಕೊಂಡು ಉಳಿದ ಕೃತಿಗಳನ್ನು ಆನುಷಂಗಿಕವಾಗಿ ವಿವೇಚಿಸಿದ್ದಾರೆ.

"ಪುರಾಣಿಕರ ಕಾದಂಬರಿಗಳಲ್ಲಿ ಸ್ವಂತಿಕೆ" ಕೃಷ್ಣಮೂರ್ತಿ ಪುರಾಣಿಕರು ಎಂಬತ್ತು ಕಾದಂಬರಿ ರಚಿಸಿದವರು. ಇಲ್ಲಿಯ ವಿಚಾರಗಳನ್ನು ಸಣ್ಣ ಲೇಖನಕ್ಕೆ ಒಗ್ಗಿಸುವುದು ಸುಲಭದ ಸಾಹಸವಲ್ಲ. ಪುರಾಣಿಕರು ಕಂಡ ಜೀವನ ದರ್ಶನವನ್ನೇ ಲಕ್ಷ್ಯವಾಗಿಟ್ಟು ಲೇಖಕರು ಸೊಗಸಾದ ಪ್ರಬಂಧವನ್ನು ಕಟ್ಟಿದ್ದಾರೆ. ಅಮ್ಮಮ್ಮ ಹೇಳಿದ ಕತೆ ತುಂಬಾ ಸೊಗಸಾದ ಬರಹ. ಮಕ್ಕಳ ಕಥೆಗಳು. ಅದು ಬೆಳೆದು ಬಂದ ವಿಧಾನಗಳನ್ನು ವಿವೇಚಿಸುತ್ತಾ ಸಂಕಲನದ ಹದಿನಾರು ರೋಚಕ ಕಥೆಗಳನ್ನು ವಿವೇಚಿಸುತ್ತಾರೆ. ಈ ಸಂಕಲನ ಶ್ರೀಮತಿ ರಜನಿನರಹಳ್ಳಿಯವರದ್ದು. ಈ ಸಂಕಲನದ ಇನ್ನೆರಡು ಪ್ರಬಂಧ ಶ್ರೀರಾಮಮೂರ್ತಿ ಶರ್ಮರ ಇಪ್ಪತ್ತು ಪ್ರಬಂಧಗಳ ಸಂಕಲನ ಸುರಭಿ, ಅರಳುಮಲ್ಲಿಗೆ ಪಾರ್ಥಸಾರಥಿ ಅವರ ಉಗಾಭೋಗಗಳು. ಎರಡೂ ವಿಶಿಷ್ಟಗಳೇ ಸುರಭಿಯ ಲೇಖಕರು ತೆಲುಗು ಕನ್ನಡ ಭಾಷಾಪಾಂಡಿತ್ಯದ ಪಂಡಿತವರೇಣ್ಯರು, ಪಾರ್ಥಸಾರಥಿ ಅವರು ಕನ್ನಡದ ಹಿರಿಯ ಲೇಖಕರು, ಕೀರ್ತನಗಳ ಸಹವರ್ತಿಗಳು. ಒಂದು ಇಪ್ಪತ್ತು ಗಂಭೀರ ಪ್ರಬಂಧ ಸಂಕಲನವಾದರೆ ಇನ್ನೊಂದು ಭಕ್ತಿಪರವಾದ ಉಗಾಭೋಗಗಳ ಕುರಿತದ್ದು. ಮತ್ತೊಂದು ಸಂಸ್ಮರಣ ಲೇಖನ ಪಾ.ಶ.ಶ್ರೀನಿವಾಸರ ಬಗ್ಗೆ ಬರೆದ ಪರಿಚಯ ಲೇಖನ. ಕರಾವಳಿಯಲ್ಲಿ ಜನಿಸಿ ಮಂಡ್ಯದಲ್ಲಿ ಬೆಳೆದು ತಮಿಳುನಾಡಿನಲ್ಲಿ ಜೀವನ ನಿರ್ವಹಿಸಿದ ಬಹುಭಾಷಾ ವಿದ್ವಾಂಸರನ್ನು "ತಮಿಳು ಕನ್ನಡದ ಸೇತುವೆ" ಎಂದು ಲೇಖಕರು ಕೈವಾರಿಸಿದ್ದಾರೆ. ಕನ್ನಡದ ಹಿರಿಯರೊಬ್ಬರು ತಮಿಳುನಾಡಿನಲ್ಲಿ ಖ್ಯಾತರಾದ ಅಪರೂಪದ ವ್ಯಕ್ತಿತ್ವದ ಅನಾವರಣ ಈ ಲೇಖನ.

"ಪಡುಗಡಲತಡಿಯಲ್ಲಿ," ಕಾಶ್ಮೀರೀಸಾಹಿತ್ಯ ಇವುಗಳೂ ವಿಶಿಷ್ಟವಾಗಿದ್ದು ಅಪರೂಪದ ಚಿತ್ರಣಗಳಾಗಿವೆ.

ಡಾ.ಆನಂದರಾಮ ಉಪಾಧ್ಯರು ಕರಾವಳಿಯ ಕೋಟದ ಯಕ್ಷಗಾನದ ವಲಯದಲ್ಲಿ ಹುಟಿ ಬೆಳೆದವರು. ವೃತ್ತಿಯಿಂದ ಬ್ಯಾಂಕಿಂಗ್ ಕ್ಷೇತ್ರದಲ್ಲಿ ಉನ್ನತ ಹುದ್ದೆಯಲ್ಲಿ ಇದ್ದರೂ ಕನ್ನಡಸಾಹಿತ್ಯದಲ್ಲಿ ಬೇರು ಬಿಟ್ಟವರು. ಅವರ ಓದು ವಿಸ್ತಾರವಾದುದು. ಸರಳವಾದ ನಿರೂಪಣೆಯ ಸುಲಲಿತ ಶೈಲಿಯಿಂದಾಗಿ

ಇವರ ಲೇಖನಗಳು ಆಕರ್ಷಣೀಯವಾಗುತ್ತವೆ. ಬರಹದಲ್ಲಿ ವಿಮರ್ಶೆಯ ಜಿಡುಕಿಲ್ಲ. ವಿಸ್ತಾರವೂ ಆಳವೂ ಆದ ನೋಟಗಳಿವೆ. ಅವರು ಆಯ್ದುಕೊಂಡ ವಿಚಾರಗಳೂ ಬೇರೆಬೇರೆ ಕ್ಷೇತ್ರದ ವಿವಿಧ ವಿಷಯಗಳು. ಯಕ್ಷಗಾನ, ಕಾದಂಬರಿ, ಉಗಾಭೋಗ, ಮಕ್ಕಳಕಥೆ, ವ್ಯಕ್ತಿ ಪರಿಚಯ, ಪ್ರಾಕೃತಿಕ ವಿಚಾರಗಳು ಹೀಗೆ ಹತ್ತು ದಿಕ್ಕುಗಳನ್ನು ಆವರಿಸಿಕೊಂಡು ಬರುವ ವಿಚಾರಗಳೇ ಇಲ್ಲಿವೆ. ಇಲ್ಲಿಯ ಲೇಖನಗಳು ಪತ್ರಿಕೆಗಳಲ್ಲಿ ಸಾಂದರ್ಭಿಕವಾಗಿ ಬರೆದವುಗಳಾಗಿದ್ದು ಕೆಲವನ್ನಾದರೂ ಇನ್ನೂ ವಿಸ್ತರಿಸಲು ಬರುವಂತಿದೆ. ಆದರೆ ಪತ್ರಿಕೆಗಳ ಬರಹಕ್ಕೆ ಅಲ್ಲಿಯದೇ ನಿಯಮಗಳೂ ಇವೆಯಷ್ಟೆ? ವಿವಿಧ ಕಾಲಘಟ್ಟಗಳಲ್ಲಿ ಬರೆದ ಇಪ್ಪತ್ತನಾಲ್ಕು ಪ್ರಬಂಧಗಳಾದುದರಿಂದ ವಸ್ತು ವಿಷಯ ವೈವಿಧ್ಯಗಳಿಂದ ಕೂಡಿರುವುದು ಸಹಜ. ಉಪಾಧ್ಯರು ಕರಾವಳಿಯ ವಲಯದಿಂದ ದೂರವಾಗಿ ಬೆಂಗಳೂರು ನಿವಾಸಿಯಾದರೂ, ಯಕ್ಷಗಾನದ ಆಸಕ್ತಿಯನ್ನು ಮೈಗೂಡಿಸಿಕೊಂಡೆ ೀಇದ್ದಾರೆ. ಬೆಂಗಳೂರಿನ ಯಕ್ಷವಾಹಿನಿ ಸಂಸ್ಥೆಯು ನಡೆಸುತ್ತಿರುವ ಯಕ್ಷಗಾನ ಪ್ರಸಂಗ ಕೋಶದ ಬೃಹತ್ಕಾರ್ಯ ಯೋಜನೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಉತ್ತಮ ಮಾರ್ಗದರ್ಶನ ನೀಡುತ್ತಿದ್ದಾರೆ. ಇದಲ್ಲದೆ ಬೆಂಗಳೂರಿನ ಹಲವು ಸಂಸ್ಥೆಗಳ ಕರ್ಣಧಾರತ್ವವನ್ನು ವಹಿಸಿಕೊಂಡು ಮುನ್ನಡೆಸುತ್ತಿದ್ದಾರೆ. ನಿರಂತರ ಚಟುವಟಿಕೆಯಲ್ಲಿ ತೊಡಗಿಸಿಕೊಂಡಿದ್ದಾರೆ. ಕನ್ನಡಸಾಹಿತ್ಯದ ನಿರಂತರ ಅಧ್ಯಯನದಲ್ಲಿ ತೊಡಗಿಸಿಕೊಂಡು ಅಧ್ಯಯನಶೀಲರಾಗಿದ್ದಾರೆ.

ಅವರ ಕೃತಿಗೆ ಮೊದಲು ನನ್ನ ಬರವಣಿಗೆಯೂ ಬೇಕೆಂದು ಅವರು ನೀಡುತ್ತಿರುವ ಗೌರವವನ್ನು ಪ್ರೀತಿ ಪೂರ್ವಕ ಅಭಿನಂದಿಸುತ್ತಾ ಡಾ. ಆನಂದರಾಮ ಉಪಾಧ್ಯರ ಚಿಂತನೆಗಳಿಂದ ಇನ್ನೂ ಹಲವು ಬರೆಹಗಳು ಬರುತ್ತಿರಲಿ ಎಂದು ಹಾರೈಸುತ್ತೇನೆ. ಬದುಕು ಆನಂದಮಯವಾಗಲಿ.

"ಶ್ರೀಪಾದ" ತಾಳಿಪಾಡಿ. — **ಶ್ರೀಧರ್ ಡಿ.ಎಸ್**

ಅಂಚೆ: ಎಳತ್ತೂರು. 574150 — **ಮೊಬೈಲ್ – 77606 47383**

ವಯಾ: ಕಿನ್ನಿಗೋಳಿ.

ಲೇಖಕರ ಮಾತು

ಸಂಸ್ಕೃತಿಯ ಸಂವರ್ಧನೆಯಲ್ಲಿ ಸಾಹಿತ್ಯದ ಪಾತ್ರ ಹಿರಿದು. ಕನ್ನಡ ಸಾಹಿತ್ಯದ ವಿದ್ಯಾರ್ಥಿಯಾಗಿ ಬೇರೆ ಬೇರೆ ಸಂಧರ್ಭಕ್ಕಾಗಿ ಬರೆದ ಇಪ್ಪತ್ನಾಲ್ಕು ಲೇಖನಗಳ ಸಂಕಲನವಾದ "ಸಮಾಹಿತ" ಇದೀಗ ನಿಮ್ಮ ಕೈಯಲ್ಲಿದೆ. ಕನ್ನಡದ ಕಿರುಕಾವ್ಯಗಳಂತಿರುವ ಯಕ್ಷಗಾನದ ಪ್ರಸಂಗಗಳು ಅಷ್ಟಾಗಿ ಸಾಹಿತ್ಯ ವಿಮರ್ಶಕರ ಗಮನ ಸೆಳೆದಿಲ್ಲ. ಆದರೆ ಅವು ಈ ನೆಲದೊಂದಿಗೆ ಹೊಂದಿರುವ ನಂಟು ವಿಶಿಷ್ಟವೂ, ಅಪೂರ್ವವೂ ಆಗಿದೆ. ಈ ಕುರಿತ ಆಸಕ್ತಿ ಹಾಗೂ ಅಧ್ಯಯನದ ಫಲವಾಗಿ ಮೂಡಿಬಂದ ಲೇಖನಗಳೇ ಇಲ್ಲಿ ಸಿಂಹಪಾಲನ್ನು ಹೊಂದಿವೆ. "ಯಕ್ಷಗಾನ ಸಾಹಿತ್ಯ" ಎಂಬ ಈ ಹೊತ್ತಿಗೆಯನ್ನು 1956ಕ್ಕಾಗಲೇ ಬರೆದು ಈ ಪ್ರಕಾರದ ಅಧ್ಯಯನಕ್ಕೆ ಮೊದಲಿಗರಾದ ಡಾ.ಕೆ.ಎಂ.ಕೃಷ್ಣರಾವ್ ಅವರು ನನ್ನ ವಿದ್ಯಾಗುರುಗಳು. ದಾಸ ಸಾಹಿತ್ಯದ ಶ್ರೇಷ್ಠ ವಿದ್ವಾಂಸರೂ, ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಕನ್ನಡ ಪ್ರಾಧ್ಯಾಪಕರೂ, ವಿಭಾಗ ಮುಖ್ಯಸ್ಥರೂ ಆಗಿದ್ದ ಅವರ ಸೂಚನೆ ಹಾಗೂ ಮಾರ್ಗದರ್ಶನದಿಂದ ಪ್ರಸಂಗ ಸಾಹಿತ್ಯದ ಕುರಿತು ಕಳೆದ ನಾಲ್ಕು ದಶಕಗಳಿಂದ ಅಧ್ಯಯನ ನಡೆಸಲು ನನ್ನಿಂದ ಸಾಧ್ಯವಾಯಿತು. ಈ ಕೃತಿಯನ್ನು ಅವರ ಪುಣ್ಯ ಸ್ಮರಣೆಗೆ ಅರ್ಪಿಸುತ್ತಿದ್ದೇನೆ.

ಯಕ್ಷಕವಿ, ಅರ್ಥಧಾರಿ ಹಾಗೂ ಪಾರ್ತಿಸುಬ್ಬ ಪ್ರಶಸ್ತಿ ಪುರಸ್ಕೃತ ಶ್ರೀಡಿ. ಎಸ್.ಶ್ರೀಧರ ಅವರು ಮುನ್ನುಡಿಯ ಸೇಸೆಯನ್ನು ತಳಿದಿದ್ದಾರೆ. ಅವರಿಗೆ ನಾನು ಕೃತಜ್ಞ. ನನ್ನ ಎಲ್ಲಾ ಬರವಣಿಗೆಗಳಿಗೆ ಸ್ಪಷ್ಟರೂಪು ಒದಗಲು ಕಾರಣರಾಗಿರುವ ಗೆಳೆಯರಾದ ನಾಡಿನ ಪ್ರಸಿದ್ಧಕವಿ ಡಾ.ಎಚ್.ಎಸ್.ವೆಂಕಟೇಶಮೂರ್ತಿ ಹಾಗೂ ಖ್ಯಾತ ವಿಮರ್ಶಕ ಡಾ.ನರಹಳ್ಳಿ ಬಾಲಸುಬ್ರಹ್ಮಣ್ಯರವರಿಗೆ ನಾನು ಚಿರಋಣಿ.

ಇಲ್ಲಿ ಬರೆದಿರುವ ಲೇಖನಗಳನ್ನು ಈಗಾಗಲೇ ಪ್ರಕಟಿಸಿರುವ ಅಭಿನಂದನ ಗ್ರಂಥಗಳ, ಸಂಸ್ಮರಣ ಗ್ರಂಥಗಳ, ನಾಡಿನ ಖ್ಯಾತ ಪತ್ರಿಕೆಗಳ, ನಿಯತಕಾಲಿಕೆಗಳ ಸಂಪಾದಕರಿಗೆ ನಾನು ಆಭಾರಿ. ಗೆಳೆಯರಾದ ಡಾ.ಕೆ.ಆರ್. ವಾದಿರಾಜು,

ರವಿ ಮಡೋಡಿ ಹಾಗೂ ಡಾ. ಮಂಜುನಾಥಪಾಳ್ಯ ಇವರೆಲ್ಲರಿಗೂ ನನ್ನ ವಂದನೆಗಳು. ಅಂದವಾಗಿ ಅಚ್ಚಿಸಿದ ಶ್ರೀ ವಿ.ಡಿ.ಲಕ್ಷ್ಮೀನಾರಾಯಣ ಅವರಿಗೆ, ಮುದ್ರಕರಿಗೆ, ಪ್ರಕಾಶಕರಿಗೆ ನನ್ನ ಕೃತಜ್ಞತಾಪೂರ್ವಕ ನಮನಗಳು.

ಕರಡು ಸಿದ್ಧಪಡಿಸುವಲ್ಲಿ ಸಹಕರಿಸಿದ ನನ್ನ ಪತ್ನಿ ಪ್ರೇಮಾಗೆ, ಪ್ರಕಟಣೆಗೆ ಒತ್ತಾಸೆ ನೀಡಿದ ಮಗಳು ಸೀಮಂತಿನಿ, ಅಳಿಯ ವೆಂಕಟೇಶ್, ಮೊಮ್ಮಗ ಆರ್ಣವ್ ರವರಿಗೆ ನನ್ನ ನೆನಕೆಗಳು.

24-07-2021 — **ಡಾ.ಆನಂದರಾಮ ಉಪಾಧ್ಯ**

ಗುರುಪೌರ್ಣಮಿ.

ಪರಿವಿಡಿ

ಭಾಗ 1

ಭಾಗ 2

ಭಾಗ 1

ಯಕ್ಷಗಾನ ಸಾಹಿತ್ಯ

ಕನ್ನಡ ಸಾಹಿತ್ಯದ ಒಂದು ಧಾರೆಯಾದ ಯಕ್ಷಗಾನ ಸಾಹಿತ್ಯಕ್ಕೆ ಏಳುನೂರು ವರ್ಷಗಳಷ್ಟು ಇತಿಹಾಸವಿದೆ. ಕುರಿತೋದದೆಯುಂ ಕಾವ್ಯಪ್ರಯೋಗ ಪರಿಣತ ಮತಿಗಳಾದವರಿಂದ ರಚಿಸಲ್ಪಟ್ಟ ಈ ಕಿರು ಕಾವ್ಯರೂಪಗಳು ನಾಡಿನ ಸಂಸ್ಕೃತಿಯನ್ನು ಸಂವರ್ಧಿಸುವಲ್ಲಿ, ಜನರ ಬದುಕಿಗೆ ಆದರ್ಶದ ನೆಲೆಗಟ್ಟನ್ನು ಒದಗಿಸಿ ಕೊಡುವಲ್ಲಿ, ಶಿಷ್ಯ ಸಾಹಿತ್ಯದಲ್ಲಿ ಅಡಗಿರುವ ವಿಶಿಷ್ಟ ಅಂಶಗಳನ್ನು ಸಾಮಾನ್ಯರಿಗೆ ಉಣಬಡಿಸುವಲ್ಲಿ ತಮ್ಮ ಅಸ್ಮಿತೆಯನ್ನು ಮೆರೆದಿವೆ. ಹೆಚ್ಚಾಗಿ ರಾಮಾಯಣ, ಮಹಾಭಾರತ, ಭಾಗವತ ಇಲ್ಲವೇ ಪುರಾಣಗಳನ್ನು ಆಧರಿಸಿ ರಚಿತವಾಗಿರುವ ಪ್ರಸಂಗಗಳಲ್ಲಿ ಮುನ್ನೂರರಿಂದ ಐನೂರರವರೆಗೆ ಪದ್ಯ ಸಂಪತ್ತು ಅಡಗಿವೆ. ನೂರಕ್ಕೂ ಹೆಚ್ಚು ಮಟ್ಟುಗಳಲ್ಲಿ ಬರುವ ಹಾಡುಗಳು, ಭಾಮಿನಿ, ವಾರ್ಧಕ, ಸಾಂಗತ್ಯ, ಕಂದಪದ್ಯ, ವೃತ್ತಗಳೇ ಮುಂತಾದ ಛಂದೋ ವೈವಿಧ್ಯಗಳಿವೆ. ನಾಟ್ಯ, ಸಂಗೀತ, ಅಭಿನಯ, ಸಂಭಾಷಣೆಗೆ ಒದಗುವ ಪ್ರಸಂಗ ಸಾಹಿತ್ಯದಲ್ಲಿ ಪಾಂಡಿತ್ಯ ಪ್ರದರ್ಶನಕ್ಕೆ ಅವಕಾಶ ಕಡಿಮೆ. ರಂಗದ ಮೇಲೆ ಯಶಸ್ವಿಯಾಗುವುದೇ ಪ್ರಸಂಗ ಸೃಷ್ಟಿಯ ಮುಖ್ಯ ಉದ್ದೇಶ. ಪ್ರದರ್ಶನದಲ್ಲಿ ಭಾವಸ್ಫುರಣೆಯೇ ಮುಖ್ಯವಾದ್ದರಿಂದ ಭಾವರಸಗಳಿಗೆ ಉಚಿತವಾಗುವ ಪದಸಾಲುಗಳು ಇಲ್ಲಿ ತುಂಬಿಕೊಂಡಿರುತ್ತವೆ. ನೀತಿ ಬೋಧೆ, ಧರ್ಮ ಪ್ರಸರಣ ಹಾಗೂ ಮನೋರಂಜನೆಯನ್ನು ಏಕ ಕಾಲದಲ್ಲಿ ಮುಪ್ಪುರಿಗೊಳಿಸಿ ನೀಡಬಲ್ಲ ಸಮುಜ್ವಲ ಶಕ್ತಿಯನ್ನು ಯಕ್ಷಗಾನ ಹೊಂದಿದೆ. ಯಕ್ಷಗಾನದಲ್ಲಿ ಕೃತಿಗಿಂತ ಪ್ರಯೋಗ ಮುಖ್ಯ ಪ್ರಯೋಗದಲ್ಲಿನ ಯಶಸ್ಸು ಪ್ರಸಂಗದ ಮೌಲ್ಯನಿರ್ಧಾರಕ್ಕೆ ಕಾರಣವಾಗುತ್ತದೆ. ಇದೊಂದು ಗಾನ ಸಂಪ್ರದಾಯವಾಗಿದ್ದು ಉತ್ತಮ ಕಥೆಗಳನ್ನು ಆಯ್ದು ಪದ್ಯರೂಪದಲ್ಲಿ ಹಾಡಲು ಅನುಕೂಲವಾಗುವಂತೆ ರಚಿಸಿರುತ್ತಾರೆ. ಕರಾವಳಿ ಹಾಗೂ ಮಲೆನಾಡಿನ ಜಿಲ್ಲೆಗಳಲ್ಲಿ ಯಕ್ಷಗಾನ ಪ್ರಸಂಗಗಳು ಬಯಲಾಟ, ತಾಳಮದ್ದಲೆ, ಗೊಂಬೆಯಾಟ ಹಾಗೂ ಹೂವಿನ ಕೋಲುಗಳೆಂಬ ನಾಲ್ಕು ರೂಪಗಳಲ್ಲಿ ಉಪಯೋಗವಾಗುವುದನ್ನು ಕಾಣಬಹುದು, ಈಗೀಗ

ಯಕ್ಷಗಾನವುಗಾನ ವೈಭವ, ನಾಟ್ಯ ವೈಭವ, ಏಕವ್ಯಕ್ತಿ ಪ್ರದರ್ಶನ, ಬ್ಯಾಲೆ ಮುಂತಾದ ನಾನಾ ಪ್ರಯೋಗಗಳ ಮೂಲಕ ಜನರನ್ನು ಸೆಳೆಯುತ್ತಿದೆ. ದಕ್ಷಿಣ ಕರ್ನಾಟಕದ ಬಯಲು ಸೀಮೆಯ ಹದಿನಾಲ್ಕು ಜಿಲ್ಲೆಗಳಲ್ಲಿ ಮೂಡಲಪಾಯ, ಘಟ್ಟದ ಕೋರೆ, ಕೇಳಿಕೆ ಮುಂತಾದ ಯಕ್ಷಗಾನ ಪ್ರಕಾರಗಳಲ್ಲೂ ಈ ಸಾಹಿತ್ಯ ಬಳಕೆಯಾಗುತ್ತದೆ. ಮೂಲತಃ ಯಕ್ಷಗಾನವು ಜನಪದ ಕಲೆಯಾದರೂ ಅದರ ಅಂಗವಾಗಿ ಬರುವ ಸಾಹಿತ್ಯವು ಲಕ್ಷಣ ಶಾಸ್ತ್ರ ದೃಷ್ಟಿಯಿಂದ ಜಾನಪದವೆನ್ನುವಂತಿಲ್ಲ. ಪ್ರಸಂಗಗಳು ಲಿಖಿತ ರೂಪದಲ್ಲಿದ್ದು ಸಾವಿರಕ್ಕೂ ಹೆಚ್ಚಿನ ಕವಿಗಳು ಐದು ಸಾವಿರಕ್ಕೂ ಮೀರಿದ ಪ್ರಸಂಗಗಳನ್ನು ನಡುಗನ್ನಡ ಶೈಲಿಯಲ್ಲಿ ರಚಿಸಿದ್ದಾರೆ. 'ಯಕ್ಷಗಾನ'ವೆಂಬುದು ಯಕ್ಷ ಮತ್ತು ಗಾನ ಎಂಬೆರಡು ಪದಗಳು ಸೇರಿದ ಸಮಾಸ ಪದವಾಗಿದೆ. ಇಲ್ಲಿ 'ಗಾನ' ಎಂದರೆ ಹಾಡುವುದು ಎಂಬ ಅರ್ಥದಲ್ಲಿ ಬಂದಿದೆ. 'ಯಕ್ಷ'ಎಂಬ ಪದದ ಬಳಕೆಯ ಬಗ್ಗೆ ಸಾಕಷ್ಟು ಚರ್ಚೆಗಳು ನಡೆದಿವೆ. ಯಕ್ಷರೆಂಬ ಜನವರ್ಗವಿದ್ದರೂ ಅದಕ್ಕೂ ಈ ಪದಕ್ಕೂ ಸಂಬಂಧವಿದ್ದಂತಿಲ್ಲ. ಬೌದ್ಧಮತದಲ್ಲಿ 'ಯಕ್ಷ' ಪದದ ಬಳಕೆ ಇದ್ದು ಅಲ್ಲಿ ಆರಾಧನೆಯ ಅಂಗವಾಗಿ ಬರುತ್ತದೆ. ಯಕ್ಷಗಾನಕ್ಕೂ ಕೂಡ ದೇವರ ಆರಾಧನೆಗೆ ಸಂಬಂಧಿಸಿದಂತೆ ಬಿಡಲಾರದ ನಂಟಿದೆ. ಯಕ್ಷಗಾನದಲ್ಲಿ ಹಾಡನ್ನು ಹಾಡುವವನನ್ನು 'ಭಾಗವತ' ಎಂದು ಕರೆಯುತ್ತಿದ್ದು 'ಭಾಗವತ' ಸಂಪ್ರದಾಯವು ಕರ್ನಾಟಕದಲ್ಲಿ ಪ್ರಚುರವಿದ್ದಾಗ ಈ ಕಲೆಯ ಪ್ರಾದುರ್ಭಾವವಾಗಿರಬೇಕು. ದೇವಸ್ಥಾನಗಳಲ್ಲಿ ನಾನಾ ಸೇವೆಗಳಿರುವಂತೆ ಯಕ್ಷಗಾನ'ದ ಸೇವೆಯೂ ಇದ್ದಿರಬೇಕು. ಇದಕ್ಕೆ ಸಾಕ್ಷಿಯಾಗಿ ಬಳ್ಳಾರಿ ಜಿಲ್ಲೆಯ ಸೋಮಸಮುದ್ರದ ಕ್ರಿ.ಶ1556ರ ಶಾಸನದಲ್ಲಿ ಬರುವ 'ತಾಳಮದ್ದಲೆ' ಸೇವೆಗಾಗಿ' ಎಂಬ ವಿಚಾರವನ್ನು ಗಮನಿಸಬಹುದು. ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ಪ್ರಬಲವಾಗಿದ್ದ ಭಕ್ತ ಪಂಥದ ಹಿನ್ನೆಲೆಯಿಂದ ಒಡಮೂಡಿ ಸಾಮಾನ್ಯರಿಗೆ ಆರಾಧನೆಯ ಒಂದು ಅಂಗವಾಗಿ ಯಕ್ಷಗಾನವು ಬಳಕೆಗೆ ಬಂದಿರಬೇಕು. ಆಂಧ್ರದಲ್ಲಿ ಕೂಡ ಇದೇ ಕಾಲದಲ್ಲಿ ತೆಲುಗು ಯಕ್ಷಗಾನಗಳು ರಚನೆಗೊಂಡದ್ದಕ್ಕೆ ದಾಖಲೆಗಳು ಸಿಗುತ್ತವೆ. ಹದಿನಾಲ್ಕು ಹಾಗೂ ಹದಿನೈದನೆಯ ಶತಮಾನಗಳಲ್ಲಿ ಕರ್ನಾಟಕ ಹಾಗೂ ಆಂಧ್ರ ರಾಜಕೀಯವಾಗಿ, ಸಾಂಸ್ಕೃತಿಕವಾಗಿ ಸಾಮಿಪ್ಯ ಹೊಂದಿದ್ದವು. ಈ ಸಂದರ್ಭದಲ್ಲೇ ಕನ್ನಡ ಹಾಗೂ ತೆಲುಗು ಯಕ್ಷಗಾನ ಸಾಹಿತ್ಯ ರಚನೆ ಪ್ರಾರಂಭವಾಗಿರಬೇಕು. ಮೊದಲಿಗೆ ಯಕ್ಷಗಾನವು ಹಾಡುಗಾರಿಕೆಯಾಗಿ ಬಳಕೆಯಲ್ಲಿದ್ದಿರಬೇಕು. ಪ್ರಸಂಗಗಳಲ್ಲಿ ಬರುವ ಪದ್ಯಕ್ಕೆ ರಾಗತಾಳಗಳ ಆಧಾರವಿದೆ. ಈ ಬಗೆಯ ಹಾಡುಗಾರಿಕೆಯ ರಚನೆಗೆ ಮುಂದೆ ಜಾನಪದೀಯವಾದ ಕುಣಿತ, ಅಭಿನಯ, ಬಣ್ಣಗಾರಿಕೆ ವೇಷಭೂಷಣ ಸೇರಿಕೊಂಡಿತು. ವೇಷಧಾರಿಗಳಿಂದ ಹಾಡನ್ನು ಆಶ್ರಯಿಸಿದ ಗದ್ಯದ ಸಂಭಾಷಣೆಯು ಬಳಕೆಗೆ ಬಂದಿತು. ಕರ್ನಾಟಕದ ಬೇರೆ ಬೇರೆ ಪ್ರದೇಶಗಳಲ್ಲಿ ಮೊದಲೇ ಅಸ್ತಿತ್ವದಲ್ಲಿದ್ದ ಪಗರಣ, ಕೇಳಿಕೆ, ಬಹುರೂಪ ಮುಂತಾದ ಜನಪದ ಕಲೆಗಳಿಂದ ಹಾಗೂ

ನಾಗಾರಾಧನೆ, ಭೂತಾರಾಧನೆ ಮುಂತಾದ ವಿಶಿಷ್ಟ ಆರಾಧನಾ ಪ್ರಕಾರಗಳಿಂದಲೂ ಅನೇಕ ಅಂಶಗಳು ಸೇರ್ಪಡೆಗೊಂಡು ಒಂದು ವಿಶಿಷ್ಟ, ಅದ್ವಿತೀಯ 'ಯಕ್ಷಗಾನ ಬಯಲಾಟ' ಸಂಪ್ರದಾಯ ಬೆಳೆದು ಬಂದಿರಬೇಕು. ತಮಿಳುನಾಡಿನ ತೆರಕ್ಕೂತು, ಆಂಧ್ರದ ಯಕ್ಷಗಾನ, ವಿಧಿನಾಟಕಮು, ಕೇರಳದಲ್ಲಿನಕೊಡಿಯಟ್ಟಂ, ರಾಮನಾಟ್ಟಂ, ಕಥಕ್ಕಳಿ, ಮುಂತಾದವುಗಳೆಲ್ಲ 'ಯಕ್ಷಗಾನಕ್ಕೆ ಸಂವಾದಿಯಾದ ಕಲೆಗಳಾಗಿ ರೂಪುಗೊಂಡಿರುವುದನ್ನು ಗಮನಿಸಬಹುದು. ಯಕ್ಷಗಾನ ಸಾಹಿತ್ಯದಲ್ಲಿ ಮುಖ್ಯವಾಗಿ ಎರಡು ಬಗೆ ಇವೆ. ಮೊದಲನೆಯದೆಂದರೆ ಭಾಗವತನು ರಂಗಸ್ಥಳದಲ್ಲಿ ಹಾಡುವ ಪದ್ಯ ಸಾಹಿತ್ಯ. ಇದನ್ನೆ 'ಪ್ರಸಂಗ' ಎನ್ನುತ್ತಾರೆ. ಪ್ರಸಂಗವೆಂದರೆ ಒಂದು ಕಥಾ ಭಾಗ ಅಥವಾ ಮೂಲ ಕಾವ್ಯದ ಒಂದು ಸನ್ನಿವೇಶವನ್ನು, ಘಟನೆಯನ್ನು ಆಧರಿಸಿ ಬರೆದ ಹಾಡುಗಬ್ಬ ಈ ಬಗೆಯ ಉದ್ದೇಶದಿಂದಲೇಕವಿಗಳು ರಚಿಸಿದ ಪ್ರಸಂಗಗಳು ಕನ್ನಡ ಸಾಹಿತ್ಯದಲ್ಲಿ ಪ್ರತ್ಯೇಕ ಸಾಹಿತ್ಯ ಪ್ರಕಾರವಾಗಿ ಗುರುತಿಸಲ್ಪಟ್ಟಿದೆ. ಇದಲ್ಲದೆ ಇನ್ನೊಂದು ಬಗೆಯಾದ ಗದ್ಯ ಸಾಹಿತ್ಯವು ಯಾಕ್ಷಗಾನದಲ್ಲಿ ಇದೆ. ಬಯಲಾಟದಲ್ಲಿ ಮೇಷಧಾರಿ, ತಾಳಮದ್ದಲೆಗಳಲ್ಲಿ ಅರ್ಥಧಾರಿ ತಮ್ಮ ಆಶುಮಾತಿನ ಮೂಲಕ ಕಟ್ಟಿಕೊಡುವ ಮೌಖಿಕ ಸಾಹಿತ್ಯವಾಗಿದೆ. ಜನಜೀವನದ ಮೇಲೆ, ಕೇಳುಗರ ಮೇಲೆ ಈ ಮಾತುಗಾರಿಕೆ' ಮಾಡುವ ಪ್ರಭಾವ ಅನನ್ಯ. ಪಾತ್ರಧಾರಿಯಾದವನುನ್ನೇ ಪ್ರಸಂಗವ ಆಧರಿಸಿ ಮಾತನಾಡಿದರೂ ಅವನ ಜೀವನಾನುಭವ ಹಾಗೂ ಜ್ಞಾನಾನುಭವ ಇಲ್ಲಿ ಪ್ರಭಾವ ಬೀರಿ ಅಸಾಧಾರಣವಾದ ಸಾಹಿತ್ಯ ಶಿಲ್ಪದ ಸೃಷ್ಟಿಯಾಗುತ್ತದೆ. ಅದ್ವಿತೀಯ ಅರ್ಥಧಾರಿಗಳಾದ ಪೊಳಲಿ ಶಂಕರನಾರಾಯಣ ಶಾಸ್ತ್ರೀ, ಕವಿಭೂಷಣ ವೆಂಕಪ್ಪಶೆಟ್ಟಿ, ನಾರಾಯಣಕಿಲ್ಲೆ, ಅರ್ಕುಳ ಸುಬ್ರಾಯಾಚಾರ್ಯ, ಬಡಕ ಬೈಲು ಪರಮೇಶ್ವರಯ್ಯ, ಕುಬಣೂರು ಬಾಲಕೃಷ್ಣರಾವ್, ಕೋಣಿ ಅಣ್ಣಪ್ಪಕಾರಂತ, ತೆಕ್ಕಟ್ಟೆ ಬಾಬಣ್ಣ ಶ್ಯಾನುಭೋಗ, ಕಿರಿಕ್ಕಾಡು ಮಾಸ್ತರ್ ವಿಷ್ಣಭಟ್, ಶೇಣಿಗೋಪಾಲಕೃಷ್ಣಭಟ್, ಶಂಕರನಾರಾಯಣ ಸಾಮಗ, ದೇರಾಜೆ ಸೀತಾರಾಮಯ್ಯ, ಪೆರ್ಲ ಕೃಷ್ಣಭಟ್, ವಿದ್ವಾನ್ ಕಾಂತರೈ, ಪ್ರೋ.ಎಂ.ಆರ್.ಶಾಸ್ತ್ರಿ, ಮುಳಿಯ ಮಹಾಬಲಭಟ್, ಕುರಿಯ ವಿಠಲಶಾಸ್ತ್ರಿ, ಎಂ.ಎ.ಹೆಗ್ಡೆ, ಕೆರೆಕೈ ವಿಷ್ಣುಭಟ್, ರಾಮದಾಸ ಸಾಮಗ, ಕುಂಬಳೆ ಸುಂದರರಾವ್, ಪ್ರಭಾಕರ ಜೋಷಿ, ತೆಕ್ಕಟ್ಟೆ ಆನಂದಮಾಸ್ತರ್, ಮೂಡಂಬೈಲು ಗೋಪಾಲಕೃಷ್ಣಶಾಸ್ತ್ರಿ, ರಮಾನಂದ ಬನಾರಿ, ಕೊಳ್ಯೂರು ರಾಮಚಂದ್ರರಾವ್, ಅಂಬಾತನಯ ಮುದ್ರಾಡಿ, ಕೆರೆಮನೆ ಮಹಾಬಲ ಹೆಗಡೆ, ಶಂಭುಹೆಗಡೆ, ಗೋವಿಂದ ಭಟ್, ರಾಧಾಕೃಷ್ಣ ಕಲ್ಚಾರ್, ವಾಸುದೇವ ರಂಗಭಟ್, ವಿದ್ವಾನ್ ಉಮಾಕಾಂತ ಭಟ್, ಹೊಸ್ತೋಟ ಮಂಜುನಾಥಭಟ್, ವಾಸುದೇವ ಸಾಮಗ, ಪ್ರೋ. ಎಂ.ಎ.ಹೆಗಡೆ, ಲಕ್ಷ್ಮೀಶ ತೊಳ್ವಾಡಿ ಮುಂತಾದವರು ಕಟ್ಟಿಕೊಟ್ಟ ಮೌಖಿಕ ಸಾಹಿತ್ಯ ಅಪೂರ್ವವಾಗಿದ್ದು, ಜನಮಾನಸದಲ್ಲಿ ಚಿರಸ್ಥಾಯಿಯಾಗಿದೆ. ಈಚಿನ ತಂತ್ರಜ್ಞಾನದ ನೆರೆವಿನಿಂದಾಗಿ ಇವರಲ್ಲಿ ಕೆಲವರ ಅರ್ಥಗಾರಿಕೆಯು ಕ್ಯಾಸೆಟ್, ಸಿಡಿ, ಯುಟ್ಯೂಬ್‌ಗಳ

ಮೂಲಕ ಉಳಿದುಕೊಂಡಿವೆ. ಮೂಡಲಪಾಯದ ಅರ್ಥಗಾರಿಕೆಯು ಸಿದ್ಧಪಡಿಸಿದ ಸಾಹಿತ್ಯವಾಗಿದ್ದು ಪಾತ್ರಧಾರಿ ಕಂಠಪಾಠ ಮಾಡಿ ರಂಗದಲ್ಲಿ ಒಪ್ಪಿಸುತ್ತಾನೆ. ಇದು ಶೈಲಿಕೃತ ಸಂಭಾಷಣೆಯಾಗಿದ್ದು, ಹೆಚ್ಚು ರಂಜನೆಯ ಅಂಶಗಳನ್ನು ಒಳಗೊಂಡಿದೆ. ಪದ್ಯರೂಪದ ಪ್ರಸಂಗ ಸಾಹಿತ್ಯಕ್ಕೆ ಬಂದರೆ ಇವು ಐದು ಸಾವಿರಕ್ಕೂ ಮಿಕ್ಕಿ ಇವೆ ಎಂಬುದನ್ನು ವಿದ್ವಾಂಸರಾದ ಡಾ.ಪಾದೆಕಲ್ಲು ವಿಷ್ಣುಭಟ್ ಹಾಗೂ ಡಾ.ಕಬ್ಬಿನಾಲೆ ವಸಂತ ಭಾರದ್ವಾಜರು ದೃಢಪಡಿಸಿದ್ದಾರೆ. ಬೆಂಗಳೂರಿನ ಯಕ್ಷವಾಹಿನಿ ಸಂಸ್ಥೆಯು ಈ ಪ್ರಸಂಗಗಳ ಡಿಜಿಟಲಿಕರಣವನ್ನು ಕೈಗೆತ್ತಿಕೊಂಡಿದ್ದು ಮೂನ್ನೂರಕ್ಕೂ ಹೆಚ್ಚು ಪ್ರಸಂಗಗಳ ವಿದ್ಯಾನ್ಮಾನ ಪ್ರತಿ ಓದುಗರಿಗೆ ಲಭಿಸುತ್ತಿದೆ. ಇದೇ ಸಂಸ್ಥೆಯು ಪ್ರಸಂಗಗಳ ಪಟ್ಟಿಯೊಂದನ್ನು ಸಿದ್ಧಪಡಿಸಿದ್ದು ಮೂಡಲಪಾಯ ಹಾಗೂ ಪಡುವಲಪಾಯಕ್ಕೆ ಸಂಬಂಧಿಸಿದ ಆರು ಸಾವಿರದಷ್ಟು ಪ್ರಸಂಗಗಳ ಉಲ್ಲೇಖ ದೊರೆಯುತ್ತದೆ. ಇದೇ ರೀತಿ ಪ್ರಸಂಗ ಪ್ರತಿ ಸಂಗ್ರಹ ಕೋಶವೊಂದನ್ನು ಸಿದ್ಧಪಡಿಸಿದ್ದು 1650ಕ್ಕೂ ಹೆಚ್ಚಿನ ಯಕ್ಷಗಾನ ಪ್ರಸಂಗಗಳನ್ನು ಸ್ಕ್ಯಾನಿಂಗ್ ತಂತ್ರಾಂಶದ ಮೂಲಕ ಪ್ರತಿಗಳ ಪಿ.ಡಿ.ಎಫ್. ಆವೃತ್ತಿಗಳು ಓದುಗರಿಗೆ ಲಭಿಸುವಂತೆ ಮಾಡಲಾಗಿದೆ. ಈ ಬಗೆಯಲ್ಲಿರುವ ಪ್ರಸಂಗಗಳು ವೈವಿಧ್ಯಮಯವಾಗಿವೆ. ವಸ್ತುವನ್ನಾಧರಿಸಿ ಅವುಗಳನ್ನು ಕೆಳಕಂಡಂತೆ ವಿವೇಚಿಸಬಹುದು.

ರಾಮಾಯಣ ಪ್ರಸಂಗಗಳು:

ಆದಿಕವಿ ವಾಲ್ಮೀಕಿಯ ರಾಮಾಯಣವನ್ನು ಆಧರಿಸಿ ಅಸಂಖ್ಯ ಯಕ್ಷಗಾನ ಪ್ರಸಂಗಗಳು ಬಂದಿವೆ. ಈ ಪ್ರಸಂಗಗಳು ಕನ್ನಡದಲ್ಲಿ ಬಂದಿರುವ ತೊರವೆ ರಾಮಾಯಣ, ಆನಂದ ರಾಮಾಯಣ, ಆಧ್ಯಾತ್ಮ ರಾಮಾಯಣ, ಅದ್ಭುತ ರಾಮಾಯಣ, ಕೌಶಿಕ ರಾಮಾಯಣ, ಹನುಮದ್ರಾಮಾಯಣಗಳಿಂದಪ್ರಭಾ ವಿತಗೂಂಡುರಚಿತವಾಗಿವೆ. ಈಚೆಗೆ ಕಬ್ಬಿನಾಲೆಯವರಿಂದ ಕುವೆಂಪು ರವರ 'ಶ್ರೀ ರಾಮಾಯಣ ದರ್ಶನಂ' ನಿಂದ ಕೂಡ ಪ್ರಸಂಗಗಳ ರಚನೆಯಾಗಿದೆ. ರಾಮಾಯಣದಲ್ಲಿ ದೊರೆಯುವ ಮೂವತ್ತೈದಕ್ಕೂ ಹೆಚ್ಚಿನ ಕಥಾನಕಗಳನ್ನುಆಧರಿಸಿ ಈ ಪ್ರಸಂಗಗಳು ಬಂದಿವೆ. ಪಾರ್ತಿಸುಬ್ಬ, ಹಟ್ಟಿಯಂಗಡಿ ರಾಮಭಟ್ಟ, ಗೇರಸೊಪ್ಪೆ ಶಾಂತಪ್ಪಯ್ಯ, ಹಲಸಿನಹಳ್ಳಿ ನರಸಿಂಹಶಾಸ್ತ್ರಿ, ವೆಂಕಪ್ಪಶೆಟ್ಟಿ, ವೆಂಕಟ, ಮೂರೂರು ದೇವರಹೆಗಡೆ, ಪ್ರೊ.ಎಂ.ಎ. ಹೆಗಡೆ, ಜಾನಕೈ ತಿಮ್ಮಪ್ಪ ಹೆಗಡೆ, ಕೊರ್ಡೆಲ್ವೆಂಕಟರಾವ್, ಅಲೆಟ್ಟಿ ರಾಮಣ್ಣ ಶೆಗ್ರಿತ್ತಾಯ, ಪುತ್ತಿಗೆ ರಾಮಕೃಷ್ಣ ಭಾಗವತ ಮುಂತಾದವರು ರಾಮಾಯಣ ಪ್ರಸಂಗಗಳನ್ನು ರಚಿಸಿ ಖ್ಯಾತರಾಗಿದ್ದಾರೆ. ಪುತ್ರಕಾಮೇಷ್ಟಿ, ಸೀತಾ ಕಲ್ಯಾಣ, ಪಂಚವಟಿ ಪಟ್ಟಾಭಿಷೇಕ, ಪಂಚವಟಿ ವಾಲಿಸುಗ್ರೀವ ಕಾಳಗ, ಚೂಡಾಮಣಿ, ಸೇತುಬಂಧನ, ಅಂಗದ ಸಂಧಾನ, ಅತಿಕಾಯ ಕಾಳಗ, ಮೈರಾವಣ

ಕಾಳಗ, ಕುಂಭಕರ್ಣ ಕಾಳಗ, ಲವಕುಶ ಕಾಳಗ, ಕುಶಲವರ ಕಾಳಗ, ರಾಮ ನಿರ್ಯಾಣ ಮುಂತಾದ ಪ್ರಸಂಗಗಳು ಇಂದಿಗೂ ಯಕ್ಷಗಾನ ಪ್ರದರ್ಶನ ಹಾಗೂ ತಾಳಮದ್ದಲೆಯಲ್ಲಿ ಚಾಲ್ತಿಯಲ್ಲಿವೆ.

ರಾಮಾಯಣ ಪ್ರಸಂಗಗಳ ಕುರಿತು ಡಾ.ಆನಂದರಾಮ ಉಪಾಧ್ಯ ಅವರು ಅಧ್ಯಯನ ನಡೆಸಿದ್ದು 1980ರಲ್ಲಿ ಅದು ಪ್ರಕಟಗೊಂಡಿದೆ.

ಮಹಾಭಾರತ ಪ್ರಸಂಗಗಳು:

ಯಕ್ಷಗಾನದಲ್ಲಿ ಮಹಾಭಾರತ ಪ್ರಸಂಗಗಳೇ ಅತ್ಯಧಿಕವಾಗಿವೆ. ವ್ಯಾಸ ಪ್ರಣಿತ ಮಹಾಭಾರತದ ಹದಿನೆಂಟು ಪರ್ವಗಳನ್ನು ಆಶ್ರಯಿಸಿ ರಚಿತವಾಗಿರುವ ಪ್ರಸಂಗಗಳು ಆಕರ್ಷಣೆಗೆ ಒದಗಬಹುದಾದ ಎಲ್ಲ ಅಂಶಗಳನ್ನು ಒಳಗೊಂಡಿವೆ. ಮಹಾಭಾರತದಲ್ಲಿ ಅನೇಕ ಉಪಕಥೆಗಳು ಬಂದಿದ್ದು ಇವುಗಳ ಬಗ್ಗೆ ಕೂಡ ಕವಿಗಳು ಪ್ರಸಂಗ ರಚಿಸಿದ್ದಾರೆ. ಕುಮಾರವ್ಯಾಸನ ಕರ್ಣಾಟ ಭಾರತ ಕಥಾಮಂಜರಿ, ಲಕ್ಷ್ಮೀಶನ ಜೈಮಿನಿ ಭಾರತವನ್ನೆ ಯಕ್ಷಗಾನ ಕವಿಗಳು ಹೆಚ್ಚಾಗಿ ಆಧರಿಸಿ ಪ್ರಸಂಗ ರಚನೆ ಮಾಡಿದ್ದಾರೆ. ಯುದ್ಧಪರ್ವಗಳ ಕಥೆಗಳು ಅಶ್ವಮೇಧ ಪರ್ವದ ಕಥೆಗಳು ಪ್ರದರ್ಶನಗಳಲ್ಲಿ ಮಿಂಚಿವೆ. ಐರಾವತ, ಭೀಷ್ಮವಿಜಯ, ಸುಭದ್ರಾ ಕಲ್ಯಾಣ, ಅಭಿಮನ್ಯುಕಾಳಗ, ರಾಜಸೂಯ, ಭೀಷ್ಮಪರ್ವ, ಕರ್ಣ ಪರ್ವ, ಕರ್ಣಾರ್ಜುನ ಕಾಳಗ, ಸುಧನ್ವ ಕಾಳಗ, ಚಿತ್ರಸೇನ ಕಾಳಗ, ಬಬ್ರುವಾಹನ ಕಾಳಗ ಮುಂತಾದವೆಲ್ಲ ಜನಪ್ರಿಯ ಪ್ರಸಂಗಗಳಾಗಿವೆ. ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ, ಸೀತಾನದಿ ಗಣಪಯ್ಯಶೆಟ್ಟಿ, ಹಟ್ಟಿಯಂಗಡಿ ರಾಮಭಟ್ಟ, ಬವುಲಾಡಿ ಹಿರಿಯಣ್ಣ ಹೆಬ್ಬಾರ್, ಅಂಬಾತನಯ ಮುದ್ರಾಡಿ, ಕೋರ್ಗಿ ಸೂರ್ಯನಾರಾಯಣ ಉಪಾಧ್ಯ, ಪಾರ್ತಿಸುಬ್ಬ, ಕಲ್ಯಾಣ ಭೀಮರಾವ್, ಡಿ.ವಿ.ಹೊಳ್ಳ, ನಿತ್ಯಾನಂದ ಅವಧೂತ, ಧ್ವಜಪುರದ ನಾಗಪ್ಪಯ್ಯ ಅನಂತಮೂರ್ತಿ ಹೆಬ್ಬಾರ್, ಗುಂಡೂ ಸೀತಾರಾಮರಾವ್, ಸಂಕಯ್ಯ ಭಾಗವತ, ದೇವಿದಾಸ, ಕಡಂದಲೆ ರಾಮರಾವ್, ಅಮೃತ ಸೋಮೇಶ್ವರ, ವಿಷ್ಣು, ಗೆರೆಸೊಪ್ಪೆ ಶಾಂತಪ್ಪಯ್ಯ, ಡಿ.ಎಸ್.ಶ್ರೀಧರ್, ಮೂಲ್ಕಿ ರಾಮಕೃಷ್ಣಯ್ಯ, ರಾಘವ ನಂಬಿಯಾರ್, ಅನಂತರಾಮ ಬಂಗಾಡಿ ಮುಂತಾದವರು ಮಹಾಭಾರತಕ್ಕೆ ಸಂಬಂಧಿಸಿದ ಪ್ರಸಂಗಗಳನ್ನು ರಚಿಸಿ ಖ್ಯಾತರಾಗಿದ್ದಾರೆ. ಕುಮಾರವ್ಯಾಸ, ಲಕ್ಷ್ಮೀಶರಲ್ಲದೇ ಪಂಪ, ರನ್ನ, ವಿಮಲಾನಂದ, ಕೋನಯ್ಯ, ಕೈಲಾಸಂ, ಕನಕದಾಸ ಮುಂತಾದವರ ಕೃತಿಗಳು ಕೂಡ ಪ್ರಸಂಗಗಳಿಗೆ ಆಕರಗಳಾಗಿವೆ. ಆದಿಪರ್ವ ಎಂಬುದು ದೊರೆತಿರುವ ಪ್ರಸಂಗಗಳಲ್ಲೇ ಪ್ರಾಚೀನವಾಗಿದ್ದು ಇದರ ಕಾಲ ಸುಮಾರು ಕ್ರಿಶ.1350 ಎಂದು ನಿರ್ಧರಿಸಲಾಗಿದೆ. ಶ್ರೀಪ್ರೊ.ಎಂ.ಎ.ಹೆಗಡೆಯವರು ಈ ಕುರಿತು ಅನೇಕ ಹೊಸ ಅಂಶಗಳನ್ನು ತಿಳಿಸಿದ್ದಾರೆ.

94 ಮಹಾಭಾರತ ಪ್ರಸಂಗಗಳ ಕುರಿತು ಅಧ್ಯಯನ ನಡೆಸಿ ಪ್ರೌಢ ಪ್ರಬಂಧ ರಚಿಸಿರುವ ಡಾ॥ ಆನಂದರಾಮಉಪಾಧ್ಯ ಅವರಿಗೆ 1984ರಲ್ಲಿ ಉಸ್ಮಾನಿಯ ವಿಶ್ವವಿದ್ಯಾಲಯದ ಪಿ.ಹೆಚ್.ಡಿ. ಪದವಿ ಲಭಿಸಿದೆ.

ಭಾಗವತ ಪ್ರಸಂಗಗಳು:

ಭಾಗವತ ಸಂಪ್ರದಾಯವೂ ಕರ್ನಾಟಕದಲ್ಲಿ ಬಹಳಷ್ಟು ಕಾಲದಿಂದ ಕಂಡು ಬರುತ್ತದೆ. ಶ್ರೀಕೃಷ್ಣ ಪಾರಮ್ಯವೇ ಇಲ್ಲಿ ಹಿರಿದು. ಭಕ್ತಿ ಪ್ರಧಾನ ಸಾಹಿತ್ಯ ಕೃತಿಗಳಲ್ಲಿ 'ಭಾಗವತ'ದ ಅನೇಕ ಕಥೆಗಳಲ್ಲಿ ಸುಂದರವಾಗಿ ಮೂಡಿವೆ. ಯಕ್ಷಗಾನ ಸಾಹಿತ್ಯದಲ್ಲೂ ಕೂಡ ಭಾಗವತವನ್ನು ಆಧರಿಸಿದ ಪ್ರಸಂಗಗಳು ಸಾಕಷ್ಟು ಬಂದಿವೆ. ದಾಸ ಸಾಹಿತ್ಯದ ಪ್ರಭಾವ ಕೂಡ ಈ ಪ್ರಸಂಗಗಳ ಮೇಲೆ ಇವೆ. ಚಂದ್ರಾವಳಿ, ಬಿಲ್ಲಹಬ್ಬ, ರುಕ್ಮಿಣೀ ಸ್ವಯಂವರ, ಬಾಣಾಸುರ ಕಾಳಗ, ಯಾದವಾಭ್ಯುದಯ, ರುಗ್ಮವತಿ ಕಲ್ಯಾಣ, ಕೃಷ್ಣ ಚರಿತೆ, ಧ್ರುವ ಚರಿತ್ತೆ ಮುಂತಾದವುಗಳು ಪ್ರಮುಖ ಪ್ರಸಂಗಗಳಾಗಿವೆ. ನಿತ್ಯಾತ್ಮ ಶುಕಯೋಗಿಯು ರಚಿಸಿರುವ 'ಕರ್ಣಾಟಭಾಗವತ' ಕಾವ್ಯದ ಪ್ರಭಾವ ಕೆಲವು ಪ್ರಸಂಗಗಳ ಮೇಲೆ ಇದೆ. ಪಾರ್ತಿಸುಬ್ಬ, ಎಣ್ಣೆಮಡಿ ವೆಂಕಟರಮಣಯ್ಯ, ನಂಜುಂಡ ಭಾಗವತ, ಅಳಿಯ ಲಿಂಗರಾಜ, ಅಜಪುರದಸುಬ್ಬ, ಜತ್ತಿ ಈಶ್ವರ ಭಾಗವತ ಮುಂತಾದವರು ಭಾಗವತ ಪ್ರಸಂಗ ರಚನೆಯ ಮೂಲಕ ಪ್ರಸಿದ್ಧಿಗೊಂಡಿದ್ದಾರೆ.

ಡಾ.ಪಾದೆಕಲ್ಲು ವಿಷ್ಣುಭಟ್ಟರವರು ಭಾಗವತ ಪ್ರಸಂಗಗಳ ಕುರಿತು ಅಧ್ಯಯನ ನಡೆಸಿ ಸಲ್ಲಿಸಿದ ಪ್ರೌಢ ಪ್ರಬಂಧಕ್ಕೆ ಮಂಗಳೂರು ವಿಶ್ವವಿದ್ಯಾಲಯದ ಪಿ.ಹೆಚ್.ಡಿ. ಪದವಿಯ ಗೌರವ 1997ರಲ್ಲಿ ಲಭಿಸಿದೆ.

ಪುರಾಣ ಮೂಲ ಪ್ರಸಂಗಗಳು:

ಶಿವಪುರಣ, ದೇವಿಭಾಗವತ, ಪದ್ಮಪುರಾಣ, ಸ್ಕಾಂದಪುರಾಣ ಮುಂತಾದ ಪುರಾಣಗಳನ್ನು ಆಧರಿಸಿ ಹಲವು ಕವಿಗಳು ಪ್ರಸಂಗ ರಚನೆ ಮಾಡಿದ್ದಾರೆ. ಪುರಾಣಗಳಲ್ಲಿ ಬರುವ ಸುಂದರ ಆಖ್ಯಾನಗಳನ್ನು ಆಧರಿಸಿ ಸ್ವತಂತ್ರವಾದ ರಂಗಸ್ಥಳಕ್ಕೆ ಯೋಗ್ಯವಾಗುವ ಪ್ರಸಂಗಗಳು ಸಾಕಷ್ಟು ಬಂದಿವೆ. ಇಲ್ಲಿನ ಕಥೆಗಳು ಹೃದ್ಯವಾಗಿದ್ದುಮನಮುಟ್ಟುವಂತಿದೆ ಮತ್ತು ಭಕ್ತಿ ಪ್ರಸರಣದಲ್ಲಿಯಶಸ್ವಿಯಾಗಿವೆ. ರುಕ್ಮಾಂಗದಚರಿತ್ರ, ಶಿವಪಂಚಾಕ್ಷರಿ, ಗಿರಿಜಾಕಲ್ಯಾಣ, ಏಕಾದಶಿ ಮಹಾತ್ಮೆ, ಕುಮುದ್ವಕಲ್ಯಾಣ, ದೇವೀಮಹಾತ್ಮೆ ಮುಂತಾದವು ಪ್ರಸಿದ್ಧಿ ಪಡೆದ ಪ್ರಸಂಗಗಳು. ದೇವಿ ಮಹಾತ್ಮೆಯಂತುಕಟೀಲುಮೇಳದ ಮೂಲಕ ಅತ್ಯಧಿಕ ಪ್ರದರ್ಶನ ಪ್ರಸಾರದ

ದಾಖಲೆಯನ್ನು ಹೊಂದಿದೆ. ಬೆಳಸಲಿಗೆ ಗಣಪತಿ ಹೆಗಡೆ, ಕುಬೆವೂರು ಪುಟ್ಟಣ್ಣಶೆಟ್ಟಿ, ಕೀರಿಕ್ಕಾಡು ಮಾಸ್ತರ್ ವಿಷ್ಣುಭಟ್, ಕೊರ್ಗಿ ಸೂರ್ಯನಾರಾಯಣ ಉಪಾಧ್ಯ ಅಗರಿ ಶ್ರೀನಿವಾಸ ಭಾಗವತ, ಬಿ.ಜಿ.ಶಾಸ್ತ್ರಿ, ಎಂ.ಜಿ.ಬರವಣಿ ಬಲಿಪ ನಾರಾಯಣ ಭಾಗವತ ಪುರುಷೊತ್ತಮ ಪೂಂಜ ಮುಂತಾದ ಅಸಂಖ್ಯರು ಪುರಾಣ ಮೂಲ ಪ್ರಸಂಗಗಳನ್ನು ಬರೆದು ಹೆಸರು ಗಳಿಸಿದ್ದಾರೆ.

ಅಗರಿ ಶ್ರೀನಿವಾಸ ಭಾಗವತರು ರಚಿಸಿರುವ ಶ್ರೀದೇವಿ ಮಹಾತ್ಮೆ, ಕಟೆಲು ಮೇಳದವರಿಂದ ಹತ್ತು ಸಹಸ್ರಕ್ಕೂ ಹೆಚ್ಚು ಪ್ರದರ್ಶನಗಳನ್ನು ಕಂಡಿದ್ದು ಇದೊಂದು ವಿಶ್ವದಾಖಲೆಯಾಗಿದೆ.

ಜಾನಪದ ವಸ್ತು ಹಾಗೂ ಕ್ಷೇತ್ರ ಮಹಾತ್ಮೆ ಪ್ರಸಂಗಗಳು:

ಜಾನಪದ ಕತೆಗಳನ್ನು ಆಧರಿಸಿ ಬರೆದ ಅಂಸಖ್ಯ ಪ್ರಸಂಗಗಳು ರಂಗದಲ್ಲಿ ಮೆರೆದಿವೆ. ಕ್ರಿ.ಶ.1480ರ ಸುಮಾರಿಗೆ ಬದುಕ್ಕಿದ್ದ ಕೆಂಪಣ್ಣಗೌಡ ಬರೆದ ಕರಿಬಂಟನ ಕಥೆ ಪ್ರಸಂಗವು ಮೊದಲ ಕಾಲದ ಪ್ರಸಂಗಗಳಲ್ಲಿ ಒಂದಾಗಿದೆ. ಸಾರಂಗಧರನ ಕತೆ, ಕೋಟಿಚೆನ್ನಯ್ಯ, ಕೊಡಗೂಸು ಚರಿತ್ರೆ, ತುಳುನಾಡಸಿರಿ, ಭೀಮಾರ್ಜುನ ಕಾಳಗ ಮುಂತಾದ ಪ್ರಸಂಗಗಳನ್ನು ಸಾಂಬಯ್ಯ ವೀರಕವಿ, ಅಮೃತ ಸೋಮೇಶ್ವರ, ಶೇಣಿಗೋಪಾಲಕೃಷ್ಣಭಟ್, ವೀರನಗರೆ ಪುಟ್ಟಣ್ಣ ಗಣೇಶ ಕೊಲೆಯಾಡಿ ಮುಂತಾದವರು ಬರೆದಿದ್ದಾರೆ. ಕರಾವಳಿ ಹಾಗೂ ಮಲೆನಾಡಿನ ದೇವಸ್ಥಾನಗಳ ಕ್ಷೇತ್ರ ಮಹಿಮೆಯನ್ನು ಆಧರಿಸಿ ಬಹಳಷ್ಟು ಪ್ರಸಂಗಗಳು ಬಂದಿವೆ. ಧರ್ಮಸ್ಥಳ ಕ್ಷೇತ್ರ ಮಹಾತ್ಮೆ, ಕಾವೇರಿ ಮಹಾತ್ಮೆ, ಮಂದಾರ್ತಿ ಕ್ಷೇತ್ರ ಮಹಾತ್ಮೆ, ಸೋಮೆಶ್ವರ ಕ್ಷೇತ್ರ ಮಹಾತ್ಮೆ, ಗೋಕರ್ಣಕ್ಷೇತ್ರ ಮಹಾತ್ಮೆ, ಕುಂಭಾಶಿ ಕ್ಷೇತ್ರ ಮಹಾತ್ಮೆ, ಮುಕ್ತಿನಾಥಕ್ಷೇತ್ರ ಮಹಾತ್ಮೆ, ಮಲೆ ಮಹದೇಶ್ವರ ಕ್ಷೇತ್ರ ಮಹಾತ್ಮೆ ಮುಂತಾದವುಗಳು ಇವುಗಳಲ್ಲಿ ಮುಖ್ಯವಾಗಿವೆ. ಡಿ.ವಿ.ಹೊಳ್ಳ, ರಾಮಯ್ಯಭಟ್ಟ, ಕುಬೆವೂರು ಪುಟ್ಟಣ್ಣಶೆಟ್ಟಿ, ಕಂದಾವರ ರಘುರಾಮಶೆಟ್ಟಿ, ಅಗರಿ ಶ್ರೀನಿವಾಸಭಾಗವತ ಮುಂತಾದವರು ರಚಿಸಿದ ಕ್ಷೇತ್ರ ಮಹಾತ್ಮೆಯ ಪ್ರಸಂಗಗಳು ಬಹಳಷ್ಟು ಪ್ರದರ್ಶನಗಳನ್ನುಕಂಡಿವೆ.

ಜಾನಪದೆಯ ವಸ್ತುಗಳನ್ನು ಆಧರಿಸಿ ಮೂಡಲಪಾಯದಲ್ಲಿ ಅಸಂಖ್ಯ ಪ್ರಸಂಗಗಳು ರಚನೆಗೊಂಡಿವೆ. 1480ರಲ್ಲಿ ರಚನೆಗೊಂಡಿರುವ ಕೆಂಪಣ್ಣ ಕವಿಯ 'ಕರಿ ಭಂಟನ ಕಾಳಗ' ಬಯಲು ಸೀಮೆಯ ಮೇಳಗಳ ಮೂಲಕ ಬಹಳಷ್ಟು ಪ್ರದರ್ಶನಗಳನ್ನು ಕಂಡಿದೆ. ದೊಡ್ಡಾಟ ಸಣ್ಣಾಟಗಳಲ್ಲಿ ಬಳಕೆಯಲ್ಲಿರುವ ಸಂಗ್ಯಾಬಾಳ್ಯಾ, ಬಸವಂತ ಬಲವಂತ ಮುಂತಾದುವು ಈ ಮಾದರಿಯಾಗಿವೆ. ಅಪಾರಳ ತಮ್ಮಣ್ಣನ ಕೃಷ್ಣ ಪಾರಿಜಾತವೂ ಕೂಡ ಉತ್ತರ ಕರ್ನಾಟಕದಲ್ಲಿ ಬಹು

ಜನಪ್ರಿಯವಾಗಿವೆ. ಜಾನಪದ ಕಥೆಗಳಲ್ಲಿರುವ ರಂಜನೀಯ ಅಂಶವನ್ನು ಆಧರಿಸಿ ಯಕ್ಷಗಾನ ಕವಿಗಳು ಬಹಳಷ್ಟು ಪ್ರಸಂಗಗಳನ್ನು ರಚಿಸಿದ್ದಾರೆ.

ಐತಿಹಾಸಿಕ ಪ್ರಸಂಗಗಳು:

ಇತಿಹಾಸ ಪುರುಷರ, ವೀರರವೀರ ಗಾಥೆಗಳು ಪ್ರಸಂಗ ರೂಪದಲ್ಲಿ ಬಂದಿವೆ. ನಾಡಿನ ಪ್ರೇಮ, ಹಾಗೂ ಸಾಹಸಗಳೇ ಇಲ್ಲಿ ಕಥಾ ವಸ್ತುವಾಗಿವೆ. ಕುಮಾರ ರಾಮನ ಚರಿತ್ರ, ಸತ್ಯೇಂದ್ರಚೋಳನ ಕಥೆ, ಸಿದ್ಧರಾಮಚರಿತೆ, ಹೇಮರೆಡ್ಡಿ ಮಲ್ಲಮ್ಮ, ರಾಜಾ ರಾಜಸಿಂಹ, ಶಿವಾಜಿ ಚರಿತ್ರೆ, ನಾಸಿಕ್‌ವಿಜಯ ಮುಂತಾದವು ಖ್ಯಾತಿಗೊಂಡ ಪ್ರಸಂಗಗಳಾಗಿದೆ. ನರೋಣರ ಹೈದರ ಆಲಿ, ಡಾ.ನಾರಾಯಣ ಶೆಟ್ಟಿ, ಭೀಮಕವಿ, ಕೀಲಾರು ತಿಮ್ಮಪ್ಪಯ್ಯ, ಎಂ.ವಿ.ಹೆಗ್ಡೆ, ತಮ್ಮಯ್ಯ ಗೌಡ ಮುಡೂರು ಮುಂತಾದರು ಐತಿಹಾಸಿಕ ಪ್ರಸಂಗ ರಚಿಸಿದವರು.

ಕಾಲ್ಪನಿಕ ಪ್ರಸಂಗಗಳು:

ಯಕ್ಷಗಾನ ಸಾಹಿತ್ಯ ಸೃಷ್ಟಿ ಹೆಚ್ಚುತ್ತಾ ಹೋದಂತೆ ಕವಿಗಳು ಕಲ್ಪನೆಯ ಅಂಶಗಳನ್ನು ಹೆಚ್ಚಾಗಿ ಸೇರಿಸುತ್ತಾ ಹೋಗಿ ಪ್ರಸಂಗ ರಂಜಿಸುವಂತೆ ನೋಡಿಕೊಂಡರು. ಇದರ ಮುಂದುವರಿದ ಭಾಗವಾಗಿ ಸಂಪೂರ್ಣ ಕಲ್ಪಿತ ಪ್ರಸಂಗಗಳೇ ದಾಂಗುಡಿಯಿಟ್ಟವು. ಡೇರೆಮೇಳಗಳು ಅಸ್ತಿತ್ವಕ್ಕೆ ಬಂದು ಅವುಗಳ ಪ್ರಾಬಲ್ಯದಿಂದ ಕಾಲ್ಪನಿಕ ಪ್ರಸಂಗಗಳ ರಚನೆ ಹೆಚ್ಚಿದವು. ನಾಗಶ್ರೀ, ರೂಪಶ್ರೀ, ಅಮಾತ್ಯನಂದಿನಿ, ಶೂದ್ರ ತಪಸ್ವಿನಿ, ಚೆಲುವೆ ಚಿತ್ರಾವತಿ, ಭಾಸವತಿ, ಪುತ್ರ ಬಲಿದಾನ, ವಂಶವಲ್ಲರಿ ಮುಂತಾದವುಗಳು ಈ ಮಾದರಿಯ ಪ್ರಸಂಗಗಳಾಗಿದ್ದು ಡೇರೆಮೇಳಗಳ ಯಶಸ್ಸಿಗೆ ಇವುಗಳ ಕೊಡುಗೆ ಅಪಾರ. ಕಾಳಿಂಗನಾವಡ, ಕಂದಾವರ ರಘುರಾಮಶೆಟ್ಟಿ, ಸೀತಾನದಿ ಗಣಪಯ್ಯಶೆಟ್ಟಿ, ತಾರಾನಾಥ ವರ್ಕಾಡಿ, ಹೊಸ್ತೋಟ ಮಂಜುನಾಥ ಭಾಗವತ, ಅನಂತರಾಮ ಬಂಗಾಡಿ, ಡಾ.ಚಂದ್ರಶೇಖರ ಶೆಟ್ಟಿ ಮುಂತಾದವರಿಂದ ಬಹಳಷ್ಟು ಕಾಲ್ಪನಿಕ ಪ್ರಸಂಗಗಳು ರಚನೆಗೊಂಡಿವೆ.

ಸಾಮಾಜಿಕ ಪ್ರಸಂಗಗಳು:

ಯಕ್ಷಗಾನ ಕವಿಗಳು ವರ್ತಮಾನಕ್ಕೆ ಸ್ಪಂದಿಸಿದ ಫಲವಾಗಿ ಅನೇಕ ಸಾಮಾಜಿಕ ಪ್ರಸಂಗಗಳು ರಚನೆಗೊಂಡಿವೆ. ಸಮಾಜದ ಅನೇಕ ಜ್ವಲಂತ ಸಮಸ್ಯೆಗಳು, ಸರಕಾರದ ಯೋಜನೆಗಳಾದ ಸಾಕ್ಷರತೆ, ಕುಟುಂಬಕಲ್ಯಾಣ, ಕೊರಾನದಂತಹ ಸಾಂಕ್ರಾಮಿಕದ ಕುರಿತು ಬರೆದಂತಹ ಪ್ರಸಂಗಗಳು ಕೂಡ ಈ ವರ್ಗದಲ್ಲಿ ಬರುತ್ತವೆ. ಸಂಪ್ರದಾಯವಾದಿಗಳ ಆಕ್ಷೇಪಣೆ ಇದ್ದರೂ ಇವೊಂದು ಸಾಮಾಜಿಕ

ಜವಾಬ್ದಾರಿಯನ್ನು ನಿರ್ವಹಿಸುವುದರಿಂದ ಇವುಗಳಿಗೆ ಮಹತ್ವವಿದೆ. ಇದೇ ರೀತಿ ಆಂಗ್ಲ ಸಾಹಿತ್ಯವನ್ನು, ಬೇರೆ ಸಾಹಿತ್ಯದ ಕಥಾ ವಸ್ತುವನ್ನು ಆಧರಿಸಿದ ಪ್ರಸಂಗಗಳು ಕೂಡ ಯಕ್ಷಗಾನ ರೂಪ ತಳೆದು ಬಂದಿವೆ. ಜಪಾನೀ ಕೃಷಿ ವಿಜಯ, ಇಳೆಯಣ್ಣನ ಪ್ರಸಂಗ, ರಾಷ್ಟ್ರವಿಜಯ, ಇಸ್ಪಿಟಾಟ, ಸಾಕ್ಷರತಾ ಮಹಾತ್ಮೆ, ಕೊರಾನಾಸುರ ಕಾಳಗ, ಕ್ರಿಸ್ತಕಾರುಣ್ಯ, ಯೇಸು ಮಹಾತ್ಮೆ, ಪಾಪಣ್ಣ ವಿಜಯಗುಣ ಸುಂದರಿ, ಮ್ಯಾಕ್‌ಬೆತ್ ಮುಂತಾದವರೆಲ್ಲ ಈ ಬಗೆಯ ಪ್ರಸಂಗಗಳಾಗಿವೆ. ಜತ್ತಿ ಈಶ್ವರಭಟ್, ಅಂಬಾತನಯ ಮುದ್ರಾಡಿ, ಸೂರಿಕುಮೇರು ಗೋವಿಂದಭಟ್, ಮುಳಿಯ ಕೇಶವಯ್ಯ, ಸಿರಿಬಾಗಿಲು ರಾಮಕೃಷ್ಣ ಮಯ್ಯ, ಆನಗಳ್ಳಿ ಲಾರೆನ್ಸ್ ಡಿಸೋಜಾ, ಗಣಪತಿ ಭಾಗವತ ಮುಂತಾದವರು ಈ ಬಗೆಯ ಪ್ರಸಂಗಗಳನ್ನು ರಚಿಸಿ ಸಾಮಾಜಿಕ ಜವಾಬ್ದಾರಿಯನ್ನು ನಿರ್ವಹಿಸಿದ್ದಾರೆ.

ಹೀಗೆ ವೈವಿಧ್ಯಮಯ ವಸ್ತುಗಳುಳ್ಳ ಪ್ರಸಂಗ ಸಾಹಿತ್ಯ ಜನರ ಬದುಕಿನಲ್ಲಿ ಅಪಾರ ಪ್ರಭಾವ ಬೀರಿದೆ. ಇಲ್ಲಿ ಬಳಸುವ ಅಚ್ಚ ಕನ್ನಡದಿಂದಾಗಿ ಪ್ರೇಕ್ಷಕ ವರ್ಗವೂ ಕನ್ನಡ ಭಾಷೆಯ ಬಳಕೆಯಲ್ಲಿ ಸದಾ ಮುಂದಿದ್ದಾರೆ. ಹೀಗಾಗಿ ಕನ್ನಡ ಭಾಷೆಯನ್ನು ಉಳಿಸಿ ಬೆಳೆಸುವಲ್ಲಿ 'ಯಕ್ಷಗಾನ'ದ ಪಾತ್ರ ಮಹತ್ತರವಾದದ್ದು. ಪ್ರಸಂಗಗಳಲ್ಲಿ ಉತ್ತಮ ಕವಿತ್ವ ಶಕ್ತಿಯೊಂದಿಗೆ, ಪ್ರಬುದ್ಧ ರಂಗತಂತ್ರ, ಪರಿಪುಷ್ಟವಾದ ಪಾತ್ರ ಪೋಷಣೆ, ಯುಗಧರ್ಮ ಹಾಗೂ ಕಾಲಧರ್ಮಗಳ ಸಮರ್ಪಕ ಮೇಳೈಕೆ ಮತ್ತು ಉತ್ತಮ ಛಂದೋಬದ್ಧ ರಚನೆಗಳನ್ನು ಕಾಣಬಹುದು. ಯಕ್ಷಗಾನದಲ್ಲಿ ಬರುವ ಪಾತ್ರಗಳ ಮೂಲಕ ಒಳ್ಳೆಯ ಜೀವನ ಮೌಲ್ಯವನ್ನು ಸಾರಲಾಗಿದೆ. ಯಕ್ಷಗಾನ ರಾಮಾಯಣ ಪ್ರಸಂಗಗಳಲ್ಲಿ ಬರುವ ಪಾತ್ರಗಳಲ್ಲಿ ಗ್ರಾಮೀಣ ಸಂಸ್ಕೃತಿಯ ಪಡಿಯಚ್ಚು ಇದೆ. ಇಲ್ಲಿ ಕಾಣುವ ಸಾಮಾನ್ಯ ಅಂಶಗಳು ಸಣ್ಣಸಣ್ಣ ವಿವರಣೆಗಳು, ದೈನಿಕ ವಿಚಾರಗಳು ನಮ್ಮ ನೆಲದ ಸಂಸ್ಕೃತಿಯನ್ನು ಪರಿಚಯಿಸುತ್ತದೆ. 'ಪಂಚವಟಿ ಪಟ್ಟಾಭಿಷೇಕ'ದಲ್ಲಿ ಭರತನು ರಾಮನು ವನವಾಸದಲ್ಲಿದ್ದಾಗ ತನಗೆ ಭೋಗದ ನಗರ ಜೀವನ ಬೇಡ ಎಂದು ತಿಳಿಸಲು

ಅಣ್ಣ ನೀವ್ಮೂವರಾ। ಅರಣ್ಯದೊಳಿರುವಾಗ

ಬಣ್ಣವೇ ತನಗೆ ರಾಜ್ಯ ॥ ------------

ಸಮ್ಮತವಲ್ಲದಿದ್ದರೆ ನಾ ಅಯೋಧ್ಯೆಗೆ

ಜನ್ಮಾಂತರಕೂ ಪೋಗೆನು

1

ಎಂಬ ಅವನ ಮಾತುಗಳಲ್ಲಿ ಉತ್ತಮ ನಡವಳಿಕೆ ಗಮನಿಸಬಹುದು. ಅಣ್ಣ ತಮ್ಮಂದಿರ ಸಹೋದರರ ಪ್ರೇಮಕ್ಕೆ ಇದೊಂದು ಮಾದರಿಯಾಗಿದೆ. ಯಕ್ಷಗಾನದ ಪಾತ್ರಗಳು ಪೌರಾಣಿಕ ಪ್ರಪಂಚದವುಗಳಾದರೂ ನಮ್ಮ ಸಮಾಜದಿಂದ ಜೋದಿತವಾದ ಭಾವಸೂಕ್ಷ್ಮಗಳನ್ನು ಹೊಂದಿವೆ. ಭಾರತೀಯ ಕೌಟುಂಬಿಕ ವ್ಯವಸ್ಥೆಯ ಪಡಿಯಚ್ಚನ್ನು ಇಲ್ಲಿ ಕಾಣಬಹುದು. ಇದೇ 'ಪಂಚವಟಿ' ಪ್ರಸಂಗದಲ್ಲಿ ಸೀತೆಯಾಡುವ ಮಾತುಗಳಲ್ಲಿ ಚಕ್ರವರ್ತಿ ಹಾಗೂ ಅವನ ಜೇಷ್ಠ ಸೊಸೆಯ ನಡುವಿನ ಬಿಗುಮಾನದ ಸಂಬಂಧವಿಲ್ಲ. ಬದಲು ಹಳ್ಳಿಯ ಹಿರಿಯ ಹಾಗೂ ಅವನನ್ನು ಗೌರವಿಸಿ ಪ್ರೀತಿಸುವ ಹಿರಿಯ ಸೊಸೆ ಒಬ್ಬಳು ಆಡುವ ಮಾತಿನಂತೆ ಪ್ರಸಂಗಕಾರ ಪದ್ಯಗಳನ್ನು ರಚಿಸಿದ್ದಾನೆ. ಪ್ರಸಂಗ ಸಾಹಿತ್ಯದ ವೈಶಿಷ್ಟವೇ ಇದಾಗಿದೆ. ಗ್ರಾಮೀಣ ಬದುಕಿನ ಪ್ರತಿಬಿಂಬವೊಂದನ್ನು ಅಲ್ಲಿ ಕಾಣಹುದು. ಯಕ್ಷಗಾನದಲ್ಲಿ ಪಾತ್ರಗಳ ನಡುವಿನ ಸಂವಾದವೇ ಪ್ರೇಕ್ಷಕರಿಗೆ ಆಕರ್ಷಕ ಅಂಶ. ತಾಳಮದ್ದಲೆಯಲ್ಲಿ ಕೂಡ ನಡೆಯುವ ಸಂವಾದ, ಸಂಭಾಷಣೆಗಳು ಒಂದು ಬಗೆಯ 'ರಸಘಟ್ಟ' ಇದ್ದಂತೆ. ಪ್ರಸಂಗದ ಕವಿ ತನ್ನ ಕೃತಿಯಲ್ಲಿ ಇಂತಹ ಸಂವಾದಗಳಿಗೆ ಅವಕಾಶ ಕಲ್ಪಿಸುತ್ತಾನೆ. ಯಕ್ಷಗಾನ ರಂಗಸ್ಥಳದಲ್ಲಿ ಮಿಂಚುವಂತಹ ಸಂವಾದವನ್ನು ನಿರ್ಮಿಸುವಲ್ಲಿ ಪಾರ್ತಿಸುಬ್ಬ, ದೇವಿದಾಸ, ಹಟ್ಟಿಯಂಗಡಿ ರಾಮಭಟ್ಟ, ವೆಂಕಟ, ಮುಲ್ಕಿ ರಾಮಕೃಷ್ಣಯ್ಯ, ಹಲಸಿನಹಳ್ಳಿ ನರಸಿಂಹಶಾಸ್ತ್ರಿ ಮುಂತಾದವರು ಮುಂಚೂಣಿಯಲ್ಲಿದ ಕವಿಗಳು. ಸುಧನ್ವ ಕಾಳಗ (ಮುಲ್ಕಿ ರಾಮಕೃಷ್ಣಯ್ಯ) ದಲ್ಲಿ ಸುಧನ್ವ ಮತ್ತು ಪ್ರಭಾವತಿಯರ ನಡುವೆ ನಡೆವ ಮಾತುಕತೆ ಇದಕ್ಕೆ ಸಾಕ್ಷಿ. ಇಲ್ಲಿ ಧರ್ಮ ಜಿಜ್ಞಾಸೆ ಇದೆ. ಸತಿಪತಿಯರ ಮಾತಿನ ಆಕರ್ಷಣೆ ಇದೆ. ಆವಲ್ಲಿಗೆಪಯಣವಯ್ಯ ಪ್ರಾಣಕಾಂತ ಎಂದು ಕೇಳುವ ಪ್ರಭಾವತಿಯ ಕಳವಳ ಹಾಗೂ ಶ್ರುತಿ ಶಾಸ್ತ್ರಗಳ ಧಾರ್ಮಿಕ ವಿಚಾರಗಳು ಎಲ್ಲವೂ ಚರ್ಚಿತವಾಗುತ್ತದೆ. ಇಲ್ಲಿ ಸುಧನ್ವ ಕೊನೆಯಲ್ಲಿ ಸಂಧಿಗ್ದತೆಗೆ ಸಿಲುಕುತ್ತಾನೆ. ಆತನಾಡುವ

ಸತಿಗೆಷೋಡಶದ ಋತು ಸಮಯವೇ

ಕಾದಶೀ ವ್ರತ ಮಲಂಘ್ಯಮಿನಿತೊಂದು

ದಿನಮೆಸಂ। ಗತಮಾ ದೊಂತು

2

ಎಂದು ಬರುವ ಪದ್ಯವು ಸದಾ ಜನತೆಗೆ ಧರ್ಮ ಸೂಕ್ಷ್ಮದ ಒಳನೋಟವನ್ನು ನೀಡುವಂತಹದು. ಇದೇ ರೀತಿ ಭೀಷ್ಮ-ಅಂಬೆಯರ ಸಂಭಾಷಣೆ, ಭೀಷ್ಮ – ಶ್ರೀಕೃಷ್ಣರ ನಡುವಿನ ಮಾತು, ವಾಲಿ-ರಾಮರ ನಡುವಿನ ಸಂವಾದ, ಕೃಷ್ಣ

ಹಾಗೂ ಕೌರವನ ನಡುವಿನ ವಾದವಿವಾದ ಅರ್ಜುನ - ಹನುಮಂತರ ನಡುವಿನ ಮಾತುಗಾರಿಕೆ. ಇವೆಲ್ಲವು ಯಕ್ಷಗಾನದ ರಸಘಟ್ಟಗಳು' ಅರ್ಥಧಾರಿಗಳಿಗೆ ನಿಕಷವಿದ್ದಂತೆ. ಪ್ರಸಂಗಕಾರನ ಪದ್ಯದ ಸೂಚನೆಯೊಂದಿಗೆ ಪ್ರಾರಂಭವಾಗುವ ಅರ್ಥಗಾರಿಕೆ ಯಾವ ಮಟ್ಟವನ್ನು ಬೇಕಾದರೂ ತಲುಪಬಹುದು. ದೇವಿದಾಸನ 'ಅಭಿಮನ್ಯು ಕಾಳಗ'ದಲ್ಲಿ ಸುಭದ್ರೆಯು ಏತಕಿಂಥ ಬುದ್ಧಿ ಬಂತು ಕಂದ ಕಂದ ನಿನಗೆ ಎನ್ನುವ ಮಾತಿಗೆ ಉತ್ತರವಾಗಿ ಅಭಿಮನ್ಯು ಆಡುವ ಪೌರುಷಯಕ್ತವಾದ ಮಾತುಗಳು ಹೀಗಿವೆ" ಬಿಡುಬಿಡುತಾಯೆ ಕೇಳ್ ಧಡಿಗ ಕರ್ಣಾದ್ಯರ ಬಡಿವೆನು ನಿಮಿಷದಲ್ಲಿ ತಾಯಿಯ ವ್ಯಾಕುಲತೆಗೂ ಎಳೆಯನ ಉತ್ಸಾಹ ಭರಿತ ಮಾತುಗಳ ವೈರುಧ್ಯ ಸೊಗಸಾಗಿ ಬಂದಿವೆ. ಇಲ್ಲಿ ಕವಿ ಸುಭದ್ರೆಯ ಮಾತನ್ನು ವಿಳಂಬ ಗತಿಯ ರಾಗ ಕಾಂಭೋದಿ ಏಕತಾಳದಲ್ಲಿ ತಂದಿದ್ದರೆ ಅಭಿಮನ್ಯುವಿನ ಮಾತನ್ನು ದುಡುಕಿನ ರಾಗವಾಗುವ ಕೇದಾರಗೌಳ ಅಷ್ಟತಾಳದಲ್ಲಿ ತಂದಿದ್ದಾನೆ. ಎರಡು ಭಾವಗಳು ವಿಭಿನ್ನ ರಾಗಗಳಲ್ಲಿ ಮುಂದುವರಿಸಿಕೊಂಡು ಹೋಗುವ ವಿಶೇಷತೆ ಇಲ್ಲಿದೆ. ಆದ್ದರಿಂದ ನೃತ್ಯಗತಿ ಆಕರ್ಷಕವಾಗಿ ಮೂಡಿ ಬರುತ್ತದೆ. ಭಾವಸ್ಫುರಣೆಯೇ ಪ್ರಸಂಗದ ಜೀವಾಳ. ಕವಿ ತನ್ನ ಕೃತಿಯಲ್ಲಿ ಯಾವ ಸಂದರ್ಭದಲ್ಲಿ ಭಾವಸ್ಫುರಣೆ ತರಬಹುದೆಂಬುದನ್ನು ಯೋಚಿಸಿ ಅದರಂತೆ ಕೆಲವೆಡೆ ಅಂತಹ ಪದ್ಯಗಳನ್ನು ಸೃಷ್ಟಿಸುತ್ತಾನೆ. ಕರ್ಣಾರ್ಜುನರ ಕಾಳಗದ ಕೊನೆಯಲ್ಲಿ ಅರ್ಜುನನ ತಳಮಳ ಕರ್ಣನ ಅಸಹಾಯಕತೆಯನ್ನೆಲ್ಲ ಕವಿ ಮನದುಂಬುವಂತೆ ಚರ್ಚಿಸಿದ್ದಾನೆ. ಅದೇ ರೀತಿ ಪಾರ್ತಿಸುಬ್ಬ ಸೀತೆಯನ್ನು ಕಾಣದೆ ರಾಮನಾಡುವ ಮಾತುಗಳಾದ 'ಅಡವಿಗಿಡ ಮರ ಕಲ್ಲುಗಳು ನೋಡೆ ಅರಿಸಿನದ ಪುಡಿಯಂತೆ ತೋರುತಿದೆ ತಮ್ಮಾ' ಎಂಬಲ್ಲಿನ ಸಹಜತೆ, ಸ್ವಭಾವೋಕ್ತಿಯೊಂದಿಗೆ ಬಂದಿದೆ. ಇದನ್ನೇ ನಿಜವಾದ ಕವಿ ಪ್ರತಿಭೆ ಎನ್ನುವುದು. ಬಭ್ರುವಾಹನ ಕಾಳಗದಲ್ಲಿ ಚಿತ್ರಾಂಗದೆ ಅರ್ಜುನ ಬಂದಿದ್ದಾನೆ ಎಂದು ತಿಳಿದು ಪಡುವ ವಿಸ್ಮಯಭಾವವನ್ನು

ಅಹುದೆ ಎನ್ನಯ ರಮಣ/ಏಸಖಿಯೇ

ಆಹುದೆ ಎನ್ನಯ ರಮಣ॥

ಅಹುದೇನೆ ಪಾರ್ಥನೆಂಬುವವ ಕಾಣದೆ

ಬಲು ದಿನವಾಯಿತದರಿಂದ ಬಳಲಿ ಬೆಂಡಾದೆನು

3

ಎಂಬ ಸಾಲುಗಳ ಮೂಲಕ ಕವಿ ವ್ಯಕ್ತ ಪಡಿಸಿದ್ದಾನೆ. ಗದಾಯುದ್ಧದಲ್ಲಿ ಕೌರವ ನಗದಾ ಪ್ರಹಾರಕ್ಕೆ ಭೀಮ ಮೂರ್ಛೆ ಹೋದಾಗ ಸಂತೋಷಗೊಂಡ ಕೌರವ ನಾಡುವ ಮಾತುಗಳು ಕುಣಿತಕ್ಕೆ, ಭಾವ ಪ್ರಕಟಣೆಗೆ ಸೊಗಸಾಗಿ ಒದಗಿ ಬರುತ್ತವೆ.

ನೋಡಿರಿ ಧರ್ಮಜ ಫಲುಗುಣಾದಿಗಳು।
ರೂಢಿಯೊಳನಿಲಜ ಬಿದ್ದ ಚಂದಗಳ॥
ಕಪಟ ನಾಟಕರಂಗ। ಗುಚಿತವೇನೋ
ನಿನ್ನಂಗ ನಿಪುಣ ಭೀಮನ ನೋಡು ಚಪಳತ್ವದಿ ಮಾತಾಡು

4

ಈ ಪದ್ಯ ಭಾಗದಲ್ಲಿ ಅನೇಕ ಬಗೆಯ ಭಾವಗಳನ್ನು ಹೊಮ್ಮಿಸಲು ಸಾಧ್ಯ. ಭೀಷ್ಮನ ಭಕ್ತಿ ಪುರಸ್ಕರವಾದ ಸಮರ್ಪಣಾ ಭಾವವು ದೇವಿದಾಸನ ಭೀಷ್ಮಪರ್ವದಲ್ಲಿ ಈ ರೀತಿ ವ್ಯಕ್ತವಾಗಿದೆ.

ಶ್ರೀಮನೋಹರ ಸ್ವಾಮಿ ಪರಾಕು।
ಪ್ರೇಮದೊಳೆನ್ನ ಮಾತನಾಲಿಸಬೇಕು॥
ಎನ್ನಯ ಕಂಠವ ನಿರಿಯಲು ಚಕ್ರವ।
ಚಿನ್ಮಯ ನೀನಯ್ಯ ಪಿಡಿದಿಹೆಯ॥
ಚೆನ್ನಾಯ್ತು ಸೇವ ಕಚಯವ ಪಾಲಿಸಿ।
ಲೋಕವನ್ನು ರಕ್ಷಿಪನಹುದೊ ಮಹಾನುಭಾವ

5

ಭಾವತರಂಗಿತೆಯು ಯಕ್ಷಗಾನ ಪ್ರಸಂಗವನ್ನು ಜೀವಂತವಾಗಿರಿಸುತ್ತದೆ. ಕಾಲದ ಹಂಗಿಲ್ಲದೆ ಅವು ಉಳಿದು ಬರುತ್ತವೆ. ಯಕ್ಷಗಾನ ಒಂದು ರೀತಿಯಲ್ಲಿ ನೀತಿನಾಟಕವಿದ್ದಂತೆ. ಪು.ತಿ.ನ ಅವರು ಗೀತನಾಟಕದ ಬಗ್ಗೆ ಹೇಳಿದ ಮಾತೊಂದನ್ನು ಇಲ್ಲಿ ನೆನೆಯಬಹುದು. ರಂಗದಲ್ಲಿ ಪ್ರಯುಕ್ತವಾದ ಕಾವ್ಯ ಮನಮುಟ್ಟಬೇಕಾದರೆ ಅದು ತಟ್ಟನೆ ನಮಗರ್ಥವಾಗಬೇಕು. ಭಾವ ಹೊಳೆಯಬೇಕು. ಪುಂಖಾನುಪುಂಖವಾದ ಭಾವಗಳು ಒಂದು ಇನ್ನೊಂದನ್ನು ಸೆಳೆಯುತ್ತಾ ಸಾಗಬೇಕು. ಎಲ್ಲವೂ ಕೊನೆಯ ರಸಜಾಗರದಲ್ಲಿ ಬೇರ್ಪಡಿಸಲಾಗದ ರುಚಿಯಾಗಿ ಲಯಿಸಬೇಕು. ಯಕ್ಷಗಾನಕ್ಕೂ ಇದು ಅನ್ವಯಿಸುತ್ತದೆ. ರಂಗದಲ್ಲಿ ರಸಾವಿಷ್ಕಾರವೇ ಕೃತಿಯ ಪರಮ ಗುರಿಯಾಗಿದ್ದು ಕವಿ ಆ ಬಗ್ಗೆ ಹೆಚ್ಚು ಪ್ರತಿಭೆಯನ್ನು ಹರಿಸುತ್ತಾನೆ. ಯಕ್ಷಗಾನ ಸಾಹಿತ್ಯದಲ್ಲಿ ಇಂತಹ ಅಸಂಖ್ಯ ರಸಜಾಗರಗಳಿವೆ ಎಂಬುದು ಹೆಮ್ಮೆಯ ಸಂಗತಿ. ಧರ್ಮಪ್ರಸರಣ, ತಾತ್ವಿಕ ಸಂಗತಿಗಳನ್ನು ತಿಳಿಯಾಗಿ ಪ್ರಸ್ತುತ ಪಡಿಸುವಿಕೆ, ಜೀವನ ಮೌಲ್ಯಗಳ ಪ್ರತಿಪಾದನೆ ಇವೇ ಯಕ್ಷಗಾನದ ಉದ್ದೇಶವಾಗಿದ್ದು ಎಲ್ಲಾ ಪ್ರಸಂಗಗಳು ಒಂದಿಲ್ಲೊಂದು ರೀತಿಯಿಂದ ಇವನ್ನು ನಡೆಸಿಕೊಂಡು ಬಂದಿವೆ. ಅರ್ಥವನ್ನು, ಕಾಮವನ್ನು, ಜೀವಿತವನ್ನು ತೊರೆದಾದರೂ ಧರ್ಮವನ್ನು ಉಳಿಸಿಕೋ ಎನ್ನುವುದೇ ಹೆಚ್ಚಿನ ಪ್ರಸಂಗಗಳ ಆಶಯವಾಗಿದೆ. ಈ ಸಮಸ್ತ ವಿಶ್ವವೂ ಪರಮಾತ್ಮನ ಲೀಲೆ.

ದೇಶಕಾಲದ ಹಂಗಿಲ್ಲದೆ ಸ್ವತಂತ್ರವಾಗಿ ಯಾವ ಪ್ರೇರಣೆ ಇಲ್ಲದೆ ಪ್ರವೃತ್ತವಾಗಿರುವ ಲೀಲೆಯ ಫಲ ಈ ಜಗದ ವ್ಯವಸ್ಥೆ. ಇಲ್ಲಿ ನಾವೆಲ್ಲ ಅವನ ಕೈಗೊಂಬೆಗಳೆಂಬ ಅಂಶವೇ ಹೆಚ್ಚು ಸಮ್ಮತವಾಗಿದೆ. ಭಾಗವತ ಶಿರೋಮಣಿಗಳಾದ ಸುಧನ್ವ, ಸುರಥ, ಚಂದ್ರಹಾಸ, ಮಯೂರಧ್ವಜ, ರುಕ್ಮಾಂಗದ ಮುಂತಾದವರ ಮೂಲಕ ಈ ಮೌಲ್ಯ ಸಾರಲಾಗಿದೆ. ಅದೇ ರೀತಿ ತ್ಯಾಗ, ಶೀಲ, ಸತ್ಯ ಪ್ರತಿಜ್ಞೆ, ಪ್ರಾಮಾಣೀಕತೆ ಪಾತಿವ್ರತ್ಯ ಪಿತೃವಾಕ್ಯ ಪರಿಪಾಲನೆ, ಮೈತ್ರಿ, ಹಿರಿಯರಲ್ಲಿ ಗೌರವ, ಕಿರಿಯರಲ್ಲಿ ಆದರ, ಮಕ್ಕಳಲ್ಲಿ ವಾತ್ಸಲ್ಯಸೇವಾ ಮನೋಭಾವ ವಿನಯ, ನಮ್ರತೆ ಮುಂತಾದ ಜೀವನ ಮೌಲ್ಯಗಳನ್ನು ರಾಮ, ಸೀತೆ, ಭರತ, ಲಕ್ಷ್ಮಣ, ಕರ್ಣ, ಭೀಷ್ಮ, ಶಿಬಿ, ಜೀಮೂತ ವಾಹನ, ಹನುಮಂತ ಮುಂತಾದ ಪಾತ್ರಗಳಲ್ಲಿ ಪ್ರಸಂಗಕಾರರು ಪಡಿ ಮೂಡಿಸಿದ್ದಾರೆ. ಈ ಎಲ್ಲಾ ಜೀವನ ಮೌಲ್ಯಗಳನ್ನು ನಾಡಿನ ಜನತೆಗೆ ಮುಟ್ಟಿಸುವಲ್ಲಿ ಪ್ರಸಂಗ ಸಾಹಿತ್ಯದ ಹಿರಿಮೆ ಅಡಗಿದೆ.

ಕರ್ಮ ಸಿದ್ಧಾಂತ ಭಾರತೀಯರಲ್ಲಿ ರಕ್ತಗತವಾಗಿದೆ, ಪ್ರಭಾವಯುತವಾಗಿದೆ. ಪ್ರಸಂಗಗಳು ಈ ಸಿದ್ಧಾಂತವನ್ನು ಮಾರ್ದನಿಗೊಳಿಸಿವೆ. ಪಟ್ಟಾಭಿಷೇಕ, ಬಭ್ರುವಾಹನ ಕಾಳಗ ಗದಾಯುದ್ಧ, ವಿಶ್ವಾಮಿತ್ರ ಪ್ರತಾಪ, ದುರ್ಯೋಧನ ವಧೆಯಲ್ಲಿ ಈ ವಿಧಿವಿಲಾಸದ ಅಂಶಗಳು ತಿಳಿಯಾದ, ಎಲ್ಲರೂ ಅರಿತುಕೊಳ್ಳಬಹುದಾದ ರೀತಿಯಲ್ಲಿ ಬರೆಯಲಾಗಿದೆ. ಗಹನವಾದ ದರ್ಶನವನ್ನು ತಿಳಿಯಾದ ರೂಪದಲ್ಲಿ ಜನರಿಗೆ ತಿಳಿಸಿಕೊಟ್ಟ ಹಿರಿಮೆ ಪ್ರಸಂಗಕಾರರದ್ದಾಗಿದೆ. ಭೀಷ್ಮ ಪ್ರಪಂಚದಲ್ಲಿ ಬಂದಿರುವ

ಹಿಂದೆಗೈದಿಹ ಕರ್ಮ ಬೀಜವು

ಒಂದು ಹೆಮ್ಮರವಾಗಿ ಫಲವನು

ಇಂದು ಕೊಡುತಿದೆ ಬೇಡವೆನೆ

ಗೋವಿಂದ ಮಣಿಸದೆ ಬಿಡುವನೆ

6

ಎಂಬ ಪದ್ಯವಾಗಲಿ ಬಭ್ರುವಾಹನ ಕಾಳಗದ

ಧರ್ಮ ಉಪಕಾರಗಳ ತಡೆದ

ದುಷ್ಟರಿಗೆ ಕರ್ಮ ಎಣಿಸದೆ

ಬಿಡದು ಕೇಳಿರೈ ಕಡೆಗೆ

7

ಎಂಬ ಪದ್ಯ ಭಾಗವಾಗಲಿ ಈ ಮೇಲಿನ ಮಾತಿಗೆ ಸಾಕ್ಷಿಗಳಾಗಿವೆ. ಹೀಗೆ ಯಕ್ಷಗಾನ ಸಾಹಿತ್ಯವು ಕನ್ನಡ ನಾಡಿನ ಸಂಸ್ಕೃತಿಯನ್ನು ಸಂವರ್ಧಿಸುವಲ್ಲಿ, ಜನಜೀವನಕ್ಕೆ

ಉತ್ತಮ ತಿಳುವಳಿಕೆಯನ್ನು ನೀಡುವಲ್ಲಿ, ಧರ್ಮ ನಿಷ್ಠೆಯನ್ನು ಹೆಚ್ಚಿಸುವಲ್ಲಿ, ಗ್ರಾಮೀಣ ಭಾಗದ ಸಾಮಾನ್ಯರಿಗೆ ಮನರಂಜನೆಯೊಂದಿಗೆ ತಾತ್ವಿಕ ವಿಚಾರಗಳನ್ನು ಸದಳೀಕರಿಸಿ ಕೊಡುವಲ್ಲಿ ಯಶಸ್ವಿಯಾಗಿದೆ. ಪ್ರಸಂಗಗಳು ಕರ್ನಾಟಕದಾದ್ಯಂತ ವಿಪುಲವಾಗಿ ರಚನೆಗೊಂಡಿದ್ದರೂ ವಿದ್ವಾಂಸರು, ಸಾಹಿತ್ಯಾಸಕ್ತರು ಈ ಕಡೆ ಗಮನಹರಿಸದೇ ಇರುವುದು ವಿಪರ್ಯಾಸವೇ ಸರಿ. ಪಾರಂಪರಿಕ ಕಲೆಯಾದ ಯಕ್ಷಗಾನವು ಕರ್ನಾಟಕದ ಪ್ರಾತಿನಿಧಿಕ ಕಲೆಯಾಗಿ ಮಿಂಚುತ್ತಿರುವ ಇವತ್ತಿನ ದಿನಮಾನದಲ್ಲಿ ಇದಕ್ಕೆ ಆಧಾರವಾದ ಪ್ರಸಂಗ ಸಾಹಿತ್ಯವನ್ನು ನಾಡಿನ ಜನತೆ, ಸರಕಾರ ಹಾಗೂ ವಿದ್ವತ್ ವಲಯವು ಗೌರವಿಸಬೇಕಾದ ಅಗತ್ಯವಿದೆ. ಕನ್ನಡದ ಉಳಿದ ಸಾಹಿತ್ಯ ಪ್ರಕಾರದಷ್ಟೇ ಯಕ್ಷಗಾನ ಸಾಹಿತ್ಯ ಪ್ರಕಾರವು ಸಂಖ್ಯೆಯಲ್ಲಿ ಹಾಗೂ ಸತ್ವದಲ್ಲಿ ಶ್ರೀಮಂತ ಎನ್ನುವುದನ್ನು ಮರೆಯಬಾರದು.

ಅಡಿ ಟಿಪ್ಪಣಿ :

1. ಪಾರ್ತಿಸುಬ್ಬನ ಯಕ್ಷಗಾನ ಪ್ರಸಂಗಗಳು : ಸ.ಸೆಂ.ವೆಂಕಟಕೃಷ್ಣಯ್ಯ ಪುಟ 57
2. ಯಕ್ಷಗಾನ ಸುಧನ್ವ ಕಾಳಗ : ಮಟ್ಟಿ ರಾಮಕೃಷ್ಣಯ್ಯ – ಪುಟ 21
3. ಯಕ್ಷಗಾನ ಬಭ್ರುವಾಹನ ಕಾಳಗ : (?) – ಪುಟ 22
4. ಯಕ್ಷಗಾನ ಗದಾಪರ್ವ : ಹಲಸಿನಹಳ್ಳಿ ನರಸಿಂಹಶಾಸ್ತ್ರೀ? ಪುಟ 34
5. ಯಕ್ಷಗಾನ ಭೀಷ್ಮಪರ್ವ : ದೇವಿದಾಸ – ಪುಟ 40
6. ಯಕ್ಷಗಾನ ಭೀಷಪರ್ವ : ದೇವಿದಾಸ – ಪುಟ 13
7. ಯಕ್ಷಗಾನ ಬಭ್ರುವಾಹನ ಕಾಳಗ : (?) – ಪುಟ 42

ಗ್ರಂಥ ಋಣ :

1 ಪಾರ್ತಿಸುಬ್ಬನ ಯಕ್ಷಗಾನ ಪ್ರಸಂಗಗಳು : ಸಂ.ವೆಂಕಟಕೃಷ್ಣಯ್ಯ
2. ಯಕ್ಷಗಾನ ಭೀಷ್ಮಪರ್ವ : ದೇವಿದಾಸ
3. ಯಕ್ಷಗಾನ ಬಭ್ರುವಾಹನ ಕಾಳಗ : (?)
4. ಯಕ್ಷಗಾನ ಸುಧನ್ವ ಕಾಳಗ : ಮಟ್ಟಿ ರಾಮಕೃಷ್ಣಯ್ಯ
5. ಯಕ್ಷಗಾನ ಗದಾಪರ್ವ : ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ
6. ಯಕ್ಷಗಾನ ಸಾಹಿತ್ಯ : ಡಾ॥ ಕೆ.ಎಂ.ಕೃಷ್ಣರಾವ್

7. ಯಕ್ಷಗಾನ ರಾಮಾಯಣ ಪ್ರಸಂಗಗಳು : ಡಾ. ಆನಂದರಾಮಉಪಾಧ್ಯ

8. ಯಕ್ಷಗಾನ ಮಹಾಭಾರತ ಪ್ರಸಂಗಗಳು : ಡಾ. ಆನಂದರಾಮಉಪಾಧ್ಯ

9. ಯಕ್ಷಗಾನ ಬಯಲಾಟ : ಡಾ. ಶಿವರಾಮಕಾರಂತ

10. ಕರ್ನಾಟಕ ಯಕ್ಷಗಾನ ಕವಿ ಚರಿತ್ರೆ : ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್ □

ಪಾರ್ತಿಸುಬ್ಬನ ಕೃತಿ ಪರಿಚಯ

ಕಾವ್ಯಾತ್ಮಕವಾದ ಹತ್ತು ಯಕ್ಷಗಾನ ಪ್ರಸಂಗಗಳನ್ನು ರಚಿಸಿರುವ ಪಾರ್ತಿಸುಬ್ಬನು 'ಯಕ್ಷಗಾನದ ವಾಲ್ಮೀಕಿ' ಎಂದೇ ಜನತೆ ಪರಿಭಾವಿಸಿದೆ. ಈತನು ರಾಮಾಯಣಕ್ಕೆ ಸಂಬಂಧಿಸಿದಂತೆ ಎಂಟು ಪ್ರಸಂಗಗಳನ್ನು ರಚಿಸಿರುವುದು ಈ ಹೇಳಿಕೆಗೆ ಮುಖ್ಯ ಕಾರಣವಾಗಿದೆ. ಇದರೊಂದಿಗೆ ಸಂಸ್ಕೃತದ ಮಹಾಕವಿಗಳ ಸಾಲಿನಲ್ಲಿ ವಾಲ್ಮೀಕಿ ವಿರಾಜಿಸುವಂತೆ ಪಾರ್ತಿಸುಬ್ಬನು ಯಕ್ಷಗಾನ ಕವಿಗಳ 'ಗಡಣ'ದಲ್ಲಿ ಎದ್ದು ಕಾಣುವ ಪ್ರತಿಭೆಯಾಗಿದೆ. ಆದುದರಿಂದಲೇ ಯಕ್ಷಗಾನದಲ್ಲಿ ಆತನಿಗೆ ಮಹಾಕವಿಯ ಪಟ್ಟ ಲಭಿಸಿದೆ. ಐದು ಸಾವಿರಕ್ಕೂ ಹೆಚ್ಚಿರುವ ಪ್ರಸಂಗ ಸಾಹಿತ್ಯದಲ್ಲಿ ಆತನ ಪ್ರಸಂಗಗಳು ಸಾಹಿತ್ಯಿಕ ಕಾರಣದಿಂದ ಹಾಗೂ ರಂಗನಡೆಯ ದೃಷ್ಟಿಯಿಂದ ಮತ್ತು ಸಾಮಾನ್ಯರ ಹೃದಯಕ್ಕೆ ಲಗ್ಗೆ ಇಡಬಲ್ಲ ಶಕ್ತಿಯಿಂದ ಸರ್ವಕಾಲಕ್ಕೂ ಮಾನ್ಯವಾಗಿದೆ. ಓದುವ ಸಾಹಿತ್ಯವನ್ನು ಮಾತ್ರ ನಿಜವಾದ ಸಾಹಿತ್ಯ ಎಂದು ಪರಿಗಣಿಸುವ ಕನ್ನಡ ವಿದ್ವತ್ ಲೋಕ ಪಾರ್ತಿಸುಬ್ಬನಂತಹ ಜನಾದರಣೀಯನನ್ನು ಕಡೆಗಣಿಸಿದೆ ಎಂದು ಖೇದದಿಂದ ಹೇಳಬೇಕಾಗಿದೆ. ಇದನ್ನು ಹೋಗಲಾಡಿಸಲು ಆತನ ಕೃತಿಗಳ ಪರಿಶೀಲನೆ, ಮರುಪರಿಶೀಲನೆ ಆಗಾಗ ನಡೆಯುತ್ತಾ ಇರಬೇಕು. ಆತನ ಕಾವ್ಯದ ಹಿರಿಮೆಯನ್ನು ವಿದ್ವತ್ ಲೋಕಕ್ಕೆ ಪರಿಚಯಿಸುವ ಕಾರ್ಯ ನಿರಂತರವಾಗಿರಬೇಕು. ವಿದ್ವಾಂಸರಿಗೆ 'ಅಯ್ಯಾ ನೀ ಕೇಳಿದಡೆ ಕೇಳು, ಕೇಳದಿರ್ದಡೆ ಮಾಣುನಾ ಹಾಡಿದಲ್ಲದೇ ಸೈರಿಸಲಾರೆನಯ್ಯಾ' ಎಂಬ ನಿಲುವನ್ನು ಯಕ್ಷಗಾನ ಲೋಕ ತಾಳಬೇಕಾಗುತ್ತದೆ. ದೃಶ್ಯಕಾವ್ಯಗಳ ಮಾನದಂಡವನ್ನು ಸಾಹಿತ್ಯ ವಿಮರ್ಶಕರು ಅರಿತು ಉಪಯೋಗಿಸುವಂತೆ ಮಾಡಬೇಕಾಗುತ್ತದೆ. ಆಗ ಮಾತ್ರ ಪಾರ್ತಿಸುಬ್ಬನಂತಹ ಶ್ರೀಸಾಮಾನ್ಯರ ಹೃದಯ ಗೆದ್ದು ಯಕ್ಷಗಾನ ಕವಿಗಳಿಗೆಲ್ಲಾ ಮನ್ನಣೆ ಲಭಿಸುತ್ತದೆ. ಪ್ರಾಚೀನ ಅಲಂಕಾರಿಕರಲ್ಲಿ ಕಾವ್ಯವೆಂದರೆ ದೃಶ್ಯಕಾವ್ಯವೆಂಬ ಅರ್ಥವಿತ್ತು ನಮ್ಮವರು 'ಕಾವ್ಯೇಷು ನಾಟಕಂ ರಮ್ಯಂ' ಎಂದವರು. ಶಬ್ಧ, ಅರ್ಥ ಸಮೂಹವನ್ನು ಕಾವ್ಯದ ಅಂಗವೆಂದು ಭಾವಿಸಿದರು. ಕಾಳಿದಾಸನು ವಾಗಾರ್ಥಗಳಿಗೆ ಪಾರ್ವತಿ ಪರಮೇಶ್ವರರ ಸಮಾನ ಸ್ಥಾನ ಕೊಟ್ಟಿದ್ದಾನೆ. ಧ್ವನಿಯು ಕಾವ್ಯದ ಆತ್ಮವಾಗಿದ್ದು

ರಸವೂ ಪ್ರಾಣವಾಗಿದೆ. ರಸಾತ್ಮಕವಾದ ವಾಕ್ಯಗಳನ್ನು ಕಾವ್ಯ ಎಂದು ಕರೆದಿದ್ದಾರೆ. ಈ ನಿಟ್ಟಿನಿಂದ ಕಾವ್ಯದ ಅಧ್ಯಯನ ಮಾಡಬೇಕಾಗಿದೆ. ಯಕ್ಷಗಾನದ ಪ್ರಸಂಗಗಳು ಕೂಡಾ ಕಿರು ಕಾವ್ಯಗಳಾಗಿದ್ದು ರಸಾತ್ಮಕವೇ ಆಗಿವೆ. ಕವಿರಾಜಮಾರ್ಗಕಾರ ಹೇಳಿರುವ 'ಕುರಿತೋದದೆಯುಂ ಕಾವ್ಯ ಪ್ರಯೋಗ ಪರಿಣಿತ ಮತಿಗಳ್' ಎಂದಿರುವುದು. ಯಕ್ಷಗಾನದಂತಹ ಹಾಡುಗಬ್ಬಗಳ ರಚನಾಕಾರರ ಕುರಿತೇ ಆಗಿರಬೇಕು. ಯಕ್ಷಗಾನ ಪ್ರಸಂಗ ಸಾಹಿತ್ಯ ವಿರಾಮದಲ್ಲಿ ಕೂತು, ಓದಿ, ಹಾಡಿನ ಧ್ವನಿತಾರ್ಥಗಳನ್ನು ಮೆಲುಕು ಹಾಕುವಂತಾದ್ದಲ್ಲ. ಇದಕ್ಕಿಂತ ಭಿನ್ನವಾಗಿದ್ದು ಅದು ರಂಗದಲ್ಲಿ ಧ್ವನಿಸುವಂತಿರಬೇಕು. ಅದು ತಾಳ, ಲಯ ಹಾಡುವ ಮಟ್ಟಗಳೆಲ್ಲದರ ಬಳಕೆಯ ಮೂಲಕ ರಂಜಿಸುವ ಗುಣವಿರಬೇಕು. ಹಾಡುಗಳ ಗುಣಮಟ್ಟಗಳನ್ನು ಅಳೆಯಬೇಕಾದ ಅವು ಪ್ರದರ್ಶನಾತ್ಮಕವಾಗಿದ್ದು, ಭಾವಾಭಿವ್ಯಕ್ತಿಗೆ ಅವಕಾಶ ಕೊಡುವಂತಿರಬೇಕು. ಅಲ್ಲಿನ ಹಾಡುಗಳು ಮನೋರಂಜನೆಯೊಂದಿಗೆ ನವರಸಗಳ ಸೃಷ್ಟಿಗೆ ಹೇತುವಾಗಿರಬೇಕು. ರಾಗ, ತಾಳಗಳ ಮೂಲಕ ಪ್ರೇಕ್ಷಕನ, ಕೇಳುಗನ ಮನದಲ್ಲಿ ರಸೋತ್ಪತ್ತಿಯಾಗುತ್ತದೆ. ಪ್ರಯೋಗದಲ್ಲೇ ಅವುಗಳ ನಿಜಃಸತ್ವದ ಅರಿವು ಉಂಟಾಗುತ್ತದೆ.

ರಾಗಗಳ, ತಾಳಗಳ ಬಳಕೆ ಕೇವಲ ಯಕ್ಷಗಾನ ಪ್ರಬಂಧಗಳಂತಹ ಹಾಡುಗಳಿಗೆ ಮಾತ್ರವಲ್ಲ ಪ್ರಾಚೀನ ಕಾವ್ಯಗಳಲ್ಲೂ ರಾಗ ತಾಳಗಳ ನಿರ್ದೇಶನಗಳನ್ನು ಕವಿ ನೀಡಿರುವ ಉದಾಹರಣೆಗಳು ಉಂಟು. ಕ್ರಿ.ಶ.1275ರ ಸುಮಾರಿಗೆ ಇದ್ದ ಜೈನಕವಿ ಕುಮುದೇಂದುವು ತನ್ನ ರಾಮಾಯಣದ ಪ್ರತಿ ಸಂಧಿಗೂ ವಿವಿಧ ಷಟ್ಪದಿಗಳನ್ನು ಬಳಸಿ ನಿರ್ದಿಷ್ಟ ರಾಗಗಳನ್ನು ಸೂಚಿಸುತ್ತಾನೆ. ಹದಿಮೂರನೇ ಶತಮಾನದ ಕವಿ ಪಾಲ್ಕುರಿಕೆ ಸೋಮನಾಥನ ತೆಲುಗು "ಬಸವ ಪುರಾಣ"ವೂ ದ್ವಿಪದಿ ಛಂದಸ್ಸಿನಲ್ಲಿ ರಾಗಗಳ ಬಳಕೆಯೊಂದಿಗೆ ಜನಪ್ರಿಯವಾಗಿದೆ. ಮುಂದೆ ಕ್ರಿ.ಶ.1400ರ ಕಾಲದಲ್ಲಿದ್ದ ಭೀಮಕವಿ ಇವನನ್ನೇ ಅನುಸರಿಸಿ ತನ್ನ "ಬಸವ ಪುರಾಣ"ದಲ್ಲಿ ಅನೇಕ ರಾಗಗಳನ್ನು ಸಂದರ್ಭಕ್ಕೆ ತಕ್ಕಂತೆ ಸೂಚಿಸುತ್ತಾನೆ. ರಾಗಗಳು ಮಾಳವಗೌಳ, ನಾಟಿ, ಬಿಲಹರಿ, ಭೈರವಿ ಮುಂತಾದ ರಾಗಗಳ ಬಳಕೆಯ ಉಲ್ಲೇಖವಿದೆ. ರಾಗ-ತಾಳಗಳು ಬಂದಿವೆ ಎಂಬ ಕಾರಣಕ್ಕೆ ಇವರೆಲ್ಲರ ಕೃತಿಗಳನ್ನು ಕಡೆಗಣಿಸಬಾರದು. ಯಕ್ಷಗಾನ ಕವಿಗಳು ತಮ್ಮ ಕಿರುಕಾವ್ಯಗಳಲ್ಲಿ ರಾಗ-ತಾಳಗಳನ್ನು ಬಳಸಿದ್ದಾರೆ ಎಂಬ ಮಾತ್ರಕ್ಕೆ ಅವುಗಳ ಮಹತ್ವವನ್ನು ಪರಿಗಣಿಸದೇ ಇರುವುದು ಸರಿಯಲ್ಲ. ಅದೇ ರೀತಿ ಆಶುಭಾಷಣವುಳ್ಳ ಯಕ್ಷಗಾನದಲ್ಲಿ ಪಾತ್ರಗಳು ಆಡುವ ಮಾತಿನ ಮೂಲಕ ಮೌಖಿಕ ಸಾಹಿತ್ಯ ಸೃಷ್ಟಿಯು ಆಗುತ್ತಿರುತ್ತದೆ. ಹೀಗೆ ಹಾಡುವ ಪದ್ಯ, ಆಡುವ ಗದ್ಯಗಳ ಮೂಲಕ ಕನ್ನಡ ಸಾಹಿತ್ಯ ಲೋಕಕ್ಕೆ ಪಾರ್ತಿಸುಬ್ಬನಂತಹ ಯಕ್ಷಗಾನ ಕವಿಗಳು ಮಹತ್ತರವಾದ ಕೊಡುಗೆಯನ್ನು ನೀಡುತ್ತಿದ್ದಾರೆ. ರಾಮಾಯಣಕ್ಕೆ ಸಂಬಂಧಿಸಿದಂತೆ ಸೀತಾಕಲ್ಯಾಣ, ಪಟ್ಟಾಭಿಷೇಕ,

ಪಂಚವಟಿ, ವಾಲೀ-ಸುಗ್ರೀವ ಕಾಳಗ, ಉಂಗುರ ಸಂಧಿ ಅಥವಾ ಚೂಡಾಮಣಿ, ಸೇತು ಬಂಧನ, ಅಂಗದ ಸಂಧಾನ, ಕುಂಭಕರ್ಣಾದಿ ಕಾಳಗ ಹಾಗೂ ಕುಶಲವರ ಕಾಳಗಗಳು ಆತನ ರಚನೆಗಳಾಗಿವೆ. ಮಹಾಭಾರತಕ್ಕೆ ಸಂಬಂಧಿಸಿದಂತೆ ಆತ ಬರೆದ ಐರಾವತ ಪ್ರಸಂಗವು 560 ಪದ್ಯಗಳಿದ್ದು ಇನ್ನು ಭಾಗವತಕ್ಕೆ ಸಂಬಂಧಿಸಿದಂತೆ 'ಆತ ಕೃಷ್ಣಚರಿತ್ರೆ' ಎಂಬ ಪ್ರಸಂಗವನ್ನು ರಚಿಸಿದ್ದಾನೆ. ತಾಳ್ತಜೆ ಕೃಷ್ಣಭಟ್ಟರು (ಮಣಿಹಾರ, ಪುಟ ಸಂ. 7) ರಾಮಾಯಣಕ್ಕೆ ಸಂಬಂಧಿಸಿದಂತೆ ಅಂಗದ ಸಂಧಾನವೇ ಪಾರ್ತಿಸುಬ್ಬನ ಕೊನೆಯ ಪ್ರಸಂಗ ಎಂದು ಹೇಳುತ್ತಾ ಪ್ರಸಂಗದಲ್ಲಿ ಬಂದಿರುವ "ಅಂತು ಸಂಧಿ. . . . ಕ್ಕಂ ಪದ. . . ಕ್ಕೆ ಮಂಗಳ ಮಹಾ" ಎಂದೂ "ಕುಶಲವರು ಕೇಳಿ . . . ಉಂಗುರ ಕೊಟ್ಟಾಯ್ತು" ಎಂಬಲ್ಲಿಗೆ ಸಂಧಿ ಪರಿಸಮಾಪ್ತಿ. ಎಂದು ಬರೆದಿದ್ದಾನೆ. ಅಂಗದ ಸಂಧಾನ ವಿಫಲವಾದೊಡನೆ ಮಹಾಯುದ್ಧವೇ ನಡೆಯುತ್ತಾ ಮತ್ತು ಕೆಲವು ಪದ್ಯಗಳನ್ನು ಬರೆದು ಕಥೆ ಸಮಾಪ್ತಿ ಮಾಡಿ ರಾಮನ ಅಯೋಧ್ಯಾಗಮನ ಪಟ್ಟಾಭಿಷೇಕಗಳ ವಿವರಕ್ಕೆ ಬರುತ್ತಾನೆ ಎಂದು ಹೇಳುವ ಮೂಲಕ ತಮ್ಮ ಮಾತನ್ನು ಸಮರ್ಥಿಸಿಕೊಳ್ಳುತ್ತಾರೆ. ಇದೇ ಅವರು ತಮ್ಮ ನಿಲುವಿಗೆ ನೀಡುವ ಸಾಕ್ಷಿಯಾಗಿದೆ. ಆದರೆ ಕೆಲವೊಂದು ವಿದ್ವಾಂಸರು ಕುಂಭಕರ್ಣಾದಿ ಕಾಳಗ ಆತನದ್ದೇ 'ರಾಮನಾಟ್ಟಂ'ನಲ್ಲಿ ಬಳಕೆಯಲ್ಲಿರುವ ಎಂಟು ಪ್ರಸಂಗಗಳನ್ನು ಕನ್ನಡದಲ್ಲಿ ಆತ ರಚಿಸಿದ್ದಾರೆ ಎನ್ನುತ್ತಾರೆ. 'ರಾಮನಾಟ್ಟಂ'ನಲ್ಲಿ ರಾವಣವಧೆ ಇಲ್ಲ. ಅದೇ ರೀತಿ ಪಾರ್ತಿಸುಬ್ಬ ಕೂಡಾ ಕನ್ನಡದಲ್ಲಿ ಅದನ್ನು ಬರೆದಿಲ್ಲ. ಇದು ಗಮನಿಸಬೇಕಾದ ಅಂಶವಾಗಿದೆ ಎಂಬುವುದು ಕೆಲವರ ವಾದವಾಗಿದೆ. ಇಂತಹವರು 'ರಾಮನಾಟ್ಟಂ'ನಲ್ಲಿ ಬರುವ ಅನೇಕ ಪದ, ಪದ್ಯ ವಿವರಗಳು ಪಾರ್ತಿಸುಬ್ಬನ ಪ್ರಸಂಗದಲ್ಲಿ ಪ್ರತಿಫಲನಗೊಂಡಿರುವುದನ್ನು ತಮ್ಮ ಮಾತಿಗೆ ಸಾಕ್ಷಿಯಾಗಿ ಕೊಡುತ್ತಾರೆ.

ವಸ್ತು ದೃಷ್ಟಿಯಿಂದ ರಾಮಾಯಣದ ಎಂಟು ಪ್ರಸಂಗಗಳು ರಾಮಾಯಣದ ಕಥೆಯನ್ನು ಹೇಳುತ್ತವೆ. 'ಪುತ್ರಕಾಮೇಷ್ಟಿ' ಹಾಗೂ 'ಸೀತಾಕಲ್ಯಾಣ'ದಶರಥನು ದೇವ ಅಸುರರೊಂದಿಗೆ ಯುದ್ಧಕ್ಕೆ ಹೊರಡುವಲ್ಲಿಂದ ಪ್ರಾರಂಭವಾಗಿ 'ಸೀತಾ ಕಲ್ಯಾಣ'ನಡೆದು ಸಮಸ್ತರೂ ದಿಬ್ಬಣದೊಂದಿಗೆ ಅಯೋಧ್ಯೆಯನ್ನು ಪ್ರವೇಶಿಸುವುದರೊಂದಿಗೆ ಮುಕ್ತಾಯವಾಗುತ್ತದೆ. ಪಟ್ಟಾಭಿಷೇಕವು ಭರತ ಶತ್ರುಘ್ನರನ್ನು ಕೇಕೆಯ ರಾಜನ ಮಗನಾದ ಯಥಾಜಿತು ರಾಜಧಾನಿಗೆ ಕರೆದುಕೊಂಡು ಹೋಗುವುದರಲ್ಲಿಂದ ಪ್ರಾರಂಭವಾಗಿ ನಂದಿಗ್ರಾಮದಲ್ಲಿ ಭರತನು ಪಾದುಕೆ ಇರಿಸುವುದರೊಂದಿಗೆ ಮುಕ್ತಾಯವಾಗುತ್ತದೆ. ಪಂಚವಟಿ ವಾಲೀಸಂಹಾರದಲ್ಲಿ ಶೂರ್ಪಣಕಾ ನಾಸಾಚ್ಛೇದ, ಖರಾಸುರಾ ವಧೆ, ಸೀತಾಪಹಾರ ಹಾಗೂ ವಾಲೀಸಂಹಾರದ ಕಥೆಗಳು ಬಂದಿವೆ. ಚಿತ್ರಕೂಟದಿಂದ ರಾಮನು ಹೊರಟಲ್ಲಿಂದ ಪ್ರಾರಂಭವಾಗಿ ತಾರೆಯ ಪ್ರಲಾಪಕ್ಕೆ ರಾಮನು ಕೊಡುವ ಸಾಂತ್ವನ

ವಾಕ್ಯಗಳೊಂದಿಗೆ ಮುಕ್ತಾಯಗೊಳ್ಳುತ್ತದೆ. ಸೀತೆಯನ್ನು ಹುಡುಕಲು ಕಪಿಗಳು ಹೊರಡುವಲ್ಲಿಂದ 'ಚೂಡಾಮಣಿ' ಪ್ರಾರಂಭವಾಗಿ ರಾಮನಿಗೆ ಚೂಡಾಮಣಿಯನ್ನು ಒಪ್ಪಿಸುವವರೆಗೆ ಕಥೆ ಇದೆ. 'ಸೇತುಬಂಧನ'ದಲ್ಲಿ ರಾಮಸೇತು ನಿರ್ಮಾಣದಲ್ಲಿನ ಪರಿಪಾಟಲುಗಳ ವಿವರವಿದೆ. 'ಅಂಗದ ಸಂಧಾನ'ದಲ್ಲಿ ರಾಮನೊಂದಿಗೆ ಕಪಿಸೇನೆ ಹೊರಟು 2ನೇ ದಿನದ ಅಂತ್ಯದವರೆಗಿನ ಯುದ್ಧದ ಕಥೆ ಇದೆ. ಕುಂಭಕರ್ಣ ಕಾಳಗವು ಮೂರನೆಯ ದಿನ ನಿದ್ದೆ ಮಾಡುತ್ತಿದ್ದ ಕುಂಭಕರ್ಣನನ್ನು ಎಬ್ಬಿಸುವಲ್ಲಿಂದ ಪ್ರಾರಂಭವಾಗಿ ಕುಂಭಕರ್ಣನ ವಧೆಯೊಂದಿಗೆ ಮುಕ್ತಾಯವಾಗುತ್ತದೆ. ಕುಶಲವರ ಕಾಳಗದಲ್ಲಿ ರಾಮನಿಗೆ ವಸಿಷ್ಠರು ಆಶೀರ್ವಾದ ನೀಡಿ ಮಕ್ಕಳಾಗುವರೆಂಬ ಭರವಸೆಯಿಂದ ಪ್ರಾರಂಭವಾಗಿ ವನವಿಹಾರದ ವಿಚಾರ ಬಂದು ರಾಮನು ನಿಜ ಪುರದಲ್ಲಿ ಅಶ್ವಮೇಧವನ್ನು ಪೂರೈಸಿದನೆಂಬಲ್ಲಿಗೆ ಮುಕ್ತಾಯವಾಗುತ್ತದೆ. ವ್ಯಾಸರು ಧೃತರಾಷ್ಟ್ರನಿಗೆ ಗಜನೋಂಪಿಯ ಬಗೆ ತಿಳಿಸಿಕೊಡುವಲ್ಲಿಂದ 'ಐರಾವತ' ಪ್ರಸಂಗವು ಪ್ರಾರಂಭವಾಗಿ ಕುಂತಿಯನ್ನು ಕರೆಯದೇ ವ್ರತ ಮಾಡಿರುವುದು, ಅದಕ್ಕಾಗಿ ವ್ಯಥೆ ಪಡುವ ಕುಂತಿ, ಅರ್ಜುನ ಅಮರಾವತಿಯಿಂದ ಐರಾವತವನ್ನೇ ತರಿಸಲು ಮಾಡಿದ ಪ್ರಯತ್ನ, ಅಂತೆಯೇ ನಿಜವಾದ ಐರಾವತದೊಂದಿಗೆ ನಡೆಸಿದ ವ್ರತದ ಹಿರಿಮೆ ಎಲ್ಲಾ ಬಂದಿದೆ. ಪಾರ್ತಿಸುಬ್ಬನ ಪ್ರಸಂಗಗಳಲ್ಲೆಲ್ಲಾ ಇದು ಅತ್ಯಂತ ಧೀರ್ಘವಾದ ಪ್ರಸಂಗವಾಗಿದೆ. 'ಕೃಷ್ಣ ಚರಿತೆ'ಯಲ್ಲಿ ಕೃಷ್ಣನ ಬಾಲಲೀಲೆ ಮುಂದೆ ಆತ ಮಾಡಿದ ಲೀಲಾಮಾನುಷ ಕೃತ್ಯಗಳೆಲ್ಲಾ ವಿವರವಾಗಿ ಬಂದಿವೆ. ಪಾರ್ತಿಸುಬ್ಬನು ಈ ಪ್ರಸಂಗದಲ್ಲಿ ಭಾಗವತನನ್ನು ಅನುಸರಿಸಿದ್ದಾನೆ.

ಪಾರ್ತಿಸುಬ್ಬನ ರಚನೆ ಮೇಲ್ನೋಟಕ್ಕೆ ಸರಳವೆಂಬಂತೆ ಕಂಡರೂ ಆಂತರ್ಯದಲ್ಲಿ ಸಾಮಾನ್ಯ ಜನರ ಜೀವನದ ಪ್ರತಿಬಿಂಬದಂತೆ ಚಿತ್ರಿತವಾಗಿದೆ. 'ಸಾಹಿತ್ಯ ಜನಜೀವನದ ಪ್ರತಿಬಿಂಬ' ಎಂಬ ಮಾತನ್ನು ಅವನ ಪ್ರಸಂಗಗಳು ಸಾಬೀತುಗೊಳಿಸುತ್ತವೆ. ದೈವ ದೇವರುಗಳ ಮೇಲಿನ ನಂಬಿಕೆ, ಕೌಟುಂಬಿಕ ವ್ಯವಸ್ಥೆ, ಹಿರಿಕಿರಿಯರ ನಡುವಿರುವ ಸಂಬಂಧಗಳ ಚಿತ್ರಣಗಳೆಲ್ಲಾ ಇಲ್ಲಿ ಸಹಜವಾಗಿ ಬಂದಿವೆ. ದೂರದ ಅಯೋಧ್ಯೆಯಲ್ಲಿ ನಡೆದ ಕಥೆಯಿದು ಅಲ್ಲ! ನಮ್ಮ ಊರಿನ ಯಾವುದೋ ಕಥೆಯನ್ನು ಆತನು ಹೇಳುತ್ತಿದ್ದಾನೆ ಎಂದು ಅನಿಸುತ್ತದೆ. 'ರಾಮ ಪಟ್ಟಾಭಿಷೇಕ'ದಲ್ಲಿ ರಾಮನು ತನ್ನಯ ಮನೆಯ ದೇವರುಗಳನ್ನು ಬೇಡಿಕೊಂಡು ಗುರು ಹಿರಿಯರ ಕಾಲಿಗೆ ನಮಸ್ಕರಿಸಿ ಪಟ್ಟ ಏರಲು ಸಿದ್ಧನಾಗುತ್ತಾನೆ. 'ಸೇತುಬಂಧನ'ದಲ್ಲಿ ಕಪಿಗಳು ಸಮುದ್ರಕ್ಕೆ ಕಲ್ಲುಗಳನ್ನು ತಂದು ಹಾಕಿದಂತೆಲ್ಲಾ ಅಲ್ಲಿರುವ ಮೀನುಗಳು ಅವುಗಳನ್ನು ನುಂಗಿ ಹಾಕುತ್ತಿರುತ್ತವೆ. ಹಿರಿಯರನ್ನು ಕೇಳಿದಾಗ ಕಪಿಗಳಿಗೆ ತಾವು ಮಾಡಿದ ತಪ್ಪಿನ ಅರಿವಾಗುತ್ತದೆ. ಮುಂದೆ ನಳನು ರಾಮನೊಂದಿಗೆ ಸೇರಿ ವಿಘ್ನನಿವಾರಕನಾದ 'ಹೇರಂಭ'ನ ಪ್ರಾರ್ಥನೆ ಮಾಡುತ್ತಾನೆ.

"ಸಕಲ ವಿಘ್ನಗಳೆಲ್ಲಾ ಪರಿಹರಿಸಯ್ಯಾ ಮೂಷಿಕರೂಢ ನೀನೇ ಎಂದು।

ಭಕುತಿಯಿಂದೆರಗಿ ಬೇಡುವೆವು ನೀರೊಳಗೆ ಕಂಟಕ ಬರದಂತೆ ಕಾಯೋ"॥

(ಸೇತುಬಂಧನ ಪುಟ 13 ಪಾವಂಜೆಗುರುರಾವ್ ಅಂಡ್‌ಸನ್ಸ್)

ಗಣೇಶ ಪ್ರಾರ್ಥನೆಯ ನಂತರ ನಿರ್ವಿಘ್ನವಾಗಿಸೇತುವೆಯ ಕಾರ್ಯ ನಡೆಯುತ್ತದೆ. ಪಟ್ಟಾಭಿಷೇಕ ಪ್ರಸಂಗದಲ್ಲಿ ರಾಮನಿಗೆ ತಾನು ಕಾಡಿಗೆ ಹೋಗುವ ಸುದ್ದಿ ತಿಳಿದರೆ ಹೆಂಡತಿ ನೊಂದು ಕೊಳ್ಳುತ್ತಾಳೆ ಎಂಬ ಯೋಚನೆ. ಸೀತೆಗೆ ಕೂಡಾ ಗಂಡನ ಬಗ್ಗೆ ಅಷ್ಟೇ ಪ್ರೀತಿ. ಕವಿ ಇಲ್ಲಿ ಅವಳ ಮನದ ಇಂಗಿತವನ್ನು ಸಾಮಾನ್ಯರಂತೆ ಚಿತ್ರಿಸಿದ್ದಾನೆ. ಆಕೆಯೂ ಸಾಮಾನ್ಯ ಹೆಂಗಸಿನಂತೆ "ವಂಚಿಸಿ ಕಾಡಿಗೆ ಹೋದರೆ ವಿಷ ಕುಡಿದು ಸಾಯುವುದಾಗಿ ರಾಮನನ್ನು ಹೆದರಿಸುತ್ತಾಳೆ." ಇಲ್ಲೆಲ್ಲಾ ಶ್ರೀರಾಮಸೀತೆಯರು ನಮ್ಮ ಜನರ ಪ್ರತಿನಿಧಿ ಎಂಬಂತೆ ಕಾಣಿಸಿಕೊಳ್ಳುತ್ತಾರೆ.

ಪಾರ್ತಿಸುಬ್ಬನ "ಐರಾವತ"ದ ಒಂದು ಪದ್ಯದಲ್ಲಿ ಕರಾವಳಿಯ ದೈವದೇವರುಗಳ ನಂಬಿಕೆಯ ಸಜೀವ ಚಿತ್ರಣವಿದೆ. ಕುಂತಿಗೆ ಗಾಂಧಾರಿಯಿಂದ ಐರಾವತನೋಂಪಿಗೆ ಕರೆ ಬರುವುದಿಲ್ಲ. ತನ್ನನ್ನು ಅವಗಣನೆ ಮಾಡಿದ್ದಕ್ಕೆ ದುಃಖಿತಳಾಗುತ್ತಾಳೆ. ಹೀಗೆ ದುಃಖದಿಂದ ಪರಿತಪಿಸುತ್ತಿರುವ ಅವಳನ್ನು ನೋಡಿದ ಮಕ್ಕಳಾದ ಪಾಂಡವರು ಈ ಕೆಳಗಿನ ಪ್ರಶ್ನೆಗಳನ್ನು ಕೇಳುತ್ತಾರೆ.

"ನಾಡಿನ ಭೂತಗಳು ನಿಮ್ಮನ್ನು ಸೋಕಿಪೀಡಿಸುತ್ತೈದವೇನಮ್ಮಾ।

ಮೂಢಬೊಮ್ಮರಕ್ಕಸಗೆಹರಕೆಯ ಕೊಡದೆ ಕಾಡುತ್ತಲಿಹುವುದೇನಮ್ಮಾ॥

ದಾಯಾದಿಯರು ನಮ್ಮ ಸೈರಿಸದೇ ಮಂತ್ರ ಮಾಯಾವ ಮಾಡಿದರೋ।

ಪ್ರಿಯದ ಮನೆ ದೇವರು ಮನದಿನೊಂದು ಕಾಯವ ದಣಿಸಿದರೋ॥

(ಐರಾವತ ಪುಟ 7, ಪಾವಂಜೆಗುರುರಾವ್ ಅಂಡ್ ಸನ್ಸ್)"

ಮೊದಲಿಗೆ ಭೂತಗಳಕಾಟ, ನಂತರ ಬ್ರಹ್ಮರಾಕ್ಷಸ (ದೈವಗಳು) ಹರಕೆ, ದಾಯಾದಿಗಳ ಮಾಟ ಮಂತ್ರ ಕೊನೆಯಲ್ಲಿ ದೇವರ ಮನೆ ದೇವರ ಮುನಿಸು ಇಲ್ಲಿ ಬರುತ್ತದೆ. ಇದು ಕರಾವಳಿ ಪ್ರದೇಶದ ಜನತೆಗೆ ಸಂಕಷ್ಟಗಳು ಬಂದಾಗ ಜನ ಯೋಚಿಸುವ ಪರಿಯೇ ಆಗಿದೆ. ಇದೇ ಬಗೆಯ ಚಿತ್ರಣವನ್ನು ಮಲೆನಾಡಿನ ಕುರಿತು ಪ್ರಸಿದ್ಧ ಕವಿ ಕುವೆಂಪುರವರು ತಮ್ಮ "ಮಲೆನಾಡಿನ ಚಿತ್ರಗಳು" ಎಂಬ ಸಂಕಲನದ "ಅಣ್ಣಪ್ಪನ ರೇಷ್ಮೆ ಕಾಯಿಲೆ" ಎಂಬ ಪ್ರಬಂಧದಲ್ಲಿ ರೋಗ ಬಂದಾಗ ಅಲ್ಲಿನ ಜನತೆ ನಡೆದುಕೊಳ್ಳುವ ಬಗೆಯ ಚಿತ್ರಣವನ್ನು ನೀಡುತ್ತಾರೆ. ಅಲ್ಲಿ ಕೂಡಾ ನಾಲ್ಕು ಬಗೆಯ ವಿಭಿನ್ನ ಹಂತಗಳನ್ನು ಕಾಣಬಹುದು.

ಪಾರ್ತಿಸುಬ್ಬನ ಪ್ರಸಂಗಗಳಲ್ಲಿ ಜಾನಪದದ ಸೊಗಡು ಎದ್ದು ಕಾಣುವುದು ಅಲ್ಲಿ ಆತ ಬಳಸುವ ಗಾದೆ ಮಾತುಗಳಲ್ಲಿ, ನುಡಿಕಟ್ಟುಗಳಲ್ಲಿ, ಪ್ರಾದೇಶಿಕ ಶಬ್ದ

ಭಂಡಾರಗಳಲ್ಲಿ. ಯಕ್ಷಗಾನದ ಕವಿಗಳು ಸಾಮಾನ್ಯರ ಕವಿಗಳು, ಜನಸಾಮಾನ್ಯರ ಆಗುಹೋಗುಗಳನ್ನು ಬದುಕಿನ ಬಳಕೆಯ ನುಡಿಕಟ್ಟುಗಳ ಆಂತರ್ಯವನ್ನುಬಲ್ಲವರು. ಆದುದರಿಂದ ಇಂತಹದ್ದು ಬಂದಾಗ ಪ್ರಸಂಗ ಪ್ರೇಕ್ಷಕರನ್ನು ಮುಟ್ಟುತ್ತದೆ, ತಟ್ಟುತ್ತದೆ. ಪಾರ್ತಿಸುಬ್ಬನಂತೂ ಇಂತಹ ವಿಚಾರದಲ್ಲಿ ಎಲ್ಲಾ ಯಕ್ಷಗಾನದ ಕವಿಗಳಲ್ಲಿ ಮುಕುಟಮಣಿ ಅವನ ಈ ಬಗೆಯ ಬಳಕೆಯನ್ನುಗಮನಿಸಬಹುದು.

1. ಬದನೆಕಾಯಿ ಬ್ರಹ್ಮಾಂಡವೆಂದ ಹಾಗೇ
2. ಪನ್ನಂಗ ನಿಭವೇಣಿ ಸೊಬಗಿನ ಸಾಂಬ್ರಾಣಿ
3. ಬರಿಗುಲ್ ನಿದ್ದೆಕೇಡು
4. ಸಕ್ಕರೆಯ ಕಬ್ಬು ಕಾಸರಕ್ಕಾಯಿತು
5. ಬೀಸಿದ ಕೈ ತಪ್ಪಿದರೆ ಸಾಸಿರಕಾಲ
6. ಕಳವು ಹಾದರಕ್ಕೆ ಮದ್ದಿಲ್ಲ
7. ಸಾರಿ ಕೊಂದರೆ ಪಾಪವಿಲ್ಲ

'ಘೂತಕಿ' (ಪುತ್ರಕಾಮೇಷ್ಠಿ), ಚಾಡಿಯಸೀಗೆ (ಪಟ್ಟಾಭಿಷೇಕ), ಅರಸುಬಲ್ಲಾಳ (ಚೂಡಾಮಣಿ), ಗೋಟರಾಯ (ಸೀತಾಸ್ವಯಂವರ), ದಟ್ಟಚೆಲ್ಲಣ (ಪುತ್ರಕಾಮೇಷ್ಠಿ) ಒಕ್ಕಲೊಂದುಳಿಯದೇ (ಚೂಡಾಮಣಿ) ನೆಲೆಯಾದಮಾತನಾಡು (ಅಂಗದಸಂಧಾನ) ಇತ್ಯಾದಿಗಳನ್ನು ಗಮನಿಸಬಹುದು. ಒಂದು ಪ್ರದೇಶದ ವಿಶಿಷ್ಟತೆ ಅರಿಯಲುಇವೆಲ್ಲಾ ಸಹಕಾರಿ ಆತನ ಪ್ರಸಂಗಗಳಲ್ಲಿ ವಿಧಿ, ಹಣೆ ಬರಹ, ದೈವ ಭಕ್ತಿಯ ಚಿತ್ರಣ, ಶಕುನಗಳ ಕುರಿತು ವಿವರಣೆ. ಭೂತಗಳಕಟ್ಟು ಪಾಡುಗಳ ವಿಚಾರಗಳು ಬರುತ್ತವೆ.

ಪ್ರಸಂಗದಲ್ಲಿ ಬರುವ ಹಾಡುಗಳು ಗುಣಾತ್ಮಕವಾಗಿದ್ದಷ್ಟೂ ಪ್ರಸಂಗಗಳ ಮೌಲ್ಯಹೆಚ್ಚುತ್ತದೆ. ಭಾವಾಭಿವ್ಯಕ್ತಿಗೆ ಅವಕಾಶ, ಪ್ರಸಂಗಕ್ಕೆ ಕಳೆಕಟ್ಟುವ ಅಂಶಗಳನ್ನು ತರುವುದು, ನರ್ತನಕ್ಕೆ ಎಡೆಮಾಡಿಕೊಡುವುದು ಇವೆಲ್ಲಾ ಹಾಡುಗಳ ಸಕಾರಾತ್ಮಕ ಅಂಶಗಳಾಗಿವೆ. ಅವು ಸರಳವಾಗಿದ್ದಂತೆ ಕಾಣುತ್ತದೆ. ಆದರೆ ಮಾಡುವ ಪ್ರಭಾವ ಹಿರಿದಾಗಿರುತ್ತದೆ. 'ಪಂಚವಟಿ'ಯ ಕೆಳಗಿನ ಪದ್ಯವಂತೂ ಯಕ್ಷಗಾನದ ಸಾಹಿತ್ಯದಲ್ಲಿ ಮೊದಲ ಶ್ರೇಣಿಯಲ್ಲಿ ನಿಲ್ಲುವ ಚಿರಕಾಲ ಉಳಿಯುವಂತಹ ಪದ್ಯವಾಗಿದೆ.

"ನೋಡಿ ನಿರ್ಮಲ ಜಲ ಸಮಿಪದಿ ಮಾಡಿಕೊಂಡ ರುಪರ್ಣ ಶಾಲೆಯ
ರೂಢಿಪಾಲರು ಪಂಚವಟಿಯ ಕಾಡಿನೊಳಗೆ"

(ಪಂಚವಟಿಯ ಪುಟ 65)

('ಪಾರ್ತಿಸುಬ್ಬಕವಿಯ ಯಕ್ಷಗಾನ ಪ್ರಸಂಗಗಳು,
ಕನ್ನಡ ಮತ್ತು ಸಂಸ್ಕೃತಿ ನಿರ್ದೇಶನಾಲಯದ ಪ್ರಕಟಣೆ ಸಂ–ಕೆ.ವೆಂಕಟಕೃಷ್ಣಯ್ಯ)

ಹಾಡಲು ಒಗ್ಗುವಂತ ಪದ್ಯ ಇದಾಗಿದ್ದು ಈ ರಚನೆ ತನ್ನ ಸರಳತೆ ಹಾಗೂ ಸುಭಗತೆಯಿಂದ ಜನ ಮಾನಸದಲ್ಲಿ ಚಿರಸ್ಥಾಯಿಯಾಗಿದೆ. ಧ್ವನಿ ಸಿದ್ಧಾಂತಕ್ಕೆ ಇದು ವಿರುದ್ಧವಾದರೂ ನಮ್ಮ ಸಾಹಿತ್ಯವನ್ನು ಅಳೆಯಬೇಕಾದರೆ ಇಂತಹ ಮಾದರಿಗಳೇ ಮಾಪನಗಳಾಗುತ್ತವೆ. ಇದೇ ಬಗೆಯ ಇನ್ನೊಂದು ರಚನೆ 'ಪಂಚವಟಿ' ಪ್ರಸಂಗದಲ್ಲಿ ಬರುವ ಪದ್ಯದಲ್ಲಿದೆ. ಇದು "ಪಾರ್ತಿಸುಬ್ಬನ ಚಿತ್ರಕಶಕ್ತಿಯನ್ನು ಬಿಂಬಿಸುತ್ತದೆ. ಸೀತೆಯನ್ನು ಕಳೆದುಕೊಂಡ ರಾಮಚಂದ್ರ ಸೀತೆಗಾಗಿ ಪರಿತಪಿಸುವ ಬಗೆ ಹೀಗಿದೆ.

"ಅಡವಿಗಿಡಮರಕಲ್ಲುನೋಡಲರಸಿನದ

ಪುಡಿಯಂತೆ ತೋರುತ್ತಿದೆತಮ್ಮಾ ..

ಮಡದಿ ಜಾನಕಿಯೆಂಬರತುನವನ್ನು ಕಾಣಾ

ದಡಿಯಡಲಾರೆನಯ್ಯಯ್ಯೋತಮ್ಮಾ .

ಏಳುಜನ್ಮಾಂತರಕ್ಕೂತಪವಗೈದರೂ . ಇಂಥಾ ಬಾಲೆ ಕೈಸೇರುವಳೇ ತಮ್ಮಾ

ಮೇಲುಕೀಳೆಂದನರಿಯದಾಸತಿಯದುರ್ನಡೆಯಮಾತ

ಕೇಳಿನೀಬರಬಹುದೇತಮ್ಮಾ ."

(ಪಂಚವಟಿ ಪುಟ 87)

ಕಣ್ಣಿಗೆ ಕತ್ತಲೇ ಕವಿದಾಗ ಎಲ್ಲವೂ ಅರಿಸಿನದಂತೆ ಕಾಣಿಸುತ್ತದೆ ಎಂಬ ಸಾಮಾನ್ಯರ ಭಾವ ಇಲ್ಲಿ ಸಜೀವವಾಗಿ ಬಂದಿದೆ.

ಯಾವುದೇ ಪ್ರಸಂಗ ಯಶಸ್ವಿಯಾಗುವುದು ಸಂಭಾಷಣೆಗೆ, ಸಂವಾದಕ್ಕೆ ಕವಿ ಹೇಗೆ ಅವಕಾಶಗಾಳನ್ನು ಕಲ್ಪಿಸುತ್ತಾನೆ ಎಂಬುದರಲ್ಲಿ ಪ್ರತಿಪ್ರಸಂಗದಲ್ಲೂ ಕವಿಯಾವನು ಒಂದು ರಸಸ್ಥಾನವನ್ನು, ರಸಘಟ್ಟವನ್ನು ನಿರ್ಮಿಸುತ್ತಾನೆ. ಅವುಗಳೇ ಪ್ರಸಂಗಗಳ ಯಸಸ್ಸಿನ ಮಾನದಂಡವಾಗಿರುತ್ತದೆ. ಪಾರ್ತಿಸುಬ್ಬನ ಪ್ರಸಂಗಗಳೆಲ್ಲೆಲ್ಲಾ ಇಂತಹ ರಸಸ್ಥಾನಗಳ ಸೃಷ್ಟಿಸಾಕಷ್ಟಿವೆ. ಇದಕ್ಕೆ ಉದಾಹರಣೆಯಾಗಿ ರಾಮವಾಲಿಯ ಸಂವಾದವನ್ನು ಗಮನಿಸಬಹುದು.

ಜಾಣನ ಹುದಹು। ಸಂಗರಕತಿ ತ್ರಾಣನಹುದಹುದೋ।

ಕ್ಷೋಣಿಯೊಳ್ ನಿನಗೆಣೆಗಾಣೆ ಪರಾಕ್ರಮಿ॥ ಜಾಣನಹುದೋ

ಇನವಂಶದರಸುಗಳೊಳಗೆ ಹಿಂದೆ ಜನಿಸಿದವರು ನಿನ್ನ ಕೆಳಗೆ।

ಘನಚೋರತನದ ಶಿಖಂಡೀ ವಿದ್ಯೆಯನೆಷ್ಟು॥

ದಿನಸಾಧಿಸಿದೆಯೋ ನೀನು ಲಂಡಿಗಳದು॥

ಗುರ್ಣಾವ ಕೈಗೊಂಡೆಯೇನೋ॥ ನಿನ್ನಂಥ ಕುಜನರಿಲ್ಲ ಸಾಕ್ಷಿಗಿನ್ನೊ।

ರಾಘವ ಬಲು ಜಾಣನಹುದೋ॥

(ಪಂಚವಟಿ ವಾಲಿಸುಗ್ರೀವರ ಕಾಳಗಪುಟ 102)

ಇದಕ್ಕೆ ರಾಮ ಕೊಡುವ ಉತ್ತರವು ಅಷ್ಟೇ ಸಶಕ್ತವಾಗಿದೆ.

ವಾನರಾದಿಪಕೇಳೆನ್ನಮಾತ।

ನೀ ಎನ್ನ ಜರಿಯುವುದೇ ಕಿಂದ್ರಜಾತ॥

(ಪಂಚವಟಿ ವಾಲೀಸುಗ್ರೀವರ ಕಾಳಗ ಪುಟ 104)

ಈ ಪದ್ಯಗಳಲ್ಲಿ ಅರ್ಥ ವಿಸ್ತರಣೆಗೆ ಅವಕಾಶವಿದೆ. ಅರ್ಥ ಪ್ರಸವ ಕ್ಷಮತೆಯಿಂದಾಗಿ ಈ ಭಾಗತಾಳ ಮದ್ದಲೆಯಲ್ಲಿ ಯಶಸ್ವಿಯಾಗಿದೆ. ಸಾಕಷ್ಟು ಜನ ಅರ್ಥಧಾರಿಗಳು ಈ ಭಾಗವನ್ನು ನಾನಾ ರೀತಿಯಲ್ಲಿ ವ್ಯಾಖ್ಯಾನಿಸಿದ್ದು ನಮ್ಮನಾಡಿನ ಸಂಸ್ಕೃತಿಯ ಸಂಕಥನದಲ್ಲಿ ಸೇರಿಹೋಗಿದೆ. ಅನೇಕ ವೈಚಾರಿಕ ಹೊಳವುಗಳಿಗೆ ಈ ಪದ್ಯಗಳು ಕಾರಣೀಭೂತವಾಗಿದೆ. ಈ ಬಗೆಯ ಸಂವಾದ ಸೃಷ್ಟಿ ಪ್ರಸಂಗ ಸಾಹಿತ್ಯ ದ ಒಂದು ಮಾನದಂಡವಾಗುತ್ತದೆ. ಇದು ಒಂದು ಬತೆಯ ಓರೆಗಲ್ಲು ಇದ್ದಂತೆ. ಪಾರ್ತಿಸುಬ್ಬ ಇಂತಹ ಸಂವಾದ ಸೃಷ್ಟಿಗಳನ್ನು ಸಾಕಷ್ಟುಕಟ್ಟಿದ್ದಾನೆ. ರಾಮ-ಶೂರ್ಪನಖಿ-ಲಕ್ಷ್ಮಣ, ದಶರಥ-ಕೈಕೇಯಿ, ರಅಮ-ಶೂರ್ಪನಖೆ, ರಾವಣ-ಮಂಡೋದರಿ, ಸುಗ್ರೀವ, ಲಕ್ಷ್ಮಣ, ತಾರೆ ಮುಂತಾದ ಸಂವಾದಗಳು ಅರ್ಥಪ್ರಸವ ಕ್ಷಮತೆಯಿಂದಾಗಿ ರಸಿಕರ ಮನಗೆದ್ದಿದೆ. ಹಾಡಿನ ಮೂಲಕ ಜನಮನವನ್ನು ಮುಟ್ಟಿತಟ್ಟಿದಂತೆ. ಸಾಹಿತ್ಯ ದೃಷ್ಟಿಯಿಂದ ಅವಲೋಕಿಸಿದಾಗ ಮಾನವ ಸ್ವಭಾವಗಳ ಸೂಕ್ಷ್ಮಚಿತ್ರಣ ಅಲ್ಲಿ ದೊರೆಯುತ್ತದೆ. ಅಲಂಕಾರಿಕವಾಗಿ ಬಳಸಿದ ಭಾಷೆಯಿಂದ ಕಾವ್ಯ ಸೌಂದರ್ಯವನ್ನು ಹೆಚ್ಚಿಸುತ್ತದೆ.

ಸಾಂಪ್ರದಾಯಿಕ ಕಲೆಗಳು ಸಂಸ್ಕೃತಿಯ ಜೀವನಾಡಿ. ಅದಕ್ಕೆ ಪೂಕವಾಗುವ ಸಾಹಿತ್ಯ ಸಂಸ್ಕೃತಿಯನ್ನು ಸಂವರ್ಧನೆಮಾಡುತ್ತದೆ. ಅದು ಎಷ್ಟರ ಮಟ್ಟಿಗೆ ಆಗಿದೆ ಎಂಬುದು ಕೂಡಾ ಒಂದುಮಾನ ದಂಡವಾಗುತ್ತದೆ. ಪಾರ್ತಿಸುಬ್ಬನ ಪ್ರಸಂಗಗಳಲ್ಲಿ ಸಂಸ್ಕೃತಿಯನ್ನು ಸಂವರ್ಧಿಸುವಂತಹ ಪದ್ಯಗಳು ಸಾಕಷ್ಟಿವೆ. ಪಟ್ಟಾಭಿಷೇಕದಲ್ಲಿ ರಾಮನು ತಾಯಿ ಕೌಸಲ್ಯೆಯನ್ನು ಸಮಾಧಾನಗೊಳಿಸುತ್ತಾ ಆಡುವ ಮಾತುಗಳು ಅಚ್ಚಗನ್ನಡ ನುಡಿಗಟ್ಟುಗಳಿಂದ ಕೂಡಿಕೊಂಡಿದ್ದು. ಪಿತೃವಾಕ್ಯ ಪರಿಪಾಲನೆಯ ಹಿರಿಮೆಯನ್ನು ಸರಳವಾಗಿ ತಿಳಿಸಿಕೊಡುತ್ತವೆ.

ಕಣ್ಣು ನೀರ ಬುಧಿಯೊಳಗು ವಜನನಿಯ

ಪುಣ್ಯಪುರುಷ ನೋಡುತ್ತಾ॥

ಬಣ್ಣಗಾರಿಕೆಯಲ್ಲ ತಾಯ ತಂದೆಯರ ಮಾತ ನುಣ್ಣದುರಿಯಲಾಗದು॥

(ಪಾರ್ತಿಸುಬ್ಬನ ಯಕ್ಷಗಾನ ಪ್ರಸಂಗಗಳು, ಶೀರಾಮಪಟ್ಟಭಿಷೇಕ, ಪುಟ 44)

ಇದೇ ರೀತಿ ಶೋಕಗೊಂಡ ರಾಣಿಯರನ್ನು ವಸಿಷ್ಠನು ಸಮಾಧಾನಗೊಳಿಸುತ್ತಾ ಆಡುವ ಮಾತುಗಳು ಸರಳವಾಗಿದ್ದು ಸಾಮಾನ್ಯರು ಬದುಕಿಗೆ ಕೊಟ್ಟ ವ್ಯಾಖ್ಯಾನದ ಪರಿಯಂತಿದೆ.

"ಗಾಳಿಸಿಡಿಲುಮಳೆಹೊಯ್ಯಬೇಡೆಂದುಕೈ
ತೋಳನೆತ್ತಿದರೆನಿಲ್ಲುವುದೇ
ಬಾಲಕರಿಲ್ಲದವೇಳೆಯೆಂದರೆಯಮ
ನಾಳುಗಳದನು ಕೇಳುವರೆ
ನೆಲೆಯಿಲ್ಲ ತನುವಿದುಮಳೆಗಾಲದಲಿತುಂಬಿ.
ದ್ಹೊಳೆಯಲ್ಲಿನೆರೆಪುಟ್ಟುವಂತೆ
ನಳಿನಸಂಭವಬರೆದಾದಿನಸಂದರೆ
ಉಳಿವರೆನಿಮಿಷಪ್ರಾಣಿಗಳು-----"॥

(ಪಾರ್ತಿಸುಬ್ಬನ ಯಕ್ಷಗಾನಗಳು, ಪುಟ 136) (ಸಂ-ಕೃಷ್ಣಭಟ್)

ಈ ಬಗೆಯ ರೂಢಿಗತ ವಿಚಾರಗಳನ್ನು ಕವಿ ಮಾರ್ಮಿಕವಾಗಿ ಅಲ್ಲಲ್ಲಿ ತರುವ ಮೂಲಕ ತನ್ನ ಕೃತಿ ಜನರ ನಡೆನುಡಿಗಳಿಗೆ ಹಿಡಿದ ಕನ್ನಡಿಯಾಗುವಂತೆ ನೋಡಿಕೊಂಡಿದ್ದಾನೆ.

ಮುಳಿಯ ತಿಮ್ಮಪ್ಪಯ್ಯನವರು ಪಾರ್ತಿಸುಬ್ಬನನ್ನು "ನಾಡೋಜ" ಎಂದು ಕರೆದು ಗೌರವಿಸಿದ್ದಾರೆ. ಕವಿ ಹೃದಯ ಉಳ್ಳ ಆತ ಸೂಕ್ಷ್ಮಭಾವಗಳನ್ನು ನವುರಾಗಿ ಚಿತ್ರಿಸಿದ್ದಾನೆ. ಆತನ ವರ್ಣನಾಶಕ್ತಿಯು ಅಸಾದೃಶವಾದದ್ದು. ಸಮುದ್ರದ ವರ್ಣನೆಯನ್ನು ಜಾಂಬವಂತನ ಮೂಲಕ ಹೀಗೆ ಹೇಳುತ್ತಾನೆ.

ಕಂಡಿರೆನೀವುಕಂಡಿರೆ।
ಕಂಡಿರೇ ಸುಮುದ್ರರಾಜ ಕೆಂಡದಂತುಚ್ಚರಿಸುವುದಾ॥ಕಂಡಿರೇ॥
ಧರೆಯ ಪುಣ್ಯನದಿಗಳನ್ನು ಕರೆಸಿಬೆರೆಸಿಕೊಂಡು
ಕೊಬ್ಬಿಮೆರೆವುದಾ ಭೋರ್ಗರೆವುದಾಕಂಡಿರೇ॥
ಅಂಬರಕ್ಕೆ ಹಾರಿ ಮಗುಚಿ ಬಿಂಬಿಸುವುದು ಭಯವನಿಂತು
ನೊರೆಗಳಬಹುತೆರೆಗಳ
ಅಗಣಿತದ ಪರ್ವತಗಳ। ಸೊಗಸು ಮೀರಿ ಚರಿಪಮೀನು
ಹೇಳುವುದಾ ಬಾಯಿಕಳೆವುದಾ।

(ಉಂಗುರಸಂಧಿ ಪುಟ 120)

ಪಾರ್ತಿಸುಬ್ಬನು ಪಲ್ಲವಿ ಅನುಪಲ್ಲವಿಗಳ ಸಂರಚನೆಯಲ್ಲೂ ಪ್ರಯೋಗ ಶೀಲರೆಂಬುದ ವಸಂತ ಭಾರದ್ವಾಜರು ಗುರುತಿಸಿದ್ದಾರೆ. ಅನುಪಲ್ಲವಿಗಳನ್ನು ಬಳಸಿದರು, ಕೂಡಾ ಸೊಗಸಾಗಿರುತ್ತದೆ.

ಪ್ರಸಂಗದಲ್ಲಿ ಹಾಸ್ಯ ಸನ್ನಿವೇಶದ ಸೃಷ್ಟಿಯಿಂದ ಪ್ರದರ್ಶನ ಕಳೆಕಟ್ಟುತ್ತದೆ. ಹಾಸ್ಯ ಸನ್ನಿವೇಶವನ್ನು ಸೃಷ್ಟಿಸುವಲ್ಲಿ ಪಾರ್ತಿಸುಬ್ಬನದು ವಿಶಿಷ್ಟ ಪ್ರತಿಭೆ. ಹನುಮನಾಯಕ ಚಾರಕ, ದೂತ, ಬೇಟೆಗಾರ, ಬೆಸ್ತ ಮುಂತಾದ ಪಾತ್ರಗಳ ಮೂಲಕ ಹಾಸ್ಯ ಸೃಜನೆ ಇಲ್ಲಿ ನಡೆಯುತ್ತದೆ. ಆದರೆ "ಅಂಗದ ಸಂಧಾನ"ದಲ್ಲಿ ಅಂಗದನನ್ನು ನೋಡಿ ಲಂಕೆಯಲ್ಲಿರುವ ಜನತೆ ಹನುಮಂತನು ಹಿಂದೆ ಮಾಡಿದ ಅವಾಂತರಗಳನ್ನು ನೆನೆಸಿಕೊಂಡು ಭಯಪಟ್ಟು ಓಡುತ್ತಿರುವ ವಿಚಾರಗಳನ್ನು ಹಾಸ್ಯಮಯವಾಗಿ ಕೆಳಕಂಡಂತೆ ವರ್ಣಿಸಿದ್ದಾನೆ.

ಸೀರೆಗಳ ನಡಗಿಸಿದರೆಣ್ಣೆಯ ದೂರದಲಿ ಬಚ್ಚಿಟ್ಟು ಬಂದರು

ನೀರಚಿಮ್ಮಿದರೊಲೆಗೆ ಹಿಂದಣ ಮಾರಿಗಂಜಿ

ಬೆದಬೆದರಿ ವಾನರನ ಬಾಲದ

ತುದಿಯ ವೀಕ್ಷಿಸಿ ಕಿವಿಯೊಳಗೇಕಾಂ

ತದಲಿ ಮಾತಾಡಿದರು ಕೆಲರಿದುಬದಲಿದೆಂದು॥

ಸಣ್ಣವರು ನೋಡಿದರೆ ಬಾಳೆಯ ಹಣ್ಣುಗಳ

ಕರೆಕರೆದು ಕೊಡವರು ಪುಣ್ಯವುಳ್ಳುದೆನ್ನುತ್ತಾ ಕೆಲವರು ಮನ್ನಿಸುವರು

(ಅಂಗದಸಂಧಾನಪುಟ 177)

ಇಂತಹ ವರ್ಣನೆಗಳಲ್ಲಿ ಊರಿನಲ್ಲಿ ಮಂಗಗಳ ಬಂದಾಗ ಜನರು ಹೇಗೆ ವರ್ತಿಸುತ್ತಾರೆ ಎಂಬ ಸಜೀವ ಚಿತ್ರಣವಿದೆ. "ಕುಶಲವರಕಾಳಗ"ದಲ್ಲಿ ಪಾರ್ತಿಸುಬ್ಬನು ಲಕ್ಷ್ಮೀಶನ ಜೈಮಿನಿ ಭಾರತದಿಂದ ಉಪಕೃತ್ಯನಾದಂತೆ ಕಾಣುತ್ತದೆ. ಕಥೆಯ ವಿಸ್ತಾರದಲ್ಲಿ, ವರ್ಣನೆಗಳಲ್ಲಿ, ಹಾಸ್ಯ ಸನ್ನಿವೇಶಗಳಲ್ಲಿ ಇದನ್ನು ಗಮನಿಸಬಹುದು. ಅದೇ ರೀತಿ "ಐರಾವತ" ಕುಮಾರವ್ಯಾಸ ರಚಿಸಿರಬಹುದೆಂದು ಕೆಲವರು ಅನುಮಾನಿಸಿರುವ ಕನ್ನಡದ "ಐರಾವತ" ಎಂಬ ಕಿರುಕೃತಿಯನ್ನು ಆಧರಿಸಿದೆ. ರಾಮಾಣದ ಎಂಟು ಪ್ರಸಂಗಗಳು ಕೊಟ್ಟಾಕ ಮಹಾರಾಜನ 'ರಾಮನಾಟ್ಟಂ' ಮಲಯಾಳಂ ಕೃತಿಯನ್ನುಅನುಸರಿಸಿರುವುದನ್ನು ವಿದ್ವಾಂಸರು ಗುರುತಿಸಿದ್ದಾರೆ.

ಛಂದಶಾಸ್ತ್ರದ ಹಿನ್ನೆಲೆಯಲ್ಲಿ ಪಾರ್ತಿಸುಬ್ಬನ ಪ್ರಸಂಗಗಳು ಅವಲೋಕಿಸಿರುವ ಯಕ್ಷಗಾನದ ಕವಿ ಡಿ.ಎಸ್.ಶ್ರೀಧರರವರು ಆತ 188 ಮಟ್ಟಗಳನ್ನು ಬಳಸಿದ್ದಾನೆ ಎಂಬ ಅಭಿಪ್ರಾಯಕ್ಕೆ ಬರುತ್ತಾರೆ. ಅವುಗಳಲ್ಲಿ ಕೆಲವು ಪುನಾರಾವರ್ತನೆಗೊಂಡಿರುವ ಸಾಧ್ಯತೆ ಇದೆ ಎಂದು ತಿಳಿಸುತ್ತಾರೆ. ಪಾರ್ತಿಸುಬ್ಬನ ಪ್ರಯೋಗಶೀಲತೆಯನ್ನು ಗುರುತಿಸಿರುವ ಡಾ.ಕಬ್ಬಿನಾಲೆ ವಸಂತ ಭಾರದ್ವಾಜರು, ಆತನು ಒಂದೇ ಪದ್ಯದಲ್ಲಿ ಇಪ್ಪತ್ತೈದು ಸಾಲುಗಳನ್ನು ಬಳಸಿದ್ದು ಬಹುಶಃ ಕನ್ನಡದ ಅತೀ ದೀರ್ಘವಾದ

ಪದ್ಯಬಂಧ ಇದೆಂದು ಹೇಳುತ್ತಾರೆ. ಈ ಪದ್ಯಬಂದಿರುವುದು 'ಉಂಗುರಸಂಧಿ' ಪ್ರಸಂಗದಲ್ಲಿ (ಮಾತಾಡಬಾರದೇನೇ ಸುಜಾಣೆ। ಮಾತಾಡ ಬಾರದೇನೆ ॥ಪ॥ ಉಂಗುರ ಸಂಧಿ ಪುಟ 128)

ಈ ಪದ್ಯದಲ್ಲಿ ರಾವಣನ ಪ್ರೇಮಾಲಾಪನೆಯ ಅಳಲು ಬಹುದೀರ್ಘವಾಗಿ ಬಂದಿದೆ. ಸಾವೇರಿರಾಗದ ಆದಿತಾಳದಲ್ಲಿ 25 ಸಾಲುಗಳ ಒಂದೇ ಪದ್ಯದಲ್ಲಿ ಪಾರ್ತಿಸುಬ್ಬ ವಿಪ್ರಲಂಬ ಶೃಂಗಾರದ ಬಗೆಯ ಚಿತ್ರವನ್ನು ಚಿತ್ರಿಸಿದ್ದಾನೆ. ಕಣ್ಣಿಗೆ ನಿದ್ದೆ ಬಾರದು ಬಾಯಿಗೆ ಅನ್ನ ಸೇರದು ಎಂದೆಲ್ಲಾ ಹಲಬುತ್ತಾನೆ. ಕಾಮನ ತಾಪವನ್ನು ಆತ ಮಾಡಿದ ಘಾಸಿಯನ್ನು ವರ್ಣಿಸುತ್ತಾನೆ. ಸೀತೆಗಾಗಿ ತಾನು ಮಾಡಲಿರುವ ತ್ಯಾಗವನ್ನು ಸಿದ್ಧತೆಗಳನ್ನೆಲ್ಲಾ ತಿಳಿಸುತ್ತಾನೆ.

ಇದೇ ರೀತಿ ಪಾರ್ತಿಸುಬ್ಬನ ಪ್ರಸಂಗಗಳು ಕರಾವಳಿ ಮಲೆನಾಡನ್ನು ದಾಟಿ ಬಯಲು ನಾಡಿನ ಘಟ್ಟದಕೋರೆ ಹಾಗೂ ಮೂಡಲಪಾಯಗಳಲ್ಲೂ ಬಂದಿರುವುದನ್ನು ವಿದ್ವಾಂಸರು, ಯಕ್ಷಗಾನದ ಕವಿಗಳು ಆಗಿರುವ ಶ್ರೀಎಂ.ಎ.ಹೆಗಡೆಯವರು ಗುರ್ತಿಸುತ್ತಾರೆ. ಕುಕ್ಕಿಲರಂತೂ ಪಾರ್ತಿಸುಬ್ಬನ ಕವಿತಾ ಶಕ್ತಿಯನ್ನು ತಮ್ಮ "ಪಾರ್ತಿಸುಬ್ಬನ ಯಕ್ಷಗಾನಗಳು" ಕೃತಿಯ ಪ್ರಸ್ತಾವನೆಯಲ್ಲಿ ಬಹುವಿಶದವಾಗಿ ವಿವರಿಸಿದ್ದಾರೆ. "ಪಂಚವಟಿ"ಯ "ಚೆಂದದಿಂದ ಬಂದಳಬ್ಜಲೋಚನೆ। ರಾಮಚಂದ್ರನೆಂದ ಮಾತಿನ ಆನಂದವನ್ನೇ ನೆನೆಯುತ್ತಿದ್ದಾಗ॥ ಎಂಬಲ್ಲಿನ ವಿಪ್ರಲಂಬ ಶೃಂಗಾರವನ್ನು ಮತ್ತು ಆ ಪದ್ಯಗಳಲ್ಲಿ ಶೂರ್ಪಣಖಿಯ ಮಾನಸಿಕ ಹೊಯ್ದಾಟವನ್ನು, ಕಾತುರವನ್ನು, ಕಾಮಾತುರೆಯತೆ ವಿಭ್ರಮವನ್ನು ಡಾ.ಕಾರಂತರು ಮೆಚ್ಚಿಕೊಂಡಿದ್ದಾರೆ. ಹೀಗೆ ಪಾರ್ತಿಸುಬ್ಬನ ಕಾವ್ಯಶಕ್ತಿಯನ್ನು ಸಾಕಷ್ಟು ಜನ ವಿಮರ್ಶಕರು, ವಿದ್ವಾಂಸರು ಗುರ್ತಿಸಿ ಆತನನ್ನು "ಯಕ್ಷಗಾನದ ಮಹಾಕವಿ" ಎಂದು ಕರೆದು ಗೌರವಿಸುವುದರಲ್ಲಿ ಯಾವುದೇ ಉತ್‌ಪ್ರೇಕ್ಷೆಯಿಲ್ಲ. ಇಂತಹ ನಮ್ಮೆಲ್ಲರ ಗೌರವ, ಮನ್ನಣೆಯ ಕವಿ ಪಾರ್ತಿಸುಬ್ಬನು ಪ್ರಸಂಗ ಸಾಹಿತ್ಯಕ್ಕೆ ಶಕ್ತಿಯನ್ನು ಹಿರಿಮೆಯನ್ನು ತಂದು ಕೊಟ್ಟ ಕವಿಯಾಗಿದ್ದಾನೆ.

□

ಯಕ್ಷ ಕವಿ ಶ್ರೀಧರರ ಪ್ರಸಂಗ ಸಾಹಿತ್ಯ

ಕನ್ನಡ ಕವಿ ಚರಿತ್ರೆ ಹಾಗೂ ಸಾಹಿತ್ಯ ಚರಿತ್ರೆಗಳು ಐತಿಹಾಸಿಕವಾಗಿ ಮಹತ್ವದ ಕೃತಿಗಳು. ಕನ್ನಡ ಕಾವ್ಯಲೋಕದ ಅಧ್ಯಯನಕ್ಕೆ ಅಡಿಯಿಡುವವರಿಗೆ ಇವು ಪ್ರಥಮ ಮೆಟ್ಟಿಲುಗಳು. ಈ ನಾಡಿನ ಸಾವಿರದ ಇನ್ನೂರು ವರ್ಷಗಳ ಸಾಹಿತ್ಯ ಇತಿಹಾಸದಲ್ಲಿ ಬರುವ ಹಿರಿಯ-ಕಿರಿಯ ಕವಿಗಳ ಗದ್ಯಕಾರರ, ಲಾಕ್ಷಣಿಕರ, ಶಾಸ್ತ್ರಕಾರರ ಜೀವನ ಹಾಗೂ ಕೊಡುಗೆಗಳ ವಿವರ ಇಲ್ಲಿ ದೊರೆಯುತ್ತದೆ. ಆದರೆ ಇದೇ ಕಾಲಾವಧಿಯಲ್ಲಿ ಬರುವ ಯಕ್ಷಗಾನ ಕವಿಗಳ ಕೃತಿಗಳ ಬಗ್ಗೆ ರಂ.ಶ್ರೀ.ಮುಗಳಿಯವರ ಸಾಹಿತ್ಯ ಚರಿತ್ರೆಯಲ್ಲಿ ಉಲ್ಲೇಖವಿಲ್ಲದಿರುವುದು ಯಕ್ಷಗಾನ ಆಸಕ್ತರಿಗೆ ಬೇಸರದ ಸಂಗತಿ. ಸಾಹಿತ್ಯ ಇತಿಹಾಸಕಾರರಿಗೆ ಯಕ್ಷಗಾನದ ಬಗ್ಗೆ ಇರುವ ಅವಜ್ಞೆಯೊಂದಿಗೆ ಯಕ್ಷಗಾನ ಕವಿಗಳು ರಂಗ ಯಶಸ್ಸಿನ ಬೆನ್ನು ಹತ್ತಿ ಸಾಹಿತ್ಯ ಉತ್ತುಂಗತೆ ಕಡೆಗೆ ಬೆನ್ನು ಮಾಡಿದ್ದು ಕಾರಣವಾಯಿತು. ಅದೇ ರೀತಿ ಯಕ್ಷಗಾನ ಕವಿಗಳಲ್ಲಿ ಸಾಕಷ್ಟು ಕಾವ್ಯ ಪ್ರತಿಭೆ ಇದ್ದರೂ ಅದನ್ನು ಪರಿಶೀಲಿಸಿ, ಬೆಲೆಕಟ್ಟಿ ಕಾವ್ಯಾಸಕ್ತರಿಗೆ ಎತ್ತಿತೋರಿಸುವ ಕಾರ್ಯ ಕೂಡಾ ನಡೆಯದೇ ಇದ್ದಿದ್ದು ಇದಕ್ಕೆ ಪೂರಕವಾಯಿತು.

ಕಳೆದ ಶತಮಾನದ ಮೊದಲಾರ್ಧ ಭಾಗದಲ್ಲಿ ಐರೋಡಿ ಶಿವರಾಮಯ್ಯ, ಮುಳಿಯ ತಿಮ್ಮಪ್ಪಯ್ಯ, ಕೋಟ ಶಿವರಾಮ ಕಾರಂತ, ಕುಕ್ಕಿಲ ಕೃಷ್ಣಭಟ್ಟ, ತೆಕ್ಕುಂಜೆ ಗೋಪಾಲಕೃಷ್ಣ ಭಟ್ಟ, ದೇರಾಜೆ ಸೀತಾರಾಮಯ್ಯ, ಜಿ.ಆರ್.ಪಾಂಡೇಶ್ವರ್, ಕುಬಣೂರು ಬಾಲಕೃಷ್ಣ ರಾವ್, ಟಿ.ಕೇಶವಭಟ್ಟ ಮುಂತಾದವರ ಪ್ರಯತ್ನದ ಫಲವಾಗಿ ಯಕ್ಷಗಾನ ಕವಿಗಳ ಬಗ್ಗೆ, ಪ್ರಸಂಗಗಳ ಬಗ್ಗೆ, ವಿದ್ಯಾವಂತರ ಗಮನ ಹರಿಯಿತು. ಇದರಿಂದ ಮುಂದಿನ ಐವತ್ತು ಅರವತ್ತು ವರ್ಷಗಳಲ್ಲಿ ಅನೇಕರು ಪ್ರಸಂಗ ಸಾಹಿತ್ಯವನ್ನು ಗಂಭೀರವಾಗಿ ಪರಿಗಣಿಸಿ ಉತ್ತಮ ಕೃತಿಗಳನ್ನು ರಚಿಸಲು ಮೊದಲಿಟ್ಟರು. ಇಂದು ಈ ಕಾವ್ಯ ಪರಿಪಕ್ವವಾಗಿ ಬೆಳೆದು ನಿಂತಿದೆ. ಸುಮಾರು ಐದು ಸಾವಿರಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗಗಳಿವೆ. ಪಾರ್ತಿಸುಬ್ಬ, ಹಳೆಮಕ್ಕಿರಾಮ, ವಿಷ್ಣುವಾರಂಬಳ್ಳಿ, ದೇವಿದಾಸ, ವೆಂಕಟ, ನಾಗಪ್ಪಯ್ಯ, ನಿತ್ಯಾನಂದ ಅವಧೂತ,

ಹಟ್ಟಿಯಂಗಡಿ ರಾಮಭಟ್ಟ, ನಗಿರೆಯ ಸುಬ್ರಹ್ಮಣ್ಯ, ಮುದ್ದಣ್ಣ, ಗೆರೆಸೊಪ್ಪೆ ಶಾಂತಪ್ಪಯ್ಯ, ಸಂಕಯ್ಯ ಭಾಗವತ, ಹಲಸಿನಹಳ್ಳಿ ನರಸಿಂಹಶಾಸ್ತ್ರಿ, ಕಡಂದಲೆ ರಾಮರಾವ್, ಗುಂಡು ಸೀತಾರಾಮ ರಾವ್, ಕೆ.ವಿ.ವೆಂಕಯ್ಯ ಶೆಟ್ಟಿ, ಕೊರ್ಗಿ ಸೂರ್ಯನಾರಾಯಣ ಉಪಾಧ್ಯ, ಅಮೃತ ಸೋಮೇಶ್ವರ, ಬಲಿಪ ನಾರಾಯಣ ಭಾಗವತ, ಅಗರಿ ಶ್ರೀನಿವಾಸ ಭಾಗವತ, ಕೀರಿಕ್ಕಾಡು ಮಾಸ್ತ ರ್ ವಿಷ್ಣುಭಟ್, ರಾಘವ ನಂಬಿಯಾರ್, ಸೀರ್ಕಾದಿ ಗಣಪಯ್ಯಶೆಟ್ಟಿ, ಹೊಸ್ತೋಟ ಮಂಜುನಾಥ ಭಾಗವತ, ಎಸ್ ಶ್ರೀಧರ, ಕಂದಾವರ ರಘುರಾಮ ಶೆಟ್ಟಿ, ಅಂಬಾತನಯ ಮುದ್ರಾಡಿ, ಜಾನಕೈ ತಿಮ್ಮಪ್ಪ ವೆಂಕಟಪ್ಪ ಹೆಗಡೆ ಮುಂತಾದವರು ಪ್ರಮುಖ ಯಕ್ಷಗಾನ ಪ್ರಸಂಗಕಾರಕರಾಗಿದ್ದಾರೆ. ಕಳೆದ ಐದು ಶತಕಗಳಿಂದಈ ಕೃಷಿಯನ್ನು ನಡೆಸುತ್ತಿರುವ ಶ್ರೀಡಿ.ಎಸ್.ಶ್ರೀಧರ ಅವರ ಪ್ರಸಂಗಗಳಲ್ಲಿ ಶ್ರೀಮಂತವಾದ ಕವಿತಾಶಕ್ತಿ, ಛಂದೋಬದ್ಧವಾದ ರಚನೆ, ಬಗೆಬಗೆಯ ರಂಗತಂತ್ರ, ಪರಿಪುಷ್ಟವಾದ ಪಾತ್ರಪೋಷಣೆ, ಯುಗಧರ್ಮ ಹಾಗೂ ಕಾಲಧರ್ಮಗಳು ಸಮರ್ಪಕ ಮೇಳೈಸುವಿಕೆ ಮುಂತಾದವುಗಳನ್ನು ಗಮನಿಸಬಹುದು. ಶಿವಮೊಗ್ಗದಲ್ಲಿ ನಡೆದ ಅಖಿಲ ಭಾರತ ಯಕ್ಷಗಾನ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿ, ಸಾಹಿತ್ಯಲೋಕಕ್ಕೆ ಹಿರಿಮೆ-ಗರಿಮೆ ಪರಿಚಯಿಸಿದ ಕನ್ನಡ ಸಾಹಿತಿಗಳು ಪ್ರಸಂಗಸಾಹಿತ್ಯದ ಬಗ್ಗೆ ಗಮನ ಹರಿಸುವಂತೆ ಕರೆಕೊಟ್ಟಿರುವ ಶ್ರೀ ಡಿ.ಎಸ್.ಶ್ರೀಧರ ಪ್ರಸಂಗಗಳ ಕುರಿತಾದ ಅಧ್ಯಯನ ಇಂದಿನ ಅಗತ್ಯವಾಗಿದೆ.

ಸುಮಾರು ಮೂವತ್ತಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗಗಳನ್ನು ರಚಿಸಿರುವ ಶ್ರೀಧರರು ವೃತ್ತಿಯಲ್ಲಿ ಕನ್ನಡ ಉಪನ್ಯಾಸಕರು. ಪ್ರವೃತ್ತಿಯಲ್ಲಿ ಯಕ್ಷಗಾನದ ಅರ್ಥಧಾರಿಗಳು. ಯಕ್ಷ ಪ್ರಸಂಗಕಾರರು ದಕ್ಷಿಣ ಕನ್ನಡ ಜಿಲ್ಲೆಯ ಐಕಳದ ಪಾಂಪೈ ಜೂನಿಯರ್ ಕಾಲೇಜಿನಲ್ಲಿ ದೀರ್ಘಕಾಲ ವೃತ್ತಿಜೀವನ ನಡೆಸಿ ಈಗ ಅಲ್ಲೇ ವಾಸಿಸುತ್ತಿರುವ ಶ್ರೀಯುತರು ಮೂಲತಃ ಮಲೆನಾಡಿನವರು. ಇವರ ಹುಟ್ಟೂರು ಹೊಸನಗರ ತಾಲೂಕಿನ ನಿಟ್ಟೂರು ಸಮೀಪದ ಧರೆಮನೆ. ಇವರ ಪ್ರೌಢ ವಿದ್ಯಾಭ್ಯಾಸ ನಡೆದಿದ್ದು ಉಡುಪಿಯಲ್ಲಿ. ಪ್ರಾಚಾರ್ಯ ಎಂ.ರಾಜಗೋಪಾಲಾಚಾರ್ಯ ಪ್ರೊಫೆಸರ್ ಉದ್ಯಾವರ ಮಾಧವ ಆಚಾರ್ಯ, ದಿ.ಕೊರ್ಗಿ ಸೂರ್ಯನಾರಾಯಣ ಉಪಾಧ್ಯಾಯ ಮುಂತಾದವರ ಪ್ರೋತ್ಸಾಹದಿಂದ ಯಕ್ಷಗಾನ ಪ್ರಸಂಗ ರಚನೆಯಲ್ಲಿ ತೊಡಗಿಕೊಂಡರು. ಬಡಗುತಿಟ್ಟಿನ ನೃತ್ಯವನ್ನು ಸಕ್ಕಟ್ಟು ಸೀತಾರಾಮಯ್ಯನವರಿಂದ ಕಲಿತುಕೊಂಡರು. ಉಡುಪಿಯ ವಿದ್ಯಾದಾಯಿನೀ ಯಕ್ಷಗಾನ ಸಂಘದ ತಾಳಮದ್ದಳೆಗಳಲ್ಲಿ ಭಾಗವಹಿಸುವ ಮೂಲಕ ಶ್ರೀಧರ ಅವರು ಅರ್ಥಗಾರಿಕೆಗೆ ಪಾದಾರ್ಪಣೆ ಮಾಡಿದರು. ಈಗ ಯಕ್ಷಗಾನ ಲೋಕದಲ್ಲಿ ಅವರು ಪ್ರಸಂಗಕಾರರಾಗಿ, ಅರ್ಥಧಾರಿಯಾಗಿ ಖ್ಯಾತನಾಮರು. ಕಿನ್ನಿಗೋಳಿಯ "ಯಕ್ಷಗಾನ ಲಹರಿಯ" ಮೂಲಕ ಅಸಂಖ್ಯ ಯಕ್ಷಗಾನ ಕಾರ್ಯಕ್ರಮಗಳ ಆಯೋಜನೆಗೆ ಕಾರಣರಾದವರು.

ಬಡಕು ತೆಂಕುತಿಟ್ಟುಗಳ ಭೇದವಿಲ್ಲದೆ ಕಲಾವಿದರಿಗೆ, ಕಲಾಭಿಮಾನಿಗಳಿಗೆ ಚಿರಪರಿಚಿತರು. "ಯಕ್ಷಗಾನ ಪ್ರಸಂಗ ಕೋಶ" ಎಂಬ ಅಂತರ್ಜಾಲ ಯಕ್ಷಗಾನ ಪ್ರಸಂಗಗಳ ಮಾಹಿತಿ ಕೋಶದ ಮಾರ್ಗದರ್ಶಕ ರಾಗಿ ಪ್ರಸಂಗಗಳ ಉಳಿಯುವಿಕೆ, ಬೆಳೆಯುವಿಕೆಗೆ ಶ್ರಮಿಸುತ್ತಿದ್ದಾರೆ.

ಡಿ.ಎಸ್.ಶ್ರೀಧರ್‌ರವರು ರಚಿಸಿರುವ ಪ್ರಸಂಗಗಳಲ್ಲಿ ಮಹಾ ಪ್ರಸ್ತಾನ, ಶುಕ್ರ ಸಂಜೀವಿನಿ, ಬಾಲ ಭಾರತ, ಗರುಡ ಪ್ರತಾಪ, ಜನಮೇಜಯ, ಕುವಲಯಾಶ್ವ, ಸುದ್ಯುಮ್ನ, ಅಗಸ್ತ್ಯ, ಗರುಡ ಪ್ರತಾಪ, ಆದಿನಾರಾಯಣ ದರ್ಶನ, ಸರ್ಪಾದ್ವರ ಪರೀಕ್ಷಿತ, ಆಸ್ತಿಕ ಜನ್ಮ, ಸೀತಾಕಲ್ಯಾಣ, ಭ್ರಮಾಶ್ವತ್ಥಾಮ, ಫಲ್ಗುಣಿ ತೀರ್ಥ ಮಹಿಮೆ, ಕದಂಬ ಮೋಕ್ಷ, ಸತ್ವ ಶೈಥಿಲ್ಯ, ವೀರ ಚಿತ್ರಧ್ವಜ, ಗುರುಪುರ ಕ್ಷೇತ್ರ ಮಹಾತ್ಮೆ ಮುಂತಾದವುಗಳು ಪ್ರಸಿದ್ಧವಾಗಿವೆ. 2011ರಲ್ಲಿ "ಉಡುಪಿಯ ಯಕ್ಷಗಾನ ಕೇಂದ್ರ" ಇವರ 13ಪ್ರಸಂಗಗಳ ಸಂಕಲನವೊಂದನ್ನು "ಯಕ್ಷಗಾನ ಪ್ರಸಂಗ ಮಾಲಿಕಾ" ಎಂಬ ಹೆಸರಿನಿಂದ ಪ್ರಕಟಿಸಿ ಪ್ರಸಂಗ ಸಾಹಿತ್ಯಾಭ್ಯಾಸಿಗಳಿಗೆ ಅನುಕೂಲ ಮಾಡಿಕೊಟ್ಟಿದ್ದಾರೆ. ಹೊಸ ಪ್ರಸಂಗಕಾರ ಒಬ್ಬರಿಗೆ ಸಂದ ಗೌರವ ಇದಾಗಿದೆ.

ಶ್ರೀಧರರ ಪ್ರಸಂಗಗಳಲ್ಲಿ ಹೆಚ್ಚಿನವು ಮಹಾಭಾರತವನ್ನು ಆಧರಿಸಿ ರಚಿತಗೊಂಡಿವೆ. ಉಳಿದವು ಶ್ರೀಮದ್ರಾಮಾಯಣ, ಶ್ರೀಮದ್ಭಾಗವತ ಹಾಗೂ ಕೆಲವು ಪುರಾಣದ ಕಥೆಗಳನ್ನು ಆಧರಿಸಿ ಬರೆದವುಗಳಾಗಿವೆ. ಭಾರತೀಯ ಪರಂಪರೆಯಲ್ಲಿ ಮಹಾಭಾರತಕ್ಕೆ ಅದ್ವಿತೀಯ ಸ್ಥಾನವಿದೆ. ಮೂಲತಃ ಮಹಾಭಾರತದ ಕಥೆ 2000 ಶ್ಲೋಕಗಳ "ಜಯ" ಎಂಬುವುದಾಗಿದ್ದು ಮುಂದೆ ಲಕ್ಷ ಶ್ಲೋಕಗಳವರೆಗೆ ವಿಸ್ತಾರಗೊಂಡಿತು ಎಂಬುದು ವಿದ್ವಾಂಸರ ಅಭಿಮತ. ವಿಭಿನ್ನಪ್ರದೇಶಗಳ, ವಿಭಿನ್ನ ಜನ ಜಾತಿಯ ನಂಬಿಕೆ ಆಚರಣೆಗೆ ಅನುಗುಣವಾಗಿ ಅನೇಕ ಹೊಸ ಬಗೆಯ ಕಥಾ ಶಿಲ್ಪಗಳು ಮಹಾಭಾರತದ ಪಾತ್ರಗಳನ್ನು ಆಧರಿಸಿ ರಚನೆಗೊಂಡು ಸೇರ್ಪಡೆಗೊಳ್ಳುತ್ತಾ ಹೋಗಿ ಮಹಾಭಾರತ ಬೃಹದಾಕಾರವಾಗಿ ಬೆಳೆಯಲು ಕಾರಣವಾಯಿತು. ಅನೇಕ ಕವಿಗಳ, ಜಾನಪದ ಕಥನಕಾರರ, ಮತಧರ್ಮ ಪ್ರವಚನಕಾರರ ಕೊಡೆಗೆಯು ಇದರಲ್ಲಿ ಸೇರಿಕೊಂಡಿದೆ. ಕುಮಾರವ್ಯಾಸ, ಲಕ್ಷ್ಮೀಶ, ಪರಮದೇವ ಕವಿಗಳನ್ನು ಮೇಲ್ನೋಟಕ್ಕೆ ಅನುಸರಿಸಿ ಬರೆದ ನಮ್ಮ ಯಕ್ಷಗಾನ ಪ್ರಸಂಗಕಾರರು "ಮಹಾಭಾರತದ" ವಿಸ್ತರಣೆಯಲ್ಲಿ, ಬೆಳವಣಿಗೆಯಲ್ಲಿ ತಮ್ಮ "ಅಳಿಲುಸೇವೆ"ಯನ್ನು ಕೊಡುಗೆಯಾಗಿ ನೀಡಿದ್ದಾರೆ. ಶ್ರೀಧರರು ಮಹಾಭಾರತವನ್ನು ಆಧರಿಸಿ ಬರೆದ ಪ್ರಸಂಗಗಳ ಕಾಣಿಕೆಯೂ ಕೂಡ ಇದರಲ್ಲಿ ಸೇರಿಕೊಂಡಿದೆ. ಅವರು ಕುವಲಯಾಶ್ವ, ಗರುಡ ಪ್ರತಾಪ, ಬಾಲ ಭಾರತ, ಮಹಾಪ್ರಸ್ಥಾನ, ಅಸ್ತಿಕಜನ್ಮ, ಸತ್ವ ಶೈಥಿಲ್ಯದ ವಸ್ತುಗಳ ಮೂಲಕ ಮಹಾಭಾರತದ ಕಥೆಗೆ ಅನೇಕ ಹೊಸ ದೃಷ್ಟಿಕೋನಗಳನ್ನು ಹೊಸ ಆಯಾಮಗಳನ್ನು ನೀಡಿದ್ದಾರೆ.

ಡಿ.ಎಸ್.ಶ್ರೀಧರ ಅವರ "ಮಹಾಪ್ರಸ್ಥಾನ" ಮಹಾಭಾರತದಲ್ಲಿ ಬರುವ ಪಾಂಡವರ ಸ್ವರ್ಗಾರೋಹಣದ ಕಥೆಯಾದರೂ ಅನೇಕ ಬಗೆಯಲ್ಲಿ ಭಿನ್ನವಾದ ರಂಗಕೃತಿಯಾಗುವಂತೆ ಶ್ರೀಯುತರು ನೋಡಿಕೊಂಡಿದ್ದಾರೆ. ಇಲ್ಲಿ ಬಂದಿರುವ "ಸಹದೇವ ದಿಗ್ವಿಜಯ" ಸಂಪೂರ್ಣ ಕವಿ ಕಲ್ಪನೆಯಾಗಿದ್ದು ಮಹಾಭಾರತದ ಕತೆಗೆ ಹೊಸ ಸೇರ್ಪಡೆಯೇ ಸರಿ. ಇವರು ಪರಮದೇವ ಕವಿಯ "ತುರಂಗ ಭಾರತ"ವನ್ನು ಆಧಾರವಾಗಿ ಇರಿಸಿಕೊಂಡರೂ ರಂಗತಂತ್ರಕ್ಕೆ ಅನುಕೂಲವಾಗುವಂತೆ ಕಥೆಯನ್ನು ಹೆಣೆದಿದ್ದಾರೆ. ಧನು ದಾನವ ಪ್ರಕರಣ ಪರಾಶರರ ಸೂಚನೆ ಮುಂತಾದವುಗಳಲ್ಲಿ ಹೊಸ ಕಲ್ಪನೆಗಳಿವೆ. ಇಲ್ಲಿ ಕಥೆಯ ಹರವು ವಿಸ್ತಾರವಾಗಿದ್ದು ಯುಗಾಂತರದ ವಿಚಾರವಿದೆ. ಪ್ರಾರಂಭದಲ್ಲಿ ಯಯಾತಿಯ ಕಥೆಯನ್ನು ತಂದು ಪುರುಯದು ವಂಶಗಳ ಮುಂದಿನ ದುರಂತದ ಬೀಜದ ಕಡೆಗೆ ಕವಿ ಬೆರಳು ಮಾಡಿ ತೋರಿದ್ದಾರೆ. ಅದೇ ರೀತಿ "ಶ್ರೀಕೃಷ್ಣಾಶ್ವಮೇಧ"ದಲ್ಲಿ ಅಶ್ವಮೇಧದ ಕುದುರೆಯೊಂದಿಗೆ ದಿಗ್ವಿಜಯಗಳ ಸರಮಾಲೆ, ಅದಕ್ಕಾಗಿ ನಡೆಯುವ ಕಾಳಗಗಳು ಹೊಸತಾಗಿ ಬಂದಿವೆ. "ಯಾದವ ನಿರ್ಯಾಣ"ದಲ್ಲಿ ಯಾದವ ಸಂತತಿಗಾಗುವ ನಾಶವು ಕಥಾರೂಪವಾಗಿ ಬಂದಿದೆ. ಇವತ್ತಿನ ಕಾಲಕ್ಕೆ ಅನುಕೂಲವಾಗುವಂತೆ ಐದು ಸಂಧಿಗಳಿದ್ದೂ ಪ್ರತಿಸಂಧಿಯು ಪ್ರತ್ಯೇಕ ಪ್ರಸಂಗವಾಗ ಬಲ್ಲ ಶಕ್ತಿ ಹೊಂದಿದೆ. ಶ್ರೀಧರರು ಈ ಬಗೆಯ ತಂತ್ರಗಾರಿಕೆಯನ್ನು ಬೇರೆ ಪ್ರಸಂಗಗಳಲ್ಲೂ ಬಳಸಿದ್ದಾರೆ. ಇವತ್ತಿನ ಕಾಲಮಾನಕ್ಕೆ ಇದು ಅನೂಕೂಲಕರ ಪದ್ಧತಿ. ಒಟ್ಟಾಗಿ ರಾತ್ರಿಯಿಡೀ ಪ್ರದರ್ಶಿಸಬಹುದು ಇಲ್ಲವೇ ಬಿಡಿಬಿಡಿಯಾಗಿ ಕಾಲಮಿತಿ ಪ್ರದರ್ಶನಗಳಲ್ಲೂ ಬಳಸಬಹುದು. ಈ ಕಾರಣದಿಂದ ಇವರ ಪ್ರಸಂಗಗಳು ತಾಳಮದ್ದಲೆಗೆ, ಹವ್ಯಾಸಿ ಸಂಘಗಳ ಪ್ರದರ್ಶನಕ್ಕೆ ಹೇಳಿ ಮಾಡಿಸಿದಂತಿವೆ. ಇದೇ ರೀತಿ ಇವರ 'ಪರೀಕ್ಷಿತ' ಮತ್ತು 'ಆಸ್ತೀಕ ಜನ್ಮ' ಹಾಗೂ 'ಶುಕ್ರ ಸಂಜೀವಿನಿ'ಗಳಲ್ಲಿ ಬರುವ ಸಂಧಿಗಳನ್ನು ಒಟ್ಟಾಗಿ ದೀರ್ಘ ಪ್ರದರ್ಶನದಲ್ಲಿ ಪ್ರದರ್ಶಿಸಬಹುದು. ಕಾಲಮಿತಿಯ ಪ್ರಸಂಗ ಬೇಕೆನ್ನುವವರು ಯಾವುದಾದರೂ ಒಂದು ಸಂಧಿಯನ್ನು ಆಯ್ದುಕೊಂಡು ಪ್ರದರ್ಶಿಸಬಹುದು. ಅದಕ್ಕಾಗಿಯೇ ಶ್ರೀಧರರು ಪ್ರತಿಸಂಧಿಗೂ ಬೇರೆಬೇರೆ ಹೆಸರುಗಳನ್ನು ಕೂಡಾ ಕೊಟ್ಟಿದ್ದಾರೆ.

ರಾಮಾಯಣವನ್ನು ಆಧರಿಸಿ ಬರೆದ 'ಕಬಂಧಮೋಕ್ಷ' ರಂಗಕೃತಿಯಾಗಿ ಮೂಡಲು ಅಗತ್ಯವಾದ ವನ ವಿಹಾರ, ನೃತ್ಯ, ಜಲಕ್ರೀಡೆ ಮುಂತಾದವನ್ನು ಕಲ್ಪಿಸಿ ಪ್ರಸಂಗ ರಚಿಸಿದ್ದಾರೆ. ಈ ಪ್ರಸಂಗದಲ್ಲಿ ಬರುವ 'ಹಂಸ'ನೆಂಬ ಗೆಳೆಯನ ಪಾತ್ರವು ಕೂಡ ಇವರ ಹೊಸ ಸೃಷ್ಟಿ. ಬಣ್ಣದ ವೇಷವನ್ನು ಕೂಡಾ ಇಲ್ಲಿ ಹೊಸದಾಗಿ ತಂದಿದ್ದಾರೆ. ಪ್ರಸಂಗಕಾರರ ಚಿಂತನೆ ಹಾಗೂ ಕಲ್ಪನೆಗಳು ಯಕ್ಷಗಾನದ ಜಾಯಮಾನಕ್ಕೆ ಹೊಂದುವಂತದ್ದು ಆದುದರಿಂದ ಯಶಸ್ವಿಯಾಗಿದೆ. ಯಾವುದೇ ಬದಲಾವಣೆಯು 'ಯಕ್ಷಗಾನೀಯ'ವಾಗಿದ್ದಾಗ ಮಾತ್ರ ಯಶಸ್ವಿಯಾಗುತ್ತದೆ ಎಂಬುದಕ್ಕೆ ಇದು ಸಾಕ್ಷಿ.

ಇವರು ಭಿನ್ನ ಪೌರಾಣಿಕ ವಸ್ತುಗಳನ್ನು ಸಂದರ್ಭಗಳನ್ನು ಸಂಬಂಧಗಳನ್ನು ಆಧುನಿಕ ನೆನೆಯಲ್ಲಿ ಪ್ರಸಂಗಗಳನ್ನಾಗಿಸಲು ಪ್ರಯತ್ನಿಸುತ್ತಾರೆ. ವಸ್ತುವನ್ನು ಪೌರಾಣಿಕಗೊಳಿಸುವ ಬದಲು ಆಯ್ದ ಪುರಾಣವನ್ನು ಪ್ರಸಂಗಗಳಿಗೆ ಹೊಸ ವಸ್ತುವಾಗಿಸುತ್ತಾರೆ. "ಆಧುನಿಕರು ಯೋಚಿಸಬಹುದಾದಂಥ ಒಂದು ಪುರಾಣದ ವಸ್ತುವನ್ನು ಸುಸಂಬದ್ಧ ಸಂಯೋಜನೆಗೆ ಒಳಪಡಿಸುವುದೇ ಶ್ರೀಧರರ ಹೊಸತನ. ಈ 'ನವ್ಯತೆ'ಯೇ ಅವರ ವೈಶಿಷ್ಟ್ಯ"ವೆಂಬುದು ಪ್ರೊ.ಉದ್ಯಾವರ ಮಾಧವ ಆಚಾರ್ಯರ ಅನಿಸಿಕೆಯಾಗಿದೆ.

ಅವರ 'ಬಾಲಭಾರತ'ವಂತೂ ಮಕ್ಕಳ ಮೇಳದ ಆಟಗಳಿಗೆ ಅನುಕೂಲವಾಗಿರುವಂತಹುದು. ಈಚೆಗೆ ಹೆಚ್ಚುತ್ತಿರುವ ಮಕ್ಕಳ ಮೇಳಗಳು ಹೊಸ ಪ್ರಸಂಗಗಳನ್ನು ನಿರೀಕ್ಷಿಸುತ್ತವೆ. ಮಕ್ಕಳಿಗಾಗಿ ಹವ್ಯಾಸಿಗಳಿಗಾಗಿ ಹೊಸ ಪ್ರಸಂಗಗಳ ರಚನೆ ಇಂದಿನ ಅನಿವಾರ್ಯವಾಗಿದೆ. ಹೊಸ ಪ್ರಸಂಗಕಾರರಿಗೆ ಇದೊಂದು ಸವಾಲಿನ ಕೆಲಸವು ಹೌದು. ಹಾಗೆ ತುರ್ತಿನ ಕೆಲಸವು ಹೌದು. ಈ ನಿಟ್ಟಿನಲ್ಲಿ ಶ್ರೀಧರರು ಕೆಲವು ಪ್ರಸಂಗಗಳನ್ನು ಮಕ್ಕಳಿಗಾಗಿಯೇ ರಚಿಸಿ ಅಭಿನಂದನಾರ್ಹರಾಗಿದ್ದಾರೆ. ಒಂದೇ ಕಥೆ ವಿವಿಧ ಮೂಲಗಳಲ್ಲಿ ಹೇಗೆ ನಿರೂಪಿತವಾಗಿದೆ ಎಂಬುದನ್ನು ಅಧ್ಯಯನ ಮಾಡಿ ಪರಿಶೀಲಿಸಿ ಕಥೆಯನ್ನು ನಿರೂಪಿಸುವುದು ಶ್ರೀಧರರ ಹೆಗ್ಗಳಿಕೆ. ಪೌರಾಣಿಕ ಚೌಕಟ್ಟಿನಲ್ಲಿ ಹೊಸಕಾಲದ ಸಂವೇದನೆಯೊಂದಿಗೆ ಮಾನವೀಯ ಸಂಘರ್ಷಗಳನ್ನು ಭಾವ ಜಗತ್ತನ್ನು ಇವರ ಪ್ರಸಂಗಗಳು ಬಿತ್ತರಿಸುತ್ತವೆ. ಜಟಾಯುವನ್ನು ನೋಡಿ ಭ್ರಮಿತನಾಗಿ ರಾಕ್ಷಸನೇ ಹದ್ದಿನಾಕಾರದಲ್ಲಿ ಬಂದನೆಂದು ಹೇಳುವ ರಾಮನ ಪರಿ ಹೀಗಿದೆ.

ಮಾರವೀರಾಗ ಏಕತಾಳ

ಮಾಯದಿ ಹದ್ದಿನ ಕಾಯವ ಧರಿಸುತ

ಕಾಯುವ ನೀ ದನುಜ॥

ಸಾಯಿಸುವೆನು ಮೊದಲೀಯಪಶಕುನವ

ಸಾಯಕತಾರನುಜ॥ (ಯಕ್ಷಗಾನ ಪ್ರಸಂಗಮಾಲಿಕಾ, ಪುಟ 15)

ವಸ್ತುವಿನ ಆಯ್ಕೆಯಲ್ಲಿ ವೈವಿಧ್ಯತೆಯನ್ನು ನಾವೀನ್ಯವನ್ನು ತಂದಂತ ರಂಗತಂತ್ರಗಾರಿಕೆಯಲ್ಲಿ, ಕಲ್ಪನಾವಿಲಾಸದಲ್ಲೂ ಪ್ರಬುದ್ಧತೆಯನ್ನು ಮೆರೆದಿದ್ದಾರೆ. ಕನ್ನಡ ಭಾಷೆ ಹಾಗೂ ಸಾಹಿತ್ಯ ಎರಡರಲ್ಲೂ ಪ್ರಭುತ್ವ ಹೊಂದಿರುವ ಶ್ರೀಧರರ ಪ್ರಸಂಗಗಳಲ್ಲಿ ವೈವಿಧ್ಯಮಯ ಛಂದೋಬಂಧಗಳು, ರಾಗತಾಳ ನಿಬದ್ಧವಾದ ಹಾಡುಗಳು ಇವೆ. ಕವಿತಾ ರಚನೆಯಲ್ಲಿ ಸೊಗಸುಗಾರಿಕೆ, ಲಯ ಬದ್ಧವಾದ ಭಾಷೆ, ಹಾಡಲು ಅನುಕೂಲವಾಗುವಂತಹ ಪದ್ಯಬಂಧಗಳು ಕಿವಿಗೆ ಬಿದ್ದೊಡನೆ ಅರ್ಥಸ್ಫುರಿಸುವಂತಹ ಸರಳತೆ ಆದರೆ ಅಷ್ಟೇ ಗಹನತೆ ಇವರ ಪ್ರಸಂಗ ರಚನೆಯ

ವಿಶೇಷವಾಗಿದೆ. 'ಕಬಂಧಮೋಕ್ಷ' ಪ್ರಸಂಗದಲ್ಲಿ ಪತ್ನಿಯನ್ನು ಕಳೆದುಕೊಂಡು ಶೋಕವಿಹ್ವಲವಾಗಿ, ಶಕ್ತಿಗುಂದಿದವನಂತೆ, ಭ್ರಮಿತ ಚಿತ್ತದವನಂತೆ ವರ್ತಿಸುತ್ತಿರುವ ರಾಮನಿಗೆ ಧೈರ್ಯ ತುಂಬುವ ಮಾತುಗಳನ್ನಾಡುವ ಲಕ್ಷ್ಮಣನ ಪದ್ಯ ಈ ರೀತಿ ಇದೆ.

ಸೌರಾಷ್ಟ್ರರಾಗ ಅಷ್ಟತಾಳ

ಗುರು ವಸಿಷ್ಠರ ಶಾಸ್ತ್ರ, ವಿಶ್ವಾಮಿತ್ರ ಶಸ್ತ್ರ॥ ನಿನ್ನದಣ್ಣ॥

ಜಗವರಿಯೆ ಭಾರ್ಗವ ರಾಮನಿತ್ತ ವೈಷ್ಣವಧನು॥ ನಿನ್ನದಣ್ಣ॥

ಶರಭಂಗ ಅತ್ರಿ ಅಗಸ್ತ್ಯ ಸುತೀಕ್ಷ್ಣರ॥ ಆಸೆಯಣ್ಣ॥

ನೀನು ದುರುಳರ ತರಿಯುತೀ ಧರೆಯ

ಪೊರೆವೆಯೆಂಬ॥ಆಸೆಯಣ್ಣ॥

(ಯಕ್ಷಗಾನ ಪ್ರಸಂಗ ಮಾಲಿಕಾ ಪುಟ 15)

ಇಲ್ಲಿ ಬಂದಿರುವ ಪುನರಾವರ್ತನೆಯನ್ನು ಭಾಗವತರು ಹಾಡಿದಾಗ ಕೇಳಲು ಹೃದ್ಯವಾಗುತ್ತದೆ. ಲಕ್ಷ್ಮಣನು ಬೇರೆಬೇರೆ ಋಷಿಗಳ ಹೆಸರನ್ನು ಹೇಳುವುದರಿಂದ ತಾಳಮದ್ದಲೆಯ ಅರ್ಥಧಾರಿಗಳಿಗೆ ಕಥೆಯನ್ನು ವಿಸ್ತರಿಸಲು ಕೂಡ ಅವಕಾಶವಾಗುತ್ತದೆ. ಸಂಭಾಷಣೆಗೆ ಈ ಬಗೆಯ ಪದ್ಯಗಳು ಅನುಕೂಲಕರ.

ಇದೇ ರೀತಿ 'ಸುದ್ಯುಮ್ನ' ಪ್ರಸಂಗದಲ್ಲಿ ಬಂದ 'ಶಂಕರಾಭರಣ ರೂಪಕ' ತಾಳದ ಪದ್ಯ ಕೂಡ ಇವರ ಕವಿತ್ವ ಸೌಂದರ್ಯವನ್ನು ಬಿತ್ತರಿಸುತ್ತದೆ.

ಕನ್ನೆರನ್ನೆ ಸೋತೆ ನಾನು । ನಿನ್ನರೂಪಕೆ । ಮೊ

ಹನ್ನೆ ಬಾಡಿ ಪೋದ ಪೂಗೋ । ಲನ್ನ ತಾಪಕೆ

ಚೆನ್ನೆವರಿಸಿ ಸುಖಿಸೆ ನೀ ಬಾ । ರೆನ್ನಸ್ವರ್ಗಕೆ । ನಾ

ಧನ್ಯನಹೆನು ಸುಂದರಾಂಗಿ ಪುಣ್ಯಮಿಲನಕೆ । ಕನ್ನೆ ರನ್ನೆ

॥ಪುಟ 33॥

ಇಲ್ಲಿ ಪ್ರಣಯ ರೂಪದ, ಶೃಂಗಾರ ಪೂರ್ಣ ಅಭಿನಯಕ್ಕೆ ಇದು ಪೂರಕವಾಗಿದೆ. ಇದಕ್ಕೆ ಉತ್ತರವಾಗಿ 'ಇಳೆ'ಯು ಹೇಳುವ ಮಾತು ಮಾರ್ಮಿಕವಾಗಿದೆ, ಪದ್ಯವು ಕೂಡ ಸೊಗಸಾಗಿದೆ. 'ಸುದ್ಯುಮ್ನ' ಪ್ರಸಂಗದಲ್ಲಿ ಇಂತಹ ಅಸಂಖ್ಯ ಉತ್ತಮ ಪದ್ಯಗಳಿವೆ.

'ಆದಿನಾರಾಯಣದರ್ಶನ' ಎಂಬ ಪ್ರಸಂಗದ ಕಥಾವಸ್ತು ಶ್ರೀಮದ್ ಭಾಗವತದ ದಶಮ ಸ್ಕಂದದಲ್ಲಿ ಬಂದಿರುವಂತಹದು. ಇದನ್ನು ಪ್ರಸಂಗ ಕೃತಿಯಾಗಿ ಮಾರ್ಪಡಿಸುವಲ್ಲಿ ಶ್ರೀಧರರು ಕೆಲವು ಸ್ವಾರಸ್ಯಕರ ಬದಲಾವಣೆ ಮಾಡಿಕೊಂಡಿದ್ದಾರೆ.

ಮೂಲದಲ್ಲಿ ಅರ್ಜುನನು ಸತ್ತ ಬ್ರಾಹ್ಮಣ ಯುವಕನನ್ನು ಯೋಗ ಬಲದಿಂದ ಹುಡುಕಿದ ಎಂದಿದೆ. ಆದರೆ ಪ್ರಸಂಗದಲ್ಲಿ ಅಂಗಾರಪರ್ಣವೆಂಬ ಗಂಧರ್ವನಿಂದ ದೊರೆತ ಚಾಕ್ಷುಷೀ ವಿದ್ಯೆಯಿಂದ ನೋಡಿದ ಎಂದು ಬದಲಾಗಿಸಿದ್ದೂ ರಂಗತಂತ್ರ ದೃಷ್ಟಿಯಿಂದ ಸ್ವಾಗತಾರ್ಹ. ಇಲ್ಲಿನ ಅನೇಕ ಪದ್ಯಗಳು ಬಹಳಷ್ಟು ಆಕರ್ಷಕವಾಗಿದೆ. ಸರಸವಾಗಿ ಹಾಡಲು ಅನುಕೂಲವಾಗುವ ಪದಗಳ ಜೋಡಣೆ ಇಲ್ಲಿದೆ. ಸ್ವಯಂ ಸ್ಫೂರ್ತಿಯಾಗಿ ಪದಗಳು ನುಗ್ಗಿ ಬರುತ್ತಿರುವುದನ್ನು ಕಾಣಬಹುದು. ಇದಕ್ಕೆಉದಾಹರಣೆಯಾಗಿ

ನಾದ ನಾಮಕ್ರಿಯೆ ರಾಗ ರೂಪಕತಾಳ

ದೇವ ನಿನ್ನ ಭಾವನಾಗಿ । ಬೋವನಾಗಿ ನಡೆಸೆ ರಥವ ।

ಭೂ ವಲಯವ ಗೆದ್ದೆನೆಂಬು । ದಾವ ವಿಕ್ರಮ ॥

ಭಾವ ಗಮ್ಯವಲ್ಲ ತಿಳಿವಿ । ಗೀ ವಿಚಿತ್ರ ನಿಲುಕದಯ್ಯ ।

ಕಾವೆನೆಂಬೆ ನಂಬೆಸಾಕೆ । ಲೈ ವಿನೋದವು ॥

(ಯಕ್ಷಗಾನ ಪ್ರಸಂಗ ಮಾಲಿಕಾ ಪುಟ 44)

ಎಂಬ ಪದ್ಯವನ್ನು ಮತ್ತು ಅದೇ ಪ್ರಸಂಗದ

ಸಾವೇರಿರಾಗ ರೂಪಕತಾಳ

ನಕ್ಕ ಹರಿಯು ಪಾರ್ಥ ಶಪಥ । ಪಕ್ಕದಲ್ಲವು । ಕನ್ನ

ಉಕ್ಕಿ ಕದ್ದ ಕಾರ್ಯವಲ್ಲ । ಸಿಕ್ಕ ಜಟಿಲವು ।

ಮಿಕ್ಕುದೆನ್ನ ಮನದ ಲೋಕ ರೆಕ್ಕೆ ಬಲೆಯನು । ಕಕ್ಕಾ

ವಿಕ್ಕಿಗೊಳಿಸಿ ದೂರ ಕೊಯ್ದು ಹಕ್ಕಿಗೊಳುವನು ॥

(ಯಕ್ಷಗಾನಪ್ರಸಂಗಮಾಲಿಕಾಪುಟ 45)

ಎಂಬ ಪದ್ಯವನ್ನು ಗಮನಿಸಬಹುದು. ನಿಜವಾದ ಕವಿತಾಶಕ್ತಿ ಇರುವ ಕವಿಗೆ ಮಾತ್ರ ಹೀಗೆ ಪದಗಳು ಲೀಲಾಜಾಲವಾಗಿ ಬರಲು ಸಾಧ್ಯ. ಲಯಬದ್ಧವಾದ ಪದಸಂಪತ್ತು ಶ್ರೀಧರರ ಶಕ್ತಿ. ಕವಿ ಎಲ್ಲೂ ಪದಗಳಿಗಾಗಿ ತಿಣುಕಾಡಿದಂತೆ ಕಾಣುವುದಿಲ್ಲ. ಅವು ಸೊಸಸಾಗಿ, ಛಂಧೋಬದ್ಧವಾಗಿ, ನಿರಾಯಾಸವಾಗಿ, ಮಿನುಗುವ ತಾರೆಯಂತೆ ಕಂಗೋಳಿಸುತ್ತಿವೆ. ಅಸಂಖ್ಯ ಹೊಸ ಪದಗಳನ್ನು ಪ್ರಸಂಗದಲ್ಲಿ ಬಳಕೆಗೆ ತಂದದ್ದು ಇವರ ಹಿರಿಮೆ.

ಇವರ 'ಶುಕ್ರ ಸಂಜೀವಿನಿ' ಪ್ರಸಂಗದ ವಸ್ತು ನಿರೂಪಣೆಯಲ್ಲಿ ಶ್ರೀಧರರು ಹೊಸತನ ತಂದಿದ್ದಾರೆ. ಹಿಂದುಳಿದವರನ್ನು, ದಮನಿತರನ್ನು ಮುನ್ನೆಲೆಗೆ ತರುವುದೇ ನಿಜವಾದ ಪ್ರಗತಿ. ಆಗ ಎಲ್ಲರೂ ಸುಖವಾಗಿ ಬಾಳಲು ಸಾಧ್ಯ ಎಂಬ ಆಶಯವನ್ನು ಇಟ್ಟುಕೊಂಡು ರಾಕ್ಷಸರ ಗುರುವಾಗಿರುವ ಶುಕ್ರಾಚಾರ್ಯರ ಜೀವನದ ಕತೆಯನ್ನು

ಇಲ್ಲಿ ವಸ್ತುವಾಗಿ ಮಾಡಿಕೊಂಡಿದ್ದಾರೆ. ರಾಕ್ಷಸರಂತಹ ಶಿಷ್ಯರನ್ನು ಪರಿಷ್ಕರಿಸುವುದು, ಉತ್ತಮಿಕೆ ಎಡೆಗೆ ನಡೆಯುವಂತೆ ನೋಡಿಕೊಳ್ಳುವ ಹೊಣೆಗಾರಿಕೆ ನಿಜವಾದ ಗುರುವಿಗೆ ಇದೆ. ಎಂಬುದೇ ಇಲ್ಲಿನ ಸಾರ. ರಾಕ್ಷಸರಿಗೆ ಗುರು ಶುಕ್ರಾಚಾರ್ಯರು ಸಂಸ್ಕಾರನೀಡಿ ಉದ್ಧರಿಸಲು ಪ್ರಾಮಾಣಿಕ ಪ್ರಯತ್ನ ಮಾಡುತ್ತಾರೆ. ಇದು ವಿಶೇಷವಾದ ಅಂಶ ಎಂದು ಡಾ.ವಸಂತ ಭಾರದ್ವಾಜರು ಅಭಿಪ್ರಾಯಪಟ್ಟಿದ್ದಾರೆ.

ಡಿ.ಎಸ್.ಶ್ರೀಧರರ 'ಬಾಲಭಾರತದ'ದ ವಸ್ತುವು ಕೌರವ ಪಾಂಡವರ ಬಾಲ್ಯದ ಕತೆಯನ್ನು ಆಧರಿಸಿದ್ದೂ ಇಲ್ಲೂ ಕೂಡ ಅನೇಕ ಬಗೆಯ ರಂಗತಂತ್ರಗಾರಿಕೆಯನ್ನು ಕಾಣಬಹುದು. ನೃತ್ಯ ಪ್ರಧಾನವಾಗಿರುವ ಈ ಪ್ರಸಂಗವು ಶಾಲಾ ಬಾಲಕರ ಪ್ರದರ್ಶನಕ್ಕೆ ಹೇಳಿ ಮಾಡಿಸಿದಂತಿದೆ. ಯಕ್ಷಗಾನದ ಸಾಂಪ್ರದಾಯಿಕ ನೃತ್ಯಗಳಾದ ಮಂಡಿ, ಬೇಟೆ, ಜಲಕ್ರೀಡೆ, ಚೆಂಡಾಟ ಇತ್ಯಾದಿಗಳನ್ನೆಲ್ಲ ಬಳಸಿಕೊಳ್ಳುವ ಸಾಧ್ಯತೆ ಚೆನ್ನಾಗಿದೆ. ಇಲ್ಲಿ ಬರುವ ಚೆಂಡಿನಾಟದ ವರ್ಣನೆ ಸೊಗಸಾಗಿದೆ.

ಸೌರಾಷ್ಟ್ರ ರಾಗ ಮಟ್ಟೆ ತಾಳ

ಚೆಂಡಿನಾಟವಾಡಿ ಬಂದರೂ । ಮಕ್ಕಳೆಲ್ಲ

ಅಂಡಲೆಯುತುದ್ಯಾನದೆಡೆಯೊಳು

ಚೆಂಡಿನಾಟವಾಡಿ ಬಂದರು ॥ ಪ ॥

ಕೋಟೆ ಕಟ್ಟಿ ಎಸೆದು ಪಿಡಿಯುತ । ಒಡೆಯುತದನು

ಸೂಟನಿಂದ ಬೆಚ್ಚಿ ಬಡಿಯುತ ॥

ಓಟ ಗೈವರು ಗಳನೊ ।

ಕೂಟದಿಂದ ಸುತ್ತಿ ಪಿಡಿದು

ಸಾಟಿಯಲ್ಲ ನಮಗೆನುತ ।

ಕೋಟಲೆಗಳ ಗೈದುಕುಣಿದು

ಚೆಂಡಿನಾಟವಾಡಿ ಬಂದರು ॥

(ಯಕ್ಷಗಾನ ಪ್ರಸಂಗಮಾಲಿಕಾ ಪುಟ 94)

ಈ ಪದ್ಯದಲ್ಲಿ ಎಳೆಯ ಮಕ್ಕಳ ಆಟದ ವರ್ಣನೆ ಸಹಜವಾಗಿ, ಸರಳವಾಗಿ ಕಣ್ಣಿಗೆ ಕಟ್ಟುವಂತೆ ಬಂದಿದೆ. ರಂಗದಲ್ಲಿ ಇದನ್ನು ಆಡಿ ತೋರಿಸುವಾಗ ರಂಗವೇ ತುಂಬಿ ಬರುತ್ತದೆ. ನಾಟಕೀಯ ಗುಣದಿಂದ ಪ್ರೇಕ್ಷಕರನ್ನು ರಂಜಿಸುತ್ತದೆ.

ಅದೇ ರೀತಿ ಗುರುದಕ್ಷಿಣೆಗಾಗಿ ದ್ರುಪದನನ್ನು ಸೆರೆ ಹಿಡಿಯಲು ಬಂದ ಮಕ್ಕಳಿಗೆ ದ್ರುಪದನಾಡುವ ಮಾತುಗಳಲ್ಲಿ ಬಳಕೆಯ ಪದಗಳು ನೇರವಾಗಿ ಸರಳವಾಗಿದೆ. ಸ್ವಭಾವೋಕ್ತಿಗೆ ಉತ್ತಮ ಉದಾಹರಣೆಯಾಗಿದ್ದು ಮನ ಮುಟ್ಟುವಂತಿದೆ.

ಭೈರವಿ ರಾಗ ಏಕ ತಾಳ

ಸುಳಿಬಾಳೆಯ ಕುಡಿಗಳಿರಾ । ನಿ॥

ಮ್ಮಳವಿಯದೆನಿತು ವಿಚಾರ ॥

ಬೆಳೆಯುವ ಬಾಲರೆ ನಿಮಗೆ । ಧುರ ।

ತಿಳಿಯದುಪೋಗಿತಿ ಮನೆಗೆ ।

(ಯಕ್ಷಗಾನ ಪ್ರಸಂಗ ಮಾಲಿಕಾ ಪುಟ 104)

ಅದೇ ರೀತಿ ಮುಂದೆ ಬಂದ ಪದ್ಯವು ಕೂಡ ಮಾರ್ಮಿಕವಾಗಿದೆ.

ಮಾರವಿ ರಾಗ ಏಕ ತಾಳ.

ಬಡವನ ನುಡಿಯಲಿ । ಬೆಡಗನು ಕಂಡಿರೆ

ಪೊಡವಿಪತರಳರಿರ ।

ಹುಡುಗರೆ ಚೆಂಡಾಟವೆ ಕೆಣಕುವ ಛಲ ।

ಬಡಹಾರ್ವನೆ ದ್ರುಪದ ॥

(ಯಕ್ಷಗಾನ ಪ್ರಸಂಗ ಮಾಲಿಕಾ ಪುಟ 105)

ಇಲ್ಲಿನ ಮಂಗಲ ಪದ್ಯವು ಕೂಡ ಬಹುಸೊಗಸಾಗಿದೆ ಬಂದಿದೆ.

ಸಾಂಗತ್ಯ ರೂಪಕ ॥ ಕಾಂಭೋಧಿ ॥ ಝಂಪೆ ॥

ಪ್ರಣವ ಸ್ವರೂಪಂಗೆ ಗಣನಾಥ ತಾತಂಗೆ ।

ಮನಸಿಜೋದ್ಭವನಯ್ಯ ಹರಿಗೆ ॥

ವನಿತೆವಾಣೀಶಂಗೆ ಸುಮನಸಾದಿಗಳಿಂಗೆ ।

ಮನಕೆ ಮಂಗಲವೀವ ಕಲೆಗೆ ।

ಜಯ ಮಂಗಲಂ ನಿತ್ಯ ಶುಭ ಮಂಗಲಂ ॥

(ಯಕ್ಷಗಾನ ಪ್ರಸಂಗ ಮಾಲಿಕಾ ಪುಟ 106)

ಇಂದು ಯಕ್ಷಗಾನ ಪ್ರಸಂಗ ರಚನೆ 'ಸಂತೆಗೆ ಮೂರುಮೊಳ' ನೇಯುವಂತಾಗಿದೆ. ಮೇಳಗಳ ಪ್ರತಿವರ್ಷದ ತಿರುಗಾಟಕ್ಕೆ ಒಂದು ಹೊಸ ಪ್ರಸಂಗಗಳನ್ನು ಸಿದ್ಧ ಮಾಡಿಕೊಡುವ ಕವಿಗಳು ಸಾಕಷ್ಟಿದ್ದಾರೆ. ತಾವು ಕಂಡ ಸಿನಿಮಾ, ನಾಟಕ, ತಾವು ಓದಿದ ಸಾಹಸದ ಕಥೆ, ಕೇಳಿದ ಭಯಾನಕ ಸಂಗತಿ, ನಡೆದ ಹೃದಯ ವಿದ್ರಾವಕ ಘಟನೆಗಳನ್ನು ಆಧಾರವಾಗಿಟ್ಟುಕೊಂಡು ಆಯಾಯ ಮೇಳದ ಮುಖ್ಯ ಪಾತ್ರಧಾರಿಗೆ ಸರಿಹೋಗುವಂಥ ಪಾತ್ರವನ್ನು ಸೃಷ್ಟಿಸಿ, ಕುತೂಹಲ ಬೆಳೆಸುವಂತಹ ಸನ್ನಿವೇಶಗಳನ್ನು ನಿರ್ಮಿಸಿ ಯಾರಿಂದಲೋ ರಾಗ ಹಾಕಿಸಿ, ಇನ್ಯಾರಿಂದಲೋ ಪದ್ಯ

ಬರೆಸಿ ಮೇಳ ತಿರುಗಾಟಕ್ಕೆ ಹೊರಡುವಾಗ ಅಬ್ಬರದ ಪ್ರಚಾರದೊಂದಿಗೆ ಪ್ರಸಂಗ ಹೊರಬರುತ್ತದೆ. ದೀರ್ಘ ಅಧ್ಯಯನವಾಗಲಿ, ಕವಿತ್ವದ ತುಡಿತವಾಗಲಿ, ಛಂಧೋ ಶುದ್ಧಿಯ ಪರಿಯಾಗಲಿ, ರಾಗ ವಿಸ್ತಾರದ ಕಲ್ಪನೆಯಾಗಲಿ ಇಲ್ಲದ ಈ ಪ್ರಸಂಗಗಳ ಆಯಸ್ಸು ಬಹು ಕ್ಷಣಿಕ. ಒಂದೇ ವರ್ಷದಲ್ಲಿ ಅವು ಕಣ್ಮರೆಯಾಗುತ್ತವೆ. ಯಕ್ಷಗಾನದ ವ್ಯಾಪಾರೀಕರಣದ ಫಲವಾಗಿ ಬರುತ್ತಿರುವ ಈ ಬಗೆಯ ಪ್ರಸಂಗಗಳನ್ನು ಸಾಹಿತ್ಯಕ ಮಾನದಂಡದಿಂದ ಅಳೆಯಲು ಅಸಾಧ್ಯ. ಇಂತಹ ಸ್ಥಿತಿಯಲ್ಲಿ ಅಮೃತ ಸೋಮೇಶ್ವರ, ರಾಘವ ನಂಬಿಯಾರ್, ಡಿ.ಎಸ್.ಶ್ರೀಧರ ಮುಂತಾದವರ ರಚನೆಗಳು ದೀರ್ಘಕಾಲ ಉಳಿಯಬಲ್ಲವು. ವ್ಯಾಪಾರೀಕರಣದ ಸೋಂಕು ಇಲ್ಲ, ಯಕ್ಷಗಾನದ ಆಸಕ್ತರಿಗೆ ಉತ್ತಮ ಪ್ರಸಂಗ ನೀಡಬೇಕೆಂಬ ಹಂಬಲದೊಂದಿಗೆ ರಚಿತವಾದ ಪ್ರಸಂಗಗಳಿವು.

ಡಿ.ಎಸ್.ಶ್ರೀಧರರವರ ಪ್ರಸಂಗಗಳು ಸಾಹಿತ್ಯದರಸಿಕರು ಆಸ್ವಾದಿಸಬಲ್ಲವಂಥವು. ಕನ್ನಡ ಸಾಹಿತ್ಯಕ್ಕೆ ಉತ್ತಮ ಕೊಡುಗೆ ನೀಡಬೇಕೆಂಬ ಮನೋಭೂಮಿಕೆಯಿಂದ ರಚಿತಗೊಂಡ ಇವರ ಪ್ರಸಂಗಗಳಲ್ಲಿ ಭಾಗವತರ ರಾಗ ವಿಸ್ತಾರಕ್ಕೆ ಪಾತ್ರಧಾರಿಗಳ ಅಭಿನಯಕ್ಕೆ, ಅರ್ಥಧಾರಿಗಳ ಚಿಂತನಾಪೂರ್ಣ ಅರ್ಥ ಸ್ಫುರಣೆಗೆ ಅಗತ್ಯವಾಗುವ ಪದ್ಯಗಳಿವೆ. ಓದುವ ಕಾವ್ಯಾಸಕ್ತರಿಗೆ ಕಾವ್ಯಾಸ್ವಾದನೆಯ ಆನಂದವನ್ನು ನೀಡಬಲ್ಲ ಕವಿತ್ವವಿಲ್ಲಿದೆ. "ಇವರ ಎಲ್ಲಾ ಕೃತಿಗಳಲ್ಲಿ ಷಡ್ಬಂಧಗಳ ಚೆಲುವು, ಪದ ಪ್ರಯೋಗ, ಕೌಶಲ ರಸನಿರ್ಮಾಣ ಶಕ್ತಿ, ರಂಗ ನಿರ್ವಹಣಾ ಗುಣ, ಮುಂತಾದ ಸಾಮರ್ಥ್ಯಗಳು ನಿಚ್ಚಳವಾಗಿ ಕಾಣುತ್ತದೆ." ಎಂಬ ವಸಂತ ಭಾರದ್ವಾಜರ ಮಾತು ಸತ್ಯವಾದದ್ದು, ಕನ್ನಡದ ಕಿರುಕಾವ್ಯಗಳ ಸಾಲಿನಲ್ಲಿ ಶ್ರೀಧರರ ಯಕ್ಷಗಾನ ಪ್ರಸಂಗಗಳು ಎದ್ದು ನಿಲ್ಲಬಲ್ಲವು. ಇವುಗಳ ಅಧ್ಯಯನ ಮತ್ತು ಪರಿಶೀಲನೆ ಗಂಭೀರವಾಗಿ ನಡೆಯಬೇಕಾಗಿದೆ.

2020ರ 'ಪಾರ್ತಿಸುಬ್ಬು' ಪ್ರಶಸ್ತಿ ಅವರನ್ನು ಅರಸಿಕೊಂಡು ಬಂದಿದೆ. ಇವರ ರಚನೆಗಳು ದೀರ್ಘಕಾಲ ಉಳಿಯಬಲ್ಲ ಶಕ್ತಿಯನ್ನು ಹೊಂದಿವೆ. ರಂಗದಲ್ಲಿ ಮಾತ್ರವಲ್ಲದೇ ಓದಿನಲ್ಲೂ ಕೂಡ ಕಾವ್ಯಸೌಂದರ್ಯವನ್ನು ಆಸ್ವಾದಿಸಬಹುದಾಗಿದೆ. ಭಾಗವತರಾದವರಿಗೆ ರಾಗವಿಸ್ತಾರಕ್ಕೆ, ಪಾತ್ರಧಾರಿಗೆ ಮೋಹಕ ನರ್ತನಕ್ಕೆ ಮತ್ತು ಆಕರ್ಷಕ ಅಭಿನಯಕ್ಕೆ, ಅರ್ಥಧಾರಿಗೆ ಚಿಂತನಾಪೂರ್ಣವಾದ ಆಶುಮಾತಿನ ಅವಕಾಶಕ್ಕೆ ಇವರ ಪ್ರಸಂಗಗಳು ಎಡೆ ಮಾಡಿ ಕೊಡುತ್ತವೆ. ಇವರ ಪ್ರತಿಪ್ರಸಂಗದಲ್ಲೂ ಒಂದಲ್ಲಾ ಒಂದು ರಸಸ್ಪಂದಿ ಇದ್ದು ಆ ಭಾಗವು ರಂಗದಲ್ಲಿ ಮಿಂಚುವ ಶಕ್ತಿಯನ್ನು ಹೊಂದಿದೆ. ಆ ಮೂಲಕ ಪ್ರೇಕ್ಷಕರ ಮನದಲ್ಲಿ ನಿಚ್ಚಳವಾಗಿ ಉಳಿಯುತ್ತದೆ. ರಸನಿರ್ಮಾಣ ಶಕ್ತಿಯೂ ಶ್ರೀಧರರ ವೈಶಿಷ್ಟ್ಯವಾಗಿದೆ. ಪುರಾಣ ಪ್ರಸಂಗಗಳಲ್ಲಿ ಅನೇಕ ಕಡೆ ಮರುವ್ಯಾಖ್ಯಾನ ನಡೆದಿದ್ದು ಪೌರಾಣಿಕ ಜ್ಞಾನವನ್ನು ಕನ್ನಡಿಗರಿಗೆ ವಿಸ್ತರಿಸುವಲ್ಲಿ ಇವರ ಪಾತ್ರ ಹಿರಿದು. ಈಚೆಗೆ "ಅಸುರ ಗುರು ಶುಕ್ರಾಚಾರ್ಯ" ಎಂಬ ಬೃಹತ್

ಕಾದಂಬರಿಯೊಂದನ್ನು ಇವರು ರಚಿಸಿದ್ದು ಅಪಾರ ಜನಮನ್ನಣೆಗಳಿಸಿದ್ದಾರೆ. ಲಘುಹಾಸ್ಯ ಬರಹಗಳನ್ನು ಹಾಗೂ ಲಲಿತ ಪ್ರಬಂಧಗಳನ್ನು ಬರೆಯುವಲ್ಲೂ ಶ್ರೀಧರರು ಸಿದ್ಧಹಸ್ತರು. ಹೀಗೆ ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿರುವ ಡಿ.ಎಸ್.ಶ್ರೀಧರರು ಯಕ್ಷಕವಿಯಾಗಿಯೇ ಖ್ಯಾತಿಗಳಿಸಿದವರು. ಯುಗಧರ್ಮ ಹಾಗೂ ಕಾಲ ಧರ್ಮಗಳ ಸಮರ್ಪಕ ಮೇಳೈಸುವಲ್ಲಿ ಇವರ ಪ್ರಸಂಗಗಳ ಯಶಸ್ಸು ಅಡಗಿದೆ. ಇದಕ್ಕೆ ಉತ್ತಮ ಉದಾಹರಣೆಯಂತೆ ಶ್ರೀಧರರ 'ಯಾದವ ನಿರ್ಯಾಣ' ಹಾಗೂ 'ಶ್ರೀಕೃಷ್ಣಾಶ್ವಮೇಧ' ಜನಮಾನಸದಲ್ಲಿ ಚಿರಕಾಲ ಉಳಿಯುವಂತಹ ಪಾತ್ರಗಳನ್ನು ಸೃಷ್ಟಿಸಿರುವುದು ಕೂಡ ಇವರ ಹೆಗ್ಗಳಿಕೆಯಾಗಿದೆ. 'ಪಾರ್ತಿಸುಬ್ಬ' ಪ್ರಶಸ್ತಿ ಬಂದಿರುವ ಈ ಸಂದರ್ಭದಲ್ಲಿ ಅವರಿಗೆ ಯಕ್ಷಲೋಕ ಅಭಿನಂದಿಸುತ್ತದೆ. □

ಯಕ್ಷಗಾನದಲ್ಲಿ ಹನುಮದ್ ವಿಕಾಸ

ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ರಾಮಾಯಣಕ್ಕೆ ಹಿರಿದಾದ ಸ್ಥಾನವಿದೆ. ನಡತೆಯಿಂದ ದೇವರಾದ ಮನುಷ್ಯನನ್ನು ಚಿತ್ರಿಸುವುದು ಕವಿಕುಲ ಗುರುವಾದ ವಾಲ್ಮೀಕಿಯ ಉದ್ದೇಶವಾಗಿದ್ದು ಅದು ಶ್ರೀಮದ್ ರಾಮಾಯಣದಲ್ಲಿ ಸಫಲವಾಗಿದೆ. ಈ ಮಣ್ಣಿನ ಸಂಸ್ಕೃತಿಯೊಂದಿಗೆ ಮಿಳಿತವಾದ ರಾಮಕತೆಯ ಹರಹು ಬೆರಗುಗೊಳಿಸುವಂತಹದ್ದು ಕನ್ನಡಿಗರಿಗಂತೂ ರಾಮಾಯಣವು ಬಹುಪ್ರೀತಿಯ, ಅಷ್ಟೇ ಗೌರವದ ಗ್ರಂಥ. ಸಾಕಷ್ಟು ಶ್ರೀರಾಮ ದೇವಾಲಯಗಳಿರುವ ನಮ್ಮ ನಾಡಿನಲ್ಲಿ ಹನುಮಂತನ ಗುಡಿಗಳಿಲ್ಲದ ಗ್ರಾಮಗಳೇ ಇಲ್ಲ. ನಾಡಿನ ಜನಪದ ಕಥನ, ಕವನಗಳಲ್ಲಿ ರಾಮಾಯಣ ಹಾಸುಹೊಕ್ಕಾಗಿದೆ. ಸಾಂಪ್ರದಾಯ ಕ ಕಲೆಯಾದ ಯಕ್ಷಗಾನದಲ್ಲಿ ರಾಮಾಯಣದ ಪಾತ್ರಗಳನ್ನು ಅದರಲ್ಲೂ ಹನುಮಂತನ ಪಾತ್ರ ಹಾಗೂ ಆತನ ಸಾರುವ ಜೀವನ ಮೌಲ್ಯಗಳ ಅನನ್ಯವಾದ ಸ್ಥಾನವನ್ನು ಪಡೆದಿವೆ. ಯಕ್ಷಗಾನದ ಅಸಂಖ್ಯ ಪಾತ್ರಗಳಲ್ಲಿ ಹನುಮಂತನ ಪಾತ್ರ ವಿಶಿಷ್ಟವಾದದ್ದು. ಪ್ರಸಂಗ ಹಾಗೂ ಪ್ರದರ್ಶನಗಳೆರಡರಲ್ಲೂ ವಿಭಿನ್ನವಾಗಿ ಈ ಪಾತ್ರ ಕಾಣಿಸಿಕೊಳ್ಳುತ್ತದೆ. ಹನುಮಂತನ ವೇಷಭೂಷಣ, ಶಿರೋಭೂಷಣ, ಹಾವಭಾವ, ನಿಲ್ಲುವನಿಲುವು, ನಡೆದುಕೊಳ್ಳುವ ರೀತಿ, ಕುಣಿಯುವ ಪರಿ, ಮುಖವರ್ಣಿಕೆ, ಮಾತುಗಾರಿಕೆ ಎಲ್ಲದರಲ್ಲೂ ಪ್ರತ್ಯೇಕತೆಯನ್ನು ಹಾಗೂ ವಿಶಿಷ್ಟತೆಯನ್ನು ಕಾಣಬಹುದು. ರಾಮಾಯಣ ಪ್ರಸಂಗಗಳಲ್ಲಿ ಮಾತ್ರವಲ್ಲದೇ ಮಹಾಭಾರತ, ಭಾಗವತ, ಪೌರಾಣಿಕ, ಕಾಲ್ಪನಿಕ ಪ್ರಸಂಗಗಳಲ್ಲೂ ಹನುಮಂತನ ಪಾತ್ರ ಬಂದಿರುವುದು ವಿಶೇಷ. ಹೀಗಾಗಿಯೇ ಯಕ್ಷಗಾನದ ಅಭಿಮಾನಿಗಳಿಗೆ ಹನುಮಂತ ಚಿರಪರಿಚಿತ ಹಾಗೂ ಪ್ರೀತಿ ಪಾತ್ರ. ಮಕ್ಕಳಿಗಂತೂ ಅಚ್ಚುಮೆಚ್ಚು.

ಯಕ್ಷಗಾನ ರಾಮಾಯಣ ಪ್ರಸಂಗಗಳಲ್ಲಿ ಹನುಮಂತನ ಪಾತ್ರದ ಚಿತ್ರಣ ಮನೋಜ್ಞವಾಗಿ ಬಂದಿದೆ. ಸುಗ್ರೀವನ ಮಂತ್ರಿಯಾಗಿ ರಾಮ ಲಕ್ಷ್ಮಣರನ್ನು ಮೊತ್ತ ಮೊದಲಿಗೇ ನೋಡಿ ಮಾತನಾಡಿಸುವವನು ಅವನೇ. ಪಾರ್ತಿಸುಬ್ಬ

ವಿರಚಿತ "ಪಂಚವಟಿ ವಾಲೀ ಸಂಹಾರ"ದಿಂದ ಮೊದಲಗೊಂಡು "ಶ್ರೀರಾಮ ಪಟ್ಟಾಭಿಷೇಕ" ವರೆಗಿನ ರಾಮಾಯಣ ಪ್ರಸಂಗಗಳಲ್ಲಿ ಒಂದಿಲ್ಲದೊಂದು ರೀತಿಯಲ್ಲಿ ಆತ ಕಾಣಿಸಿಕೊಂಡು ಪ್ರೇಕ್ಷಕರ ಮನಸೂರೆಗೊಳ್ಳುತ್ತಾನೆ. ಪಾರ್ತಿಸುಬ್ಬ ಕವಿಯ ಉಂಗುರ ಸಂಧಿ, ಅಥವಾ ಚೂಡಾಮಣಿ ಪ್ರಸಂಗವು ಹನುಮಂತನ ಯಶೋಗಾಥೆಗಾಗಿಯೇ ಮೀಸಲ್ಪಟ್ಟ ಪ್ರಸಂಗ. ಜಾಂಬವಂತನ ಸೂಚನೆಯಂತೆ ಹನುಮಂತ "ಗಗನಾಂಗಣಕ್ಕೆ ಲಂಘಿಸುವ" ಪರಿ ಲಂಕಿಣಿಯನ್ನು ಕೊಲ್ಲುವಲ್ಲಿನ ಅವನ ಸಾಹಸ, ಅಶೋಕವನದಲ್ಲಿರುವ ಸೀತೆಯನ್ನು ನೋಡಿ ದುಃಖದಿಂದ ಮರುಗುವ ಬಗೆ, ಶ್ರೀರಾಮ ಕೊಟ್ಟ ಉಂಗುರವನ್ನು ಸೀತಾಮಾತೆಗೆ ಕೊಟ್ಟು ಆಕೆಯಿಂದ ಚೂಡಾಮಣಿಯನ್ನು ಪಡೆಯುವವನಾಗಿನ ಧನ್ಯತಾ ಭಾವ, ರಾಕ್ಷಸರನ್ನು ಹಾಗೂ ಅಕ್ಷಕುಮಾರನನ್ನು ಸದೆ ಬಡಿಯುವಾಗಿನ ಶೌರ್ಯ, ರಾವಣನ ಆಸ್ಥಾನದಲ್ಲಿ ಬಾಲಕ್ಕೆ ಬೆಂಕಿ ಹಚ್ಚಿಸಿಕೊಳ್ಳುವಾಗಿನ ಅವನ ಹಾಸ್ಯ, ಲಂಕಾದಹನ ಸಂಧರ್ಭದಲ್ಲಿನ ಅವನ ಚತುರ ಪೂರ್ಣ ಹಾರಾಟ. ಹೀಗೆ ವೈವಿಧ್ಯಮಯ ಭಾವಕೋಶದಲ್ಲಿ ಹನುಮಂತನ ಪಾತ್ರ ಅರಳುತ್ತದೆ. ಒಂದು ದೃಷ್ಟಿಯಿಂದ "ಚೂಡಾಮಣಿ" ಪ್ರಸಂಗದ ಗೆಲುವು ಹನುಮಂತನ ಪಾತ್ರಧಾರಿಯನ್ನು ಅವಲಂಬಿಸಿಕೊಂಡಿರುತ್ತದೆ. ರಾಮಾಯಣದ ಹೃದಯ ಭಾಗವು "ಸುಂದರಕಾಂಡ" ವಾಗಿರುವಂತೆ ಚೂಡಾಮಣಿ ಪ್ರಸಂಗವುಯಕ್ಷಗಾನ ಪ್ರಸಂಗಗಳಲ್ಲಿ ಮುಕುಟ ಸದೃಶವಾಗಿದೆ.

ಯಕ್ಷಗಾನ ಹಟ್ಟಿಯಂಗಡಿ ರಾಮಭಟ್ಟರ ಅತಿಕಾಯ ಕಾಳಗ, ಪರಮೇಶ್ವರ ಕವಿಯ ಕಾಲನೇಮಿ ಕಾಳಗ, ಮಾರಿಮುಖನ ಕಾಳಗದಲ್ಲಿ "ಹನುಮಂತನ" ಸಾಹಸ ವಿಭ್ರಮಗಳು ನಡೆದಿವೆ. ರಾವಣನಿಂದಾಗಿ ಲಕ್ಷ್ಮಣ ಧರೆಗುರುಳಿದಾಗ ಹನುಮಂತನನ್ನು ಸಂಜೀವನಕ್ಕಾಗಿ ದ್ರೋಣ ಪರ್ವತಕ್ಕೆ ಕಳುಹಿಸುತ್ತಾರೆ. ಮಾರ್ಗ ಮಧ್ಯದಲ್ಲಿ ಕಾಲನೇಮಿ ಹಾಗೂ ಹನುಮಂತರ ನಡುವೆ ನಡೆದ ಕಾಳಗದಲ್ಲಿ ಕಾಲನೇಮಿ ಸಾವನ್ನಪ್ಪುತ್ತಾನೆ. ಹನುಮಂತ ಪರ್ವತವನ್ನೇ ಹೊತ್ತು ತರುತ್ತಾನೆ. ಆತ ತಂದ ಸಂಜೀವಿನಿಯಿಂದಾಗಿ ಲಕ್ಷ್ಮಣ ಹಾಗೂ ಉಳಿದ ಕಪಿವೀರರು ಬದುಕುಳಿಯುತ್ತಾರೆ. ಹನುಮ ಹಾಗೂ ರಾವಣರ ನಡುವಿನ ಯುದ್ಧ ಪ್ರಸಂಗದ ನಿರೂಪಣೆಯಲ್ಲಿ ಹಾಸ್ಯದ ಮೊನಚಿದೆ. ರಾವಣ ವಧೆಯ ನಂತರ ಆಂಜನೇಯ ಎಲ್ಲರಿಗಿಂತ ಮೊದಲು ನಂದೀಗ್ರಾಮಕ್ಕೆ ಬರುತ್ತಾನೆ. ಹನುಮಂತನಿಂದಾಗಿ ಭರತನ ಅಗ್ನಿ ಪ್ರವೇಶತಪ್ಪುತ್ತದೆ. "ಶ್ರೀರಾಮಪಟ್ಟಾಭಿಷೇಕ" ದಲ್ಲಿ ಸೀತಾರಾಮರ ಪದತಳದಲ್ಲಿ ಕುಳಿತುಕೊಂಡು ತನ್ನ ಸೇವಾ ಪಾರಮ್ಯವನ್ನು ಮೆರೆಯುತ್ತಾನೆ. ರಾಮಭಕ್ತನಾಗಿ ಸೇವಾ ದುರಂಧರನಾಗಿ ವೀರ ಪರಾಕ್ರಮಿಯಾಗಿ ನಂಬಿಕೆಯ ಭಂಟನಾಗಿ ಯಕ್ಷಗಾನ ರಂಗದ ಹನುಮಂತ ಅಭಿಮಾನಿಗಳ ಹೃದಯದಲ್ಲಿ ಚಿರಸ್ಥಾಯಿಯಾಗಿ ನಿಂತಿದ್ದಾನೆ.

ಇದೇ ರೀತಿ ಹನುಮಂತನ ಪಾತ್ರ ಮಹಾಭಾರತ ಪ್ರಸಂಗಗಳಲ್ಲೂ ವಿಜೃಂಭಿಸಿದೆ. ಸುಭದ್ರಾಕಲ್ಯಾಣ, ರಾಜಸೂಯಾಧ್ವರ, ಸೌಗಂಧಿಕಾಪಹಾರ, ಗಧಾಪರ್ವ ಮುಂತಾದ ಪ್ರಸಂಗಗಳಲ್ಲಿ ಆತನ ವಿಕ್ರಮವನ್ನು ಕಾಣಬಹುದು. ಹಟ್ಟಿಯಂಗಡಿಯ ರಾಮಭಟ್ಟರ ಸುಭದ್ರಾಕಲ್ಯಾಣ ಪ್ರಸಂಗದಲ್ಲಿ ತೀರ್ಥಯಾತ್ರೆಯಲ್ಲಿರುವ ಅರ್ಜುನ ರಾಮಸೇತುವೆ ಇರುವಲ್ಲಿಗೆ ಬರುತ್ತಾನೆ. ಮಲಗಿರುವ ಹನುಂತನನ್ನು ಅರ್ಜುನ ನಂಬದೇ "ಬಡಕಪಿ"ಯೆಂದು ಜರಿಯುತ್ತಾನೆ. ತಾನು ಬಾಣದಿಂದ ಸೇತುವೆ ನಿರ್ಮಿಸಬಲ್ಲೆ ಎಂದ ಅರ್ಜುನನಿಗೆ ಆಂಜನೇಯ ತಾನು ಮುರಿಯುವುದಾಗಿ ಹೇಳುತ್ತಾನೆ. ಇದೇ ಪಂಥಕ್ಕೆ ಕಾರಣವಾಗುತ್ತದೆ. ಪಂಥದ ನಿಯಮದಂತೆ ಸೋತ ಅರ್ಜುನ ಅಗ್ನಿಪ್ರವೇಶಕ್ಕೆ ಸಿದ್ಧನಾಗುತ್ತಾನೆ. ಆಗ ಬ್ರಾಹ್ಮಣನ ವೇಷದಲ್ಲಿ ಕಾಣಿಸಿಕೊಂಡ ಕೃಷ್ಣ ತನ್ನ ಸಾಕ್ಷಿತನದಲ್ಲಿ ಮತ್ತೊಮ್ಮೆ ಪಂದ್ಯವಾಗುವಂತೆ ನೋಡಿಕೊಳ್ಳುತ್ತಾನೆ. ಈ ಬಾರಿ ಹನುಮ ಸೇತುವೆ ಮುರಿಯಲಾರದೇ ಸೋಲುತ್ತಾನೆ. ನಿಯಮದಂತೆಅರ್ಜುನನ ಸೇವಕನಾಗಬೇಕಾಗುತ್ತದೆ. ಇದಕ್ಕಾಗಿ ಪರಿತಪಿಸಿದ ಆಂಜನೇಯನಿಗೆ ಕೃಷ್ಣ ಸಮಾಧಾನ ಮಾಡಿ ತಾನೇ ರಾಮನ ಅವತಾರವೆಂದು ಹೇಳಿ ಅವನಿಗೆ ರಾಮನದರ್ಶನಕೊಟ್ಟು ಹಿಂದಿನ ಜನ್ಮದಲ್ಲಿ ನೀಡಿದ ವಚನವನ್ನುಈಡೇರಿಸುತ್ತಾನೆ. ಕೃಷ್ಣನಕೋರಿಕೆಯಂತೆ ಹನುಮ ಅರ್ಜುನನನ್ನು ಧ್ವಜದಲ್ಲಿ ನೆಲೆಸುತ್ತಾನೆ. ಹೀಗೆ ತ್ರೇತಾಯುಗಕ್ಕೂ ದ್ವಾಪರಯುಗಕ್ಕೂ ನಂಟು ಬೆಳೆಯುತ್ತದೆ. ಈ ಕಥಾ ಭಾಗವು "ತಾಳ ಮದ್ದಲೆ"ಗಳಲ್ಲಿ "ಶರಸೇತು ಬಂಧನ" ಎಂದು ಆಖ್ಯಾನದೊಂದಿಗೆ ಜನಮಾನಸದಲ್ಲಿ ಖ್ಯಾತಿಗೊಂಡಿದೆ. ಇಲ್ಲಿ ಅರ್ಜುನ ಹಾಗೂ ಹನುಮಂತರ ನಡುವಿನ ಸಂವಾದಕ್ಕೆ ವಿವಾದಕ್ಕೆ ವಿಫುಲ ಅವಕಾಶವಿದೆ..

ಅರ್ಜುನ ಹನುಮರು ಮುಖಾಮುಖಿಯಾಗಿರುವಂತೆ ಭೀಮ ಹನುಮರು ಮುಖಾಮುಖಿಯಾಗುವ ಕಥೆ ಇನ್ನೆರಡು ಯಕ್ಷಗಾನ ಪ್ರಸಂಗಗಳಲ್ಲಿ ಬಂದಿದೆ. ಆ ಪ್ರಸಂಗಗಳೆಂದರೆ "ರಾಜಸೂಯಾಧ್ವರ" ಹಾಗೂ ವಾರಂಬಳ್ಳಿ ವೆಂಕಪ್ಪಯ್ಯನ "ಸೌಗಂಧಿಕ ಹರಣ" ರಾಜಸೂಯಯಾಗಕ್ಕೆ ಅಗತ್ಯವಿರುವ ಪುರುಷ ಮೃಗವನ್ನುತರಲು ಭೀಮಸೇನ ಹೇಮಾಚಲದ ಕಡೆಗೆ ತೆರಳುತ್ತಾನೆ. ದಾರಿಯ ಮಧ್ಯೆ ಆಂಜನೇಯನ ಭೇಟಿಯಾಗುತ್ತದೆ. ಮೊದಲಿಗೆ ಭೀಮ ಹನುಮನ ಸಾಮರ್ಥ್ಯವನ್ನು ಕಡೆಗಣಿಸಿ ನಗೆಪಾಟಲಿಗೆ ಗುರಿಯಾಗುತ್ತಾನೆ. ಕೊನೆಯಲ್ಲಿ ಆತನ ಕೃಪೆಗೆ ಪಾತ್ರನಾಗಿ ಪುರುಷ ಮೃಗದ ಓಟವನ್ನು ನಿಯಂತ್ರಿಸಲು ಅಗತ್ಯವಿರುವ ಲಿಂಗ ಸ್ಥಾಪನೆಗೆ ಆಂಜನೇಯನ ರೋಮಗಳನ್ನು ಪಡೆಯುತ್ತಾನೆ. ಪುರುಷಾಮೃಗ ಅಟ್ಟಿಸಿಕೊಂಡು ಬರುವ ಮಾರ್ಗ ಮಧ್ಯದಲ್ಲಿರೋಮದ ಮೂಲಕ ಲಿಂಗವನ್ನು ಸ್ಥಾಪಿಸಿ ಪುರುಷಾಮೃಗ ಅದನ್ನು ಸುತ್ತುತ್ತಾ ಇರುವಷ್ಟರಲ್ಲಿ ತಾನು ಮುಂದೆ

ಮುಂದೆ ಬರುತ್ತಾನೆ. ಕೊನೆಗೂ ಪುರುಷಾಮೃಗಯಾಗ ಶಾಲೆಗೆ ತಲುಪುವಂತೆ ಮಾಡುವಲ್ಲಿ ಯಶಸ್ವಿಯಾಗುತ್ತಾನೆ. ಹನುಮಂತನ ರೋಮದ ಮಹಿಮೆಯನ್ನು ಇಲ್ಲಿ ಕಾಣಬಹುದು. ಮೂಲ ಮಹಾಭಾರತದಲ್ಲಿ ಇಲ್ಲದ ಈ ಕತೆಯನ್ನು ಆಧರಿಸಿ ಕಲ್ಯಾಣಿ ಭೀಮರಾಯರು 'ರಾಜಸೂಯಾ' ಎಂಬ ಹೆಸರಿನಲ್ಲಿ ಹೊಸದಾಗಿ ರಚಿಸಿದ್ದಾರೆ. ಇದೇ ಬಗೆಯಾಗಿ ದ್ರೌಪದಿಗಾಗಿ ಸೌಗಂಧಿಕ ಪುಷ್ಪವನ್ನುತರಲು ಭೀಮಸೇನ ತೆರಳುತ್ತಾ ಮಾರ್ಗ ಮಧ್ಯದಲ್ಲಿ ಯಥಾಪ್ರಕಾರ ಹನುಮನ ಭೇಟಿ, ಕಡೆಗಣನೆ, ಭೀಮನ ಸೋಲು ಕೊನೆಯಲ್ಲಿ ಅಣ್ಣ ಹನುಮಂತನ ಕೃಪೆಯಿಂದರೋಮ ಪ್ರಾಪ್ತಿಇರುತ್ತದೆ. ಪುಷ್ಪವಿರುವ ಸರೋವರವನ್ನು ಕಾಯುವ ಯಕ್ಷಣಿಯರೊಂದಿಗಿನ ಕಾದಾಟದಲ್ಲಿ ರೋಮದ ಮಹಿಮೆಯಿಂದ ಭೀಮ ಗೆಲ್ಲುತ್ತಾನೆ. ಸ್ವತಃ ಸರೋವರದ ಒಡೆಯ ಕುಬೇರನು ಭೀಮನೊಂದಿಗೆ ಯುದ್ಧ ಮಾಡಿ ಆಂಜನೇಯನ ರೋಮದ ಪ್ರಭಾವದಿಂದ ಸೋಲನ್ನೊಪ್ಪುತ್ತಾನೆ. ಕೊನೆಯಲ್ಲಿ ಭೀಮಸೇನ ತಾನು ತಂದ ಪುಷ್ಪವನ್ನು ದ್ರೌಪದಿಗೆ ಮುಡಿಸುವುದರೊಂದಿಗೆ ಪ್ರಸಂಗ ಮುಕ್ತಾಯವಾಗುತ್ತದೆ. ಈ ಕಥೆಯನ್ನೇ ಆಧಾರವಾಗಿಟ್ಟುಕೊಂಡು ಧ್ವಜಪುರ ನಾಗಪ್ಪಯ್ಯ ಹಾಗೂ ಎಂ.ಜಿ.ಬರವಣಿಗಳೆಂಬ ಇಬ್ಬರೂ ಕವಿಗಳು ಪ್ರಸಂಗಗಳನ್ನು ರಚಿಸಿದ್ದಾರೆ. ಈ ಕಥೆಯು ಕೂಡಾ ಮೂಲ ಮಹಾಭಾರತದಲ್ಲಿ ಕಂಡು ಬರುವುದಿಲ್ಲ. ಹನುಂತನ ರೋಮ ಮಹಿಮೆಯನ್ನು ಸಾರುವುದೇ ಪ್ರಸಂಗಕಾರರ ಉದ್ದೇಶ. ಪುರಂದರದಾಸರು ಕೂಡ ತಮ್ಮ ಕೀರ್ತನೆಯಲ್ಲಿ ಹನುಂತನ ರೋಮದ ಮಹಿಮೆಯನ್ನು ಹಾಡಿ ಹೊಗಳಿದ್ದಾರೆ.

ಅರ್ಜುನನ ರಥದ ಧ್ವಜದಲ್ಲಿ ನೆಲೆಸಿರುವ ಆಂಜನೇಯ ಗಧಪರ್ವ ಎಂಬ ಪ್ರಸಂಗದಲ್ಲಿ ರಾಕ್ಷಸರುಗಳೊಂದಿಗೆ ಯುದ್ಧ ಮಾಡಿ ಸಂಹರಿಸಿರುವ ಕಥೆ ವಿನೂತನವಾಗಿ ಯಕ್ಷಗಾನದಲ್ಲಿ ಬಂದಿದೆ. ಅರ್ಜುನನಿಂದ ಹತರಾದ ಸಂಸಪ್ತಕರ ತಂಗಿಯರಾದ ಕಲುಶಲಗಾಮಿನಿ ಮತ್ತು ಜಗಳ ಗ್ರಂಥಿಯರೆಂಬ ರಾಕ್ಷಸರು ಹಾಗೂ ಅಳಿಯ ಕರಂಡಾಸುರ ಅರ್ಜುನನೊಂದಿಗೆ ಹೊರಾಡಲು ಬಂದಾಗ ಹನುಮಂತನೇ ಅವರೆಲ್ಲರನ್ನೂ ತಡೆದು ಕೊಲ್ಲುತ್ತಾನೆ. ಈ ಬಗೆಯ ಹನುಮಂತನ ಸುತ್ತಾ ಇರುವ ನವೀನ ಕಥೆಗಳು ಯಕ್ಷಗಾನದಲ್ಲಿ ಸಾಕಷ್ಟು ಇವೆ. ಭಾಗವತಕ್ಕೆ ಸಂಬಂಧಿಸಿದಂತೆ ಬಂದಿರುವ 'ಮಾರುತಿ ಪ್ರತಾಪ'ದಲ್ಲಿ ಹನುಮನು ಕೃಷ್ಣನ ಕೋರಿಕೆಯಂತೆ ಬಲರಾಮನಲ್ಲಿ ಕಾಳಗ ಕೊಟ್ಟು ಸೋಲಿಸುತ್ತಾನೆ. ಇದೇ ರೀತಿ 'ಗರುಡಗರ್ವ' ಭಂಗ ಪ್ರಸಂಗದಲ್ಲಿ ಹನುಮಂತ ಗರುಡನೊಂದಿಗೆ ಹೋರಾಡಿ ಗೆಲ್ಲುತ್ತಾನೆ. ಹೀಗೆ ಯಕ್ಷಗಾನ ಸಾಹಿತ್ಯದಲ್ಲಿ ನಮ್ಮ ಹನುಮ ಬಹು ಬಲಶಾಲಿಯಾಗಿ ವೀರಪರಾಕ್ರಮಿಯಾಗಿ ಎಲ್ಲರ ಮನ ಗೆದ್ದಿದ್ದಾನೆ. ಕೊರ್ಡೆಲ್ ವೆಂಕಟರಾಯರ

'ರಾಮಾಂಜನೇಯ ಕಾಳಗ'ವು ಕಲ್ಪನೆಯಿಂದ ರಚಿತವಾಗಿದ್ದು ಜನಮನ್ನಣೆ ಗಳಿಸಿದೆ. ಕಡಂದಲೆ ರಾಮರಾಯರು ಇದೇ ಹೆಸರಿನಿಂದ ಪ್ರಸಂಗ ರಚಿಸಿದ್ದು ಕಥಾವಸ್ತುವಿನಲ್ಲಿ ವ್ಯತ್ಯಾಸವಿದೆ. ಎರಡೂ ಪ್ರಸಂಗಗಳಲ್ಲಿ ಹನುಮಂತನ ಅಸಾಧ್ಯ ಶಕ್ತಿಯ ಅನಾವರಣವಾಗುತ್ತದೆ. ರಾಮ ಮತ್ತು ಹನುಮರ ನಡುವೆ ಯುದ್ಧ ನಡೆದು ಯಾರೂ ಸೋಲದೆ, ಯಾರೂ ಗೆಲ್ಲದೇ ಇದ್ದಾಗ ಸಂಧಿ ನಡೆಯುವುದರೊಂದಿಗೆ ಪ್ರಸಂಗ ಮುಕ್ತಾಯವಾಗುತ್ತದೆ.

ಪ್ರಸಂಗಗಳ ಪ್ರದರ್ಶನಗಳಲ್ಲೂ ಹನುಮಂತನ ವೇಷಆಕರ್ಷಕವಾಗಿದ್ದು ಆಬಾಲವೃದ್ಧರ ಗಮನ ಸೆಳೆಯುವಂತಹುದ್ದು. ಈ ವೇಷವನ್ನುಕಟ್ಟಿ ಕೊಳ್ಳುವಾಗ ಬಣ್ಣ ಹಚ್ಚುವಲ್ಲಿ ವಿಶೇಷ ಎಚ್ಚರಿಕೆ ಇರಬೇಕು. ಕಪ್ಪು ಹಾಗೂ ಬಿಳಿ ಸೇರಿಕೊಂಡ ನೀಲಿ ಮೂಲ ಬಣ್ಣವು ಹನುಮಂತನ ಮುಖಕ್ಕೆ ಬೇಕು. ಎರಡೂ ಕಣ್ಣುಗಳ ಸುತ್ತಾ ಬಾಗಿದ ಮೂರು ಸುಳಿಗಳು ಇರುತ್ತವೆ. ಹಣೆಯಲ್ಲಿ ಉದ್ದನಾಮ ಇದ್ದು ತುಟಿಯ ಬಣ್ಣಕಪ್ಪಾಗಿರುತ್ತದೆ. ಕುತ್ತಿಗೆಗೆ ಹಳದಿ ಕೆಂಪು ಬಣ್ಣವನ್ನು ಸವರಿಅಂಟಿಸುತ್ತಾರೆ. ಸೆಣಬಿನಿಂದ ಮಾಡಿದ ನಾರಿನಗಡ್ಡ ಹಾಗೂ ಚೌರಿಯನ್ನು ವೇಷಧಾರಿ ಕಟ್ಟಿಕೊಳ್ಳುತ್ತಾನೆ. ಹಿಂದೆಲ್ಲಾ ಹನುಮಂತನ ಕಿರೀಟ ಪ್ರತ್ಯೇಕವಾಗಿದ್ದು ವೃತ್ತಾಕಾರದಲ್ಲಿ ಇರುತ್ತದೆ. ಮೈಗೆ ದಗಲೆ ಅಂಗಿ ಬಳಸುತ್ತಾರೆ. ಭುಜಕೀರ್ತಿಯ ಬಣ್ಣ ಬಿಳಿ ಇರುತ್ತದೆ. ಹೆಗಲು ಬಳ್ಳಿಯನ್ನು ಹಿಂದಕ್ಕೆಕಟ್ಟಿರುತ್ತಾರೆ. ಸೊಂಟದಲ್ಲಿ ಬಾಲವಿರುತ್ತದೆ. ಹೀಗಾಗಿ ಪ್ರತ್ಯೇಕವಾಗಿಕಾಣಿಸುತ್ತದೆ.

ಸಂಪೂರ್ಣ ಹನುಮಂತನಿಗೆ ಸಂಬಂಧಿಸಿದ ಹೊಸ್ತೋಟ ಮಂಜುನಾಥ ಭಾಗವತರು ಇಪ್ಪತ್ತೇಳು ಪ್ರಸಂಗಗಳ ಗುಚ್ಛವೊಂದನ್ನು 'ಶ್ರೀವೀರಾಂಜನೇಯ ವೈಭವ' ಹೆಸರಿನಲ್ಲಿ ಬರೆದಿದ್ದು ಓಡಿಯೂರು ಸಂಸ್ಥಾನದವರು ಪ್ರಕಟಿಸಿದ್ದಾರೆ. ಈ ಕುರಿತು ವಿವರವಾದ ಲೇಖನವು ಈ ಸಂಕಲನದಲ್ಲಿ ಬಂದಿದೆ. ಓದುಗರು ಇದರ ಮುಂದುವರಿಕೆಯಾಗಿ ಅದನ್ನು ಗಮನಿಸಬಹುದು. 'ಆ ಜಲಧಿಯನು ಜಿಗಿದ ಹನುಮನುದಿಸಿದ ನಾಡು ನಮ್ಮ ಕರ್ನಾಟಕ' ವೆಂಬುದೇ ಆ ಕೃತಿ ರಚನೆಯ ಘೋಷವಾಕ್ಯವಾಗಿದೆ.

ಯಕ್ಷಗಾನ ರಂಗದಲ್ಲಿ ಹನುಮಂತನ ವೇಷವನ್ನು ಧರಿಸಿ ಖ್ಯಾತಿಗೊಂಡ ಹಲವರಿದ್ದಾರೆ. ತೆಂಕುತಿಟ್ಟಿನಲ್ಲಿ ಬಣ್ಣದ ಮಾಲಿಂಗ, ಪದ್ರೆಚಂದ್ರು ಅವರ ವೇಷ ನೋಡಲು ಸೊಗಸು. ಬಡಗಿನಲ್ಲಿ ಹಿಂದೇ ಹನುಮಂತನ ವೇಷದಲ್ಲಿ ಹೆಸರು ಮಾಡಿದವರು ಮಾರ್ವಿ ರಾಮಕೃಷ್ಣ ಹೆಬ್ಬಾರರು. ಅದೇ ರೀತಿ ಉತ್ತರಕನ್ನಡಜಿಲ್ಲೆಯ ಕುಮುಟಾಗೋವಿಂದ ನಾಯಕರು ಕೂಡಾ ಆಂಜನೇಯ ಪಾತ್ರದ ಮೂಲಕ ಮನೆಮಾತಾದವರು. ಈಗ ಅವರ ಪುತ್ರ ಕುಮುಟಾ ಲಕ್ಷ್ಮಣನಾಯಕರು

ಹನುಮಂತನ ಪಾತ್ರ ಧರಿಸುವಲ್ಲಿ ಪ್ರಸಿದ್ಧರಾಗಿದ್ದಾರೆ. ತಾಳಮದ್ದಲೆಯ ಹನುಮಂತನಾಗಿ ರಾಮದಾಸ ಸಾಮಗ, ಪೆರ್ಲ ಕೃಷ್ಣಭಟ್, ತೆಕ್ಕಟ್ಟೆ ಆನಂದ ಮಾಸ್ತರರು ಖ್ಯಾತರಾಗಿದ್ದಾರೆ. ಹೀಗೆ ಯಕ್ಷಗಾನ ರಂಗಭೂಮಿಯಲ್ಲಿ ಹನುಮಂತನ ಪಾತ್ರವು ವೈಶಿಷ್ಟ್ಯ ಪೂರ್ಣವು, ಆಕರ್ಷಿಕವೂ ಆಗಿ ಚಿರಸ್ಥಾಯಿ ಆಗಿದೆ. ಮೂಲ ರಾಮಾಯಣದಲ್ಲಿ ಬಂದಿರುವ ಹನುಮಂತನ ಪಾತ್ರದ ವಿಕಾಸವನ್ನು ಯಕ್ಷಗಾನ ಪ್ರಸಂಗಕವಿಗಳು ಬಹು ಯೋಗ್ಯವಾಗುವಂತೆ ಮಾಡಿದ್ದಾರೆ.

□

ಸೌಭರಿ ಚರಿತಂ (ಪ್ರಸಂಗ ಮತ್ತು ಪ್ರಯೋಗ)

ಜನರ ಬದುಕಿನಲ್ಲಿ ವಾಣಿಜ್ಯೀಕರಣದ ಕದಂಬ ಬಾಹು ಚಾಚಿಕೊಳ್ಳುತ್ತಿದೆ. ಎಲ್ಲಾ ರಂಗಗಳಲ್ಲಿ ವ್ಯವಹಾರದ ಕಥೆಯೇ ಪ್ರಧಾನ ಅಂಶವಾಗುತ್ತಿದೆ. ಈಚಿನ ವ್ಯವಸಾಯೀ ಯಕ್ಷಗಾನ ಪ್ರದರ್ಶನಗಳಲ್ಲಿ ಈ ಅಂಶವೇ ಎದ್ದು ಕಾಣುವಂತಾಗಿದೆ. ಇದಕ್ಕೆ ಅನುಗುಣವಾಗಿ ವರ್ತಮಾನ ಕಾಲದ ಕೆಲವು ಪ್ರಸಂಗಕಾರರು ಜನರನ್ನು ರಂಜಿಸುವಂತಹ ಘಟನೆಗಳಿಗೆ ಒತ್ತು ಕೊಟ್ಟ ಪ್ರಸಂಗಗಳನ್ನು ರಚಿಸುತ್ತಿದ್ದಾರೆ. ಇಂತಹ ಪರಿಸ್ಥಿತಿಯಲ್ಲಿ ವಿಭಿನ್ನವಾಗಿ ಚಿಂತಿಸಿ ವಿನೂತನ ವಸ್ತುವಾದ ಸನ್ಯಾಸ ದೊಡ್ಡದೋ? ಸಂಸಾರ ದೊಡ್ಡದೋ? ಎಂಬ ಚರ್ಚೆಯನ್ನು ಮುಂದಿಟ್ಟುಕೊಂಡು "ಸೌಭರಿ ಚರಿತಂ" ಎಂಬ ಪ್ರಸಂಗವೊಂದನ್ನು ಯುವ ಕವಿ ಕವಿತಾ ಸ್ಫೂರ್ತಿ (ವಿದ್ಯಾಧರ ಹೆಗಡೆ) ಯವರು ರಚಿಸಿದ್ದಾರೆ. ಈ ಪ್ರಸಂಗದ ವಸ್ತು ಆಧುನಿಕ ಕಾಲದ ಯುಗಧರ್ಮದ ಆಶಯಕ್ಕೆ ಬದ್ಧವಾಗಿದೆ. ರಂಜನೆಗಿಂತಲೂ ಧರ್ಮಕ್ಕೆ ಅನಗತ್ಯ ವಿವರಣೆಗಿಂತ ವಸ್ತುನಿಷ್ಠೆಗೆ ವ್ಯಾಪಾರ ದೃಷ್ಟಿಯ ಕಸರತ್ತಿಗಿಂತ ಭಾವಲೋಕದ ವಿಸ್ತಾರಕ್ಕೆ ಇಲ್ಲಿ ಆದ್ಯತೆ ದೊರೆತಿದೆ. ಸರಳವಾದ ಭಾಷೆ ಮನ ಮುಟ್ಟುವ ನಿರೂಪಣೆ, ಸಂಗತವಾದ ದೃಶ್ಯ ಜೋಡಣೆ ವೈವಿಧ್ಯಮಯ ವೇಷಗಾರಿಕೆಗೆ ಅವಕಾಶ ಛಂದೋಬದ್ಧ ಪದ್ಯರಚನೆ ಮುಂತಾದುವು ಇಲ್ಲಿನ ಹೆಚ್ಚುಗಾರಿಕೆಯಾಗಿದೆ.

ಈ ಮೊದಲೇ ತಾಳಮದ್ದಲೆಯಲ್ಲಿ ಪ್ರಯೋಗ ಕಂಡ ಈ ಪ್ರಸಂಗದ ರಂಗ ಪ್ರದರ್ಶನವು ಈಚೆಗೆ ಬೆಂಗಳೂರಿನಲ್ಲಿ ಯಕ್ಷಕಲಾ ಸಾಗರ ತಂಡದ ಕಲಾವಿದರಿಂದ ನೆರವೇರಿತ್ತು. ಹವ್ಯಾಸ ಕಲಾವಿದರೇ ವೇಷಧಾರಿಗಳಾಗಿ ರಂಗದಲ್ಲಿ ಮಿಂಚಿ ಪ್ರಸಂಗವು ಪ್ರದರ್ಶನ ಯೋಗ್ಯವೆಂಬುವುದನ್ನು ಸಾಬೀತು ಪಡಿಸಿದರು.

ಪ್ರಸಂಗವು ದೇವೇಂದ್ರನ ಒಡ್ಡೋಲಗದೊಂದಿಗೆ ಪ್ರಾರಂಭವಾಗುತ್ತದೆ. ಅಲ್ಲಿಗೆ ಬಂದ ಬೃಹಸ್ಪತಿಯು ಸರಿಯಾದ ಗೌರವ ದೊರೆಯಲಿಲ್ಲವೆಂದು ಮುನಿಸಿಕೊಂಡು ಸ್ವರ್ಗಲೋಕ ತ್ಯಜಿಸುತ್ತಾನೆ. ಮುಂದೆ ತ್ರಿಶಿರನೆಂಬ ರಾಕ್ಷಸನಿಗೆ ನಾರದನ ಮೂಲಕ ಈ ವಿಷಯ ತಿಳಿದು ದೇವಲೋಕಕ್ಕೆ ಧಾಳಿಯಿಡುತ್ತಾನೆ. ಯುದ್ಧದಲ್ಲಿ ಇಂದ್ರನಿಗೆ

ಸೋಲಾಗಿ ಬ್ರಹ್ಮಲೋಕಕ್ಕೆ ತೆರಳಿ ಸಹಾಯ ಕೇಳುತ್ತಾನೆ. ಬ್ರಹ್ಮನ ಸೂಚನೆಯಂತೆ ವಿಶ್ವರೂಪನನ್ನು ದೇವಗುರುವಾಗಿ ಮಾಡಿಕೊಳ್ಳುತ್ತಾನೆ. ನಾರಾಯಣ ಕವಚದ ಉಪಾಸನೆಯಿಂದ ಇಂದ್ರನು ವಜ್ರಾಯುಧ ಪಡೆದು ಅದರಿಂದ ತ್ರಿಶಿರನನ್ನು ಸಂಹರಿಸುತ್ತಾನೆ. ಮುಂದೆ ದಧೀಚಿಯಲ್ಲಿ ಇಂದ್ರನು ವಜ್ರಾಯುಧವನ್ನು ಇರಿಸುತ್ತಾನೆ. ಆ ಋಷಿ ವಜ್ರಾಯುಧವನ್ನು ದ್ರವರೂಪಕ್ಕೆ ತಂದು ಕುಡಿಯುತ್ತಾನೆ. ಇದರಿಂದ ಆತನ ಅಸ್ಥಿ ವಜ್ರ ಸದೃಶವಾಗುತ್ತದೆ. ಗುರು ವಿಶ್ವರೂಪನು ಮಾಡುವ ಯಾಗದಲ್ಲಿ ಆತ ರಾಕ್ಷಸ ಪಕ್ಷಪಾತಿ ಎಂಬುವುದನ್ನು ಅರಿತ ಇಂದ್ರ ಅವನನ್ನು ಸಂಹರಿಸುತ್ತಾನೆ. ಇದರಿಂದ ಕೋಪಗೊಂಡ ವಿಶ್ವರೂಪನ ತಂದೆ ತ್ವಷ್ಟಯಾಗ ಮಾಡುತ್ತಾನೆ. ಯಾಗದ ಸಂಕಲ್ಪ ಮಂತ್ರ ತಪ್ಪಾಗಿ ಹೇಳಿ ವೃತ್ರಾಸುರನ ಹುಟ್ಟಿಗೆ ಕಾರಣನಾಗುತ್ತಾನೆ. ದೇವಲೋಕವನ್ನು ಗುರಿಯಾಗಿ ಮಾಡಿಕೊಂಡು ದಾಳಿ ಮಾಡಿದ ವೃತ್ರಾಸುರ ಇಂದ್ರನನ್ನು ಸೋಲಿಸುತ್ತಾನೆ. ಇಂದ್ರ ಮತ್ತೆ ವಿಷ್ಣುವಿನಲ್ಲಿ ಸಹಾಯ ಯಾಚಿಸುತ್ತಾನೆ. ದಧೀಚಿಯ ಅಸ್ಥಿಯಿಂದ ಪುನಃ ವಜ್ರಾಯುಧವನ್ನು ಸೃಷ್ಟಿಸಿ ಅದರಲ್ಲಿ ತನ್ನ ತೇಜವನ್ನು ತುಂಬುವಂತಾಗಿಯೂ ಅದರಿಂದ ವೃತ್ರಾಸುರನನ್ನು ವಧಿಸುವಂತೆ ಸೂಚಿಸುತ್ತಾನೆ. ದೇವೇಂದ್ರನ ಕೋರಿಕೆಯನ್ನು ಮನ್ನಿಸಿದ ದಧೀಚಿ ಯೋಗಮಾರ್ಗದಿಂದ ದೇಹ ತ್ಯಜಿಸುತ್ತಾನೆ. ಅವನ ಅಸ್ಥಿಯಿಂದ ವಜ್ರಾಯುಧ ನಿರ್ಮಾಣವಾಗಿ ವೃತ್ರಾಸುರನ ಸಂಹಾರವಾಗುತ್ತದೆ. ವಜ್ರಾಯುಧದಲ್ಲಿದ್ದ ವಿಷ್ಣುವಿನ ತೇಜಸನ್ನು ಕಣ್ವ ಮಹರ್ಷಿಯಲ್ಲಿಡುವಂತೆ ವಿಷ್ಣು ಸೂಚಿಸುತ್ತಾನೆ. ಮುಂದೆ ಆ ತೇಜಸ್ಸಿನಿಂದ ಕಣ್ವರ ಮಡದಿ ಗರ್ಭವತಿಯಾಗಿ ಪುತ್ರನನ್ನು ಹಡೆಯುತ್ತಾಳೆ. ಆತನಿಗೆ ಸೌಭರಿಯೆಂದು ಹೆಸರಿಸುತ್ತಾರೆ. ಇದು ಪೂರ್ವ ಕಥೆ. ಇದೇ ಒಂದು ಕಿರು ಪ್ರಸಂಗದ ವಸ್ತುವಾಗಬಲ್ಲದು. ಕಾಳಗ ಪ್ರಧಾನವಾದ ಈ ಭಾಗ ಆಟಕ್ಕೆ ಹೇಳಿ ಮಾಡಿಸಿದಂತಿದೆ.

ಈಚೆಗೆ ಬೆಂಗಳೂರಿನ ಯಕ್ಷ ಕಲಾಸಾಗರದವರು ಸೌಭರಿ ಚರಿತದ ಮುಂದಿನ ಆಖ್ಯಾನವನ್ನು ತಮ್ಮ ಪ್ರದರ್ಶನಕ್ಕೆ ಆಯ್ದುಕೊಂಡಿದ್ದರು. ಸೌಭರಿಗೆ ಕಣ್ವ ಮಹರ್ಷಿಗಳು ಉಪದೇಶ ಮಾಡುವುದರೊಂದಿಗೆ ಪ್ರಯೋಗವನ್ನು ಆರಂಭಿಸಿದರು. ಸೌಭರಿಯಾಗಿ ಹಾಸ್ಯಕಲಾವಿದರಲ್ಲಿ ಅತ್ಯಂತ ಪ್ರಸಿದ್ಧರಾಗಿರುವ ಪ್ರದೀಪ ಸಾಮಗರು, ಕಣ್ವರಾಗಿ ಶ್ರೀ ದತ್ತಾತ್ರೇಯ ಭಟ್ಟರು ಅಭಿನಯಿಸಿದ್ದು ಇವರಿಬ್ಬರ ಸಂವಾದ ವಿಚಾರ ಪೂರ್ಣವಾಗಿತ್ತು. ಬದುಕಿನ ಕುರಿತು ಬಣ್ಣಿಸಿಹಾಗೂ ಮನುಷ್ಯನಾಗಿ ಹುಟ್ಟಿರುವವನು ಮಾಡಬೇಕಾದ ಆಧ್ಯಾತ್ಮಿಕ ಸಾಧನೆಗಳ ಬಗ್ಗೆ ವಿವರವಿತ್ತು ಕಣ್ವರ ಉಪದೇಶದಂತೆ ಸೌಭರಿಯು ಯಮುನಾ ತೀರಕ್ಕೆ ತಪಸ್ಸಿಗೆ ತೆರಳುತ್ತಾನೆ. ಮುಂದೆ ಅಯೋಧ್ಯೆಯ ದೊರೆಯಾದ ಮಾಂದಾತನಲ್ಲಿ (ಶ್ರೀ ಗೌರೀಶ ಹೆಗಡೆ ಬೆರಂಕಿ) ಬಂದ ಪ್ರಜೆಗಳು ಭೀಕರ ಬರಗಾಲದ ಪರಿಯನ್ನು ತೋಡಿಕೊಳ್ಳುತ್ತಾರೆ. ನಾರದನ ಆಗಮನವಾಗಿ

ಸೌಭರಿಯ ಮುಖ್ಯ ಋತ್ವಿಜತ್ವದಲ್ಲಿ ಮಳೆ ತರುವಂತಹ ಯಾಗ ಮಾಡುವಂತೆ ಸಲಹೆ ಕೊಡುತ್ತಾನೆ. ಗಜಾನನ ಹೆಗಡೆ ಕಲ್ಲೆಬ್ಬೆಯವರು ನಾರದರಾಗಿ ಆಕರ್ಷಕವಾಗಿ ಕಾಣಿಸಿ ಸೊಗಸಾಗಿ ಮಾತನಾಡಿದರು. ಮಾಂದಾತನು ಸೌಭರಿಯಲ್ಲಿಗೆ ಬಂದು ಆಯೋಧ್ಯೆಗೆ ಬಂದು ಯಾಗ ಮಾಡುವಂತೆ ಕೋರಿಕೊಳ್ಳುತ್ತಾನೆ. ಪ್ರಜಾ ಕೋರಿಕೆಯ ಬವಣೆಗೆ ಕರಗಿ ಮುನಿಯಾದ ಸೌಭರಿ "ಮಾಂದಾತ ಬೇಡ ಚಿಂತೆ, ಸತ್ಕಾರ್ಯಕ್ಕೆ ಬಂದೊದಗುವೆ ಪೇಳ್ದಂತೆ" ಎಂದು ಅಯೋಧ್ಯಗೆ ಬಂದು ಯಾಗ ನೆರವೇರಿಸುತ್ತಾನೆ. ಅಂತೆಯೇ ಮಳೆ ಬರುತ್ತದೆ. ರಾಜ ಕೊಟ್ಟ ದಕ್ಷಿಣೆಯನ್ನು ಅವನಲ್ಲಿಯೇ ನ್ಯಾಸವಾಗಿಟ್ಟು ಬೇಕಾದಾಗ ಬಂದು ಕೇಳಿ ಪಡೆವೆ ಎನ್ನುತ್ತಾನೆ. ಯಮುನೆಯ ದಡದಲ್ಲಿ ಕುಳಿತು ತಪಸ್ಸು ಮಾಡಿದರೆ ಈ ಬಗೆಯ ಭಂಗ ಬರುತ್ತದೆ ಎಂದು ಬಗೆದು ಜಲಸ್ತಂಭನ ವಿದ್ಯೆಯ ಮೂಲಕ ಯಮುನಾ ನದಿಯ ನೀರಿನಲ್ಲೇ ಮುಳುಗಿ ತಪಸ್ಸು ಮಾಡುತ್ತಿರುತ್ತಾನೆ. ಮುಂದಿನ ದೃಶ್ಯದಲ್ಲಿ ನಾಗರಾಜ ಹಾಗೂ ಗರುಡರ ಪ್ರವೇಶವಿದೆ. ಹಿಂದಿನ ಅವರ ದ್ವೇಷದ ಕಥೆ ಇಲ್ಲಿ ಬಿಚ್ಚಿಕೊಳ್ಳುತ್ತದೆ. ಗರುಡರಾಗಿ ಶ್ರೀ ರಾಮಕೃಷ್ಣ ಭಟ್ ಆಳ್ಳಾರೆ ಹಾಗೂ ನಾಗರಾಜನಾಗಿ ಶ್ರೀ ಹರೀಶ್ ಭಟ್ ನೀನಾಸಂ ಅವರು ಅದ್ಭುತವಾದ ಯುದ್ಧದ ಬಿರುಸನ್ನು ಕುಣಿತದ ಮೂಲಕ ರಂಗದಲ್ಲಿ ಸಾಕ್ಷಾತ್ಕರಿಸಿದರು.

ಭಾಗವತರಾದ ಶ್ರೀ ಪ್ರಸನ್ನಕುಮಾರ್ ಹೆಗಡೆ, ಮಾಗೋಡು ಹಾಗೂ ವಿವೇಕ ಹೆಗಡೆ ಮೂರೂರು ಅವರು ಹಾಡಿದ

ಪೂತು ಮಝುರೆ ಮೆಚ್ಚಿಕೊಂಬೆ
ಜಾತಿಯವರ ಕೂಡಿ ವಾತರಶನ ಬಂದೆಯೇನು
ಘಾತಿಸಲಿಕೆಯನ್ನ । ನೀತಿ ಕೊಲುವ ಕಾರ್ಯಕದ್ರು
ಜಾತಯೆನಗೆ ಚೆಲುವ ಮಾತಿನಿಂದ ಪೇಳ್ವೆ ಸಾರು॥

ಎಂಬ ಭಾಗಕ್ಕೆ ಸಮರ್ಪಕವಾಗಿ ನಾರಾಯಣ ಹೆಬ್ಬಾರ್‌ರವರ ಮೃದಂಗ ಅಮೃತ ದೇವ ಶೆಟ್ಟಿನಕೆರೆಯವರ ಚಂಡೆಯಲ್ಲಿ ಪದ್ಯವು ಭಾವೋತ್ಕರ್ಷವಾಗಲು ಸಹಾಯಕವಾಗಿತ್ತು. ಗರುಡನ ಉಪಟಳವನ್ನು ಸಹಿಸಲಸಾಧ್ಯವಾಗಿ ನಾಗಗಳು ನೀರೊಳಗಿದ್ದ ಸೌಭರಿ ಮುನಿಯಲ್ಲಿ ಬಂದು ಅಳಲು ತೋಡಿಕೊಳ್ಳುತ್ತವೆ. ಅವುಗಳ ದುಃಖ ಕಂಡು ಕರಗಿದ ಸೌಭರಿ ಗರುಡನಲ್ಲಿ ಬಂದು ಹಿಂಸೆ ನಿಲ್ಲಿಸುವ ಮಾತನಾಡುತ್ತಾನೆ. ಆಗ ಗರುಡನು ಹೇಳುವ ಬಡ ತಪಸ್ವಿ ಬೇಡ ನಿನಗೆ ಶಪಥವೆನ್ನಲ್ಲಿ ಗಿಡುಗವೆಂಬ ಉಢಾಪೆ ಭಾವ ಸಾಕು ಮನದಲಿ ಎಂಬುದು ಆತನ ಅಹಂಕಾರ ಬಿಂಬಿಸುವಂತೆ ಇಲ್ಲಿನ ಗರುಡ ಹಾಗೂ ಮುನಿಯ ಸಂಭಾಷಣೆ ಚೆನ್ನಾಗಿ ಬಂದಿದೆ.

ಮುಂದೆ ಸೌಭರಿ ತನ್ನ ತಪಸ್ಸಿನ ಶಕ್ತಿಯಿಂದ ನೊಂದವರ ರಕ್ಷಣೆಗೋಸ್ಕರ ಆ ಯಮುನಾ ನದಿಯಲ್ಲಿ ನಾಗಗಳಿಗಾಗಿ ಆಹಿವಾಸವೆನ್ನುವ ಯಾರಿಂದಲೂ ಯಾವ ರೀತಿಯಲ್ಲೂ ತೊಂದರೆಯಾಗದ ವಲಯ ನಿರ್ಮಿಸಿ ಕೊಡುತ್ತಾನೆ. ಹೀಗೆ ಯಮುನಾ ನದಿ ನಾಗಗಳ ಆವಾಸ ಸ್ಥಾನವಾಗುತ್ತದೆ. ಇದೇ ಮುಂದೆ ದ್ವಾಪರದಲ್ಲಿ ವೃಂದಾವನ ಎಂದು ಖ್ಯಾತವಾಯಿತು.

ಭೂ ಲೋಕದಲ್ಲಿ ಸತ್ಕುಲ ಪ್ರಸೂತರ ಸಂಖ್ಯೆ ಕ್ಷೀಣಿಸುವುದನ್ನು ಅರಿತ ಮಹಾ ವಿಷ್ಣು ಸೌಭರಿ ಮುನಿ ಸಂಸಾರವಂತನಾಗಬೇಕೆಂದು ಬಯಸುತ್ತಾನೆ. ಅದಕ್ಕಾಗಿ ಆತ ಸಮ್ಮದನೆಂಬ ಹೆಸರಿನಿಂದ ಮತ್ಸ್ಯಾವತಾರಿಯಾಗಿ ಮತ್ಸ್ಯ ಕನ್ಯೆಯೊಂದಿಗೆ ಬಂದು ನರ್ತನ ಮಾಡುತ್ಥಾನೆ. ಆ ಮೂಲಕ ತಪೋಭಂಗವಾಗಿ ಪ್ರಜೋತ್ಪತ್ತಿಗೆ ಕಾರಣವಾಗಲಿ ಎಂದು ಆಶಿಸುತ್ತಾನೆ. ಇಲ್ಲಿ ಮತ್ಸ್ಯಯನಾಗಿ ಅಗ್ನೇಯ ಕ್ಯಾಸನೂರು ಮತ್ಸ್ಯ ಕನ್ಯೆಯಾಗಿ ಕಾರ್ತಿಕ ಕುಮಾರ ಅಭಿನಯಿಸಿದ್ದು, ಅವರಿಬ್ಬರ ನರ್ತನ ಮನೋಹರವಾಗಿತ್ತು. ಈ ಸಂದರ್ಭದಲ್ಲಿ ಕವಿತಾ ಸ್ಫೂರ್ತಿಯವರು ರಚಿಸಿದ್ದ ಮೋಹನ ರಾಗ ಅಷ್ಟತಾಳದ ಪದ್ಯ ಬಹು ಲವಲವಿಕೆಯಿಂದ ಇದೆ ಈ ಪದ್ಯವು ಕಾವ್ಯ ಸೌಂದರ್ಯದಿಂದ ಕೂಡಿಕೊಂಡಿದೆ. ಈಚೆಗೆ ಹೆಚ್ಚಿನ ಕವಿಗಳು ವನವಿಹಾರ, ಜಲಕ್ರೀಡೆ ಮುಂತಾದ ಅಂಶಗಳನ್ನು ಪ್ರಸಂಗಗಳಲ್ಲಿ ತಂದು ಅವು ಪ್ರದರ್ಶನಗಳಿಗೆ ಬಲವನ್ನು ಕೊಡುತ್ತವೆ. ಪ್ರೇಕ್ಷಕರ ಮನ ತಣಿಸಲು ಇಂತಹ ಪ್ರಯತ್ನಗಳು ಸಹಕಾರಿಯಾಗಿವೆ. ಕವಿತಾ ಸ್ಫೂರ್ತಿಯವರ ಈ ಬಗೆಯ ರಚನೆ ಸ್ವಾಗತಾರ್ಹ.

ಜಲಗಂಧಿನಿ ಬಾರೆ ಭಾಮಾಮಣಿ ನದಿಸಲಿಲದೊಳು ನೀರಾಡಿ

ನಲಿ ನಂದಿನಿ ಚೆಲುವ ಕಾಳಿಂದೆಯ ತಣ್ಣನೆಯ

ತೆರೆಗಳ ಮಿಲನದೊಳೋಲಾಡಿ ತೇಲಾಡಿ ಜಾರುವ।

ಇಡೀ ನೃತ್ಯ ಭಾಗದಲ್ಲಿ ಕಲಾವಿದರರು ತನ್ಮಯರಾಗಿ ನರ್ತಿಸಿರುವಂತೆ ಹಿಮ್ಮೇಳದವರು ರಸ ಒಸರುವಂತೆ ಭಾವಪೂರ್ಣವಾಗಿ ಹಾಡಿದರು.

ಮುಂದೆ ಮೀನ ಮಿಥುನಗಳ ಸಂಭ್ರಮ ನೋಡಿದ ಸೌಭರಿ ಮನಸ್ಸು ಚಂಚಲವಾಗುತ್ತದೆ. ಇಲ್ಲಿ ಸಮ್ಮದ ಸೌಭರಿಯವರು ಸಂವಾದದಲ್ಲಿ ಸಂಸಾರದ ಸಾರವನ್ನು ಕವಿ ಬಹು ಸೊಗಸಾಗಿ ವಿವರಿಸಿದ್ದಾರೆ.

ತುಜಾವಂತು ರಾಗ ಅಷ್ಟತಾಳದಲ್ಲಿ ಬರುವ

ಮುನಿ ಲಾಲಿಸೂದೆನ್ನ ಮಾತ

ಗುಣದೇನು ಶರಣ ಪ್ರಖ್ಯಾತ

ಚತುರಾಶ್ರಮದದಲ್ಲಿ ಗೃಹಸ್ಥ । ಸಮ್ಮತಿಕೆಯ ಧರ್ಮವು ಪ್ರೀತ।

ಗತಿಸದೇ ಮೂರನ್ನು ಸತತ ದೇಹ ಮಥಿಸಲು ಬರಿದೇ ಚತುರ್ಥ॥

ಹಿತದಿ ಸಂಸಾರದಿ ಸತಿ ಪತಿಗಳು ಸೇರಿ ।

ಸುತರ ಪೌತ್ರರ ಸಂತತಿ ಬೆಳೆಸಲು ಮುಕ್ತಿ॥

ಬರಿದೇ ಕಳೆದುಕೊಂಡೇ ನೀನು । ಪರಮ ಸಾರದಿನಗಳನ್ನು

ವರ ಮುನೀಂದ್ರನೆನೆಲು ಕಾಣ್ವನೊರೆದ ಮತ್ಸ್ಯರಾಯನಲ್ಲಿ॥

ಇಲ್ಲಿ ಗೃಹಸ್ಥ ಧರ್ಮದ ಹಿರಿಮೆ ಸಾರಲಾಗಿದೆ. ಸನ್ಯಾಸ ಸಂಸಾರದ ನಡುವಿನ ಅಂತರ ಪಾರಮ್ಯಗಳ ಬಗ್ಗೆ ಜಿಜ್ಞಾಸೆ ಬಂದಿದೆ. ಪ್ರಸಂಗದ ಮೂಲ ಆಶಯ ಇದೇ ಆಗಿದೆ. ಮತ್ಸ್ಯಾವತಾರಿಯ ಸೂಚನೆಯಂತೆ ಸೌಭರಿಯು ಮಾಂದಾತನಲ್ಲಿಗೆ ತೆರಳುತ್ತಾನೆ. ತಾನು ನ್ಯಾಸವಾಗಿರಿಸಿದ ದಕ್ಷಿಣೆಯಾಗಿ ಕನ್ಯಾದಾನವನ್ನು ಕೇಳುತ್ತಾನೆ ಇದರಿಂದ ಗಾಬರಿಗೊಂಡ ಮಾಂದಾತನ ಪತ್ನಿ (ರಾಧಾಕೃಷ್ಣ ಬೆಳೆಯೂರ್) ವಯಸ್ಸಾದ ಮುನಿಗೆ ಮಗಳನ್ನು ಹೇಗೆ ಕೊಡಲಿ ಎಂದು ಕೇಳಿ ಜರಿಯುತ್ತಾಳೆ. ಮಾಂದಾತನ ಮಗಳಾಗಿ ಶ್ರೀ ಸಾಯಿರಾಮ್ ಪಾತ್ರವನ್ನು ವಹಿಸಿದ್ದು ಬಳುಕಿನ ನಡೆಯಲ್ಲಿ ಸ್ವಯಂವರ ಮಂಟಪಕ್ಕೆ ಪ್ರವೇಶಿಸುವುದು ಚೆನ್ನಾಗಿ ಬಂದಿದೆ. ಪರಿಸ್ಥಿತಿಯನ್ನು ಅರಿತ ಸೌಭರಿ ತಪೋಬಲದಿಂದ ಯುವಕ ಮುನಿಯಾಗಿ ಮಾರ್ಪಡುತ್ತಾನೆ. ಆಕೆ ಮಾತ್ರವಲ್ಲಾ ಉಳಿದ ಮಕ್ಕಳೂ ಸೇರಿ ಐವತ್ತು ಮಂದಿ ಮಾಂದಾತನ ಹೆಣ್ಣು ಮಕ್ಕಳು ಸ್ವಯಂವರದ ಮೂಲಕ ಅವನನ್ನು ವಿವಾಹವಾಗುತ್ತಾರೆ. ವಿಶ್ವಕರ್ಮನ ಸಹಾಯದಿಂದ ಸೌಭರಿ ನೂತನ ಭವನವನ್ನು ನಿರ್ಮಿಸಿಕೊಂಡು ಸುಖವಾಗಿರುತ್ತಾನೆ. ಆತನಿಗೆ ಐನೂರು ಮಕ್ಕಳು ಜನಿಸುತ್ತಾನೆ. ಮಾಂದಾತ ಮುಂದೆ ಸೌಭರಿಯಲ್ಲಿಗೇ ಬಂದು ಅವನ ಸುಖ ಜೀವನ ನೋಡಿ ಸಂತೋಷ ಪಡುತ್ತಾನೆ. ಋಷಿಯು ರಾಜನಿಗೆ ಸಾಂಸಾರಿಕ ಧರ್ಮದ ಹಿರಿಮೆಯ ಬಗ್ಗೆ ಬೋಧಿಸುತ್ಥಾನೆ. ಬ್ರಹ್ಮ ತೇಜಸ್ಸಿಗೆ ಸಮವಾದದ್ದು ಯಾವುದೂ ಇಲ್ಲ ಎಂಬ ಮಂಗಳದೊಂದಿಗೆ ಪ್ರಸಂಗ ಮುಕ್ತಾಯವಾಗುತ್ತದೆ. ಇಲ್ಲಿ ಕವಿ ಅಮೂರ್ತವಾದ ಅಂಶವನ್ನು ಮೂರ್ತತ್ವದೆಡೆಗೆ ಕೊಂಡೊಯ್ಯುತ್ತಾರೆ.

ಕವಿತಾ ಸ್ಫೂರ್ತಿಗಳವರು ಈ ವಿಭಿನ್ನ ವಸ್ತುವನ್ನು ಪ್ರಸಂಗವಾಗಿ ರೂಪಿಸುವಲ್ಲಿ ಬಹಳಷ್ಟು ಚಿಂತನ ಮಂಥನ ನಡೆಸಿದ್ದಾರೆ. ಸುಂದರ ಯಕ್ಷ ಕಾವ್ಯವಾಗಿರುವ ಈ ಪ್ರಸಂಗದಲ್ಲಿ ಸಾಕಷ್ಟು ಆಧ್ಯಾತ್ಮಿಕ ವಿಚಾರಗಳನ್ನು ತುಂಬಿಸಿದ್ದಾರೆ. ಬೆಂಗಳೂರಿನಲ್ಲಿ ನಡೆದ ಯಕ್ಷಗಾನ ಪ್ರದರ್ಶನವು ಶ್ರೀಎ.ಎನ್.ಹೆಗಡೆ ಹೆಗಡೆಮನೆ ಕಡತೋಕ ಇವರ ವಿನೂತನ ಬಗೆಯ ಜನ್ಮ ದಿನಾಚರಣೆಗಾಗಿ ಅವರ ಪ್ರೀತಿ ಪಾತ್ರರು, ಅಭಿಮಾನಿ ಬಳಗದವರು ಆಯೋಜಿಸಿದರು. ಹೀಗೆ ಜನ್ಮದಿನದ ಅದರಲ್ಲೂ ಯಕ್ಷಗಾನ ಅಭಿಮಾನಿಯೊಬ್ಬರ ಹುಟ್ಟುಹಬ್ಬದ ಸಂಭ್ರಮ ಆಚರಣೆಗಾಗಿ ಯಕ್ಷಗಾನ ಪ್ರದರ್ಶನವನ್ನು ಬಳುವಳಿಯಾಗಿ ನೀಡುವುದು ವಿಶೇಷವೇ

ಸರಿ. ಅಂದಿನ ಪ್ರದರ್ಶನದಲ್ಲಿ ಪಾಲ್ಗೊಂಡ ಎಲ್ಲಾ ಕಲಾವಿದರು ಬಹಳಷ್ಟು ಪೂರ್ವ ತಯಾರಿಯೊಂದಿಗೆ ಕಲಾನಿಷ್ಠೆಯೊಂದಿಗೆ ಭಾಗವಹಿಸಿ ಪ್ರೇಕ್ಷಕರ ಮೆಚ್ಚುಗೆಯನ್ನು ಪಡೆದರು. ಈ ಪ್ರಸಂಗ ತಾಳಮದ್ದಲೆಗೆ ಹಾಗೂ ಪ್ರದರ್ಶನಕ್ಕೆ ಯೋಗ್ಯವೆಂಬುವುದನ್ನು ತೋರಿಸಿಕೊಟ್ಟು ಧನ್ಯರಾದರು. ಯಕ್ಷಗಾನದ ಯುವ ಕವಿಗಳಾದ ಕವಿತಾ ಸ್ಫೂರ್ತಿಯವರು ಪುರಾಣದ ಎಳೆಯೊಂದನ್ನು ಆಯ್ದುಕೊಂಡು ಯಕ್ಷಗಾನಕ್ಕೆ ಯೋಗ್ಯವಾಗುವಂತೆ ಪುನಾರಚಿಸಿದ್ದಾರೆ. ರಂಗಸ್ಥಳದಲ್ಲಿ ಮಿಂಚಲು ಅಗತ್ಯವಾಗುವಂತಹ ಸನ್ನಿವೇಶಗಳನ್ನು ಪ್ರಸಂಗದಲ್ಲಿ ನಿರ್ಣಯಿಸಿ ಕೊಟ್ಟಿದ್ದಾರೆ. ಎಲ್ಲಕ್ಕಿಂತ ಮುಖ್ಯವಾಗಿ ಪ್ರಸಂಗವು ಸಾಹಿತ್ಯಕವಾಗಿಯೂ ಶ್ರೀಮಂತವಾಗಿರುವಂತೆ ನೋಡಿಕೊಂಡಿದ್ದಾರೆ. ಅವರ ಕಾವ್ಯ ಪ್ರತಿಭೆ ಪ್ರಸಂಗಕ್ಕೂ ಒಸರಿ ಇದೊಂದು ಉತ್ತಮ ಯಕ್ಷಕಾವ್ಯವಾಗುವಂತೆ ನೋಡಿಕೊಂಡಿದ್ದಾರೆ.

□

ವೈಭವದ ವೀರಾಂಜನೇಯ ವೈಭವ

ಯಕ್ಷಗಾನ ಪ್ರಸಂಗ ಸಾಹಿತ್ಯದಲ್ಲಿ ಸರಣಿ ಪ್ರಸಂಗಗಳ ಬಗೆಯನ್ನು ಹುಟ್ಟು ಹಾಕಿದವರಲ್ಲಿ ಹೊಸ್ತೋಟರು ಮೊದಲಿಗರು. ರಾಮಾಯಣ, ಮಹಾಭಾರತ, ಭಾಗವತದ ವಸ್ತುವನ್ನು ಆಧಾರವಾಗಿಟ್ಟುಕೊಂಡು ಕ್ರಮವಾಗಿ 19,50,20 ಪ್ರಸಂಗಗಳನ್ನು ರಚಿಸಿರುವುದೇ ಅಲ್ಲದೆ ಶ್ರೀರಾಮಕೃಷ್ಣ ಪರಮಹಂಸರ ಜೀವನವನ್ನು ಆಧರಿಸಿ 27 ಪ್ರಸಂಗಗಳನ್ನು, ಗೋವಿಗೆ ಸಂಬಂಧಿಸಿದಂತೆ ಇರುವ ಕಥೆಗಳನ್ನೆಲ್ಲಾ ಆಧರಿಸಿ 33 ಪ್ರಸಂಗಗಳನ್ನು ರಚಿಸಿದ್ದಾರೆ. ಇದೀಗ ಹನುಮಂತನ ಕುರಿತಾಗಿರುವ ಆಖ್ಯಾನಗಳನ್ನು ಆಧರಿಸಿ ಬರೆದಿರುವ 27 ಸರಣಿ ಪ್ರಸಂಗಗಳ ಗುಚ್ಛ 'ವೀರಾಂಜನೇಯವೈಭವ' (ಸಮಗ್ರಹನುಮಾಯನ) ಹಲವು ರೀತಿಯಿಂದ ವೈಶಿಷ್ಟ್ಯಪೂರ್ಣವಾಗಿದೆ. ತೆಂಕು-ಬಡಗಿನ ಸುಮಾರು 30ರಷ್ಟು ಆಂಜನೇಯನ ಯಕ್ಷಗಾನೀಯ ಭಾವಚಿತ್ರಗಳು ಕೃತಿಯ ಅಂದವನ್ನು ಹೆಚ್ಚಿಸಿವೆ. ಅಲ್ಲದೆ, ಪ್ರತೀ ಪ್ರಸಂಗದ ಮೊದಲು ಛಾಪಿಸಿದ "ಆ ಜಲಧಿಯನು ಜಿಗಿದ ಹನುಮನುದಿಸಿದ ನಾಡು ನಮ್ಮೀ ಕರ್ನಾಟಕ"ವೆಂಬ ಘೋಷವಾಕ್ಯವು ಹನುಮನು ನಮ್ಮ ಕರ್ನಾಟಕದವನೆಂಬ ಮಾತನ್ನು ಅಡಿಗಡಿಗೆ ನೆನಪಿಸುತ್ತದೆ.

ಯಕ್ಷಗಾನದಲ್ಲಿ ಪೌರಾಣಿಕ ವಿಚಾರಗಳು ಬಂದರೂ ಯುಗ ಧರ್ಮವನ್ನು ನಮ್ಮ ಕವಿಗಳು ಮರೆತಿಲ್ಲ. ಅನೇಕ ಯಕ್ಷಗಾನ ಕವಿಗಳು ಸೂಚ್ಯವಾಗಿ ತಾವು ಬದುಕಿ ಬಾಳಿದ ಕಾಲದ ಪ್ರಜ್ಞೆಯನ್ನು ಪ್ರಸಂಗಗಳಲ್ಲಿ ತಂದಿರುವುದುಂಟು. ಸಮಕಾಲೀನತೆ ಪರೋಕ್ಷವಾಗಿ ಬಂದಾಗಲೇ ಪ್ರಸಂಗ ಜೀವಂತವಾಗುತ್ತದೆ. ಪ್ರೇಕ್ಷಕರ ಹೃದಯವನ್ನು ತಟ್ಟುತ್ತದೆ. ಹೊಸ್ತೋಟ ಮಂಜುನಾಥ ಭಾಗವತರು ತಮ್ಮ ಪ್ರಸಂಗಗಳಲ್ಲಿ ಸಮಕಾಲೀನ ಆಶಯವನ್ನು ತಂದವರು. ಮೊದಲ ಪ್ರಸಂಗವಾದ ರಂಗವಲ್ಲಿ ವೃಕ್ಷ ಮಹಿಮೆಯಲ್ಲಿ ನಾರದನಾಡುವ ಯುದ್ಧದ ಭೀಕರತೆಯ ಕುರಿತಾಡುವ ಮಾತುಗಳು ಇಂತಿವೆ –

"ಧುರವೊಂದೆ ಪರಿಹಾರವಲ್ಲವು ನೃಪತಿ।
ಪರಿಣಾಮ ತಿಳಿದು ವರ್ತಿಸುವುದು ಯುಕುತಿ॥
ತುರಗಮೇಧವು ಸಾಂಗವಾಗಲಿಯೆಂದು।
ನೆರವಿತ್ತು ಸಹಕರಿಸಯ್ಯ ನೀನಿಂದು॥
ಸಾವುನೋವುಗಳ ಸಂತೆಯು ಯುದ್ಧವೆಂದು।
ನೀವು ಯೋಚಿಸಿ ಸಾಮರಸ್ಯದೊಳಿಂದು।
ಈವರೆಗಾದುದ ಮರೆತು ಒಂದಾಗಿ।
ಈವಿಶ್ವ ವಿಶ್ವಾಸಕೊದಗಿ ಚನ್ನಾಗಿ॥" (ಪುಟ77)

ಇಂದಿನ ಕಾಲಮಾನಕ್ಕೆ ಅನ್ವಯಿಸುವಂತೆ ನಾರದನಾಡುವ ಮಾತುಗಳು ಅರ್ಥಪೂರ್ಣ. ಇದೇ ರೀತಿ ಹೆಣ್ಣು ಹೆತ್ತವರ ಗೋಳನ್ನೂ 'ಅಂಜನಾವಿವಾಹ' ಪ್ರಸಂಗದ ಕುಂಜರನಾಡುವ ಮಾತುಗಳಲ್ಲಿ ಹೀಗೆ ತಿಳಿಸುತ್ತಾರೆ –

ಹೆಣ್ಣು ಮಕ್ಕಳು ಬೆಳೆಯೆ
ಹುಣ್ಣು ಒಡಲೊಳಗಹುದು।
ಇನ್ನವಳು ಪ್ರಾಯವತಿ ಪರಕೀಯಳಹಳು॥
ಚನ್ನಾದವರನನರಸುವ ಹೊಣೆಯುಹೆಗಲೇರಿ।
ಖಿನ್ನನಾಗಿರುವೆ ಮನದೊಳಗೆ ನಾನಿಂದು॥ (ಪುಟ84)

ಹೆಣ್ಣು ಮಕ್ಕಳು ಬೆಳೆದು ನಿಂತಾಗ ತಂದೆತಾಯಿಗಳ ಮನಸ್ಥಿತಿ ಹೇಗಿರುತ್ತದೆ ಎಂಬುದನ್ನು ಈ ಪದ್ಯ ಬಿಂಬಿಸುತ್ತದೆ.

ಯಕ್ಷಗಾನ ಪ್ರಸಂಗ ಸಾಹಿತ್ಯದಲ್ಲಿ ವಿಧಿ, ಹಣೆಬರಹಗಳ ಬಗ್ಗೆ ಬರುವ ಮಾತುಗಳಿಂತೂ ಬರವೇ ಇಲ್ಲ. ಎಲ್ಲ ಕವಿಗಳು ಒಂದಿಲ್ಲೊಂದು ರೀತಿಯಿಂದ ಈ ವಿಚಾರವನ್ನು ತಂದಿದ್ದಾರೆ. ಮಂಜುನಾಥ ಭಾಗವತರೂ ಈ ಪ್ರಸಂಗ ಗುಚ್ಛಗಳಲ್ಲಿ ಸಾಕಷ್ಟು ಕಡೆಯಲ್ಲಿ ಈ ವಿಚಾರವನ್ನು ತರುತ್ತಾರೆ. ಮನೆಯಿಲ್ಲದೆ, ಮನದನ್ನೆ ಇಲ್ಲದೆ ನರಕ ಯಾತನೆ ಅನುಭವಿಸುತ್ತಿರುವ ಸುಗ್ರೀವನನ್ನು ಹನುಮಂತ ಸಂತೈಸುವ ಪರಿ ಈ ರೀತಿ ಇದೆ.

ಲಾಲಿಸು ಸೂರ್ಯನಂದನ। ಬಾಳಿದು ವಿಧಿಯ।
ಲೀಲೆಯೆನ್ನುವ ಹದನ। ನೀನರಿಯೋ ಜಾಣ॥
ಕಾಲವನು ಓಲೈಸಿ ಬದುಕುತ। ಸಾಲಿನಲಿ ಬಹಕಷ್ಟ ಸುಖಗಳ।
ಪಾಲಿಗೊದಗಿದ ತುತ್ತೆನುತಭವ। ಜಾಲದಲಿನು
ಸುಳುವುದು ಸಂತತ॥ (ಪುಟ124)

ಇದೇ ರೀತಿ ವಾಲಿಯುತಾರೆಗೆ ಹೇಳುವ ಮಾತು ಹೀಗಿದೆ –

"ಕಾಲಗತಿಯ ಮೀರಿ ಬಾಳ್ವರ್‍ಯಾರಿಲ್ಲ । ಪಾಲಗಡಲಿನ ವಾಸ ಮಾನವ।
ಮೇಳದಲಿ ತಾನಟಿಸುತರ್ಪನು ॥" (ಪುಟ140)

ಅದೇ ರೀತಿ ಮುಂದೆ ಸುಗ್ರೀವನಿಗೂ ಅದನ್ನೇ ಹೇಳುತ್ತಾನೆ–

"ಕಾಲಗತಿಯ ಮೀರಲು । ಶ್ರೀಹರಿವಿಧಿ ।
ಶೂಲಿಯರಿಂದಾಗದು॥" (ಪುಟ149)

ಇನ್ನೊಂದೆಡೆ ಹನುಮಂತನೂ ತಾರೆಗೆ ಇದನ್ನೇ ಹೇಳುತ್ತಾನೆ –

"ಈ ನಶ್ವರದ ಬಾಳು ನೀರ ಮೇಲಣ ಗುಳ್ಳೆ।
ಕಾಣದಾರಿಗು ವಿಧಿ ಲಿಖಿತ ॥" (ಪುಟ143)

ಈ ಬಗೆಯ ನಂಬಿಕೆ, ಭಾರತೀಯ ಪರಂಪರೆಯಲ್ಲಿ ಸೇರಿಹೋಗಿದೆ. ಅದನ್ನೇ ಕವಿ ಬೇರೆಬೇರೆ ಕಡೆ ಪಾತ್ರಗಳ ಮೂಲಕ ಹೇಳಿಸಿ ಜನತೆ ತಮ್ಮ ಬಾಳಿನ ಕಷ್ಟಗಳನ್ನು ಚಿಂತೆಗಳನ್ನು ವಿಧಿಯ ಫಲ ಎಂದು ತಿಳಿದು ಸ್ವಲ್ಪವಾದರೂ ಸಮಾಧಾನದಿಂದ ಬದುಕಲು ಸಾಧ್ಯ.

ಸರಮೆ ಹೇಳುವ "ಕರ್ತವ್ಯವದು ಜೀವರಕ್ಷಣೆ ಮನುಜರ್ಗೆ।
ಅತ್ಯಂತ ಸಹನೆ ಬಾಳಿನ ತಿರುಳಾಗಿದೆ" (ಪುಟ160)

ಎಂಬುದು ಕೂಡ ಬದುಕಿನ ಕುರಿತಾದ ಸಾರ್ಥಕ ವ್ಯಾಖ್ಯಾನವಾಗಿದೆ.

ಹೊಸ್ತೋಟರು ಉತ್ತಮ ವರ್ಣನೆ ಉಳ್ಳಪದ್ಯಗಳನ್ನು ಈ ಪ್ರಸಂಗಗಳಲ್ಲಿ ತಂದಿದ್ದಾರೆ. ಅವರ ಕವಿತಾ ಶಕ್ತಿಯ ಮೆರುಗನ್ನು ಸ್ವಭಾವೋಕ್ತಿಯ ವರ್ಣನೆಗಳಲ್ಲಿ ಕಾಣಬಹುದು. ವನವಿಹಾರದ ಪರಿಯನ್ನು ಭಾಗವತರು ಹೀಗೆ ವರ್ಣಿಸುತ್ತಾರೆ –

ಸುಮಲತೆಗಳ ಸೊಬಗಿನಲ್ಲಿ । ಭ್ರಮರಗಾನಮೊಳಗಿದೆ ॥
ವಿಮಲಜಲದ ಸರಸಿಯಲ್ಲಿ ಹಂಸಯಾನ ಸಾಗಿದೆ ॥
ಸುಮ ಪರಾಗ ಪರಿಸರದಲಿ ಆ ಕೋಗಿಲೆಯಾಗಾಯನ ।
ಕಮನೀಯತೆಯ ಬಯಲಿನಲ್ಲಿ ನವಿಲಿನ ನರ್ತನ ॥
ಸುಮನೋಹರ ವನವಿಹಾರ ।
ಮಮ ಮನಕಾನಂದ ಸಾರ ॥ (ಪುಟ82)

ಮುಂದೆ ಇನ್ನೊಂದೆಡೆ ಉದಯಕಾಲದ ವಾತಾವರಣವನ್ನು ಸಹಜ ಸುಂದರವಾಗಿ ಹೀಗೆ ಚಿತ್ರಿಸುತ್ತಾರೆ.

ಮುಂಜಾವಿನಾ ವೇಳೆ ಬಾನು ಬಹುರಂಗೇರೆ ।
ರಂಜಿಸುವ ಬಣ್ಣಗಳ ಆ ರಂಗವಲ್ಲಿ ॥
ಅಂಜನಾಸುತನ ಮನಕದುಸೇರೆ ಸಂಭ್ರಮದಿ ।
ಮಂಜುಗಾಳಿಯ ಸ್ಪರ್ಶದಲಿ ॥
ಉದಯರಾಗದ ಸೊಗಕೆ ನಲಿನಲಿದು ಕುಣಿಕುಣಿದು।
ಬದಲಿಸುತ ವೃಕ್ಷಗಳ ನೆಗೆದು ಹಾರುತ್ತ॥
ಬಿದಿರ ರಂಧ್ರದಿ ಸುಳಿವ ಮರುತ ಮಂಜುಳಗಾನ।
ಮಧುರ ಕಲರವದ ಚಿಲಿಪಿಲಿ ಗಾನ ಕೇಳೀ ॥ (ಪುಟ102)

ಇಲ್ಲಿ ಬರುವ ಪದಪುಂಜಗಳ ಸೊಗಸನ್ನು ಕವಿಹೃದಯ ಉಳ್ಳವನು ಮಾತ್ರ ಬರೆಯಬಲ್ಲ. ಇದೇ ರೀತಿ ಇನ್ನೊಂದೆಡೆ ಸರಾಗವಾಗಿ ಬರುವ ಪದಗಳನ್ನು ನೋಡಿ :

ಅಂಗದ: ಹನಿಯುದುರುತಲಿದೆ ತನುವನು ಸೋಂಕಿತು ।
ಘನಮಳೆ ಬರಬಹುದು । ತಣಿವು ದೊರೆಯಬಹುದು
ಘನಬಿಸಿಲಿನ ಝಳ । ನೀಗಲು ಮುಂದೆ ಸಾಗಲು ।
ಅಣಿಯಾಗಲು ಅನುಕೂಲವೆ ಆಯಿತು ॥
ಜಾಂಬವ: ಹಾರುತಲಿವೆ ಹಕ್ಕಿಗಳೀ ನೆಲೆಯಲಿ।
ತೋರುತಲಿದೆ ಗುಹೆಯು ಅಲ್ಲಿ । ಸರೋವರವಿರಬಹುದು॥
ನೀರಿಗಿಳಿದ ಖಗ ಹೀರುತ ತೇಲಿ ಹಾರುತ ಮೇಲೆ ।
ಏರುತ ಗರಿಗಳ ಬೀಸುತಲಿರುವವು ॥ (ಪುಟ150)

ಇದನ್ನೇ ಪ್ರೊ.ಎಂ.ಎ.ಹೆಗಡೆಯವರು ಹೊಸ್ತೋಟರ ಸಾಲುಗಳಲ್ಲಿ ಶಬ್ದಾರ್ಥಗಳ ಸಾಂಗತ್ಯವಿದೆ ಎಂದು ಹೇಳಿ, ಅದೇ ಉತ್ತಮ ಸಾಹಿತ್ಯ ಎಂದು ಹೇಳಿರುವುದು. ಈ ಬಗ್ಗೆ ಆ ಅಸಂಖ್ಯ ಉದಾಹರಣೆಗಳನ್ನು ಈ ಯಕ್ಷಗಾನ 'ವೀರಾಂಜನೇಯವೈಭವ' ದಿಂದ ಆರಿಸಿ ಕೊಡಬಹುದು.

ಪ್ರಸಂಗಗಳು ದೃಶ್ಯಕಾವ್ಯವಾದ್ದರಿಂದ ಕವಿ ಸಂಭಾಷಣೆಗೆ, ವಾದ-ಸಂವಾದಕ್ಕೆ ಆಧಾರವಾಗಬಲ್ಲ ಪದ್ಯಗಳನ್ನು ರಚಿಸಬೇಕಾಗುತ್ತದೆ. ಮಂಜುನಾಥ ಭಾಗವತರು

ತಾಳಮದ್ದಲೆಗೆ ಹಾಗೂ ರಂಗಸ್ಥಳಕ್ಕೆ ಎರಡಕ್ಕೂ ಅನುವಾಗಬಲ್ಲ ಇಂತಹ ಸಂಭಾಷಣೆಗೆ ಅಗತ್ಯವಾದ ಪದ್ಯಗಳನ್ನು ಇಲ್ಲಿನ ಪ್ರಸಂಗಗಳಲ್ಲಿ ತಂದಿದ್ದಾರೆ.

'ಕಿಷ್ಕಿಂದಾ ಸಾಮ್ರಾಜ್ಯ'ದಲ್ಲಿ ಸುಗ್ರೀವ-ಸುಷೇಣ

-ಹನುಮಂತರ ಸಂಭಾಷಣೆ (ಪುಟ 109)

'ಸಮುದ್ರೋಲ್ಲಂಘನ'ದಲ್ಲಿ ಪ್ರಹಸ್ತ-ಹನುಮ

-ರಾವಣರ ನಡುವಿನ ಮಾತುಕತೆ (ಪುಟ 165)

'ವಿಭೀಷಣ ಲಂಕಾ ತ್ಯಾಗ' ಪ್ರಸಂಗದಲ್ಲಿನ

ರಾವಣ-ವಿಭೀಷಣ-ಇಂದ್ರಜಿತು ನಡುವಿನ ವಾದ-ವಿವಾದ (ಪುಟ 171)

'ಮಹಾಸೇತುಬಂಧ'ದ ಹನುಮ-ಗೋವರ್ಧನ-ರಾಮರ

ನಡುವಿನ ಸಂಭಾಷಣೆಗಳೆಲ್ಲವೂ (ಪುಟ 178)

ಉತ್ತಮವಾದಕ್ಕೆ ಭೂಮಿಕೆಯನ್ನು ಒದಗಿಸುತ್ತವೆ. ಇಲ್ಲೆಲ್ಲ ಅರ್ಥಧಾರಿಗಳಿಗೆ ಅರ್ಥಗಾರಿಕೆಯನ್ನು ಬೆಳೆಸಲು ಬೇಕಾಗುವ ಹೊಸ ಅಂಶಗಳು ಕೂಡ ಬಂದಿವೆ.

ಈ 'ವೀರಾಂಜನೇಯ ವೈಭವ' ದ ರಚನೆಯ ಹಿಂದೆ ಅಂತಹ ಒಂದು ವಿಸ್ಮಯವಿದೆ. ಹನುಮನ ಬಗ್ಗೆ ಅಪಾರ ಕುತೂಹಲ, ಭಕ್ತಿ, ಒಲವು, ಬೆರಗುವುಳ್ಳ ರಾಜಗೋಪಾಲ ಕನ್ಯಾನರಿಗೆ ಉಂಟಾದ ಪ್ರೇರಣೆಯೇ ಈ ಕೃತಿ ರಚನೆಯ ಹಿನ್ನೆಲೆ. 'ಹನುಮದ್ ವಿಕಾಸಕ್ಕೆ ಎಲ್ಲೆ ಇಲ್ಲ' ಎಂಬಂತೆ ಬೀಜವಾಗಿ ಮೊಳೆತ ಇವರ ಹಂಬಲ, ಒಡಿಯೂರು ಶ್ರೀದತ್ತಾಂಜನೇಯನ ಕೃಪೆಯಿಂದ ಶಿರಂಕಲ್ಲು ಈಶ್ವರಭಟ್ಟರು ಬರೆದ 'ವೀರಾಂಜನೇಯ ವೈಭವಂ' ಎಂಬ ಗದ್ಯಗ್ರಂಥವನ್ನು ಅವಲಂಬಿಸಿ ಹೊಸ್ತೋಟರ ತೋಟದಲ್ಲಿ ಬೃಹದಾಕಾರವಾಗಿ ಬೆಳೆದು ನಿಂತಿತು. 2018ರ ಶ್ರಾವಣಮಾಸದ 81 ದಿನಗಳಲ್ಲಿ ನೈಷ್ಠಾನುಸಂಧಾನದಿಂದ ಹನುಮಂತನಿಗೆ ಸಂಬಂಧಿಸಿದಂತೆ ಇರುವ ಕಥೆಗಳನ್ನು ರಂಗಯೋಗ್ಯವಾಗುವ ಪ್ರಸಂಗಗಳಾಗಿ ಪರಿವರ್ತಿಸಿ ಹೊಳೆಯುವ 27 ನಕ್ಷತ್ರಗಳಂತೆ 27 ಪ್ರಸಂಗಗಳನ್ನು ರಚಿಸಿದರು. 25 ಪ್ರಸಂಗಗಳ ಕಥೆ ಮೂಲವನ್ನು ಅನುಸರಿಸಿ ಅಲ್ಪ ಸ್ವಲ್ಪ ಬದಲಾವಣೆಯೊಂದಿಗೆ ಬಂದಿವೆ. ಇನ್ನೆರಡು ಪ್ರಸಂಗಗಳಾದ ರಾಮಾಂಜನೇಯ ಹಾಗೂ ಒಡಿಯೂರು ಕ್ಷೇತ್ರ ಮಹಾತ್ಮೆಗಳಲ್ಲಿ ಮಾರುತಿಯೇ ರಾರಾಜಿಸುವುದರಿಂದ ಅವುಗಳನ್ನು ಭಾಗವತರು ಇಲ್ಲಿ ಸೇರ್ಪಡೆಗೊಳಿಸಿದರು. ಈ ಪ್ರಸಂಗಗಳ ಸಮುಚ್ಚಯವನ್ನು ಸಂಪಾದಿಸುವಲ್ಲಿ ರಾಜಗೋಪಾಲ ಕನ್ಯಾನರ ಶ್ರಮ ಹಾಗೂ ಸಹಕಾರವಿದೆ. ಒಡಿಯೂರು ಶ್ರೀಗುರುದೇವದತ್ತ ಸಂಸ್ಥಾನಂ ಅವರು ಈ ಕೃತಿಯನ್ನು ಪ್ರಕಾಶಿಸುವ ಮೂಲಕ ಹನುಮಾನ್ ಭಕ್ತರ ಮೆಚ್ಚುಗೆಗೆ ಪಾತ್ರರಾಗಿದ್ದಾರೆ.

ಒಟ್ಟಿನಲ್ಲಿ ಹೊಸ್ತೋಟ ಮಂಜುನಾಥ ಭಾಗವತರಿಗೆ ಈ ಹನುಮಂತನ ಕುರಿತಾಗಿ ಬಂದ ಪ್ರೇರಣೆಯು, ದೇವ ಹಾಗೂ ಗುರುಕೃಪೆಯ ಫಲವಾಗಿ, ರಾಜಗೋಪಾಲ

ಕನ್ಯಾನರ ಮೂಲಕದ ಕರೆಯಾಗಿ, ಶಿರಂಕಲ್ಲು ಈಶ್ವರಭಟ್ಟರ ಗದ್ಯಕೃತಿ ನೆಲೆಯಾಗಿ ಈ 'ಸಮಗ್ರ ಹನುಮಾಯನ' ಮೈ ತಾಳಿದೆ. ಹಿಂದೆ ಅವರೇ ಬರೆದ 'ಗೋ ಮಹಿಮಾಯನ' ದಿಂದ ಗೋವಿಗೆ ಸಂದ ಪೂಜ್ಯತೆಯಂತೆ ಈ ಕೃತಿಯ ಮೂಲಕ ಹನುಮನಿಗೂ ಕರ್ನಾಟಕದಲ್ಲಿ ಪೂಜ್ಯತೆ ಲಭಿಸುವುದರಲ್ಲಿ ಸಂದೇಹವಿಲ್ಲ. ನಿಷ್ಠೆ ಹಾಗೂ ಶ್ರದ್ಧೆಯಿಂದ ಕೂಡಿದ ಕಾರ್ಯಕ್ಕೆ ಯಶಸ್ಸು ಲಭಿಸುವಂತೆ ಇಲ್ಲಿ ಪವಿತ್ರವಾದ ಸಂಕಲ್ಪಶಕ್ತಿ, ದೇವನಿಷ್ಠೆ, ಯಕ್ಷಗಾನದ ಕುರಿತಾದ ಶ್ರದ್ಧೆ, ಹಾಡುಗಾರಿಕೆಯ ಮಟ್ಟುಗಳ ಮೇಲೆ ಇರುವ ಪರಮ ಹಿಡಿತದಿಂದ ಈ ಗ್ರಂಥ ಅಮೂಲ್ಯ ಗ್ರಂಥವಾಗಿ ಹೊರಹೊಮ್ಮಿದೆ. ಇದರ ಸಾಕಾರಕ್ಕೆ ಕಾರಣರಾದ ಎಲ್ಲರೂ ಧನ್ಯರು.

ಸಂಭಾಷಣೆಗೆ ಸಹಕಾರಿಯಾಗಬಲ್ಲ ರಚನೆಗಳು ಪ್ರತಿಪ್ರಸಂಗದಲ್ಲೂ ಇವೆ. ಕೆಲವೊಂದು ಪ್ರಸಂಗಗಳು ತಾಳಮದ್ದಲೆಗೆ ಹಾಗೂ ಬಯಲಾಟಕ್ಕೆ ಎರಡಕ್ಕೂ ಬಳಸಬಹುದಾಗಿದೆ. ವರ್ಣನೆಗಳಲ್ಲಿ ಸ್ವಭಾವೋಕ್ತಿ ಇದೆ. ಪದಗಳ ಬಳಕೆಯಲ್ಲಿ ಹೊಸ್ತೋಟದವರಿಗೆ ಇರುವ ಹಿಡಿತವನ್ನು ಪುಸ್ತಕದುದ್ದಕ್ಕೂ ಗಮನಿಸಬಹುದು. ಸಹವಾದ ಕವಿತ್ವಶಕ್ತಿ ಅವರದ್ದು. ಆದ್ದರಿಂದಲೇ ಪ್ರಸಂಗ ಪ್ರಾರಂಭದಿಂದ ಕೊನೆಯವರೆಗೂ ಅವರ ಪ್ರತಿಭೆ ಓತಪ್ರೇತವಾಗಿ ಹರಿದು ಬಂದಿದೆ. ಪ್ರತಿ ಪ್ರಸಂಗದಲ್ಲೂ ಹನುಮಂತನೇ ಕಥಾನಾಯಕನಾಗಿದ್ದರೂ ಸುರಥ, ರಾಮ, ಗರುಡ, ಅರ್ಜುನ, ಭೀಮ, ಶನೀಶ್ವರ ಮುಂತಾದ ಪಾತ್ರಗಳು ಕೂಡ ಗಮನ ಸೆಳೆಯುವಂತೆ ಮಾಡಿದ್ದಾರೆ. ಇದರಿಂದಾಗಿ 'ಎದಿರು ಪಾತ್ರ'ಕ್ಕೆ ಉತ್ತಮ ಅವಕಾಶ ಲಭಿಸಿದೆ. ಕೆಲವು ಪ್ರಸಂಗಗಳು ಕಿರುರಚನೆಯಾಗಿದ್ದು 'ಕಾಲಮಿತಿ' ಪ್ರದರ್ಶನಕ್ಕೆ ಯೋಗ್ಯವಾಗಿವೆ. ಸಮಕಾಲೀನ ಆಶಯವನ್ನು, ಬದುಕಿನ ಚಿತ್ರಣವನ್ನು, ಪರೋಕ್ಷವಾಗಿ ತರಲಾಗಿದೆ. ಇದರಿಂದಾಗಿ ಪ್ರೇಕ್ಷಕರ ಹೃದಯವನ್ನು ತಟ್ಟುತ್ತದೆ. 'ನಶ್ವರದ ಬಾಳು' ನೀರ ಮೇಲಣಗುಳ್ಳೆ ಕಾಣದ ದಾರಿಗು ವಿಧಿಲಿಖಿತ' ಎಂಬ ಸಾಲುಗಳಲ್ಲಿ ಭಾರತೀಯ ಪಾರಂಪರಿಕ ಮನೋಧರ್ಮ ಬಿಂಬಿತವಾಗಿದೆ. ಈ ಪುಸ್ತಕದ ಮೊದಲಿಗೆ ಡಾ.ಪಾದೆಕಲ್ಲು ವಿಷ್ಣುಭಟ್, ಪ್ರೊ.ಎಂ.ಎ.ಹೆಗಡೆ, ಡಾ.ಕಬ್ಬಿನಾಲೆ ವಸಂತ ಭಾರದ್ವಾಜ, ಡಾ.ಮಮತ ಕೆ.ಗೋವಿಂದಭಟ್ಟ, ಗಿಂಡಿಮನೆ ಮೃತ್ಯುಂಜಯ, ಶಿರಂಕಲ್ ಈಶ್ವರಭಟ್, ಡಿ.ಎ.ಶ್ರೀಧರ್ ಮುಂತಾದವರ ಅಭಿಪ್ರಾಯಗಳು ಬಂದಿವೆ. ರಾಜಗೋಪಾಲ ಕನ್ಯಾನರು ಈ ಕೃತಿ ಸಾಕ್ಷಾತ್ಕಾರಗೊಂಡ ಬಗೆಯನ್ನು ವಿವರಿಸಿದ್ದಾರೆ.

'ವೀರಾಂಜನೇಯ ವೈಭವ'ದಲ್ಲಿ ಸರಾಗವಾದ ವೈವಿಧ್ಯಮಯವಾದ ಮುಟ್ಟುಗಳ ಬಳಕೆ ಇದೆ. 27 ನಕ್ಷತ್ರಗಳಂತೆ 27 ಪ್ರಸಂಗಗಳಿವೆ. ಸಾಹಿತ್ಯ ಸೌಂದರ್ಯದಲ್ಲಿ ಘನತೆ ಇದೆ. ಪ್ರಯೋಗ ಯೋಗ್ಯ ದೃಶ್ಯಗಳಿವೆ. ವೃರ್ಣನೆಗಳಲ್ಲಿ ಹೊಸತನವಿದೆ. ಹಾಡಿನಲ್ಲಿ ಮಿಂಚಬಲ್ಲ 'ಪದ್ಯ'ಗಳಿವೆ. ಸೂಚ್ಯವಾದ ಸಮಕಾಲೀನ ಪ್ರಜ್ಞೆ ಆತುಕೊಂಡಿದೆ. ಸ್ವಭಾವೋಕ್ತಿಗಳಿಂದ ಕೂಡಿದ ವರ್ಣನೆಗಳಿವೆ. ಓದಿಗೆ ಒದಗುವ ಗೂಢಾರ್ಥಗಳ

ಪದ್ಯಗಳೂ ಇವೆ. ಸಂಭಾಷಣೆ ಬೆಳೆಸಲು ಆಧಾರವಾಗುವ ಸನ್ನಿವೇಶಗಳಿವೆ. ಹೀಗೆ ಮೋತಿಗುಡ್ಡೆಯಲ್ಲಿ ಅರಳಿಕಟ್ಟೆಯಲ್ಲಿ ಅರಳಿದ ಈ ಕೃತಿ 2019ರ ಶ್ರೇಷ್ಠ ಕೃತಿಯಾಗಿದೆ. ಯಕ್ಷಗಾನ ಅಕಾಡೆಮಿಯ ಪುಸ್ತಕ ಪುರಸ್ಕಾರ ಗೌರವವನ್ನು ಗಳಿಸಿದೆ. ಹೊಸ್ತೋಟ ಮಂಜುನಾಥ ಭಾಗವತರು ರಚಿಸಿರುವ ಪ್ರಸಂಗ ಸರಣಿ ಮಾಲಿಕೆಯಲ್ಲಿ ಇದು ಕೊನೆಯದ್ದೂ ಕೂಡ ಆಗಿರುವುದು ಗಮನಾರ್ಹ. ಈ ಪ್ರಸಂಗಗಳ ರಚನೆಯ ನಂತರ ಮಂಜುನಾಥ ಭಾಗವತರು ಮತ್ತೆ ಪ್ರಸಂಗ ರಚನೆ ಮಾಡಿಲ್ಲ. ಹೀಗೆ ವೀರಾಂಜನೇಯ ವೈಭವಕ್ಕೆ ಐತಿಹಾಸಿಕ ಮಹತ್ವ ಲಭಿಸಿದೆ.

□

ಯಕ್ಷಗಾನದಲ್ಲಿ ರಾಮಾಯಣ ಬೆಳೆ

ಭಾರತೀಯ ಸಾಹಿತ್ಯ ಪರಂಪರೆಯಲ್ಲಿ ರಾಮಾಯಣಕ್ಕೆ ಹಿರಿದಾದ ಸ್ಥಾನವಿದೆ. ನಡತೆಯಿಂದ ದೇವರಾದ ಮನುಷ್ಯನನ್ನು ಚಿತ್ರಿಸುವುದು ಕವಿಕುಲ ಗುರುವಾದ ವಾಲ್ಮೀಕಿಯ ಉದ್ದೇಶವಾಗಿದ್ದು ಅದು ಶ್ರೀಮದ್ ರಾಮಾಯಣದಲ್ಲಿ ಸಫಲವಾಗಿದೆ. ಈ ಮಣ್ಣಿನ ಸಂಸ್ಕೃತಿಯೊಂದಿಗೆ ಮಿಳಿತವಾದ ರಾಮಕಥೆ ಪಡೆದುಕೊಂಡ ಹರವು ಬೆರಗು ಗೊಳಿಸುವಂತಹದು. ಕನ್ನಡಿಗರಿಗಂತೂ ರಾಮಾಯಣವು ಬಹುಪ್ರೀತಿಯ, ಅಷ್ಟೇ ಗೌರವದ ಗ್ರಂಥ. ನಮ್ಮ ಸಾಹಿತ್ಯ, ಸಂಗೀತ, ನಾಟ್ಯ, ಶಿಲ್ಪಕಲೆ, ಚಿತ್ರಕಲೆಗಳಲ್ಲೆಲ್ಲಾ ರಾಮಾಯಣದ ವಿಚಾರಗಳು ಒಂದಿಲ್ಲೊಂದು ರೀತಿಯಲ್ಲಿ ಬಂದಿದೆ. ಸಾಕಷ್ಟು ರಾಮ ದೇವಾಲಯಗಳು ನಮ್ಮ ನಾಡಿನಲ್ಲಿವೆ.

ಡಾ|| ಎಚ್.ಎಸ್. ವೆಂಕಟೇಶಮೂರ್ತಿಯವರು ಹೇಳುವಂತೆ :

"ಪ್ರತಿ ಮನೆಗೂ ಬೃಂದಾವನ ಬೆಳೆಯುವ ಆಸೆಯು ಹೇಗೋ ಹಾಗೆ

ಊರು ಊರಿಗೂ ಇದ್ದೇ ಇರುವುದು ರಾಮಾಯಣವನು ಬೆಳೆವಾಸೆ...

ಊರಿಗಿರುವಂತೆ ಭಾಷೆಗೂ ಉಂಟು ರಾಮಾಯಣವನು ಬೆಳೆವಾಸೆ

ಮೂಲ ಬೀಜವನು ತನ್ನ ಹೊಲದಲ್ಲಿ ಬೆಳೆಯುವ ದರ್ದು ಕೃಷಿಕನಿಗೆ"

(ಶ್ರೀರಾಮ ಚಾರಣ – ಡಾ. ಎಚ್.ಎಸ್. ವೆಂಕಟೇಶಮೂರ್ತಿ – ಪುಟ 6)

ಎಂಬಂತೆ ಕನ್ನಡ ಸಾಹಿತ್ಯ ಲೋಕದಲ್ಲಿ ರಾಮಾಯಣದ ಹುಲುಸಾದ ಬೆಳೆ ಬಂದಿದೆ. ನಾಡಿನ ಜಾನಪದ ಕಥನಗಳಲ್ಲಿ ಹಾಡುಹಸೆಗಳಲ್ಲಿ, ಕಾವ್ಯಗಳಲ್ಲಿ, ಕ್ರೀಡೆಗಳಲ್ಲಿ, ಕಲೆಗಳಲ್ಲಿ ರಾಮಾಯಣದ ವಸ್ತುವನ್ನು ಆಧರಿಸಿದ ವಿಚಾರಗಳು ಬಂದಿವೆ. ಸಾಂಪ್ರದಾಯಿಕ ಕಥೆಯಾದ ಯಕ್ಷಗಾನದಲ್ಲೂ ರಾಮಾಯಣದ ವಸ್ತು, ವಸ್ತುವಿನ ಆಶಯ, ಪಾತ್ರ, ಪಾತ್ರಗಳ ಜೀವನ ಮೌಲ್ಯ, ಸಂಭಾಷಣೆ, ಸಂಭಾಷಣೆಗಳ ನೈತಿಕ ನೆಲೆಗಟ್ಟು ಇವೆಲ್ಲವೂ ಅಧ್ಯಯನ ಯೋಗ್ಯವಾದ ಸಂಗತಿಗಳಾಗಿವೆ.

ಯಕ್ಷಗಾನ ಮೂಲತ: ದೇಸಿಯ ಶೈಲಿಯ ಕಲೆ. ಜನಪದರ ಉತ್ಕೃಷ್ಟವಾದ ಸೃಜನಶೀಲತೆಯನ್ನು ಇಲ್ಲಿ ಕಾಣಬಹುದು. ಸಾಹಿತ್ಯ, ಸಂಗೀತ, ಕುಣಿತ, ಬಣ್ಣಗಾರಿಕೆ, ಅಭಿನಯಗಳೆಲ್ಲಾ ಏಕತ್ರ ಸಂಧಿಸಿವೆ. ವಿಜಯನಗರ ಸಾಮ್ರಾಜ್ಯದ ಸಾಂಸ್ಕೃತಿಕ ಪುನರುತ್ಥಾನದಲ್ಲಿ ಈ ಕಲಾ ಪ್ರಕಾರದ ಬೇರುಗಳನ್ನು ಕಾಣಬಹುದು. ಯಕ್ಷಗಾನದಲ್ಲಿ ನಾನಾ ಪ್ರಭೇದಗಳಿದ್ದು, ಉತ್ತರ ಕರ್ನಾಟಕದಲ್ಲಿ ಸಣ್ಣಾಟ, ದೊಡ್ಡಾಟ, ದಾಸರಾಟ, ಕೃಷ್ಣ ಪಾರಿಜಾತ, ರಾಧಾನಾಟ, ಡಪ್ಪಿನಾಟ, ಮುಂತಾದವು ಪ್ರಚಲಿತವಾಗಿವೆ. ದಕ್ಷಿಣ ಕರ್ನಾಟಕದಲ್ಲಿ ಮೂಡಲಪಾಯ, ಘಟದ ಕೋರೆ ಕೇಳಿಕೆಗಳೆಂಬ ವೈವಿಧ್ಯಗಳಿವೆ. ಕರಾವಳಿ ಹಾಗೂ ಮಲೆನಾಡಿನಲ್ಲಿ ಆಟ, ಬಯಲಾಟ, ದಶಾವತಾರ ಮುಂತಾದ ಹೆಸರಿನಲ್ಲಿ ಕರೆಸಿಕೊಳ್ಳುವ ಯಕ್ಷಗಾನದಲ್ಲಿ ತೆಂಕುತಿಟ್ಟು, ಬಡಗುತಿಟ್ಟು, ಬಡಬಡ ಗುತಿಟ್ಟುಗಳೆಂಬ ಮೂರು ಶೈಲಿಗಳಿವೆ. ಯಕ್ಷಗಾನ ಕಲೆಯ ನಿಜಸತ್ವವು ತಾಳಮದ್ದಲೆ, ಹೂವಿನಕೋಲು, ಗೊಂಬೆಯಾಟ, ಚಿಕ್ಕಮೇಳಗಳಲ್ಲೂ ಜೀವಂತವಾಗಿದೆ. ಮೇಳಗಳ ಮೂಲಕ ಯಕ್ಷಗಾನ ಉಳಿಯಲು ಬೆಳೆಯಲು ಸಾಧ್ಯವಾಯಿತು. ಕರಾವಳಿಯಲ್ಲಿ ಹರಕೆ ಆಟಗಳ ಮೂಲಕ ಭಕ್ತಿ ಪ್ರಸಾರಣದ ಕಾರ್ಯ ನಡೆಯುತ್ತಲೇ ಬರುತ್ತಿದೆ.

ಯಕ್ಷಗಾನವು ವೈವಿಧ್ಯಮಯವೂ, ವೈಶಿಷ್ಟಮಯವೂ ಆಗಿದ್ದು ಕರ್ನಾಟಕದ ಪ್ರಾತಿನಿಧಿಕ ಕಲೆಯಾಗಿ ಮೆರೆಯುತ್ತಿದೆ. ಹೆಚ್ಚಾಗಿ ರಾಮಾಯಣ, ಮಹಾಭಾರತ, ಭಾಗವತ, ಪುರಾಣಾದಿಗಳಿಂದ ಆರಿಸಿಕೊಂಡ ಕಿರುಕಥೆಗಳನ್ನು ಆಧರಿಸಿ ಬರೆದ ಯಕ್ಷಗಾನ ಕೃತಿಗಳ ರಚನೆಗಳು ಕನ್ನಡ ಹಾಗೂ ತೆಲುಗಿನಲ್ಲಿ ಆರುನೂರು ವರ್ಷಗಳ ಕೆಳಗೆ ಏಕಕಾಲದಲ್ಲಿ ಕಾಣಿಸಿಕೊಳ್ಳುತ್ತದೆ. ಹೀಗೆ ಬರೆದಿರುವ ಪ್ರಸಂಗಗಳ ಸಂಖ್ಯೆ ಆರು ಸಾವಿರಕ್ಕೂ ಮಿಕ್ಕಿವೆ. ದಾಸ ಸಾಹಿತ್ಯದ ಪ್ರಭಾವಕ್ಕೆ ಒಳಗಾಗಿರುವ ಈ ಪ್ರಸಂಗಗಳು ಭಕ್ತಿ ಸಾಹಿತ್ಯದ ಅಂಶಗಳನ್ನು ಮೈಗೂಡಿಸಿಕೊಂಡಿವೆ. ಪ್ರಸಂಗ ಸಾಹಿತ್ಯದಲ್ಲಿ ರಾಮಾಯಣಕ್ಕೆ ಸಂಬಂಧಿಸಿದಂತೆ ಬಂದಿರುವ ಪ್ರಸಂಗಗಳು ಸಾಹಿತ್ಯಿಕವಾಗಿ ಅದ್ವಿತೀಯವಾಗಿವೆ. ಉತ್ತಮ ಜೀವನ ಮಟ್ಟವನ್ನು ಬಿತ್ತರಿಸುವ ರಾಮಾಯಣದ ಆಶಯವನ್ನು ಯಕ್ಷಗಾನ ಕವಿಗಳು ತಮ್ಮ ಪ್ರಸಂಗಗಳಲ್ಲಿ ಹಿಡಿದಿರಿಸಿದ್ದಾರೆ. ಪಿತೃವಾಕ್ಯ ಪರಿಪಾಲನೆ, ಹಿರಿಯರಲ್ಲಿ ಗೌರವ, ಆದರ, ವಿಧೇಯತೆ, ಮೈತ್ರಿ, ನೆರವು, ಪಾತಿವ್ರತ್ಯ, ಸೇವಾ ಮನೋಭಾವ, ವಿನಯ, ನಮ್ರತೆ ಮುಂತಾದ ಸದ್ಗುಣಗಳನ್ನೂ, ಸದಾಶಯಗಳನ್ನು ನಿರೂಪಿಸುವ ರಾಮಾಯಣದ ಪ್ರಸಂಗಗಳು ಸಮಾಜದ ಸ್ವಾಸ್ಥ್ಯವನ್ನು ಕಾಪಾಡುತ್ತಾ, ಸಂಸ್ಕೃತಿಯನ್ನು ಸಂವರ್ಧಿಸುತ್ತಾ, ಜೀವನ ವಿವೇಕವನ್ನು ಜನರಿಗೆ ಉಣಬಡಿಸುತ್ತಾ ಜೀವಂತವಾಗಿವೆ.

ಕಾವ್ಯಾತ್ಮಕವಾದ ಹತ್ತು ಯಕ್ಷಗಾನ ಪ್ರಸಂಗಗಳನ್ನು ಬರೆದಿರುವ ಪಾರ್ತಿಸುಬ್ಬನನ್ನು "ಯಕ್ಷಗಾನದ ವಾಲ್ಮೀಕಿ" ಎಂದೇ ಜನತೆ ತೀರ್ಮಾನಿಸಿದ್ದಾರೆ. ಈ ಹತ್ತು ಪ್ರಸಂಗಗಳಲ್ಲಿ ಎಂಟು ಪ್ರಸಂಗಗಳು ರಾಮಾಯಣಕ್ಕೆ ಸಂಬಂಧಿಸಿವೆ.

ಪುತ್ರಕಾಮೇಷ್ಟಿಯಿಂದ ಪ್ರಾರಂಭಗೊಂಡು ಕುಂಭಕರ್ಣಾದಿ ಕಾಳಗದವರೆಗಿನ ಇವನ ಪ್ರಸಂಗಗಳು ಸಾಹಿತ್ಯಿಕ ದೃಷ್ಟಿಯಿಂದ ಹಾಗೂ ರಂಗ ನಡೆಯ ದೃಷ್ಟಿಯಿಂದ ಎಲ್ಲರ ಮೆಚ್ಚುಗೆಗೆ ಪಾತ್ರವಾಗಿವೆ. ಪಾರ್ತಿಸುಬ್ಬನ ರಚನೆ ಮೇಲು ನೋಟಕ್ಕೆ ಸರಳವೆಂಬಂತೆ ಕಂಡರೂ ಆಂತರ್ಯದಲ್ಲಿ ಜನರ ಬದುಕಿಗೆ ಹತ್ತಿರವಾಗಿವೆ. ದೈವ, ದೇವರುಗಳ ಮೇಲಿನ ನಂಬಿಕೆ, ಕೌಟುಂಬಿಕ ವ್ಯವಸ್ಥೆ, ಹಿರಿಕಿರಿಯರ ನಡುವೆ ಇರುವ ಸಂಬಂಧಗಳ ಚಿತ್ರಣಗಳೆಲ್ಲ ಸಹಜವಾಗಿ, ಸುಂದರವಾಗಿದೆ. ಪಟ್ಟಾಭಿಷೇಕ ಪ್ರಸಂಗದಲ್ಲಿ ರಾಮನಿಗೆ ತಾನು ಕಾಡಿಗೆ ಹೋಗುವ ಸುದ್ದಿ, ಸೀತೆಗೆ ತಿಳಿದರೆ ಹೆಂಡತಿ ನೊಂದುಕೊಳ್ಳುತ್ತಾಳೆ ಎಂಬ ಯೋಚನೆ, ಸೀತೆಗೆ ಕೂಡಾ ಗಂಡನ ಬಗ್ಗೆ ಅಷ್ಟೇ ಪ್ರೀತಿ. ಕವಿ ಇಲ್ಲಿ ಅವಳ ಮನದ ಇಂಗಿತವನ್ನು ಸಾಮಾನ್ಯರಂತೆ ಚಿತ್ರಿಸಿದ್ದಾನೆ. ಆಕೆಯು ಸಾಮಾನ್ಯ ಹೆಂಗಸಿನಂತೆ "ವಂಚಿಸಿ ಕಾಡಿಗೆ ಹೋದರೆ ವಿಷ ಕುಡಿದು ಸಾಯುವುದಾಗಿ" ರಾಮನನ್ನು ಹೆದರಿಸುತ್ತಾಳೆ. ಇಲ್ಲೆಲ್ಲಾ ಶ್ರೀರಾಮ-ಸೀತೆಯರು ನಮ್ಮ ಸಾಮಾನ್ಯ ಜನರ ಪ್ರತಿನಿಧಿಯಂತೆ ಕಾಣಿಸಿಕೊಳ್ಳುತ್ತಾರೆ. ಯಕ್ಷಗಾನ ರಾಮಾಯಣ ಪ್ರಸಂಗಗಳಲ್ಲಿ ನಮ್ಮ ಸಂಸ್ಕೃತಿಯ ಅಂಶಗಳನ್ನು ಬಿಂಬಿಸುವ ಪದ್ಯಗಳು ಸಾಕಷ್ಟು ಬಂದಿವೆ. ಪಟ್ಟಾಭೀಷೇಕ ಪ್ರಸಂಗದಲ್ಲಿ ರಾಮನು ತಾಯಿ ಕೌಸಲ್ಯೆಯನ್ನು ಸಮಾಧಾನಗೊಳಿಸುತ್ತಾ ಆಡುವ ಮಾತುಗಳು ಅಚ್ಚಗನ್ನಡ ನುಡಿಗಟ್ಟುಗಳಿಂದ ಕೂಡಿಕೊಂಡಿದ್ದು, ಪಿತೃವಾಕ್ಯ ಪರಿಪಾಲನೆಯ ಹಿರಿಮೆಯನ್ನು ಸರಳವಾಗಿ ತಿಳಿಸಿಕೊಡುತ್ತದೆ.

> **"ಕಣ್ಣ ನೀರಬದಿಯೊಳಾಡುವ ಜನನಿಯ**
> **ಪುಣ್ಯ ಪುರುಷ ನೋಡುತ್ತ**
> **ಬಣ್ಣಗಾರಿಕೆಯಲ್ಲಿ ತಾಯಿ ತಂದೆಯ ಮಾತ**
> **ನುಣ್ಣಗಳೆಯಬಾರದು"**

(ಪಾರ್ತಿಸುಬ್ಬನ ಯಕ್ಷಗಾನಗಳು, ಪುಟ 83, ಸಂ.ಕುಕ್ಕಿಲ ಕೃಷ್ಣಭಟ್)

ಎಂದು ಹೇಳುವ ಮಾತುಗಳಲ್ಲಿ ರಾಮನ ಗುಣಸ್ವಭಾವವಿದೆ. ಶ್ರೀರಾಮಚಂದ್ರ ದೇವರ ಅವತಾರವಾದರೂ ತಂದೆಯ ವಾಕ್ಯವನ್ನು ಪಾಲಿಸುವುದು ಮಗನಾದ ಅವನ ಕರ್ತವ್ಯವಾಗಿದೆ. ಅದೇ ಮೌಲ್ಯವನ್ನು ಆತ ಎತ್ತಿ ಹಿಡಿಯುತ್ತಾನೆ.

ಬದುಕಿನ ಬಗ್ಗೆ ಭಾರತೀಯ ಚಿಂತನೆ ಅಸಾಧಾರಣವಾದದ್ದು, ಆಧ್ಯಾತ್ಮಿಕ ವಿಚಾರಧಾರೆಗಳು ಯಕ್ಷಗಾನ ಪ್ರಸಂಗಗಳ ಮೂಲಕ ಸಾಮಾನ್ಯ ಜನರನ್ನು ತಲುಪಿದೆ. ಇಂದು ಗ್ರಾಮೀಣ ಪ್ರದೇಶದ ಜನರು ಅನಕ್ಷರಸ್ತರಾಗಿರಬಹುದು, ಅವಿದ್ಯಾವಂತರಾಗಿದ್ದಿರಬಹುದು ಆದರೆ ಅವರು ಪ್ರಬುದ್ಧರು, ಆಚಾರವಂತರೂ, ವಿನಯವಂತರು, ಬದುಕಿನ ನಿಸ್ಸಾರತೆಯನ್ನು ಅರಿತವರೂ ಆಗಿದ್ದಾರೆ. ಇದಕ್ಕೆ ಕಾರಣ

ನಮ್ಮ ಯಕ್ಷಗಾನ ಕವಿಗಳು. ರಾಮಾಯಣದ ಪ್ರಸಂಗವೊಂದರಲ್ಲಿ ವಸಿಷ್ಠರು ಆಡುವ ಮಾತುಗಳು ಎಂತಹ ಗಹನ ವಿಚಾರವನ್ನು ತಿಳಿಯಾದ ಭಾಷೆಯಲ್ಲಿ ತಿಳಿಸುವ ಪರಿಯನ್ನು ನೋಡಿ. ಪ್ರಕೃತಿಯನ್ನು, ಮರಣವನ್ನು ಯಾರೂ ತಡೆಯಲಾರರು.

"ಗಾಳಿ ಸಿಡಿಲು ಮಳೆ ಹೊಯ್ಯಬೇಡೆಂದು ಕೈ
ತೋಳನೆತ್ತಿದರೆ ನಿಲ್ಲುವುದೇ
ಬಾಲಕರಿಲ್ಲದ ವೇಳೆಯೆಂದರೆ ಯಮ
ನಾಳುಗಳೆದನು ಕೇಳುವರೇ?
ನೆಲೆಯಿಲ್ಲ ತನುವಿದು ಮಳೆಗಾಲದಲಿ ತುಂಬಿ
ದ್ಹೊಳೆಯಲ್ಲಿ ನೆರೆ ಪುಟ್ಟುವಂತೆ
ನಳಿನ ಸಂಭವ ಬರೆದಾ ದಿನ ಸಂದರೆ
ಉಳಿವರೇ ನಿಮಿಷ ಪ್ರಾಣಿಗಳು"

(ಪಾರ್ತಿಸುಬ್ಬನ ಯಕ್ಷಗಾನಗಳು –ಪುಟ 136 –ಸಂ. ಕುಕ್ಕಿಲ ಕೃಷ್ಣ ಭಟ್)

ಸ್ವಭಾವೋಕ್ತಿಯಿಂದ ಕೂಡಿರುವ ಈ ಬಗೆಯ ರೂಢಿಗತ ವಿಚಾರಗಳನ್ನು ಕವಿ ಮಾರ್ಮಿಕವಾಗಿ ತರುವ ಮೂಲಕ ಜನರ ಬದುಕಿಗೆ ಅಗತ್ಯವಾದ ಆಧ್ಯಾತ್ಮಿಕ ಜ್ಞಾನವನ್ನು ತಿಳಿಸಿಕೊಟ್ಟಿದ್ದಾನೆ. ಭಕ್ತಿಯ ಹಿರಿಮೆಯನ್ನು ಸಾರುವುದೇ ಯಕ್ಷಗಾನಗಳ ಮೂಲ ಆಶಯ. ಅನೇಕ ಜನ ವಿಷ್ಣು ಭಕ್ತರ ಬಾಳು, ಬದುಕು ಪ್ರಸಂಗಗಳ ವಸ್ತುವಾಗಿದೆ. ಪ್ರಸಂಗಕಾರರು ಪದ್ಯಗಳಲ್ಲಿ ವೈಷ್ಣವ ಭಕ್ತಿಯ ಮಹಿಮೆಯನ್ನು ಸಾರಿದ್ದಾರೆ. ಭಕ್ತ ಪ್ರಹ್ಲಾದ, ಸುಧನ್ವ, ಅತಿಕಾಯ, ರುಕ್ಮಾಂಗದ, ಶಬರಿ, ಹನುಮಂತ ಮುಂತಾದವರ ಭಕ್ತಿಯ ಪರಿ ವೈವಿಧ್ಯಮಯವಾಗಿದೆ. ರಾಮಾಯಣಕ್ಕೆ ಸಂಬಂಧಿಸಿದಂತೆ "ಭಕ್ತಶೀರೋಮಣಿ ಅತಿಕಾಯ"ನ ಪಾತ್ರ ನಿರೂಪಣೆಯನ್ನು ಹಟ್ಟಿಯಂಗಡಿ ರಾಮಭಟ್ಟರು ತಮ್ಮ "ಅತಿಕಾಳಗ ಕಾಳಗ" ದಲ್ಲಿ ನೀಡಿದ್ದಾರೆ. ವೀರವೈಷ್ಣವನಾದ ಆತ ತಂದೆಯೊಡನಾಡುವ ಮಾತುಗಳು ಯುದ್ಧಕ್ಕೆ ಸನ್ನದ್ಧನಾದ ಬಗೆ ಎಲ್ಲವೂ ಮನಮೋಹಕ. ತಂದೆ ರಾವಣನಲ್ಲಿ ಆತನಾಡುವ

"ಸಕಲ ಲೋಕೈಕನಾಥನು ಸರ್ವಾತ್ಮಕನು ಸರ್ವರ ರಕ್ಷಿಸುವ ದೈವನವನು
ಮುಕುತಿದಾಯಕನು ಶಾಶ್ವತನು ನಿನ್ನ ಯುಕುತಿ ನಡೆಯದಾದಿವಸ್ತು ರಾಘವನು"

(ಹಟ್ಟಿಯಂಗಡಿ ರಾಮಭಟ್ಟರ ಕೃತಿಗಳು – ಪುಟ 7 – ಸಂ. ಡಾ. ಪಾದೇಕಲ್ಲು ವಿಷ್ಣು ಭಟ್ಟ)

ಎಂಬ ಸಾಲುಗಳಲ್ಲಿ ರಾವಣನ ಯಾವ ಯುಕ್ತಿಯು, ಯೋಚನೆಯೂ ಕೈಗೂಡುವುದಿಲ್ಲ ಎಂಬ ಸೂಚನೆಯಿದೆ. "ಜಗದೊಡೆಯ ರಾಮನ ಕೆಣಕಲು ಬಂತು

ಕೇಡು' ಎಂಬ ದೃಢ ವಿಚಾರ ತಿಳಿಸಿದರೂ ತಂದೆಯ ವಾಕ್ಯ ಪರಿಪಾಲನೆಗಾಗಿ' ಜೀಯಾ ತಾ ಸಂಗರಕ್ಕ ವೀಳೆಯ' ಎಂದು ರಣ ವೀಳೆಯವನ್ನು ಪಡೆಯುತ್ತಾನೆ. ತುಲಸಿಮಾಲೆಯನ್ನು ಧರಿಸಿ ಯುದ್ದಕ್ಕೆ ಹೊರಟ ಆತನ ವೈಖರಿ ಹೀಗಿದೆ.

"ಕೆಲಸಾರು ಭಕ್ತಿಯ ಮಹಾಮೇರು ಬರುತಲಿದೆ

ಕೆಲಸಾರು ಸದ್ಧರ್ಮ ಕಲ್ಪತರು ಬರುತಲಿದೆ

ಕೆಲಸಾರು ಶ್ರೀರಾಮ ಚರಣಾರವಿಂದ ಮಧುಕರ ತಾನೆ ಬರುತಲಿದೆ ಕೋ ॥

ಕೆಲಸಾರು ಭಾಗವತ ಮೌಳಿಮಣಿ ಬರುತಲಿದೆ

ಕೆಲಸಾರು ದಾನವರಕುಲದೀಪ ಬರುತಲಿದೆ

ಕೆಲಸಾರು ಪಾಪಹುತವಾಹನತಿಕಾಯಬಹನೆಂದು ಕಹಳೆಗಳುಲಿದವು॥"

(ಹಟ್ಟಿಯಂಗಡಿರಾಮಭಟ್ಟರ ಕೃತಿಗಳು – ಪುಟ 9 –ಸಂ. ಡಾ. ಪಾದೇಕಲ್ಲು ವಿಷ್ಣುಭಟ್ಟ)

ಆತ ತನ್ನೊಂದಿಗೆ ಯುದ್ದಕ್ಕೆ ಬನ್ನಿರಿ ಎಂದು ಸಹಚರರನ್ನು ಕರೆಯುವಲ್ಲೂ ಕೂಡ ಅತಿಕಾಯನ ಪ್ರಬುದ್ಧವಾದ ಜೀವನ ದೃಷ್ಟಿ ಗೋಚರವಾಗುತ್ತದೆ. ಯುದ್ಧದಲ್ಲಿ ಸಾವು ಖಚಿತ, ಆದರೆ ರಾಮನೊಂದಿಗೆ ಸೆಣಸುವುದು 'ಮುಕ್ತಿ' ದೊರೆಯುವ ಸಾಧನವಾಗಿದೆ.

"ಬನಿರೈ ಸಂಸಾರ ಶರಧಿಯನು ದಾಟುವರು

ಬನ್ನಿರೈ ಮೋಕ್ಷಕಾಂಕ್ಷಿಗಳು

ಬನಿರೈ ಬಹಳ ಪದವಿಯನು ಬಯಸುವ ಸುಭಟ

ರೆನ್ನೊಡನೆನೀವೆನುತ ಕರೆದ॥

(ಹಟ್ಟಿಯಂಗಡಿರಾಮಭಟ್ಟರ ಯಕ್ಷಗಾನ ಕೃತಿಗಳು– ಪುಟ 8 –ಸಂ. ಡಾ. ಪಾದೇಕಲ್ಲು ವಿಷ್ಣುಭಟ್ಟ)

ಲಂಕೆಯ ಜನರು ಕೂಡಾ ಇವನು ಯುದ್ದಕ್ಕೆ ನಡೆದದನ್ನು "ವಾದಗುಟ್ಟಫಲವೇನಿನ್ನೂ। ಪೊದುದುಲಂಕೈಶ್ವರ್ಯ ಈ ದಿವ್ಯ ಪುರುಷನ ಕೂಡೆ" ಎಂದೇ ಸಾರುತ್ತಾರೆ.

ಹಟ್ಟಿಯಂಗಡಿರಾಮಭಟ್ಟರು ಮುಂದೆ ಅವನ ಸಾಹಸಗಾಥೆಯನ್ನು ಸೊಗಸಾಗಿ ವರ್ಣಿಸಿದ್ದಾರೆ.

"ಅರರೆಯಮನುಬ್ಬಟೆಯೊಮೃತ್ಯುವಿ

ನುರವಣೆಯೊ ಸಂಹಾರ ಭೈರವ।

ನುರುಬೆಯೋ ನಾನರಿಯೆ ನತಿಕಾಯವರಣೋತ್ಸಹವೋ

(ಹಟ್ಟಿಯಂಗಡಿ ರಾಮಭಟ್ಟರ ಯಕ್ಷಗಾನ ಕೃತಿಗಳು – ಪುಟ 13 ಸಂ. ಡಾ. ಪಾದೇಕಲ್ಲು ವಿಷ್ಣುಭಟ್ಟ)

ಎಂದು ಹೇಳಿದ್ದೇ ಅಲ್ಲದೇ, ಅವನ ಭಕ್ತಿಯ ಹಿರಿಮೆಯನ್ನು ಸಾರುತ್ತಾರೆ.

"ನೀವು ಜಗದಧಿದೈವವೆಂಬುದ

ನಾವು ಬಲ್ಲೆವು ನಮ್ಮ ಕುಲದಸ್ವ

ಭಾವವನುನಾಬ್ಬಿಡಲುಬಹುದೇ ಪೂರ್ವ ಪದ್ಧತಿಯ ।"

(ಹಟ್ಟಿಯಂಗಡಿ ರಾಮಭಟ್ಟರ ಯಕ್ಷಗಾನ ಕೃತಿಗಳು – ಪುಟ 17 ಸಂ. ಡಾ. ಪಾದೇಕಲ್ಲು ವಿಷ್ಣು ಭಟ್ಟ)

ಎಂದು ಹೇಳುತ್ತಾ ಶರವನ್ನುಎಸೆಯುತ್ತಾನೆ. ಅವನ ಎದುರು ನಿಂತ ಲಕ್ಷ್ಮಣನೇ ಅವನನ್ನು

"ಅಸಮಭಕುತನೀನಹುದೈ। ರಣ ।

ಕುಶಲ ಯುಕುತಿ ನಿನಗಹುದೈ॥

ಅಸುರಾರಿಯಪದದಾಣೆ। ರಾ।

ಕ್ಷಸರೊಳುನಿನಗೆಣೆಗಾಣೆ॥" ಎಂದು ಹೊಗಳುತ್ತಾನೆ.

(ಹಟ್ಟಿಯಂಗಡಿ ರಾಮಭಟ್ಟರ ಯಕ್ಷಗಾನ ಕೃತಿಗಳು – ಪುಟ 17 ಸಂ. ಡಾ. ಪಾದೇಕಲ್ಲು ವಿಷ್ಣು ಭಟ್ಟ)

ಮುಂದೆ ಅತಿಕಾಯ ತನ್ನ ಪ್ರಾಣವನ್ನು ಶ್ರೀಹರಿಯ ಚರಣದಲ್ಲಿ ಅರ್ಪಿಸುವ ಪರಿಯು ವಿಶೇಷವಾಗಿದೆ.

"ಕಾಯವಿದ್ದಾಗನಾರಾಯಣನ ಪಾದವನು

ಪ್ರಿಯದಿಂ ಸ್ಮರಿಸಬೇಕೆಂದ ॥

ಎಂದು ಹೃತ್ಕಮಲಕರ್ಣಿಕೆಯ ಮಧ್ಯದಲಿ ರಘು।

ನಂದನನ ಚಾರು ಮೂರ್ತಿಯನು।

ಚಂದದಿಂದಿರಿಸಿ ನಾಲಗೆ ಕೊನೆಯೊಳಾಗ ಜಯ ।

ವೆಂದುಸ್ತುತಿಗೆಯ್ದನಚ್ಯುತನ॥"

(ಹಟ್ಟಿಯಂಗಡಿ ರಾಮಭಟ್ಟರ ಯಕ್ಷಗಾನ ಕೃತಿಗಳು– ಪುಟ 18 –ಸಂ. ಡಾ.ಪಾದೇಕಲ್ಲು ವಿಷ್ಣುಭಟ್ಟ)

ಶ್ರೀವಿಷ್ಣುವನ್ನು ನಾನಾ ಬಗೆಯಾಗಿ ಭಜಿಸಿ ಯುದ್ದಕ್ಕೆ ತೊಡಗುತ್ತಾನೆ. ಲಕ್ಷ್ಮಣನ ಶರಹತಿಗೆ ತುತ್ತಾಗಿ ಆತನ ಶಿರ "ಸಿರಿ ರಾಮನಂಘ್ರಿಯ ಮೇಲೆ ಬಿದ್ದುದು" "ಅರಳಿದ ಕಮಲವ ಕಂಡು ಸಮ್ಮೋಹದೊಳೆರಗುವ ಭ್ರಮರದಂದಲಿ" ಎಂದು ಕವಿ

ವರ್ಣಿಸಿದ್ದಾನೆ. ಹೀಗೆ "ಅತಿಕಾಯ ಕಾಳಗ"ದಂತಹ ಪ್ರಸಂಗಗಳು ಭಕ್ತಿ ಪ್ರಸಾರದ ಕಾರ್ಯದಲ್ಲಿ ಮುಂಚೂಣಿಯಲ್ಲಿವೆ.

ಪದ್ಮಪೂರಾಣದ ಎಳೆಯೊಂದರಿಂದ ಆಧರಿಸಿ ಬಂದಿರುವ "ವೀರಮಣಿ ಕಾಳಗ"ದಲ್ಲಿ ಕೂಡಾ ಶ್ರೀರಾಮಭಕ್ತಿಯ ಪರಾಕಾಷ್ಟೆಯನ್ನು ಕಾಣಬಹುದು. ಮದನಾಕ್ಷಿ, ತಾರಾವಳಿಯರ ರಾಮ ಭಕ್ತಿಯನ್ನು ಕವಿ ಹೀಗೆ ಹೇಳಿದ್ದಾನೆ.

"ಪರಮಪುರುಷ ವಿಶ್ವಮೂರ್ತಿಯಾ।

ಚರಿತೆಗಳನು ಬಲ್ಲೆ ನಾನು॥

ಪರಮ ಪುರುಷ ವಿಶ್ವಮೂರ್ತಿಯಾ॥ ಪ॥

ಸ್ಥಿರಚರಾದಿ ಪ್ರಾಣಿ ಹೃದಯದೀವಾಸವಾ।

ಗಿರುವಭಜಕರಂತರಂಗದಿ।

ಕರುಣನಿಧಿಗೆಭೇದವುಂಟೆ॥

ಶರಣಳೆಂಬಮಮತೆಯೊಳಗೆ।

ಬರದೆ ನಿಲನುಕರಸುವೇಗ। ತುರಗವನರ್ಪಿಸುವೆನೊ।

ಕಪ್ಪವಿತ್ತು। ಪರಮ ಸಾಯುಜ್ಯ ಪಡೆವೆನೊ॥

(ಯಕ್ಷಗಾನವೀರಮಣಿ ಕಾಳಗ –ಪುಟ 15 ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ)

ರಾಮಾಶ್ವಮೇಧದ ಕಥೆಯನ್ನು ಆಧರಿಸಿರುವ ಪ್ರಸಂಗದಲ್ಲಿ ಕಲ್ಪನೆಯ ಅಂಶ ಹೆಚ್ಚಿದ್ದರೂ, ಜನರಲ್ಲಿ ಭಕ್ತಿಯ ಪ್ರಸರಣೆಯ ದೃಷ್ಟಿಯಿಂದ ಇದು ಮುಖ್ಯವಾಗುತ್ತದೆ. ನಮ್ಮ ಯಕ್ಷಗಾನ ಕವಿಗಳು ರಾಮಾಯಣವನ್ನು ಈ ರೀತಿ ಬೆಳೆಸಿದ್ದಾರೆ.

ಒಂದು ಅಂದಾಜಿನ ಪ್ರಕಾರ ತೆಂಕುತಿಟ್ಟಿನಲ್ಲಿ ರಾಮಾಯಣದ ಪ್ರಸಂಗಗಳು ಹೆಚ್ಚು ಯಶಸ್ವಿಯಾಗಿವೆ. ಮಹಾಭಾರತದ ಪ್ರಸಂಗಗಳು ಬಡಗುತಿಟ್ಟುಗಳ ಮೂಲಕ ಜನರನ್ನು ಹೆಚ್ಚು ರಂಜಿಸುತ್ತಿವೆ. ಇದಕ್ಕೆ ಕಾರಣ ರಾಮಾಯಣದ ಪ್ರಸಂಗಗಳಲ್ಲಿ ಸಂವಾದಕ್ಕೆ ಹೆಚ್ಚು ಅವಕಾಶವಿದೆ. ಮಹಾಭಾರತ ಪ್ರಸಂಗಗಳಲ್ಲಿ ಯುದ್ಧಕ್ಕೆ, ಆ ಮೂಲಕ ಕುಣಿತಕ್ಕೆ ಅಗ್ರಸ್ಥಾನವಿದೆ. ಈಗಲೂ ಕೂಡಾ ತೆಂಕುತಿಟ್ಟಿನ ಕಲಾವಿದರಲ್ಲಿ ಮಾತುಗಾರಿಕೆ ವಿಶೇಷವಾದದ್ದು, ಜನರೂ ಕೂಡಾ ಉತ್ತಮವಾದ ಮಾತುಗಾರಿಕೆಯನ್ನು ಪ್ರೋತ್ಸಾಹಿಸುತ್ತಾರೆ. ಬಡಗು ಹಾಗೂ ಬಡಾಬಡಗಿನ ಪ್ರೇಕ್ಷಕರು ನರ್ತನ, ಹಾವಭಾವ, ಅಭಿನಯಕ್ಕೆ ಮನಸೂರೆಗೊಳ್ಳುತ್ತಾರೆ. ಮಹಾಭಾರತದ ಪ್ರಸಂಗಗಳಲ್ಲಿ ಇವುಗಳಿಗೆ ಹೆಚ್ಚು ಅವಕಾಶವಿದೆ. ಈ ಕಾರಣ ರಾಮಾಯಣದ ಪ್ರಸಂಗಗಳಿಗಿಂತ ಬಡಗಿನಲ್ಲಿ ಮಹಾಭಾರತದ ಪ್ರಸಂಗಗಳು ಹೆಚ್ಚು ಜನಪ್ರಿಯವಾಗಿವೆ. ತೆಂಕುತಿಟ್ಟಿನಲ್ಲಿ ಹರಿದಾಸರ ಆಗಮನದಿಂದಾಗಿ ಆಟದ ಮಾತುಗಾರಿಕೆ ಶ್ರೀಮಂತವಾಯಿತು, ಪರಿಪುಷ್ಟವಾಯಿತು. ರಾಮಾಯಣದ

ಪ್ರಸಂಗಗಳಲ್ಲಿ ಸಂಭಾಷಣೆಗೆ, ವಾದಕ್ಕೆ, ಸಂವಾದಕ್ಕೆ ಹೆಚ್ಚು ಅವಕಾಶವಿದೆ. ಯಕ್ಷಗಾನ ಕವಿ ತನ್ನ ಪ್ರಸಂಗದಲ್ಲಿ ಒಂದು ರಸಸ್ಯಂಧಿಯನ್ನು ನಿರ್ಮಿಸುತ್ತಾನೆ. ಆ ರಸಸ್ಯಂಧಿಗಳೇ ಪ್ರಸಂಗದ ಜೀವಾಳವಾಗಿರುತ್ತದೆ. ಉದಾಹರಣೆಗೆ ಪಾರ್ತಿಸುಬ್ಬನ 'ಪಂಚವಟಿ' 'ವಾಲಿಸುಗ್ರೀವರ ಕಾಳಗ' ಪ್ರಸಂಗದ ಒಂದು ಭಾಗವನ್ನೇ ಗಮನಿಸಬಹುದು. ರಾಮನ ಬಾಣಕ್ಕೆ ಗುರಿಯಾದ ವಾಲಿಗೂ ಶ್ರೀರಾಮನಿಗೂ ನಡೆಯುವ ಸಂವಾದ ಅರ್ಥಗಾರಿಕೆಯ ವಿಸ್ತಾರಕ್ಕೆ ಹೇಳಿ ಮಾಡಿಸಿದಂತಿದೆ. ಆಟ ಹಾಗೂ ಕೂಟಗಳೆರಡರಲ್ಲೂ ಈ ಭಾಗ ಅದ್ವಿತೀಯವಾಗಿ ಹೊರಹೊಮ್ಮುತ್ತದೆ. ಮರೆಯಿಂದ ಹೊಡೆದ ರಾಮನ ಬಾಣಕ್ಕೆ ಕೆಳಗೆ ಬಿದ್ದ ವಾಲಿ ರಾಮನನ್ನು ಜರಿದು ಹೀಗೆ ಹೇಳಿತ್ತಾನೆ.

"ಜಾಣನಹುದಹುದೋ। ಸಂಗರಕರೆಪ್ರಾಣನಹುದಹುದೊ।
ಕ್ಷೋಣಿಯೊಳ್ಳಿನಗೆಣೆಗಾಣೆ ಪರಾಕ್ರಮಿ ॥ ಜಾಣನಹುದೊ।
ಇವವಂಶದರಸುಗಳೊಳಗೆ ಹಿಂದೆ ಜನಿಸಿದವರು ನಿನ್ನ ಕೆಳಗೆ
ಘನ ಚೋರತನದ ಶಿಖಂಡಿ ವಿದ್ಯಯನೆಷ್ಟು॥
ದಿನ ಸಾಧಿಸಿದೆಯೋ ನೀನು ಲಂಡಿಗಳದು।
ಗುರ್ಣವಕ್ಕೈಕೊಂಡೆಯೇನು। ನಿನ್ನಂಥ ಕು। ಜನರಿಲ್ಲ ಸಾಕ್ಷಿಗಿನ್ನು।
ರಾಘವ ಬಲು ಜಾಣನಹುದಹುದೊ."

(ಪಾರ್ತಿಸುಬ್ಬ ಕವಿಯ ಯಕ್ಷಗಾನ ಪ್ರಸಂಗಗಳು–ಪುಟ 102 –ಸಂ. ವೆಂಕಟಕೃಷ್ಣಯ್ಯ)

ಇದಕ್ಕೆ ರಾಮನು ಕೊಡುವ ಉತ್ತರ ಕೂಡಾ ಅಷ್ಟೇ ಸಶಕ್ತವಾಗಿದೆ.

ವಾನರಾದಿಪ ಕೇಳೆನ್ನ ಮಾತ। ನೀನೆನ್ನ ಜರೆಯುವುದೇಕಿಂದ್ರಜಾತ ......
ನ್ಯಾಯವೇ ತಮ್ಮನ ಸತಿಯ ಮುಟ್ಟುವುದು।
ಹೇಯವಿದ್ದುದರಿಂದ ದೋಷ ತಟ್ಟಿದುದು॥
ಮುಂದಿನ್ನು ಬದುಕಬೇಕೆಂಬಾಸೆ ಉಂಟೆ।
ಹಿಂದೆ ಕರೆವೆ ಬಾಣವದು ನೋಯದಂತೆ॥
ಒಂದೇ ಬುದ್ದಿಯೊಳೆಲ್ಲ ಸತ್ಯವ ಬಿಡದೆ ।
ಚೆಂದವಾಗಿರುವುದು ಸರ್ವರು ಕಡೆಗೆ॥

(ಪಾರ್ತಿಸುಬ್ಬ ಕವಿಯ ಯಕ್ಷಗಾನ ಪ್ರಸಂಗಗಳು–ಪುಟ 105 –ಸಂ. ವೆಂಕಟಕೃಷ್ಣಯ್ಯ) (ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಪ್ರಕಟಣೆ)

ಈ ಪದ್ಯಗಳಲ್ಲಿ ಅರ್ಥ ವಿಸ್ತರಣೆಗೆ ಅವಕಾಶವಿದೆ. ಸಾಕಷ್ಟು ಜನ ಅರ್ಥಧಾರಿಗಳು ತಾಳಮದ್ದಳೆಗಳಲ್ಲಿ ಆಡಿದ ಮಾತುಗಳು, ವ್ಯಾಖ್ಯಾನಿಸಿದ ರೀತಿಗಳು ನಮ್ಮ ನಾಡಿನ ಸಂಸ್ಕೃತಿಯ ಸಂಕಥನಕ್ಕೆ ಸೇರ್ಪಡೆಗೊಳ್ಳುತ್ತಲೇ ಇರುತ್ತದೆ ಇದನ್ನೇ "ಅರ್ಥ ಪ್ರಸವ ಕ್ಷಮತೆ" ಎನ್ನುವುದು. ರಾಮಾಯಣ ಜನರ ನಡುವೆ ಬೆಳೆಯುವ ಪರಿಯಿದು. ಪಾರ್ತಿಸುಬ್ಬನ ರಾಮಾಯಣ ಪ್ರಸಂಗಗಳಲ್ಲಿ ಇಂತಹ ಅನೇಕ "ಸಂವಾದಸೃಷ್ಟಿ"ಗಳು ಇವೆ. ರಾಮ-ಶೂರ್ಪನಖಿ, ಲಕ್ಷ್ಮಣ-ಶೂರ್ಪನಖಿ, ಭರತ-ರಾಮ, ಕೈಕೇಯಿ-ದಶರಥ, ಶೂರ್ಪನಖಿ-ರಾವಣ, ಮಂಡೋದರಿ-ರಾಮಣ, ಸುಗ್ರೀವ-ಲಕ್ಷ್ಮಣ, ತಾರೆ-ಲಕ್ಷ್ಮಣ, ರಾವಣ-ಮಾರಿಚ, ಇಂದ್ರಜಿತು-ಲಕ್ಷ್ಮಣ, ರಾವಣ-ವಿಭೀಷಣ, ಅತಿಕಾಯ-ರಾವಣ ಮುಂತಾದ ಸಂವಾದಗಳು ಅರ್ಥ ಪ್ರಸವ ಕ್ಷಮತೆಯ ಗುಣದಿಂದಾಗಿ ಪ್ರೇಕ್ಷಕರನ್ನು ಮನಸೂರೆಗೊಂಡಿವೆ. ರಾಮಾಯಣದ ಒಳ ಅರ್ಥಗಳನ್ನೆಲ್ಲಾ ನಮ್ಮ ಜನತೆ ತಿಳಿಯುವಂತಾಗಿದೆ. ಮಾನವ ಸ್ವಭಾವಗಳ ಸೂಕ್ಷ್ಮ ಚಿತ್ರಣವನ್ನು ಪಾತ್ರಧಾರಿ ಕಟ್ಟಿಕೊಡುತ್ತಾನೆ. ರಾಮಾಯಣದ ಎಲ್ಲಾ ಪಾತ್ರಗಳು, ಅವುಗಳ ಗುಣ ಸ್ವಭಾವಗಳು ಹಾಗೂ ಮನೋಧರ್ಮ ನಾಡಿನ ಜನತೆಗೆ ಚಿರಪರಿಚಿತವಾದದ್ದು ಯಕ್ಷಗಾನದ ಮೂಲಕ. ಈ ನಿಟ್ಟಿನಿಂದ ರಾಮಾಯಣ ಪ್ರಸರಣದಲ್ಲಿ ಯಕ್ಷಗಾನ ಕವಿಗಳ ಪಾತ್ರ ಅದ್ವಿತೀಯವಾದದ್ದು. ಅವರು ಯಕ್ಷಗಾನ ಮಾಧ್ಯಮದ ಮೂಲಕ "ರಾಮಾಯಣ ಬೆಳೆ" ಯನ್ನು ಬೆಳೆಸಿದ್ದಾರೆ.

ಯಕ್ಷಗಾನದಲ್ಲಿ "ರಾಮಾಯಣ ಬೆಳೆ"ಯನ್ನು ಹುಲುಸಾಗಿ ಬೆಳೆಸಿದವರಲ್ಲಿ ಪ್ರಮುಖರೆಂದರೆ ಪಾರ್ತಿಸುಬ್ಬ, ಹಟ್ಟಿಯಂಗಡಿ ರಾಮಭಟ್ಟ, ಹಲಸಿನಹಳ್ಳಿ ನರಸಿಂಹ ಶಾಸ್ತ್ರಿ, ವೆಂಕಟ, ಗೆರೆಸೊಪ್ಪ ಶಾಂತಪ್ಪಯ್ಯ, ನಗರದ ಸುಬ್ಬ, ವಿಷ್ಣು ಸಭಾಹಿತ, ಅಲೆಟ್ಟಿ ರಾಮಣ್ಣ ಶಗ್ರಿತ್ತಾಯ, ಕವಿಭೂಷಣ ವೆಂಕಪ್ಪ ಶೆಟ್ಟಿ, ಪುತ್ತಿಗೆ ರಾಮಕೃಷ್ಣ ಭಾಗವತ, ಮೂರೂರು ದೇವರ ಹೆಗಡೆ, ಸೀತಾನದಿ ಗಣಪಯ್ಯ ಶೆಟ್ಟಿ, ಹೊಸ್ತೋಟ ಮಂಜುನಾಥ ಭಾಗವತ, ಕೀರಿಕ್ಕಾಡು ಮಾಸ್ತರ್ ವಿಷ್ಣುಭಟ್, ಡಿ.ಎಸ್.ಶ್ರೀಧರ, ಬೆಳಸಲಿಗೆ ಗಣಪತಿ ಹೆಗಡೆ, ಜಾನಕೈ ತಿಮ್ಮಪ್ಪ ಹೆಗಡೆ, ಪ್ರೊ. ಎಂ.ಎ.ಹೆಗಡೆ, ಬಲಿಪ ನಾರಾಯಣ ಭಾಗವತ ಮುಂತಾದವರು. ಈಚೆಗೆ ಜ್ಞಾನಪೀಠ ಪ್ರಶಸ್ತಿ ಪುರಸ್ಕೃತ ಕುವೆಂಪುರವರ "ಶ್ರೀರಾಮಯಣದರ್ಶನಂ" ಆಧರಿಸಿದ ಯಕ್ಷಗಾನ ಮಹಾಕಾವ್ಯವನ್ನು ಡಾ.ಕಬ್ಬಿನಾಲೆ ವಸಂತ ಭಾರಧ್ವಾಜರವರು "ಶ್ರೀರಾಮಲೀಲಾದರ್ಶನಂ" ಹೆಸರಿನಲ್ಲಿ ರಚಿಸಿದ್ದಾರೆ. ಶಿಷ್ಟ ಸಾಹಿತ್ಯದಲ್ಲಿ ಮಾಡಿರುವ ರಾಮಾಯಣವು ಹೀಗೆ ಯಕ್ಷಗಾನ ಲೋಕದಲ್ಲೂ ಕೂಡಾ ಚಿಗುರೊಡೆದ ಪರಿಯಿದು.

ರಾಮಾಯಣದಲ್ಲಿ ಬರುವ ಪಾತ್ರಗಳನ್ನು ಧರಿಸಿ ಜನಮಾನಸದಲ್ಲಿ ಚಿರಸ್ಥಾಯಿಯಾಗಿ ಉಳಿದ ಕಲಾವಿದರು ಹಲವರಿದ್ದಾರೆ. ಇವರಲ್ಲಿ ಪ್ರಮುಖರೆಂದರೆ ಮಾಣಂಗಾಯ್ ಕೃಷ್ಣಭಟ್, ದೇರಣ್ಣ ರೈ, ಬಣ್ಣದ ಕುಟ್ಯಪ್ಪ, ಅಳಿಕೆ ರಾಮ ರೈ, ಕುರಿಯ

ವಿಠಲ ಶಾಸ್ತ್ರಿ, ಗಣಪತಿ ಪ್ರಭು, ಹಾರಾಡಿ ರಾಮಗಾಣಿಗ, ಕುಂಬ್ಳೆಸುಂದರ್ ರಾವ್, ಕೆ.ಗೋವಿಂದ ಭಟ್, ಕೊಳ್ಯೂರುರಾಮಚಂದ್ರ ರಾವ್, ಗುರು ವೀರಭದ್ರ ನಾಯಕ್, ತೆಕ್ಕಟ್ಟೆ ಆನಂದ ಮಾಸ್ತರ್, ಐರೋಡಿ ಗೋವಿಂದಪ್ಪ, ಹಾರಾಡಿ ಕೃಷ್ಣ ಗಾಣಿಗ, ಸಿರಿಯಾರ ಮಂಜುನಾಯ್ಕ, ಸಕ್ಕಟ್ಟು ಲಕ್ಷ್ಮೀನಾರಾಯಣ, ಕುಮಟಾ ಗೋವಿಂದ ನಾಯ್ಕ, ಕೆರೆಮನೆಶಿವರಾಮ ಹೆಗಡೆ, ಕೆರೆಮನೆ ಮಹಾಬಲ ಹೆಗಡೆ, ಮೂರೂರು ದೇವರ ಹೆಗಡೆ, ಕೆರೆಮನೆ ಗಜಾನನ ಹೆಗಡೆ, ಕೊಂಡದಕುಳಿ ರಾಮ ಹೆಗಡೆ, ಲಕ್ಷ್ಮಣ ಹೆಗಡೆ, ಜಲವಳ್ಳಿ ವೆಂಕಟೇಶ್ವರ ರಾವ್, ಗೋಡೆ ನಾರಾಯಣ ಹೆಗಡೆ, ಕೊಳಗಿ ಅನಂತಯ್ಯ ಹೆಗಡೆ ಮುಂತಾದವರು ಮುಖ್ಯರು. "ಶ್ರೀರಾಮ ನಿರ್ಯಾಣ"ದಲ್ಲಿ ರಾಮ ಪಾತ್ರ ನಿರ್ವಹಿಸಿ ರಂಗಸ್ಥಳದಲ್ಲೇ ಇಹಲೋಕ ತ್ಯಜಿಸಿದ ಕೆರೆಮನೆ ಶಂಭು ಹೆಗಡೆಯವರು ರಾಮನ ಪಾತ್ರಕ್ಕೆ ಹೊಸ ಮೆರುಗನ್ನು ನೀಡಿದವರು. ಇದೇ ರೀತಿ ತಾಳ ಮದ್ದಲೆಯಲ್ಲಿ ಕೂಡಾ ರಾಮಾಯಣವನ್ನು ಬೆಳೆಸಿದವರಲ್ಲಿ ಪ್ರಮುಖರೆಂದರೆ ಪೊಳಲಿ ಶಂಕರನಾರಾಯಣ ಶಾಸ್ತ್ರಿ, ನಾರಾಯಣ ಕಿಲ್ಲೆ, ಕವಿಭೂಷಣ ವೆಂಕಪ್ಪಶೆಟ್ಟಿ, ಅರ್ಕುಳ ಸುಬ್ರಾಯ ಆಚಾರ್ಯ, ಅಣ್ಣಪ್ಪ ಕಾರಂತ, ಶೇಣಿ ಗೋಪಾಲಕೃಷ್ಣ ಭಟ್, ಮಲ್ಪೆ ಶಂಕರನಾರಾಯಣ ಸಾಮಗ, ರಾಮದಾಸ ಸಾಮಗ, ಎಂ.ಆರ್.ಶಾಸ್ತ್ರಿ, ಕೆ.ಕಾಂತ ರೈ, ಮುಳಿಯ ಮಹಾಬಲ ಭಟ್, ಎಂ.ಪ್ರಭಾಕರ ಜೋಷಿ, ಅಂಬಾತನಯ ಮುದ್ರಾಡಿ ಡಾ.ರಮಾನಂದ ಬನಾರಿ, ದೇರಾಜೆ ಸೀತಾರಾಮಯ್ಯ, ಜಬ್ಬಾರ್ಸುಮೋ, ರಾಧಾಕೃಷ್ಣ ಕಲ್ಚಾರ್, ವಾಸುದೇವ ರಂಗಾಭಟ್, ಉಜಿರೆ ಅಶೋಕ್ ಭಟ್, ಸಿದ್ಧಕಟ್ಟೆ ಚೆನ್ನಪ್ಪ ಶೆಟ್ಟಿ, ವಿದ್ವಾನ್ ಉಮಾಕಾಂತಭಟ್, ಪ್ರೊ.ಎಂ.ಎ.ಹೆಗಡೆ, ವಾಸುದೇವ ಸಾಮಗ, ಪ್ರೊ.ಎಂ.ಎಲ್.ಸಾಮಗ ಮುಂತಾದವರು. ರಾಮಾಯಣದಲ್ಲಿ ಬರುವ ಅಸಂಖ್ಯ ಪಾತ್ರಗಳ ಅರ್ಥವನ್ನು ಹೇಳುವ ಮೂಲಕ ರಾಮಾಯಣದ ಅಂತರಾರ್ಥವನ್ನು, ಅಲ್ಲಿನ ಜೀವನ ಧರ್ಮವನ್ನು ಜನರಿಗೆ ಉಣ ಬಡಿಸಿದ್ದಾರೆ. ಹೀಗೆ ರಾಮಾಯಣದ ಪ್ರಸರಣದಲ್ಲಿ ನಮ್ಮ ಯಕ್ಷಗಾನ ಪ್ರಸಂಗಗಳು, ಕವಿಗಳು, ಪಾತ್ರಧಾರಿಗಳು, ಅರ್ಥಧಾರಿಗಳು ತಮ್ಮ ಕೈಂಕರ್ಯವನ್ನು ಅಸಾಧಾರಣವಾಗಿ ನೀಡಿದ್ದಾರೆ.

□

ರಾಮಭಟ್ಟರ ಪ್ರಸಂಗಗಳಲ್ಲಿ ಹಾಸ್ಯ

ಹತ್ತೊಂಬತ್ತನೇ ಶತಮಾನದ ಪ್ರಮುಖ ಯಕ್ಷಗಾನಗಳಲ್ಲಿ ಹಟ್ಟಿಯಂಗಡಿ ರಾಮಭಟ್ಟರು ಒಬ್ಬರು. ಕುಂದಾಪುರ ತಾಲ್ಲೂಕಿನ ಹಟ್ಟಿಯಂಗಡಿಯ ಲೋಕನಾಥನ ಭಕ್ತರಾದ ಇವರು ಅದರ ಸಮೀಪದಲ್ಲೇ ವಾಸಿಸುತ್ತಿದ್ದರೆಂಬುದು ಜನಜನಿತವಾಗಿದೆ. ಇವನ ವಂಶಸ್ಥರು ಈಗ ಖ್ಯಾತಿಗೊಂಡಿರುವ ಹಟ್ಟಿಯಂಗಡಿಯ ಶ್ರೀಸಿದ್ಧಿವಿನಾಯಕ ದೇವಸ್ಥಾನದ ಅರ್ಚಕರು, ಮಾಕ್ತೇಸರರು ಆಗಿದ್ದಾರೆ. ಇವರ ಕಾಲ ಕ್ರಿ.ಶ.1794 ರಿಂದ 1854 ಎಂಬುದಾಗಿ ಇವರ ಕುರಿತು ಮೊದಲಿಗೆ ಲೇಖನವನ್ನು ಬರೆದ ಐರೋಡಿ ಶಿವರಾಮಯ್ಯನವರು ಅಭಿಪ್ರಾಯಿಸಿದ್ದಾರೆ. ಇವರ ಆಶು ಕವಿತ್ವದ ಬಗ್ಗೆ ಸಾಕಷ್ಟು ದಂತಕತೆಗಳು ಪ್ರಚಲಿತವಿವೆ. ಯಕ್ಷಗಾನ ಪ್ರಸಂಗ ರಚನೆಗೆ ತಮ್ಮದೇ ಆದ ದಿಕ್ಕನ್ನು ತೋರಿಸಿ ಕೊಟ್ಟವರು. ರಾಮಭಟ್ಟರು. ಇವರ ಹಿಂದೆ ಆಗಿ ಹೋಗಿರುವ ಯಕ್ಷಗಾನ ಕವಿಗಳು ಹೆಚ್ಚಾಗಿ ಮೂಲ ವಸ್ತುವನ್ನೇ ಆಧರಿಸಿ ಪ್ರಸಂಗ ರಚಿಸಿರುವುದು ಕಂಡು ಬರುತ್ತದೆ. ಆದರೆ ರಾಮಭಟ್ಟರು ತಮ್ಮ ಪ್ರಸಂಗಗಳಲ್ಲಿ ಅನೇಕ ನೂತನ ಕಾಲ್ಪನಿಕ ಅಂಶಗಳನ್ನು ಸೇರಿಸಿ ಆಕರ್ಷಕವಾಗುವಂತೆ ಮಾಡಿದ್ದಾರೆ. ಇವರು ಸುಭದ್ರಾ ಪರಿಣಯ, ರತಿಕಲ್ಯಾಣ, ದ್ರೌಪದಿ ಸ್ವಯಂವರ, ದ್ರೌಪದಿ ವಸ್ತ್ರಾಪಹರಣ, ರಾಜಸೂಯ ಯಾಗ, ಅತಿಕಾಯ ಕಾಳಗ, ಧ್ರುವ ಚರಿತ್ರೆ, ಲವಕುಶ ಕಾಳಗ, ಕಂಸ ವಧೆ, ಬಿಲ್ಲು ಹಬ್ಬ ಮುಂತಾದ ಪ್ರಸಂಗಗಳನ್ನು ರಚಿಸಿದ್ದಾರೆ. ಇವರು "ಲವಕುಶ ಕಾಳಗ" ಪ್ರಸಂಗಕ್ಕೆ ಚಿತ್ರಪಟ ರಾಮಾಯಣ ಎಂಬುವುದು ಆಧಾರವಾಗಿದ್ದು, ಕಥಾವಸ್ತುವಿನಲ್ಲಿ ಅನೇಕ ತಿರುವುಗಳಿವೆ. ಶೂರ್ಪಣಖಿಯ ಸೇಡಿನ ಜ್ವಾಲೆ ಮುಂದುವರೆದ ಭಾಗ ಇಲ್ಲಿ ಕಥಾವಸ್ತುವಾಗಿದೆ. ರತಿ ಕಲ್ಯಾಣದಲ್ಲಿ ದ್ರೌಪದಿಯ ಶಕ್ತಿಯ ಬಗ್ಗೆ ವಿಶೇಷತೆ ಇದೆ. ಇಲ್ಲಿ ಆಕೆ ಶಕ್ತಿ ಸಮನ್ವಿತೆಯಾಗಿ ವಿಜೃಂಭಿಸಿ ರತಿಯ ಮದುವೆಗೆ ಕಾರಣಳಾಗುತ್ತಾಳೆ. "ಸುಭದ್ರಾ ಕಲ್ಯಾಣ" ಕಲ್ಯಾಣದ ಪ್ರಾರಂಭದಲ್ಲಿ "ಶರಸೇತು ಬಂಧನ" ದ ಕಥೆಯು ಹೊಸದಾಗಿ ಬಂದಿದೆ. ದ್ರೌಪದಿ ಸ್ವಯಂವರದಲ್ಲೂ ಭೀಮನ ಅತೀ ಮಾನವೀಯತೆಯ ಸಾಕ್ಷಾತ್ಕಾರವಿದೆ. ಹೀಗೆ ರಾಮಭಟ್ಟರ ಪ್ರಸಂಗಗಳಲ್ಲಿ ಅನೇಕ ನೂತನ ವಿಶೇಷತೆಗಳು ಅಡಗಿರುತ್ತವೆ.

ರಾಮಭಟ್ಟರ ಪ್ರಸಂಗಗಳ ಇನ್ನೊಂದು ಆಕರ್ಷಣೀಯ ಅಂಶವೆಂದರೆ ಹಾಸ್ಯಗಾರನ ಪಾತ್ರವನ್ನು ತಂದಿರುವ ಬಗೆಯಾಗಿದೆ. ಅವರ ಹೆಚ್ಚಿನ ಪ್ರಸಂಗಗಳಲ್ಲಿ ಹಾಸ್ಯ ಪಾತ್ರಕ್ಕೆ ಒದಗಿ ಬರುವ ಪದ್ಯಗಳು ಹಾಡಲು ಅಭಿನಯಿಸಲು ನರ್ತಿಸಲು ಸಹಕಾರಿಯಾಗಿದೆ. ರಂಗದಲ್ಲಿ ಹಾಸ್ಯ ಹೊಮ್ಮಿಸಲು ಅವು ಪೂರಕವಾಗಿವೆ. ಅವರ "ಯಕ್ಷಗಾನ ಧ್ರುವ ಚರಿತ್ರೆ" ಯಲ್ಲಿ ಧ್ರುವನು ಸಂತಸದಿಂದ ಅಳುತ್ತಿರುವ ಸಮಯದಲ್ಲಿ ವನ ಪಾಲಕರು ಒಡ್ಡೋಲಗಕ್ಕೆ ಬಂದು ಕಾಡು ಪ್ರಾಣಿಗಳ ಹಾವಳಿಯನ್ನು ವಿವರಿಸುವ ಬಗೆ ಸೊಗಸಾಗಿದೆ. ಇಲ್ಲಿ ವನಪಾಲಕನ ಪಾತ್ರವನ್ನು ಹಾಸ್ಯಗಾರನಾದವನು ವಹಿಸುತ್ತಾನೆ. ಆತನ ವೇಷಗಾರಿಕೆಯು ವಿಭಿನ್ನವಾಗಿರುತ್ತದೆ. ಕೆಳಗೆ ಬಂದಿರುವ ಪೂರ್ವಿ ರಾಗದ ಏಕತಾಳದ ಪದ್ಯ ಹಾಸ್ಯಗಾರನ ಕುಣಿತಕ್ಕೆ ಹೇಳಿ ಮಾಡಿಸಿದಂತಿದೆ. ಇಲ್ಲಿನ ಹಾಡಿನ ಭಾಷೆಯು ಕೂಡ ಹಾಸ್ಯವನ್ನು ಉಕ್ಕಿಸುತ್ತಿದೆ.

"ಪರಾಕು ಸಲಾಮು ಸ್ವಾಮಿ – ಭರಾಕೆ ಬಂದೆವು ಪ್ರೇಮಿ
ಕಿರುಕುಳ ಹೆಚ್ಚೈತೆ ಮಿಣಗಳ – ಹೊಲನಾಗೆ ಬಾಳ ॥ಪ॥
ಪಕ್ಷಿಗಳೆಲ್ಲಾ ಬಂದು ಲೆಕ್ಕ ಸಂಖ್ಯೆಯಿಲ್ಲದಿಂದು
ಪೊಕ್ಕೂರೆಗೈದವ್ ತನಿವಣ – ಹೌದೇನಿರಣ್ಣ
ಅಡವಿ ಮದ್ದಾನೆ ಹಿಂಡು – ಗಿಡ ಮರನ ಮುರಿವುದ ಕಂಡು
ವೊಡಲೊಳ್ ಸಂಕಟವಾಯಿತು ದೊರೆಯೇ – ಸಿಂಗಾರದ ಸಿರಿಯೇ॥

(ಹಟ್ಟಿಯಂಗಡಿ ರಾಮಭಟ್ಟರ ಯಕ್ಷಗಾನ ಕೃತಿಗಳು ಪುಟ 119)

ಹೀಗೆ ಬಂದಿರುವ ಪದ್ಯಗಳು ಹಾಸ್ಯದ ಅಭಿವ್ಯಕ್ತಿಗೆ ಉತ್ತಮ ಅವಕಾಶ ನೀಡುತ್ತವೆ. ಪ್ರಾಣಿ ಪಕ್ಷಿಗಳ ಹಾವಳಿಯಿಂದ ತಮ್ಮ ಬದುಕು ದುರಂತಕ್ಕೆ ಈಡಾದುದನ್ನು ಆತ ಧ್ರುವನಲ್ಲಿ ತೋಡಿಕೊಳ್ಳುತ್ತಾನೆ. ಇದೇ ರೀತಿ ರಾಮಭಟ್ಟರು ರಚಿಸಿರುವ ಇನ್ನೊಂದು ಪ್ರಸಿದ್ಧ ಪದ್ಯವೆಂದರೆ "ಸುಭದ್ರ ಕಲ್ಯಾಣ"ದಲ್ಲಿ ಬಂದಿರುವುದು. ಈ ಪದ್ಯ ಬಹು ಆಕರ್ಷಕವಾಗಿದ್ದು ವನ ಪಾಲಕನ ಅಜ್ಞಾನವನ್ನು ಮುಗ್ಧತೆಯನ್ನು ಬಿಂಬಿಸುವುದೇ ಅಲ್ಲದೇ ನಗು ಉಕ್ಕಿಸುವ ರೀತಿಯ ಅಭಿನಯಕ್ಕೆ ಕಾರಣವಾಗುತ್ತವೆ. ಬ್ರಾಹ್ಮಣರನ್ನು ಉದ್ದೇಶಿಸಿ ಬರುವ ಈ ಪದ್ಯ ಮುನಿಗಳ ಋಷಿಗಳ ವರ್ತನೆಗಳನ್ನು ವಿಡಂಬಿಸುತ್ತದೆ.

ರಾಗ : ಮಾರವಿ ಏಕತಾಳ

ಎಲೆ ಎಲೆ ಹಾರ್ವಯಾರ್ ಮ್ಯಾ ನೀನು..
ಹೊಲದೊಳಗೇನಾ ಮಾಡ್ತೀ ॥
ಚಳಿಮಳೆಗಾಳಿಗೆ ಚಲಿಸದೇ ನೆಟ್ಟನೇ ।
ಕುಳ್ತೀನ್ ಮೇಲಕ್ಕೆ ನೋಡ್ತೀ

ಮೂಗಿನ ಮ್ಯಾಗೇ ಮೂ ಬೆರಳಿಟ್ಟು

ಮೂಗಾನಂದದಲಿರುವಿ

ಹೀಗೇತಕೆ ಮಿಣಮಿಣನೆ ಬಾಯ್ .

ಗೂಗೆಯ ತೆರದಲ್ಲಿ ತೆರವಿ ..

(ಹಟ್ಟಿಯಂಗಡಿ ರಾಮಭಟ್ಟ ಯಕ್ಷಗಾನ ಕೃತಿಗಳು ಪುಟ 266)

ಮುಂದೆ ಇದೇ ವನಪಾಲಕ ಬಲರಾಮನ ಆಸ್ಥಾನಕ್ಕೆ ತೆರಳಿ ಈ ವಿಚಾರಗಳನ್ನು ಆತನಲ್ಲಿ ನಿವೇದಿಸಿಕೊಳ್ಳುವಲ್ಲಿ ಹಾಸ್ಯ ಉಕ್ಕುವುದು ಕಾಣಬಹುದು.

ಈ ಪದ್ಯಗಳಲ್ಲಿ ಋಷಿ ವೇಷದಲ್ಲಿ ಇರುವ ಅರ್ಜುನನನ್ನು ತಪಸ್ಸಿಗೆ ಕುಳಿತ ಪರಿಯನ್ನು ತನ್ನದೇ ಆದ ಧಾಟಿಯಲ್ಲಿ ಚಾರಕ ವಿವರಿಸುತ್ತಾನೆ. ಧ್ಯಾನಾಸಕ್ತನಾದ ಆತನನ್ನು ನೋಡಿ ಚಳಿ ಮಳೆ ಗಾಳಿಗೆ ಲೆಕ್ಕಿಸದೇ ಮೂಗು ಮುಚ್ಚಿಕೊಂಡು ಮೂಕನ ರೀತಿಯಲ್ಲಿ ಆಕಾಶ ನೋಡುತ್ತಾ ಇರುವುದೇಕೆ? ಎಂದು ಕೇಳುತ್ತಾನೆ. ಬಾಯಲ್ಲಿ ಮಂತ್ರ ಜಪಿಸುವುದನ್ನು ಗೂಬೆಯ ತೆರದಲ್ಲಿ ಬಾಯಿ ಚಲಿಸುತ್ತಿದೆ ಎನ್ನುತ್ತಾನೆ. ಬಲರಾಮನ ಆಸ್ಥಾನಕ್ಕೆ ಬಂದ ಚಾರಕನು ಅಲ್ಲಿ ಕೂಡಾ ತನ್ನ ಅಭಿನಯ ಚಾತುರ್ಯದಿಂದ ಪ್ರದರ್ಶನದಲ್ಲಿ ಹಾಸ್ಯ ಉಕ್ಕುವಂತೆ ಮಾಡುತ್ತಾನೆ ಒಳ್ಳೆಯ ಭಾಗವತರಿದ್ದರೆ ಇನ್ನಷ್ಟು ಹಾಸ್ಯ ಇಲ್ಲಿ ಉಕ್ಕಿಸಲು ಸಾಧ್ಯ. ಬಲರಾಮ ಹಾಗೂ ಕೃಷ್ಣರ ಸಂಭಾಷಣೆಯಲ್ಲಿ ಹಾಸ್ಯ ರಸಕ್ಕೆ ಪೂರಕವಾಗಿರುವ ಸಂಗತಿಗಳಿವೆ. ಇವು ಪ್ರೇಕ್ಷಕರನ್ನು ನಗೆಗಡಲಿಗೆ ಸೇರಿಸುವ ಭಾಗವಾಗಿದ್ದು ಅದರಿಂದಲೇ "ಸುಭದ್ರ ಕಲ್ಯಾಣ" ಯಶಸ್ವಿ ಪ್ರಸಂಗವಾಗಿದೆ. ಬಲರಾಮನ ಒಡ್ಡೋಲಗದ ಸನ್ನಿವೇಶ ಕೂಡ ಹಾಸ್ಯಮಯವಾಗಿದೆ. ಬಲರಾಮನು ಕೃಷ್ಣನನ್ನು ವಿಡಂಬಿಸಿ ಹೇಳುವ ಮಾತುಗಳಲ್ಲೆಲ್ಲ 'ಕಟಕಿ' ಇದೆ. ವ್ಯಂಗ್ಯದ ಮೊನಚು ಇದೆ.

ಲವಕುಶ ಕಾಳಗದಲ್ಲಿ ಚಾರಕರು ರಾಮನಲ್ಲಿ ಬಂದು "ಲಾಲಿಸು ರಾಮಚಂದ್ರ ।ಸದ್ಗುಣ ಸಾಂದ್ರ।" ಎಂದು ಪ್ರಾರಂಭವಾಗುವ ಪದ್ಯದಲ್ಲಿ ಹಾಸ್ಯ ತರಲು ಅವಕಾಶವಿದೆ. ಮುಂದೆ ಚಂದ್ರಮತಿಯ ಉಪಾಯದಿಂದಾಗಿ ಲವನು ತಪ್ಪಿಸಿಕೊಂಡ ವಿಚಾರವನ್ನು ರಾಮನ ಗಮನಕ್ಕೆ ತರುವಾಗಲೂ ಕೂಡಾ ಇದೇ ಬಗೆಯ ಚಾರಕರ ಪದ್ಯಗಳು ಹಾಸ್ಯ ರಸವನ್ನು ಸೃಷ್ಟಿಸಲು ಸಾಧ್ಯವಾಗುತ್ತದೆ. "ದ್ರೌಪದೀ ಸ್ವಯಂವರ"ದಲ್ಲೂ ಬಕಾಸುರನ ವಧೆಯ ಪೂರ್ವದಲ್ಲಿ ಬ್ರಾಹ್ಮಣನ ಮನೆಯಲ್ಲಿ ಅಡುಗೆ ತಯಾರಿ ಆಗುತ್ತಿದ್ದುದರ ವರ್ಣನೆ ಹಾಗೂ ಅದಕ್ಕೆ ಭೀಮನ ಪ್ರತಿಕ್ರಿಯೆ ಬಹಳ ಹಾಸ್ಯ ಪೂರ್ಣವಾಗಿದೆ. ಅದನ್ನು ರಾಮಭಟ್ಟರು "ಪರಿಪರಿಯ ಶಾಕಭಕ್ಷ್ಯಗಳ ವಾಸನೆಯಿಂದ।ಇರುಳು ನಿದ್ರೆಯು ಬಾರದಾಯಿತು ಭೀಮನಿಗೆ" ಎಂದು ವರ್ಣಿಸಿದ್ದಾರೆ. ಇಲ್ಲೂ ಮುಂದೆ ಚಾರಕರು ಹಸ್ತಿನಾವತಿಗೆ ಬಂದು ಕೌರವನಿಗೆ ಸುದ್ದಿಯನ್ನು ತಲುಪಿಸುವಲ್ಲೂ

ಹಾಸ್ಯಕ್ಕೆ ಅವಕಾಶವಿದೆ. ಸ್ವಯಂವರ ಮಂಟಪಕ್ಕೆ ಬಂದ ಪಾಂಡವರು ಅದರಲ್ಲೂ ಭೀಮ ಊಟಕ್ಕಾಗಿ ಇಲ್ಲಿಗೆ ಬಂದಿದ್ದೇವೆ ಎಂದು ಹೇಳುವುದರಲ್ಲಿನ ಪದ್ಯಗಳು ಬ್ರಾಹ್ಮಣರ ಭೋಜನ ಪ್ರಿಯತೆಯನ್ನು ಸೂಚಿಸುತ್ತಾ ಹಾಸ್ಯಕ್ಕೆ ಕಾರಣವಾಗುತ್ತದೆ. ಅರ್ಜುನನು ಬಿಲ್ಲಿನ ಪಣವನ್ನು ಗೆಲ್ಲಲು ಹೊರಟಾಗಿನ ವರ್ಣನೆ ಕೂಡಾ ಹಾಸ್ಯ ರಸದಿಂದ ಕೂಡಿದೆ. ಕುಮಾರವ್ಯಾಸನು ಕೂಡಾ ಈ ಭಾಗವನ್ನು ಬಹಳ ಚೆನ್ನಾಗಿ ವಿಡಂಬಿಸಿದ್ದಾನೆ. ದಕ್ಷಿಣೆಗೆಂದು ಹವಣಿಸಿರುವ ವಿಪ್ರ ಸಂತತಿಗೆ ಅವಕಾಶವನ್ನು ಕೊಟ್ಟಾಗ ಅರ್ಜುನನು ವೇದಿಕೆಯ ಹತ್ತಿರ ಬರುತ್ತಾನೆ. ಭೂ ಸುರರು ಹೀಗೆ ಹೇಳುತ್ತಾರೆ.

ರಾಗ ತೋಡಿ ತ್ರಿವುಡೆ ತಾಳ

ನಾವು ವಚನದಿ ಶೂರರಲ್ಲದೇ।ಸಲೇ ಕಾರ್ಯ ನಿಪುಣರೆ

ಭಾವಿಸಲು ಧನು ಸದರವುಳ್ಳಡೆ

ಭೂವಧೂವಲ್ಲಬರು, ಹಲಬರು।

ತಾವೇ ಸೋತರೂ ನಮಗೆ ಸುಲಭವೇ।

ಕೋವಿದರು ನಮಗಿದಿರಹರೆ ವಿ।

ದ್ಯಾವಳಿಯಲಿ ಪರೀಕ್ಷೆಯೀವೆವು।

ಅಲ್ಲದಿರೆ ವಿಧವಿಧದ ಶಾಕದಲ್ಲಿ। ಘೃತಸೂಪ ಪಾಯಸ

ಸಲ್ಲಲಿತ ಸುಸ್ವಾದು ಪಾಕದಲಿ

ಬೆಲ್ಲ ಬೆರಸಿದ ಹೂರಿಗೆಯಮೇಲು।

ವಲ್ಲಿ ಸಂಡಿಗೆ ಪರಡಿ ಹೂರಣ।

ದಲ್ಲಿ ನಮ್ಮ ಪರೀಕ್ಷೆಯೇನು ಭೂ ವಲ್ಲಭನು ತಾಕರೆಸಿ ನೋಡಲಿ॥

(ಹಟ್ಟಿಯಂಗಡಿ ರಾಮಭಟ್ಟರ ಯಕ್ಷಗಾನ ಕೃತಿಗಳು ಪುಟ 395)

ಎಂದು ಮದುವೆಗೆಂದು ಬಂದ ಬ್ರಾಹ್ಮಣರು ಹೇಳಿ ಅರ್ಜುನನ್ನು ತಡೆಯುತ್ತಾರೆ.

ಈ ಬಗೆಯ ಪದ್ಯ ರಚನೆಯ ಮೂಲಕ ಹಟ್ಟಿಯಂಗಡಿ ರಾಮಭಟ್ಟರು ತಮ್ಮ ಯಕ್ಷಗಾನ ಪ್ರಸಂಗಗಳಲ್ಲಿ ಹಾಸ್ಯಕ್ಕೆ ಅವಕಾಶ ಕಲ್ಪಿಸಿರುತ್ತಾರೆ. ಪ್ರದರ್ಶನ ರಂಜನೀಯವಾಗಲು ಯಶಸ್ವಿಯಾಗಲು ಹಾಸ್ಯ ಅತಿ ಅವಶ್ಯಕವಾಗಿದೆ. ಪ್ರತಿಮೇಳದವರು ಉತ್ತಮ ಹಾಸ್ಯಗಾರರನ್ನು ಇದಕ್ಕಾಗಿಯೇ ಹೊಂದಿರುತ್ತಾರೆ. ಅಂತಹ ಹಾಸ್ಯಗಾರರಿಗೆ ಅವಕಾಶವಾಗುವಂತಹ ಪದ್ಯಗಳನ್ನು ಯಕ್ಷಕವಿಗಳು ರಚಿಸಬೇಕಾಗುತ್ತದೆ. ಈ ಕೃತ್ಯದಲ್ಲಿ ರಾಮಭಟ್ಟರು ಯಶಸ್ವಿಯಾಗಿದ್ದಾರೆ.

ಹಟ್ಟಿಯಂಗಡಿಯ ರಾಮಭಟ್ಟರು ಹದಿನೇಳಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗಗಳನ್ನು ಬರೆದಿದ್ದಾರೆ. ಅವುಗಳಲ್ಲಿ ಅತಿಕಾಯಕಾಳಗ, ಕಂಸವಧೆ, ಸುಭದ್ರಾ ಕಲ್ಯಾಣ, ಇಂದ್ರಜಿತು ಕಾಳಗ, ರತಿಕಲ್ಯಾಣ, ರಾಜಸೂಯ, ಹಿಡಿಂಬಾ ವಿವಾಹ, ಗಿರಿಜಾ ವಿಲಾಸ, ದ್ರೌಪದೀ ವಸ್ತ್ರಾಪಹರಣ, ಧ್ರುವ ಚರಿತ್ರೆ, ಲಕ್ಷಣ ಕಲ್ಯಾಣಗಳು ಖ್ಯಾತಿಗೊಂಡಿವೆ. ಭಾಗವತದ ನಾಲ್ಕನೆಯ ಸ್ಕಂದವನ್ನು ಆಧರಿಸಿ ಬರೆದ 'ಧ್ರುವ ಚರಿತ್ರೆ'ಯಲ್ಲಿ 463 ಪದ್ಯಗಳಿದ್ದು ದೊಡ್ಡ ಪ್ರಸಂಗವಾಗಿದೆ. ಸಾಂಸಾರಿಕ ವಿಚಾರಗಳ ನಿರೂಪಣೆಯಲ್ಲಿ ಸಹಜತೆ ಇದೆ. ಹಾಸ್ಯವಿದ್ದಷ್ಟೇ ಶೋಕರಸದ ಪದ್ಯಗಳನ್ನು ಬರೆಯುವಲ್ಲಿ ಕೂಡಾ ಹಟ್ಟಿಯಂಗಡಿ ರಾಮಭಟ್ಟರು ಸಿದ್ಧಹಸ್ತರು. ಚಿತ್ರಕವಿತ್ವವನ್ನು ರಚಿಸುವಲ್ಲಿ ಕೂಡಾ ರಾಮಭಟ್ಟರು ಪ್ರಯತ್ನಿಸಿದ್ದು ಯಶಸ್ವಿಯಾಗಿದ್ದಾರೆ. ಅವರ 'ಲವಕುಶರ ಕಾಳಗ' ಪಾರ್ತಿಸುಬ್ಬನ 'ಕುಶಲವರ ಕಾಳಗ' ಪ್ರಸಂಗಕ್ಕಿಂತ ವಸ್ತುವಿನಲ್ಲಿ ಭಿನ್ನವಾಗಿದೆ. ಆದುದರಿಂದಲೇ ಕವಿ ಇದನ್ನು 'ಲವಕುಶ ಕಾಳಗ' ಪಟದಸಂಧಿ ಎಂದು ಕರೆದಿರುವುದು. ಇಲ್ಲಿ ಆತ ಉತ್ತರ ರಾಮಾಯಣದ ಕಥೆ ಹೇಳ ಹೊರಟರೂ ವಸ್ತುವು ಬೇರೆಯಾಗಿದ್ದು ಯಾವುದೋ ಜಾನಪದ ಮೂಲದ ಕಥೆಯನ್ನು ಆಶ್ರಯಿಸಿದಂತಿದೆ. ಅವರ ರತಿಕಲ್ಯಾಣದ ಕಥಾವಸ್ತುವು ಕೂಡಾ ಹೀಗೆ ವಿಶೇಷತೆಯಿಂದ ಕೂಡಿದೆ. ಹಟ್ಟಿಯಂಗಡಿಯ ರಾಮಭಟ್ಟರು ಹೀಗೆ ಪ್ರಸಂಗಗಳಲ್ಲಿ ವಿನೂತನೆಯನ್ನು ತರುವುದನ್ನು ಅವರ ಹಲವು ಪ್ರಸಂಗಗಳಲ್ಲಿ ನಾವು ಕಾಣಬಹುದು. ಹಾಸ್ಯರಸವನ್ನು ಪ್ರಸಂಗದಲ್ಲಿ ತರಲೋಸುಗ ಅವರ ಹೆಚ್ಚಿನ ಪ್ರಸಂಗಗಳಲ್ಲಿ ಚಾರಕರು, ವನಪಾಲಕರು, ಬ್ರಾಹ್ಮಣರು ಬರುತ್ತಾರೆ. ಆ ಮೂಲಕ ಯಕ್ಷಗಾನ ರಂಜನೀಯವಾಗುವಂತೆ ನೋಡಿಕೊಳ್ಳುತ್ತಾರೆ. ಹೀಗೆ ವಸ್ತುವಿನ ನಾವೀನ್ಯತೆಯಿಂದ ಹಾಸ್ಯಮಯ ಸನ್ನಿವೇಶಗಳಿಂದ ಸರಳ ಹಾಗೂ ಸರಸವಾದ ಭಾಷಾ ಬಳಕೆಯಿಂದ ರಾಮಭಟ್ಟರ ಪ್ರಸಂಗಗಳು ಗಮನ ಸೆಳೆಯುತ್ತವೆ.

□

ಯಕ್ಷಗಾನ ದ್ರೌಪದಿ ಪ್ರತಾಪ

ಪಾತ್ರವರ್ಗ :	ಇತರಪಾತ್ರಗಳು :
ಧರ್ಮರಾಜ	ಭೃಕುಟಿ
ನಕುಲ	ಭೃಂಗಿ
ಭೀಮ	ಗಣಪತಿ
ಅರ್ಜುನ	ಷಣ್ಮುಖ
ನಾರದ	ವೀರಭದ್ರ
ಶ್ರೀಕೃಷ್ಣ	ಅನಿರುದ್ಧ
ಬಭ್ರುಸೇನ (ರುಂಡ)	ವಜ್ರ
ಸೂರ್ಯವರ್ಮ	ಅಕ್ರೂರ
ಚಂದ್ರವರ್ಮ	ಉದ್ಧವ
ದ್ರೌಪದಿ	ನಂದಿ
ಹನುಮಂತ	ನಿಶುಂಭ
ಸುಭದ್ರ	ಚಂಡ
ಕೃತವರ್ಮ	ಪ್ರಚಂಡ
ಸಾತ್ಯಕಿ	ಭೈರವ
ಸಾಂಬ	ವೀರಬಾಹುಕ
ಮನ್ಮಥ	ಮತಂಗ
ಬಲರಾಮ	ಪಿಂಗಲ
ಈಶ್ವರ	
ಪಾರ್ವತಿ (ಮಹಾಕಾಳಿ-ಚಂಡಿ)	

ಕಥಾಸಾರಾಂಶ :

ಕುರುಕ್ಷೇತ್ರ ಯುದ್ಧ ನಡೆದು ಪಾಂಡವರು ಹಸ್ತಿನಾಪುರದಲ್ಲಿ ರಾಜ್ಯಭಾರ ಮಾಡುತ್ತಿದ್ದರು. ಒಂದು ದಿನ ಧರ್ಮರಾಜ ಒಡ್ಡೋಲಗವನ್ನು ಕೊಡುತ್ತಾನೆ. ಶ್ರೀಹರಿಯ ಸಹಾಯದಿಂದ ಕುರುಕ್ಷೇತ್ರದಲ್ಲಿ ನಮಗೆ ಜಯ ಸಾಧ್ಯವಾಯಿತು ಎಂದು ಆತ ಸಭೆಯಲ್ಲಿ ತಿಳಿಸುತ್ತಾನೆ. ಆಗ ಅದನ್ನು ಭೀಮ ಮತ್ತು ಅರ್ಜುನರು ಅಲ್ಲಗಳೆಯುತ್ತಾರೆ. ಭೀಮನು ಮೊದಲಿಗೆ ತನ್ನಿಂದಾಗಿಯೇ ವಿಜಯ ಸಾಧ್ಯವಾಯಿತು ಎನ್ನುತ್ತಾನೆ. ಭೀಮನನ್ನು ವಿರೋಧಿಸುತ್ತಾ ಅರ್ಜುನ ತನ್ನ ಪರಾಕ್ರವನ್ನು ಕೊಚ್ಚಿಕೊಳ್ಳುತ್ತಾನೆ. ಭೀಮನನ್ನು ಹಿಯಾಳಿಸುತ್ತಾನೆ. ಈಗ ಅಣ್ಣತಮ್ಮಂದಿರಲ್ಲಿ ವಾದವಿವಾದ ಹೆಚ್ಚಿ ಅವರಿಬ್ಬರ ಮಧ್ಯೆ ವೈಮನಸ್ಸು ಬೆಳೆಯುತ್ತದೆ. ಕಲಹಕ್ಕೆ ಕಾರಣವಾಗುತ್ತದೆ. ಆಗ ನಾರದರು ಅಲ್ಲಿಗೆ ಆಗಮಿಸಿ ಅವರಿಬ್ಬರನ್ನು ವ್ಯಾಜ್ಯ ತೀರ್ಮಾನಕ್ಕಾಗಿ ಕೃಷ್ಣನಲ್ಲಿಗೆ ಕರೆದುಕೊಂಡು ಬರುತ್ತಾರೆ. ಕೃಷ್ಣನು ತೀರ್ಮಾನ ನೀಡಬೇಕೆಂದು ಇಬ್ಬರೂ ಕೇಳುತ್ತಾರೆ. ಕುರುಕ್ಷೇತ್ರ ಯುದ್ಧದಲ್ಲಿ ಯಾರು ಹೆಚ್ಚಿಗೆ ಕಾದಾಡಿದರು ಎಂಬುದು ನಮಗೂ ಕೂಡಾ ತಿಳಿದಿಲ್ಲ ಎಂದು ಹೇಳಿ ಉಪಾಯವೊಂದನ್ನು ಹೂಡಿ ಕುರುಕ್ಷೇತ್ರ ಯುದ್ಧಭೂಮಿಗೆ ಕರೆದುಕೊಂಡು ಬರುತ್ತಾನೆ. ಅಲ್ಲಿರುವ ಎಲ್ಲಾ ಯುದ್ಧಗಳನ್ನು ಸಾಕ್ಷಾತ್ ನೋಡಿರುವ ಬಭ್ರುಸೇನನ ರುಂಡದ ಹತ್ತಿರ ಬಂದು ಈ ಪ್ರಶ್ನೆ ಇಡುತ್ತಾರೆ. ಆಗ ರುಂಡವು ಯುದ್ಧರಂಗದಲ್ಲೆಲ್ಲಾ ತಾನು ಕಂಡದ್ದೂ ಚಕ್ರ ಮತ್ತು ಚಂಡಿಕೆಯನ್ನು ಮಾತ್ರ ಎನ್ನುತ್ತಾನೆ. ಇದನ್ನು ಕೇಳಿ ಕೋಪಗೊಂಡ ಭೀಮನು ಆ ರುಂಡವನ್ನು ತನ್ನ ಗದೆಯಿಂದ ಪುಡಿಪುಡಿ ಮಾಡುತ್ತಾನೆ. ರುಂಡಕ್ಕೆ ಇದರಿಂದಾಗಿ ಸದ್ಗತಿ ದೊರೆಯುತ್ತದೆ. ಶ್ರೀಕೃಷ್ಣ ಮತ್ತು ನಾರದರು ಭೀಮಾರ್ಜುನರಿಗೆ ಸಹಬಾಳ್ವೆ ಬೋಧಿಸಿ, ಕಲಹ ಸರಿಯಲ್ಲ ಎಂದು ಹಿತವಚನ ನುಡಿಯುತ್ತಾರೆ. ಮುಂದೆ ಎಲ್ಲರೂ ಅವರವರ ಸ್ವಸ್ಥಾನಕ್ಕೆ ತೆರಳುತ್ತಾರೆ. ಆದರೆ ಈ 'ಹಿತೋಪದೇಶ' ಇಬ್ಬರಿಗೂ ಇಷ್ಟವಾಗುವುದಿಲ್ಲ. ಪುನಃ ಇವರಿಬ್ಬರ ಮಧ್ಯೆ ಹೋರಾಟ ನಡೆಯುತ್ತದೆ. ಅದರಲ್ಲಿ ಭೀಮ ಸೋಲುತ್ತಾನೆ, ಅರ್ಜುನ ಬೀಗುತ್ತಾನೆ.

ಇದೇ ಸಂದರ್ಭದಲ್ಲಿ ನಾರದರು ಪಾತಾಳಕ್ಕೆ ತೆರಳಿ ಅಲ್ಲಿ ಸಮಸಪ್ತಕರ ಮಕ್ಕಳಾದ ಸೂರ್ಯವರ್ಮ ಮತ್ತು ಚಂದ್ರವರ್ಮ ಎಂಬ ರಾಕ್ಷಸ ಸಹೋದರರಿಗೆ ಕುರುಕ್ಷೇತ್ರದಲ್ಲಿ ಅರ್ಜುನನಿಂದಾಗಿ ಅವರ ತಂದೆ ವಿಧಿವಶರಾಗಬೇಕಾಯಿತು ಎಂದು ಹೇಳಿದ್ದಲ್ಲದೇ ಹಸ್ತಿನಾವತಿಯ ವೃತ್ತಾಂತವನ್ನು ತಿಳಿಸಿ ಬೀಗುತ್ತಿರುವ ಅರ್ಜುನನನ್ನು ಸದೆಬಡಿಯಲು ಇದು ಸಕಾಲ ಎಂದು ಸೂಚಿಸಿ ಎತ್ತಿಕಟ್ಟುತ್ತಾನೆ. ಇದರಿಂದ ಸಂತೋಷಿತರಾದ ಆ ಇಬ್ಬರು ರಾಕ್ಷಸರು ಭೀಮನು ಬಿದ್ದಿರುವ ಪ್ರದೇಶಕ್ಕೆ ಬಂದು ಭೀಮನಲ್ಲಿ ತಮ್ಮ ಪರಿಚಯ ಹೇಳಿಕೊಂಡು ಅರ್ಜುನನಲ್ಲಿ ಭೀಮನ ಪರವಾಗಿ

ಹೋರಾಡುವುದಾಗಿ ಕೇಳಿಕೊಳುತ್ತಾರೆ. ಇದಕ್ಕೆ ಭೀಮ ಒಪ್ಪಿಧುರಕ್ಕೆ ಕಳಿಸುತ್ತಾನೆ. ಚಂದ್ರವರ್ಮನು ಮೊದಲಿಗೆ ಅರ್ಜುನನಲ್ಲಿ ಕಾದಾಡಿ ಸಾವನ್ನಪ್ಪುತ್ತಾನೆ. ಮುಂದೆ ಸೂರ್ಯವರ್ಮನು ಅರ್ಜುನನಲ್ಲಿಗೆ ಬಂದು ಯುದ್ಧ ಮಾಡುತ್ತಾನೆ. ಅರ್ಜುನನ ಬಾಣದ ಹತಿಗೆ ಈತನು ಸಾಯುತ್ತಾನೆ. ಭೀಮ ಚೇತರಿಸಿಕೊಂಡು ಪುನಃ ಅರ್ಜುನನೊಂದಿಗೆ ಹೋರಾಡಿ ಮತ್ತೆ ಮೂರ್ಚಿತನಾಗುತ್ತಾನೆ. ಭೀಮನು ಎಚ್ಚೆತ್ತ ನಂತರ ಅಲ್ಲಿಗೆ ಬಂದ ದ್ರೌಪದಿಯನ್ನು ಕರೆದು ಅರ್ಜುನನೊಂದಿಗೆ ತನ್ನ ಪರವಾಗಿ ಹೋರಾಡುವಂತೆ ಹೇಳುತ್ತಾನೆ.

ಪಾರ್ಥನ ಮುಂದೆ ದ್ರೌಪದಿ ಯುದ್ಧ ಸನ್ನದ್ಧಳಾಗಿ ನಿಂತು ಯುದ್ಧಕ್ಕೆ ಕರೆಯುತ್ತಾಳೆ. ಆಗ ಅರ್ಜುನ ಅವಳೊಂದಿಗೆ ಸಂವಾದ ನಡೆಸಿ ಯುದ್ಧ ಮಾಡದಂತೆ ಸೂಚಿಸುತ್ತಾನೆ. ಕೇಳದೇ ಹೋದಾಗ ತನ್ನ ಪರವಾಗಿ ಆಂಜನೇಯನನ್ನು ಕರೆದು ಅವಳ ಮೇಲೆ ಯುದ್ಧ ಮಾಡುವಂತೆ ಸೂಚಿಸುತ್ತಾನೆ. ದ್ರೌಪದಿಯೊಂದಿಗೆ ಯುದ್ಧಕ್ಕೆಂದು ಬಂದ ಹನುಮಂತ ಯುದ್ಧ ಮಾಡುತ್ತಾನೆ. ಕೈ ಸಾಗದಾದಾಗ ಆಕೆ ಆದಿ ಶಿವೆಯ ಅವತಾರವೆಂದು ಅರಿತುಕೊಳ್ಳುತ್ತಾನೆ. ಅವಳೊಂದಿಗೆ ಯುದ್ಧ ಅಸಾಧ್ಯವೆಂದು ರಾಮೇಶ್ವರಕ್ಕೆ ತೆರಳುತ್ಥಾನೆ. ಅರ್ಜುನ ಶ್ರೀಕೃಷ್ಣನನ್ನು ಸಹಾಯಕ್ಕಾಗಿ ಧ್ಯಾನಿಸುತ್ತಾನೆ. ಅಲ್ಲದೇ ಸುಭದ್ರೆಯನ್ನು ಕರೆದು ದ್ರೌಪದಿಯ ಮೇಲೆ ಯುದ್ಧ ಮಾಡುವಂತೆ ಸೂಚಿಸುತ್ತಾನೆ. ಅದರಂತೆ ಸುಭದ್ರಾ ಯುದ್ದಕ್ಕೆ ಸಿದ್ಧಳಾಗಿ ಬರುತ್ತಾಳೆ. ಅಕ್ಕತಂಗಿಯರ ಮಧ್ಯೆ ಮೊದಲಿಗೆ ವಾಕ್ಸಮರ ನಡೆಯುತ್ತದೆ. ಸಂಸಾರದ ಒಳಗುಟ್ಟೆಲ್ಲಾರಟ್ಟಾಗುತ್ತದೆ. ಮುಂದೆ ಭಯಂಕರ ಕಾಳಗ ನಡೆಯುತ್ತದೆ. ದ್ರೌಪದಿಗೆ ಸುಭದ್ರಾ ಸೋಲಬೇಕಾಗುತ್ತದೆ. ಸೋಲಿನಿಂದ ಕಂಗೆಟ್ಟ ಆಕೆ ಹಲುಬುತ್ತಿರುವಾಗ ನಾರದರು ಅಲ್ಲಿಗೆ ಬಂದು ಅವಳನ್ನು ಸಮಾಧಾನಗೊಳಿಸಿ ತಾನು ಅವಳತವರಿಗೆ ಸುದ್ದಿ ಮುಟ್ಟಿಸಿ ಕೃಷ್ಣನನ್ನು ಕರೆಸುವುದಾಗಿ ತಿಳಿಸುತ್ತಾನೆ. ಅಂತೆಯೇ ದೂತದ್ವಾರಕೆಗೆ ತೆರಳಿ ನಡೆದ ವಿಚಾರವನ್ನೆಲ್ಲಾ ಕೃಷ್ಣನಿಗೆ ತಿಳಿಸುತ್ತಾನೆ. ಕೃಷ್ಣ ಬಲರಾಮರುಗಳಿಗೆ ನಡೆದ ವಿಷಯವನ್ನು ತಿಳಿಸಿ ಸಮಸ್ತಸೇನೆ ಹಾಗೂ ಯಾದವ ಪ್ರಮುಖರೊಂದಿಗೆಸುಭದ್ರೆಯ ಸಹಾಯಕ್ಕಾಗಿ ಯುದ್ಧ ಭೂಮಿಗೆ ಧಾವಿಸುತ್ತಾನೆ. ಯಾದವರು ಕಂಗೆಟ್ಟ ಸುಭದ್ರೆಯನ್ನು ಸಮಾಧಾನಗೊಳಿಸಿ ದ್ರೌಪದಿಯೊಂದಿಗೆ ಯುದ್ಧಕ್ಕೆ ನಿಲ್ಲುತ್ತಾರೆ. ಮೊದಲಿಗೆ ಕೃತವರ್ಮ ದ್ರುಪದನಂದನೆಯೊಂದಿಗೆ ಯುದ್ಧ ಮಾಡಿ ಸೋಲುತ್ತಾನೆ. ಮುಂದೆ ಸಾತ್ಯಕಿಕದನಕ್ಕೆ ನಿಲ್ಲುತ್ತಾನೆ. ಅವನು ಸೋಲನ್ನು ಅಪ್ಪುತ್ತಾನೆ. ಅನಂತರ ಸಾಂಬಾತಾಕುತ್ತಾನೆ. ಅಗ್ನಿಜೆಯ ಸರಳಿಗೆ ಆತನು ಧರಣಿಗೆ ಒರಗುತ್ತಾನೆ. ಅನಿರುದ್ಧನು ಸೋಲಬೇಕಾಗುತ್ತದೆ. ಅಕ್ರೂರನನ್ನು ದ್ರೌಪದಿ ಸೋಲಿಸುತ್ತಾಳೆ. ಬಲರಾಮ ಹಾಗೂ ದ್ರೌಪದಿಯರ ಮಧ್ಯೆ ಕಾಳಗ ನಡೆದಾಗಅವನಿಗೂ ಆಕೆಯನ್ನು ಗೆಲ್ಲಲಾಗುವುದಿಲ್ಲ. ಕೊನೆಗೆ ಯುದ್ಧಕ್ಕೆ ಕೃಷ್ಣನೇ ಬಂದು ಯುದ್ಧ ನಿಲ್ಲಿಸುವಂತೆ

ಸೂಚಿಸಿದರೂ ದ್ರೌಪದಿ ಒಪ್ಪುವುದಿಲ್ಲ ಇಬ್ಬರ ಮಧ್ಯೆ ಯುದ್ಧ ನಡೆಯುತ್ತದೆ. ಆತನ ಸುದರ್ಶನಕ್ಕೂ ಸೋಲಾಗುತ್ತದೆ. ಕೋಪಗೊಂಡ ಶ್ರೀಕೃಷ್ಣ ಈಶ್ವರನನ್ನು ಸ್ಮರಿಸುತ್ತಾನೆ. ಸಕಲಗಣಗಳೊಂದಿಗೆ ಈಶ್ವರನ ಪ್ರವೇಶವಾಗುತ್ತದೆ. ಕೃಷ್ಣನಿಂದ ವಿಚಾರ ತಿಳಿದ ಶಿವನು ದ್ರೌಪದಿಯನ್ನು ಸೋಲಿಸಲು ತನ್ನ ಪ್ರಮಥಗಣಗಳೆಲ್ಲಾ ಒಬ್ಬೊಬ್ಬರನ್ನೇ ಕಳಿಸುತ್ತಾನೆ. ದ್ರೌಪದಿಯೊಂದಿಗೆ ಭೃಕುಟಿ, ಭೃಂಗಿ, ನಂದಿ, ಷಣ್ಮುಗ, ಹೇರಂಭ, ವೀರಭದ್ರ, ಹೋರಾಡಿ ಒಬ್ಬರಾದ ನಂತರ ಇನ್ನೊಬ್ಬರು ಸೋಲನ್ನೊಪ್ಪುತ್ತಾರೆ. ಕೊನೆಗೆ ಮಹಾರುದ್ರನೇ ಅವಳೊಂದಿಗೆ ಯುದ್ಧಕ್ಕೆ ಬರುತ್ತಾನೆ. ಅವಳ ಅದಟನ್ನು ಗಮನಿಸಿ ಕೋಪದಿಂದ ಪಾರ್ವತಿಯನ್ನು ಕರೆದು ದ್ರೌಪದಿಯ ಮೇಲೆ ಯುದ್ಧ ಹೂಡುವಂತೆ ಆದೇಶಿಸುತ್ತಾನೆ. ಪಾರ್ವತಿ ದ್ರೌಪದಿಯರ ಮಧ್ಯೆಘೋರ ಯುದ್ಧ ಕೊನೆಗೆ ದ್ರೌಪದಿ ಚಂಡಿಯಾಗಿ ಪಾರ್ವತಿ ಕಾಳಿಯಾಗಿ ಹೋರಾಟ ನಡೆಸುತ್ತಾರೆ. ಇಡೀ ಜಗತ್ತು ಇದರಿಂದ ಅಲ್ಲಕಲ್ಲೋಲವಾಗುತ್ತದೆ. ನಾರದ ಮಧ್ಯಪ್ರವೇಶಿಸಿ ಅವರಿಬ್ಬರ ಕಾಳಗವನ್ನು ನಿಲ್ಲಿಸುತ್ತಾನೆ. ದ್ರೌಪದಿ ಪಾರ್ವತಿಯರು ಆದಿಶಕ್ತಿಯ ಪ್ರತಿರೂಪವಾದ್ದರಿಂದ ಈ ಯುದ್ಧ ಮುಗಿಯುವಂತಹದಲ್ಲ ಎನ್ನುತ್ತಾನೆ. ಚಂಡಿಯೇ ಕುರುಕ್ಷೇತ್ರ ಯುದ್ಧದಲ್ಲಿ ಹರಿಯ ಚಕ್ರದ ಬಲದಿಂದ ಗೆದ್ದಿರುವುದು ಎಂದು ಜಗಜ್ಜಾಹಿರುಗೊಳಿಸುತ್ತಾನೆ. ಹೀಗೆ ದ್ರೌಪದಿಯ ಅಸಾಮಾನ್ಯ ಶಕ್ತಿಯನ್ನು ದ್ರೌಪದಿ ಪ್ರತಾಪದಲ್ಲಿ ಕಡಂದಲೆ ರಾಮರಾಯರು ಚಿತ್ರಿಸಿದ್ದಾರೆ. ದೇವಮುನಿ ನಾರದ ಇಲ್ಲಿ ಎಲ್ಲಾ ಘಟನೆಗಳನ್ನು ಆಗಾಗ ಮುಂದುವರೆಸಿಕೊಂಡು ಹೋಗುವ ಕಾರ್ಯವನ್ನು ನಡೆಸುತ್ತಾನೆ. ಪ್ರತಿಯುದ್ಧ ಸಂದರ್ಭದಲ್ಲೂ ನಡೆಯುವ ವಾಕ್ಸಮರಗಳಲ್ಲಿ ಅನೇಕವಾದ ವಿವಾದಗಳು ಬಂದು ಸಂಭಾಷಣೆಯನ್ನು ನಡೆಸಲು ಸಾಧ್ಯವಾಗುವಂತೆ ಪದ್ಯಗಳು ಇಲ್ಲಿ ಬಂದಿವೆ. ಜನಪದರಲ್ಲಿ ನಂಬಿಕೆಯಾಗಿ ಬೆಳೆದು ಬಂದಿರುವ ಕಥೆಯನ್ನು ಕವಿ ಆಶ್ರಯಿಸಿದ್ದಾರೆ. ಶಾಕ್ತೆಯ ಪಂಥದ ಪ್ರಭಾವದಿಂದ ಶಕ್ತಿ ದೇವತೆಯ ಮಹತ್ವಿಕೆಯನ್ನು ಸಾರುವ ಅನೇಕ ಕಥೆಗಳು ಪ್ರಚಲಿತವಾಗಿವೆ. ಅಂತಹ ಕಥೆಗಳು ಕಾಲಕ್ರಮದಲ್ಲಿ ಜನಜನಿತವಾಗಿವೆ. ದ್ರೌಪದಿ ಪ್ರತಾಪ ಈ ಮಾದರಿಯ ಕಥೆಯಾಗಿದೆ. ಇಲ್ಲಿ ಕಾಳಗಗಳೇ ಪ್ರಧಾನ ಕಾಳಗಗಳಿಂದಾಗಿ ರಂಗದಲ್ಲಿ ಈ ಪ್ರಸಂಗ ಹೆಚ್ಚು ಬಳಕೆಯಲ್ಲದೇ ತಿಟ್ಟುಗಳ ಬೇಧವಿಲ್ಲದೆ ಈ ಪ್ರಸಂಗವನ್ನು ಮೇಳದವರು ಪ್ರದರ್ಶಿಸುತ್ತಾರೆ.

ವಿಶ್ಲೇಷಣೆ: ಯಕ್ಷಗಾನ ಪ್ರಸಂಗ ಸಾಹಿತ್ಯದ ವಸ್ತುವೈವಿಧ್ಯಪೂರ್ಣ ಹಾಗೂ ರೋಚಕವಾಗಿರುತ್ತದೆ. ರಾಮಾಯಣ, ಮಹಾಭಾರತ, ಭಾಗವತ, ಪುರಾಣಗಳು ಇವುಗಳಿಗೆ ಮೂಲ ಆಕರಗಳಾಗಿವೆ. ಕಾಲ್ಪನಿಕ ಪ್ರಸಂಗಗಳ ಸೃಷ್ಟಿಯಲ್ಲೂ ಕೂಡ ಪೌರಾಣಿಕ ಆವರಣವಿರುತ್ತದೆ. ಪೌರಾಣಿಕ ಸಂಗತಿಗಳಿಗೆ ಕಲ್ಪನೆಯ ಕಸಿಕಟ್ಟುವ ಕಾರ್ಯವನ್ನು ಕೂಡ ಕೆಲವು ಪ್ರಸಂಗಕಾರರು ನಡೆಸಿಕೊಟ್ಟಿದ್ದಾರೆ. ಭೃಂಗದ ಬೆನ್ನೇರಿ

ಬರುವ ಕಲ್ಪನಾ ವಿಲಾಸಕ್ಕೆ ಎಲ್ಲೆಇಲ್ಲ. ಯಕ್ಷಗಾನ ಕವಿಕಲ್ಪನೆಯ ಒಂದು ಚುಂಗನ್ನು ಹಿಡಿದು ಭೂಮ್ಯಾಂತದಲ್ಲೆಲ್ಲಾ ವಿಹರಿಸುತ್ತಾನೆ. ಅದರಫಲವಾಗಿ ಅನೇಕ 'ಮಿತ್'ಗಳ ಒಟ್ಟು ಮೊತ್ತದಿಂದ ಪ್ರಸಂಗಗಳು ಪುರಾಣ ಸೃಜನೆಯ ಕಾರ್ಯವನ್ನು ಅವಿರತವಾಗಿ ನಡೆಸಿಕೊಂಡು ಬರುತ್ತಿವೆ. ಅವಾಸ್ತವಿಕವೆನಿಸಿದರೂ ರಮ್ಯಾತಿರಮ್ಯ ಕಲ್ಪನೆಗಳಿಂದ ಪ್ರಸಂಗವು ಪ್ರದರ್ಶನದಲ್ಲಿ ಗೆಲ್ಲುತ್ತದೆ.

ಕಡಂದಲೆ ರಾಮರಾಯರು ಈ ಬಗೆಯ ಪುರಾಣ ಸೃಜನೆಯ ಕಾರ್ಯವನ್ನು ನಿರ್ವಹಿಸುವುದರಲ್ಲಿ ನಿಸ್ಸೀಮರು. ಇವರು ರಚಿಸಿರುವ ಪ್ರಸಂಗಗಳಲಿ (ಶ್ರೀರಾಮಾಂಜನೇಯ, ದ್ರೌಪದಿಪ್ರತಾಪ, ರಾಮರಾಜ್ಯವಿಯೋಗ, ಪಾದುಕಾಪಟ್ಟಾಭಿಷೇಕ, ಗಯಾಸುರಚರಿತೆ) ಅವಾಸ್ತವಿಕವಾದ ಕಾಲ್ಪನಿಕ ಅಂಶಗಳುಹೆಚ್ಚಾಗಿ ಕಂಡುಬರುವುದು. ಅವರ 'ದ್ರೌಪದೀಪ್ರತಾಪ'ದಲ್ಲಿ ಜನಪದರ ಮನಸ್ಸಿನಲ್ಲಿ ಪಾಂಡವರ ಶಕ್ತಿಗಿಂತ ದ್ರೌಪದಿಯ ಚಾಲನೆಯು ಹಿರಿದಾಗುತ್ತದೆ. "ದ್ರೌಪದಿಯ ಶ್ರೀಮುಡಿ"ಯನ್ನು ದುಶ್ಯಾಸನನ ಕರುಳಿನಿಂದ ಪಂಪ, ರನ್ನ, ಕುಮಾರವ್ಯಾಸಾದಿಗಳು ಅಲಂಕರಿಸಿದ್ದೂ ಈ ಬಗೆಯ'ಪಾಕವಿಶೇಷ'ದಿಂದಲೇ. ಇದು ಇಲ್ಲಿಗೆ ನಿಲ್ಲದೆ ದ್ರೌಪದಿ ಚಂಡಿಯ ಪ್ರತಿರೂಪ ಎಂಬ ಭಾವನೆ ಪ್ರಾರಂಭವಾಯಿತು. ಈ ಬಗೆಯ ಮನೋಧರ್ಮದಿಂದ ಹುಟ್ಟಿಕೊಂಡ 'ದ್ರೌಪದಿ ಪ್ರತಾಪ' ರಂಗಸ್ಥಳದಲ್ಲಿ ಜಯಭೇರಿ ಪಡೆದ ಪ್ರಸಂಗವಾಗಿದೆ. ಇಲ್ಲಿ ಆಕೆ ಶಕ್ತಿ ಸಮನ್ವಿತೆ. ದ್ರೌಪದಿಯೊಂದಿಗೆ ಹೋರಾಡಿದ ಎಲ್ಲರೂ ಸೋಲುತ್ತಾರೆ. ದ್ರೌಪದಿಯ ಹೊಸ ಮುಖದ ಪರಿಚಯವು ಕಡಂದಲೆಯವರ ಕೊಡುಗೆಯೇ ಸರಿ.

ಬೆಂಗಳೂರು, ಕೋಲಾರ, ಚಿತ್ತೂರು, ಹೊಸೂರು ಮುಂತಾದ ಜಿಲ್ಲೆಗಳಲ್ಲಿ ಹರಡಿಕೊಂಡಿರುವ 'ತಿಗುಳ'ರೆಂದು ಕರೆಸಿಕೊಳ್ಳುವ ಎಪ್ಪತ್ತು ಲಕ್ಷಕ್ಕೂ ಹೆಚ್ಚಿರುವ ಜನವರ್ಗಕ್ಕೆ ದ್ರೌಪದಿಯೇ ಕುಲದೇವತೆ. ಅವರು ತಮ್ಮನ್ನು 'ವಹ್ನಿಕುಲಕ್ಷತ್ರಿಯರು'ರೆಂದು ಕಳೆದುಕೊಳ್ಳುತ್ತಾರೆ. ದ್ರೌಪದಿಯು ಅಗ್ನಿಯಿಂದ ಹುಟ್ಟಿದವಳು, ತಾವು ಕೂಡ ಅಗ್ನಿಯ ವಂಶಸ್ಥರು ಎಂಬ ಹೆಮ್ಮೆ ಇವರಿಗೆ ಇದೆ. ಬೆಂಗಳೂರು, ಮಾಲೂರುಮುಂತಾದ ಕಡೆ ನಡೆ ಯುವಕರಗಗಳು ದ್ರೌಪದಿಯ ಆರಾಧನೆಯ ಅಂಗವೇ ಆಗಿದೆ. ದ್ರೌಪದಿ ಜನರಿಗೆ ಸಂಕಷ್ಟ ತಂದೊಡ್ಡಿದ 'ತಿಮಿರಾಸುರ'ನನ್ನು ಸಂಹರಿಸಿದ್ಧಕ್ಕಾಗಿ 'ಕರಗ'ವನ್ನು ಆಚರಿಸಲಾಗುತ್ತದೆ. ಬೆಂಗಳೂರಿನ ನಗರ್ತರ ಪೇಟೆಯಲ್ಲಿರುವ ಧರ್ಮರಾಯನ ದೇವಸ್ಥಾನದಲ್ಲಿ ಚೈತ್ರ ಶುದ್ಧಷಷ್ಠಿಯಿಂದ ಮೊದಲ್ಗೊಂಡು ಹನ್ನೊಂದು ದಿನಗಳ ಕಾಲನಡೆಯುವ ಈ ಉತ್ಸವದಲ್ಲಿ ಹುಣ್ಣಿಮೆಯ ರಾತ್ರಿ ನಡೆಯುವ ಕರಗದ ಮೆರವಣಿಗೆಯೇ ಪ್ರಮುಖವಾದದ್ದು. ಐದು ಶತಕಗಳಿಂದ ಈ ಆಚರಣೆ ನಡೆದುಕೊಂಡು ಬರುತ್ತಿದೆ. ದ್ರೌಪದಿಯ ಉತ್ಸವಮೂರ್ತಿಯು ಹೂವಿನಿಂದ ಅಲಂಕೃತವಾಗಿದ್ದು ಉದ್ದವಾಗಿದ್ದೂ

ಹೊರುವವನು ಎಲ್ಲೂ ಕೈಯಿಂದ ಉತ್ಸವ ಮೂರ್ತಿಯನ್ನು ಮುಟ್ಟುವಂತಿಲ್ಲ. ಮೂರು ದಿನಗಳ ಕಾಲ ಗರ್ಭಗುಡಿಯಲ್ಲೇ ಇರುವಲಅವರನ್ನು ಆ ಸಂದರ್ಭದಲ್ಲಿ ಸ್ತ್ರೀಯೆಂದೇ ಪರಿಗಣಿಸುತ್ತಾರೆ. ಮೆರವಣಿಗೆಯೊಂದಿಗೆ ನೇಮನಿಷ್ಠೆಯಿಂದ ಸಾಗುವ 'ಖಡ್ಗಧಾರಿಗಳಾದ' "ವೀರಕುಮಾರ" ರ ದಂಡೇ ಇರುತ್ತದೆ. ಪಾಂಡವರ ಭಾವ ಮೈದುನನಾದ 'ಪೋತರಾಜು'ನು ಉತ್ಸವದ ರಕ್ಷಣೆ ಮಾಡುತ್ತಾನೆಂಬ ನಂಬಿಕೆ ಇದ್ದು ಅವನ ಉತ್ಸವಮೂರ್ತಿ ಹಾಗೂ ತ್ರಿಶೂಲವು ಮೆರವಣಿಗೆಯಲ್ಲಿ ಸಾಗುತ್ತದೆ. ಹುಣ್ಣಿಮೆಯ ದಿನದಂದು ದ್ರೌಪದಿ ಹಾಗೂ ಅರ್ಜುನರ ವಿವಾಹಮಹೋತ್ಸವದ ಆಚರಣೆಯು ಇರುತ್ತದೆ. ಆದರೆ ಕರಾವಳಿ ಹಾಗೂ ಮಲೆನಾಡಿನಲ್ಲಿ ಈ ಬಗೆಯ ಆಚರಣೆಗಳು ಕಂಡುಬರುವುದಿಲ್ಲ. ಮಾಧ್ವಸಿದ್ಧಾಂತದಲ್ಲಿ ದ್ರೌಪದಿಯನ್ನು 'ಭಾರತೀ' ಎಂದು ಕರೆಯಲಾಗಿದೆ. ಇಲ್ಲಿ ಆಕೆಗೆ ಶ್ಯಾಮಲ, ಶಚಿ, ಉಷಾರ ಆವೇಶ ಬರುತ್ತದೆಂಬ ಭಾವವಿದೆಯೇ ಹೊರತು ಆಕೆ ಆದಿಶಕ್ತಿಯ ಅಂಶವೆಂಬ ವಿಚಾರ ಎಲ್ಲೂ ಕಾಣುವುದಿಲ್ಲ. ರಾಮರಾಯರು ಎಲ್ಲಿಂದ ಈ ಅಂಶವನ್ನು ಹೆಕ್ಕಿಕೊಂಡರು ಎಂಬುದು ತಿಳಿಯುತ್ತಿಲ್ಲ. ಧಿ.ಕಿ.ರಂ.ನಾಗರಾಜ (ಕರ್ನಾಟಕ ಜಾನಪದ ಪುಟ 36ರಿಂದ 46)ರು ಹೇಳುವಂತೆ ಅನೇಕ ಪೌರಾಣಿಕ ಕಥಾನಕಗಳು ಪ್ರಸಾರಗೊಂಡಿರುವುದು ಸಂಸ್ಕೃತದ ಪುರಾಣ ಪ್ರವಚನಗಳಿಂದ ಮಾತ್ರವಲ್ಲದೆ ಪ್ರಾದೇಶಿಕ ಮತ್ತು ಜನಪ್ರಿಯ ಪರಂಪರೆಯ ಮೂಲಕವಾಗಿ ಪ್ರಸಾರಗೊಂಡಿದೆ. ಸೃಜನಶೀಲ ಪ್ರತೀಕ ನಿರ್ಮಿತಿಯಾಗಲಿ, ಜನಪ್ರಿಯ ಪರಂಪರೆಯ ಪ್ರತೀಕ ನಿರ್ಮಿತಿಯಾಗಲಿ. ಒಂದು ಸಂಸ್ಕೃತಿಯ ಸಂಬಂಧದೊಡನೆ ಪಡೆಯುವ ಸಂಬಂಧ ತುಂಬಾ ಮುಖ್ಯ. ಕನ್ನಡ ಪ್ರಾದೇಶಿಕ ಸಂಸ್ಕೃತಿಯು ತನ್ನದೇ ಆದ 'ಮಿಥಿಕಲ್ ಕಲ್ಚರ್' ಅನ್ನು ಒಳಗೊಂಡಿದೆ. ಹೀಗಾಗಿ ಸೃಜನಶೀಲ ಮಿಥ್ ಸ್ವಾಭಾವಿಕವಾಗಿ ಸಂಸ್ಕೃತಿಯಿಂದ ಸಿದ್ಧವಾದ ಸಂಕೇತ ವ್ಯವಸ್ಥೆಯಿಂದ ಕೂಡಿದ ರಾಚಕ ಸ್ವರೂಪವನ್ನು ಪಡೆಯುತ್ತದೆ. ಈ ಮಾತಿಗೆ 'ದ್ರೌಪದೀ ಪ್ರತಾಪ' ಒಂದು ಉದಾಹರಣೆಯಾಗುತ್ತದೆ. ಈ ಹಿನ್ನೆಲೆಯಲ್ಲಿ 'ದ್ರೌಪದಿಪ್ರತಾಪ'ದ ವಸ್ತುವನ್ನು ವಿಶ್ಲೇಶಿಸಬೇಕಾಗುತ್ತದೆ.

ಕಡಂದಲೆ ರಾಮರಾಯರ ಈ ಪ್ರಸಂಗದಲ್ಲಿ 'ಚುರುಕು ರಂಗನಡೆ'ಯನ್ನು ಕಾಣಬಹುದು. ಇಲ್ಲಿ ಕಥೆ ಗೌಣ, ವಾಕ್ಸಮರ ಹಾಗೂ ಯುದ್ಧ ಸನ್ನಿವೇಶಗಳೇ ಹೆಚ್ಚು. ಭೀಮನ ಪಕ್ಷಕ್ಕೆ ನಿಂತ ದ್ರೌಪದಿಯೊಂದಿಗೆ ಇಲ್ಲಿ ಬರುವ ಎಲ್ಲಾ ಪಾತ್ರಗಳು (ಧರ್ಮಜ, ನಕುಲ, ನಾರದರನ್ನು ಹೊರತುಪಡಿಸಿ) ಕಾದಾಡುತ್ತವೆ. ಸೋಲನ್ನು ಉಣ್ಣುತ್ತವೆ. ರಂಗದಲ್ಲಿ ಜೋಡಿ ಬಣ್ಣದ ವೇಷಧಾರಿಗಳಾಗಿ ರಾಕ್ಷಸ ಪಾತ್ರಗಳಾದ ಸಮಸಪ್ತಕರ ಮಕ್ಕಳಾದ ಸೂರ್ಯವರ್ಮ ಮತ್ತು ಚಂದ್ರವರ್ಮರು ಬರುತ್ತಾರೆ. ಅವರು ಅರ್ಜುನನೊಂದಿಗೆ ಕಾದಾಡಿಹತರಾಗುತ್ತಾರೆ. ಭೂಮಿಗಾಗಿ ಅಣ್ಣ ತಮ್ಮಂದಿರ ನಡುವೆ, ತಂದೆ ಮಕ್ಕಳ ನಡುವೆ, ಬಂಧುಬಾಂಧವರ ನಡುವೆ ಕಲಹವೇರ್ಪಡುತ್ತದೆ.

ಕಲಹದ ಮೊದಲಿಗೆ ನಡೆಯುವ ಮಾತಿನ ಯುದ್ಧಕ್ಕೆ ಅಗತ್ಯವಾಗುವ ಅನೇಕ ಉತ್ತಮ ಪದ್ಯಗಳು ಈ ಪ್ರಸಂಗದಲ್ಲಿಇವೆ. ಭೀಮ ಅರ್ಜುನರ ನಡುವಿನ ಮಾತುಗಳಲ್ಲಿ ಅವರಿಬ್ಬರು ಜೀವನದಲ್ಲಿ ನಡೆಸಿದ 'ಸಾಹಸಗಾಥೆ'ಗಳು ಪುಂಖಾನುಪುಂಖವಾಗಿ ಬರುತ್ತವೆ. ಅದರ ಒಂದು ಮಾದರಿ ಹೀಗಿದೆ:

ನಾದನಾಮ ಕ್ರಿಯೆರಾಗ ಅಷ್ಟತಾಳ

ಪೂತುರೆ ದೇಮಲು ಜಾತನೇ । ನೀವೀ ।

ಚಾತುರಾಗವ ಗೆದ್ದಖ್ಯಾತನೇ ॥

ನಾತಿಳಿಯೆನೆ ನಿನ್ನ ರೀತಿಯ । ॥ ಶೌರ್ಯ ॥

ವೇತಕೆ ಬಿಡುಬಿಡು ಖ್ಯಾತಿಯ ॥ 1 ॥

ಸಾಕೆಲೆ, ಭೀಮಸಮಿಕವ ॥ ಗೆಲ್ಲು ॥

ತಾಕೊಂದಿರುವೆ ನೃಪಾನೀಶವ ॥

ಶಾಕಿನಿಗಣಕ ತಿರೇಕದಿ । ರಕ್ತ ।

ದೋಕುಳಿಗೆದ್ದು ವಿವೇಕದಿ ॥ 2 ॥

(ದ್ರೌಪದಿಪ್ರತಾಪ, ಪುಟ 11)

ಇದೇ ರೀತಿ ಸುಭದ್ರೆ ಹಾಗೂ ದ್ರೌಪದಿಯರ ನಡುವಿನ ಮಾತಿನ ಕಲಹವು ಕೂಡ ಆಕರ್ಷಕವಾಗಿದೆ. ಪರಸ್ಪರ ಮೂದಲಿಕೆ ಹಾಗೂ ವೈಮನಸ್ಸುಗಳ ಪರಿಚಯವನ್ನುಇಲ್ಲಿ ಕಾಣಬಹುದು.

ರಾಗಶಂಕರಾಭರಣ ಏಕತಾಳ

ಸ್ವೇಚ್ಛಾಂಗಿನೀ ಕೇಳುಸವತಿ

ಮಚ್ಚರದಿ ಕಾಡುವೆಯಸಮರ ।

ದಿಚ್ಚೆಯೊಳ್ಳಿ ತಲ್ಲನಿನಗೆ ।

ಅಚ್ಚಕು ಸುಮಗಂಧಿ ಬಲುಹ

ನುಚ್ಚರಿಸದಿರ ಮವಂಪತಿಯೊಳ್ ।

ಬೆಚ್ಚದೆ ಕಾದಾಡಿದುದಕೆ ।

ಮೆಚ್ಚರ್ ಯಾರಕ್ಕ ॥ 2 ॥

ಏಕಪತಿಯೊಳ್ ಕಷ್ಟಮಾಡ ।

ಲೇಶತಿ ದೊಷ್ಟವಿಹುದು ।

ಶೀಕುಮಾತಾಡದಿರುನಡೆವಿ ।

ವೇಶದಿತಂಗಿ ।

ದೋಶದೊಳಗೇ ಶಪತಿಗ ।

ವೇಶಸದ್ವಿಗಳಿರುವಬಲ್ಲೆ ।

ನೇಕಸತಿಗನೇಕಪತಿಗಳ್ । ನಾಕಾಣೆ ನಕ್ಕ ॥ 3 ॥

ಕುರುವು ಪಾಲಗೆಂದುನಿಶ್ಚಯ ।

ಸಿರಲು ಬಲ ಕಿರೀಟಿಯೊಡನೆ।

ತೆರಳಿ ಕಳ್ಳತನದೆ ಬಂದು । ದರಿಯನೇ ತಂಗಿ ॥

ಅರರೆಗಳ ಹದಿರುಬಿಡೌಜ ॥

ತರಳೆಗೆಸಣಣಧಾರೆ ।

ಯೆರೆದುಕಳುಹೆಬಂದೆನಿನಗೆ । ಕೊರತೆಯೇನಕ್ಕ ॥ 4 ॥

ರಾಗಭೈರವಿ ಏಕತಾಳ

ಬದರದಿರೆಲೆಯೆನೆ ತಂಗೀ ನಿನ್ನ.

ಮರ ಎಳಿಸುವೆ ಲಲಿತಾಂಗಿ ।

ಕದನಕೆ ಬಂದಿದಿರಾದ । ತನ್ನ ಧಟನು ತಿಳಿಯದೆ ಹೋದೆ ॥ 1 ॥

ಕಾಂತನು ಬಯಸಿದನೆಂದು । ಬಲು ।

ಭ್ರಾಂತಿಯ ತಾಳದಿರಿಂದು ।

ತಾಂತಳುವ ದೆನಿನ್ನುವನು । ಕ್ಕೆ

ತಾಂತನ ಮರ ಕಟ್ಟುವನು ॥ 2 ॥

ಹೀಗೆ ಅವರ ವಾಕ್ಸಮರ ತಾರಕಕ್ಕೆ ಏರುತ್ತದೆ. ಈ ಬಗೆಯ ಅಸಂಖ್ಯ ಮಾತಿನ ಬಿರುಸುಗಳು ಈ ಪ್ರಸಂಗದಲ್ಲಿ ಉದ್ದಕ್ಕೂ ಬರುತ್ತವೆ. ಯಕ್ಷಗಾನ ಜನ ಸಾಮಾನ್ಯರ ಪಾಲಿಗೆ ಪಾಠಶಾಲೆಯಿದ್ದಂತೆ ಕವಿಯಾದವನು ಜನರ ಬದುಕನ್ನು ಹಸನು ಮಾಡಲು ಜೀವನ ಸಂದೇಶಗಳನ್ನು ನೀತಿವಾಕ್ಯಗಳನ್ನು ಪ್ರಸಂಗಗಳಲ್ಲಿ ತರುವುದು ಕಂಡುಬರುತ್ತದೆ. ಹೆಚ್ಚಿನ ಪ್ರಸಂಗಕಾರರು ತಮ್ಮ ಪ್ರಸಂಗಗಳಲ್ಲಿ ಒಂದಿಲ್ಲೊಂದು ಬಗೆಯಿಂದ ಬದುಕಿನ ಕುರಿತ ತಮ್ಮ ನಿಲುವನ್ನು ಪಾತ್ರಗಳ ಬಾಯಿಂದ ಹೇಳಿಸುತ್ತಾರೆ. ಈ ಮೂಲಕ ಅಲ್ಲಿ ನೋಡುವ ಪ್ರೇಕ್ಷಕರಿಗೆ ಜೀವನ ಸಂಸ್ಕಾರ ಒದಗಿಸುತ್ತಾರೆ. ಈ ಕೈಕಂರ್ಯವನು ನಡೆಸುವುದರಲ್ಲಿ ರಾಮರಾಯರ ಹಿಂದೆ ಬಿದ್ದಿಲ್ಲ. 'ದ್ರೌಪದಿ ಪ್ರತಾಪ'ದ ಅನೇಕ ಕಡೆ ನೀತಿ ವಾಕ್ಯಗಳು ನಿಸ್ಸಾರ ಬದುಕಿನ ಕುರಿತ ವ್ಯಾಖ್ಯಾನಗಳು ಬರುತ್ತವೆ.

ತೋರವೀ ಧನದಾನ್ಯ । ಧಾರಿಣಿ ಗೃಹಪಶು ।

ನಾರೀ ಮಕ್ಕಳ ಕಾಟವು ॥

ಚಾರುಮರೀಚಿಕೆ। ನೀರಿನಂತಿರುವುದು ।

ಮೂರು ದಿವಸದಾಟವು ।

ನೆಲೆಯಿಲ್ಲ ತನುವಿಗೆ ।ಕೊಲುವರೆಶಾಮ।

ಜಲಜನೇತ್ರನೆ ಬಾಧ್ಯನು ॥ (ದ್ರೌಪದಿಯ ಪ್ರತಾಪ ಪುಟ 3)

ದ್ರೌಪದಿ ಪತಿಯೊಂದಿಗೆ ಜಗಳ ಮಾಡುತ್ತಿರುವುದು ಸರಿಯಿಲ್ಲ ಎಂದು ಹೇಳುವ ಕೃಷ್ಣನ ತ್ಯಾಗ ಭೋಗಗಳೆಲ್ಲವೂ ಪತಿಯನ್ನು ಅವಲಂಬಿಸಿಕೊಂಡಿದೆ ಎಂದು ನೀತಿ ವಾಕ್ಯ ಹೇಳುತ್ತಾನೆ.

(ನಾಗವೇಣಿವರನೋಳ್ ಮಾಳಲಾಗದಿಂತುಮುನಿಸು। ತ್ಯಾಗಭೋಗಪತಿಯಂತಿದೆ। ರಾಗದಿನೀಗ್ರಹಿಸು ಪುಟ 32)

ಇದನ್ನೇ ಅರ್ಜುನನು ದ್ರೌಪದಿಗೆ ಈ ರೀತಿಯಲ್ಲಿ "ಪತಿಯೊಳ್ ಸಂಗರಹಿತವಲ್ಲವೂ ಮತಿಯುತೆ ನೀನದಗ್ರಹಿಸು" ಎಂದು ಹೇಳುತ್ತಾನೆ. ಇದನ್ನೇ ಮುಂದೆ ಆಂಜನೇಯನು ದ್ರೌಪದಿಗೆ ತಿಳಿಹೇಳುತ್ತಾನೆ.

ರಾಗಸೌರಾಷ್ಟ್ರರತಾಳತ್ರಿಪುಡೆ

ಪೂತುರೇ ಪಾಂಚಾಲೀಬಲುವಿಪ।

ರೀತಕೃತ್ಯವ ಗೈದವರನುಡ ।

ಸೀತಾಗ್ರಹ ಲಲನೆಯ ಯೆರಗಿದ್ದು ನೀತಿಯಹುದೇ ॥ 1 ॥

ಪರಮಪಾವನಿ ಸತ್ಪತಿವ್ರತೆ । ಯಾರು ಮನೊಬಲ್ಲಭನೊಳ್ಳೆಂದಿಗೂ ॥

ದುರವೆಸಗುವರೆ । ನಿನಗದೇತಕೆ । ಮರುಳುತನವು ॥ 2 ॥

ಸತಿಯರಿಗೆ ಪತಿಯಿಲ್ಲದ ವ್ಯಥ । ಗತಿ ಇಹುದೇ ಸರ್ವತ್ರಲೋಕದಿ ।

ಶೃತಿಗಳೆಂಬುವು ಸತಿಗೆದೈವವು। ಪತಿಯೆನ್ನುತಲಿ ॥

ಹೀಗೆ ಪರಂಪರಾಗತ ಮೌಲ್ಯಗಳನ್ನು ಯಕ್ಷಗಾನ ಕವಿಗಳು ತಮ್ಮ ಕೃತಿಗಳಲ್ಲಿ ಎತ್ತಿ ಹಿಡಿಯುತ್ತಾರೆ. ಈ ಕಾರ್ಯವನ್ನು ಕಡಂದಲೆಯವರು ಕೂಡಾ ಮುಂದುವರಿಸಿದ್ದಾರೆ. ಸಾಂಪ್ರದಾಯ ನಿಷ್ಠೆ ಪಾರಂಪರಿಕ ಜೀವನ ಮೌಲ್ಯ ಕೌಟುಂಬಿಕ ಸಂಬಂಧ ವ್ಯವಸ್ಥೆ ಇವುಗಳ ಪ್ರತಿಪಾದನೆ ಯಕ್ಷಗಾನ ಪ್ರಸಂಗಗಳಲ್ಲಿ ಸರ್ವೇಸಾಮಾನ್ಯ.

ದ್ರೌಪದಿ ಪ್ರತಾಪದಲ್ಲಿ ಅನೇಕ ಉತ್ತಮ ಪದ್ಯಬಂಧಗಳಿವೆ. ಹಾಡಲು ಒಗ್ಗುವಂತಹ ರಸವೊಸರುವಂತಹ ಬಂಧಗಳಿವೆ. ನಿರ್ಮಿತವಾದಂತ ಇಂತಹ ರಚನೆಗಳು ಪ್ರಸಂಗದ ಮೌಲ್ಯವನ್ನು ಹೆಚ್ಚಿಸುತ್ತವೆ. ಇಂತಹ ಕೆಲವು ಮಾದರಿಗಳುಇಲ್ಲಿವೆ.

1. ರಾಗಭೈರವಿ ಏಕತಾಳ

ಓಹೋಮೆರೆವಬಲೆ । ನೀಸಾಹಸದೊಳಗತಿಪ್ರಬಲೆ ॥

ಮೋಹದಿನಾಬಿಡುವೊಮ್ಮೆ । ಉತ್ಸಾಹದಿತೋರುವಹೆಮ್ಮೆ ॥ (ಪುಟ 40)

2. ರಾಗಸೌರಾಷ್ಟ್ರ ಅಷ್ಟತಾಳ

ಅವತರಿಸಯ್ಯಾಪೇಳುವನಂದು ಪೊಸಸುದ್ದಿ । ಅಣ್ಣದೇವ ॥ ಬಲು ॥

ತವಕದೊಳಿದನೀ । ಕಿವಿಗೊಟ್ಟುಲಾಲಿಸು । ಅಣ್ಣದೇವ ॥ 1 ॥

ಭಾರತೀಹನನಗೆಲ್ದಘೋರವ್ಯಾಜದೊಳಿಂದು । ಅಣ್ಣದೇವ ॥ ಜಂ ॥

ಭಾರೀಸಮೀರಕುಮಾರರುಕಾದಿದರಂತೆ ॥ ಅಣ್ಣದೇವ ॥ 2 ॥

ಭೀಮರಣದಿಸೋಲ । ಲಾಮೇತಿದ್ರೌಪದಿ । ಅಣ್ಣದೇವ ॥ ಒಂ ॥

ದಾಮಹಾನರನ ವ । ಶ್ರಾಮಿಸಿರುವಳಂತೆ ॥ ಅಣ್ಣದೇವ ॥ 3 ॥

3. ರಾಗಮಾರವಿ ಏಕತಾಳ

ಪೊಡವಿಪ। ಕೇಳಾ । ಮೃಡನರಸಿಯು । ಕೆಂ । ಜಡೆಯತ್ರಿಶೂಲವ।

ಉಡಲು.................. । ತಡೆದುಸೆಣೆಸಿದಳು ।

ಘುಡಿಘುಡಿಸುತಬರಸಿಡಿಲಾರ್ಭಟೆಯೊಳು ॥ ಏನೆಂಬ ॥ 1 ॥

ಹಾರುತ್ತಾಕುಳಿತೆ। ದ್ದೇರುತನಭವನು । ಸಾರುತಾಕೆಂಜಲ । ಕಾಡುತಹತ್ತಿರ।

ಸೇರುತಂತಿಖತಿ । ಯೇರುತಪಿಂಡಕೆ । ಜಾರುತವಿಕ್ರಮ । ದೂರುತಸಮರದಿ।

ಮೆರೆದರೆಂದು। ॥ 2 ॥

ತಗ್ಗಿದವಾಸುಕಿ । ಕುಗ್ಗಿದಕವಠನು । ಬಗ್ಗಿದವಿಭಗಳು । ನೆಗ್ಗಿದಕಮಲಜ ।

ಮುಗ್ಗಿದವದ್ರಿಯು । ಜಗ್ಗಿದಶಂಕರ । ಹಿಗ್ಗಿದಕೇಶವ । ಲೆಗ್ಗಿದಸುರಪನು ।

ಕೇಳೈಭೂಪ ॥ 3 ॥ (ಪುಟ 41)

ಈ ಬಗೆಯ ಹಾಡುಗಳನ್ನು ಭಾಗವತರು ಹಾಡಿದಾಗ ಯಕ್ಷಗಾನ ಕಲಾವಿದ ಕುಣಿದು ಅಭಿನಯಿಸಿದಾಗ ರಸವೊಸರುತ್ತದೆ. ಪ್ರಸಂಗದ ಆಕರ್ಷಕಭಾಗವಾಗಿದೆ. ಇಂತಹ ಪದ್ಯಗಳು ನಾಡಾಡಿಗಳು ಬಳಸುವ ಭಾಷೆಯನ್ನು ಪ್ರಸಂಗಕಾರನು ತನ್ನ ಕೃತಿಯಲ್ಲಿ ತಂದಾಗ ಅದು ಜನರಿಗೆ ಹೆಚ್ಚು ಆಪ್ತವಾಗುತ್ತದೆ. ಯಕ್ಷಗಾನದ ಹಿರಿಯ ಕವಿಗಳೆಲ್ಲರೂ ಹಾಡು ನುಡಿಗಳನ್ನು ಗಾದೆ ಮಾತುಗಳನ್ನು ಸಾಮಾನ್ಯವಾದ ನುಡಿಗಟ್ಟುಗಳನ್ನು ಪ್ರಸಂಗಗಳಲ್ಲಿ ತರುವುದರ ಮೂಲಕ ಅವು ರಸಿಕರಿಗೆ

ಹತ್ತಿರವಾಗುವುದನ್ನು ಗಮನಿಸಿದ್ದಾರೆ. ಪಾರ್ತಿಸುಬ್ಬ, ಹಟ್ಟಿಯಂಗಡಿ ರಾಮ್ಭಟ್ಟ, ಮುಂತಾದವರ ಪ್ರಸಂಗಗಳ ಯಶಸ್ಸಿನಲ್ಲಿ ಇಂತಹ ಬಳಕೆಯ ಮಾತುಗಳ ಪ್ರಯೋಗವು ಒಂದು ಕಾರಣವಾಗಿದೆ. ರಾಮರಾಯರು ತಮ್ಮ "ದ್ರೌಪದಿ ಪ್ರತಾಪ" ದಲ್ಲಿ ಇಂತಹ ಅನೇಕ ನುಡಿಗಟ್ಟುಗಳನ್ನು ತಂದಿದ್ದಾರೆ. ಇವು ವಿಶೇಷ ಅರ್ಥಗಳನ್ನು ಸ್ಫುರಿಸುತ್ತವೆ. ಅಂತಹುವುಗಳನ್ನು ಉದಾಹರಣೆಗಾಗಿ ಗಮನಿಸಬಹುದು.

1. ಹರಿವಾಣ ದಾರತಿಯಂತೆ ನೆತ್ತರು ಸೊಸೆದೆಸೆದೆಸೆಗೆ (ಪುಟ 15)
2. ಕಡೆಯ ಕಲ್ಪದ ಶೂಲಿಯಂತಾರ್ಭಟಿಸಿ (ಪುಟ 8)
3. ಹೆಮ್ಮಾರಿ ಗೌತಣ ಬಡಿಸುವೆನು (ಪುಟ20)
4. ಮೋಡಬಣವನು ಸನ್ನೆ ಮಾಡಿದನು (ಪುಟ 28)
5. ಘಾತಿಸಿದ ವಿಲಾಪವಲ್ಲ । ಕೋತಿಕೇತನ ॥ (ಪುಟ 15)
6. ನಾತಿಳಿದುದು ಪೇಳಲಿಂದು। ಪಕ್ಷಪಾತವಾಡಿದ ಕೃಷ್ಣನಿಂದು ॥ (ಪುಟ 7)
7. ಗಣಪತಿಗೆ ದ್ರೌಪತಿಯೊಳ ಮಾತಿಗೆ

    । ತುಪ್ಪಕಬ್ಬುಕಡಲೆ ಮೋದಕಪ್ಪಚಕ್ಕುಲಿ ।

    ಚಪ್ಪರಿಸಲು। ನಿನಗೆಧಾರ ದೊಳಿಪ್ಪುದೇ ನಿರರ್ಥಕ ॥ (ಪುಟ 36)

8. ಬಡಕುರಿಯನು ಗೆಲಲಕ್ಕೆ ಮೃಗದೊಡೆಯನು ತೆರಳಲುಬೇಕೆ । (ಪುಟ 16)

ಕಡಂದೆಲೆಯವರು ಸಾಹಿತ್ಯಕವಾಗಿಯೂ ಪದ್ಯ ರಚನೆ ಮಾಡಬಲ್ಲರೆಂಬುವುದಕ್ಕೆ "ದ್ರೌಪದಿಪ್ರತಾಪ"ದಲ್ಲಿ ಕೆಲವೊಂದು ಉದಾಹರಣೆಗಳು ದೊರೆಯುತ್ತವೆ. ನಾರದನು ಭೀಮಾರ್ಜುನರಲ್ಲಿ ಹೇಳುವ "ಸಾವೇರೀರಾಗ ರೂಪಕತಾಳ"ದ ಪದ್ಯ ಈ ರೀತಿ ಇದೆ.

ಸಾಕುತಡಿತಡಿ। ಜಗಳವೇಕೆ ಬಿಡಿಬಿಡಿ । ವಾಕುಕೇಳಿರಿ । ಬಲುವೀ ।
ವೇಕತಾಳಿರಿ ॥ 1 ॥ ವೀರವೈಮಜಾಬವರ । ಶೂರರೈನಿಜಸಾರವಲ್ಲದು ।
ಸಂಪ್ರ ।ಹಾರಗೈಯುವುದು ॥ 2 ॥

ಹೀಗೆ 'ದ್ರೌಪದಿ ಪ್ರತಾಪ' ಪ್ರಸಂಗ ಎಲ್ಲಾ ರೀತಿಯಂದಲೂ ಶ್ರೀಮಂತವಾಗಿ ಪ್ರಯೋಗದಲ್ಲಂತೂ ಯಶಸ್ವಿಯಾಗುವ ಗುಣಗಳಿಂದ ತುಂಬಿಕೊಂಡಿದೆ. ಇದು ಪೌರಾಣಿಕ ಪ್ರಸಂಗವಾದರೂ ಕಲ್ಪನೆ ಅಂಶಗಳಿಗೆ ಪರಮಪಟ್ಟಲಭಿಸಿದೆ. ಇಲ್ಲಿ ಬರುವ ಪಾತ್ರಗಳು ಮೂಲದ ವ್ಯಕ್ತಿಗಳ ಮುಖವಾಡ ಧರಿಸಿ ಬಂದಂತೆ ಬರುತ್ತಾರೆ. ಅವರ ಕ್ರಿಯೆಗಳೆಲ್ಲವೂ ಕಲ್ಪಿತ ಅಂಶದ ಆಧಾರದ ಮೇಲೆ ನಡೆಯುತ್ತದೆ. ಮಹಾಭಾರತದ ವ್ಯಕ್ತಿಗಳು ನೆಪಮಾತ್ರಕ್ಕೆ ಇದ್ದಾರೆ. ಅಣ್ಣತಮ್ಮಂದಿರ ಒಳಗಿನ

ಮೇಲಾಟ ಭೀಮಾರ್ಜುನರನ್ನು ಕೂಡಾಬಿಟ್ಟಿಲ್ಲ. ಸ್ತ್ರೀಶಕ್ತಿಯೇ ದೊಡ್ಡದು. ಶಕ್ತಿ ಸ್ವರೂಪಿಣಿಯಾದ ಅವಳು ಎಲ್ಲರನ್ನೂ ಎಲ್ಲವನ್ನೂ ಸೋಲಿಸಬಲ್ಲಳು. ಆಕೆ ಅಗಾಧ ಚೈತನ್ಯ ಸ್ವರೂಪಿಣಿ ಎಂಬುವುದನ್ನು ಸಾರವೆಂದೇ ಈ ಬಗೆಯ ಪ್ರಸಂಗಗಳ ರಚನೆಗೆ ಕಾರಣವಾಗುತ್ತದೆ. ಕುಮಾರವ್ಯಾಸನ ದ್ರೌಪದಿ..

ಜನನವೇ ಪಾಂಚಾಲರಾಯನ

ಮನೆ ಮನೋವಲಭಭರದಾರೆನೆ

ಮನುಜಗಿನ್ನು ಜರುಗಣ್ಯರೇಗೀರ್ವಾಣರಿಂಮಿಗಿಲು ॥

ಎನಗೆ ಬಂದೆಡೆರೀ ವಿರಾಟನ

ವನತೆಯರುಗಳ ಮುಡಿಯಕಟ್ಟುವ

ತನುವತಿಗುರುವ ಕಾಲನೊತ್ತುವ ಕೆಲಸದುತ್ಸಾಹ ॥

(ಕುಮಾರವ್ಯಾಸ ಭಾರತ ವಿರಾಟ ಪರ್ವ ಪುಟ270)

ಎಂದು ಕಂಗೆಟ್ಟು "ಇನ್ನು ಹುಟ್ಟೆದೆಯಿರಲಿ ನಾರಿಯರೆನ್ನವೊಲು ಭಂಗಿತರುಭುವನದೊಳಿನ್ನು ಜನಿಸಲುಬೇಡ" ಎಂದು ಹೇಳುತ್ತಾ "ಹೆಂಗಸು ಜನ್ಮವನುಸುಡಲಿ" ಎಂಬ ಹತಾಶೆಗೆ ತಲುಪಿದವಳು. ಆದರೆ ಯಕ್ಷಗಾನ ಪ್ರಸಂಗದಲ್ಲಿ ಅವಳು ಸರ್ವರನ್ನು ಸೋಲಿಸಬಲ್ಲ ಶಕ್ತಿ ಸಮನ್ವತೆ. ದಮನಿತರು ಕೂಡ ಸಶಕ್ತರಾಗಬಲ್ಲರೆಂಬುದನ್ನು ಇಲ್ಲಿ ಪ್ರಸಂಗ ಕಾರಕಾಣ್ಕೆಯಾಗಿ ನೀಡಿದ್ದಾರೆ. ಇದರಿಂದಾಗಿಯೇ ಕಡಂದಲೆ ರಾಮರಾಯರು ಅಭಿನಂದನಾರ್ಹರು.

(ಆಧಾರ ಗ್ರಂಥ – ಯಕ್ಷಗಾನ ದ್ರೌಪದಿ ಪ್ರತಾಪ, ಕಡದಂಲೆ ರಾಮರಾಯರಿಂದ ವಿರಚಿತವಾದದ್ದು. ಪಾವಂಜೆ ಗುರುರಾವ್ ಅಂಡ್ ಸನ್ಸ್, ಉಡುಪಿಯವರಿಂದ 1973ರಲ್ಲಿ ಮುದ್ರಣವಾಗಿ ಪ್ರಕಟವಾದದ್ದು.)

□

ಪಾಂಗಾಳರ ಯಕ್ಷಗಾನ ಕೃತಿಗಳ ವಸ್ತು ವಿನ್ಯಾಸ

ಜಾನಪದದ ಮೂಲ ಸೆಲೆಯಿಂದ ಟಿಸಿಲೊಡೆದು ಪರಂಪರೆಗೆ ಆತುಕೊಂಡು ಸಾಂಪ್ರದಾಯದ ಚೌಕಟ್ಟಿನಲ್ಲಿ ಬೆಳೆದು ಬಂದ ಯಕ್ಷಗಾನವು ಶಿಷ್ಯ ಕಲಾಪ್ರಕಾರದ ಶಿಸ್ತುಗಳನ್ನು ಒಳಗೊಂಡಿದೆ. ಇದರಿಂದಾಗಿ ಕರ್ನಾಟಕ ರಂಗಭೂಮಿಯಲ್ಲಿ ಯಕ್ಷಗಾನಕ್ಕೆ ವಿಶಿಷ್ಟ ಸ್ಥಾನ ಲಭಿಸಿದೆ. ಈ ನಾಡಿನ ಪ್ರಾತಿನಿಧಿಕ ಕಲೆಯಾಗಿಮೆರೆಯುತ್ತಿದೆ. ಇಂತಹ ಯಕ್ಷಗಾನ ಪ್ರದರ್ಶನಗಳಿಗೆ ಆಧಾರವಾಗಿರುವುದೇ ಪ್ರಸಂಗ ಸಾಹಿತ್ಯ ಕಳೆದ ಏಳುನೂರು ವರ್ಷಗಳಿಂದ ಕರ್ನಾಟಕಾದ್ಯಂತ ರಚಿತಗೊಂಡ ಕನ್ನಡದ ಕಿರು ಕಾವ್ಯಪ್ರಕಾರವಾಗಿ ಇದು ಖ್ಯಾತಿಗಳಿಸಿದೆ. ಸಾವಿರಕ್ಕೂ ಮಿಕ್ಕಿರುವ ಕವಿಗಳು ಐದು ಸಾವಿರಕ್ಕೂ ಹೆಚ್ಚಿನ ಪ್ರಸಂಗಗಳನ್ನು ರಚಿಸಿದ್ದಾರೆ. ಪ್ರಸಂಗ ಎಂದರೆ ಮೂಲಕಥೆಯಿಂದ ಆಯ್ದುಕೊಂಡು ಒಂದು ಸನ್ನಿವೇಶ ಒಂದು ಕಥಾಭಾಗ ಬಯಲಾಟಗಳಲ್ಲಿ ಉಪಯೋಗವಾಗುವ ಒಂದು ಕಥಾ ಭಾಗವನ್ನು ಹಾಡುಗಳ ಮೂಲಕ ಸೃಷ್ಟಿಸಿ ಮೊದಲಿಗೆ ಅದು ಹಾಡುಗಬ್ಬವಾಗಿ ಪ್ರಸಂಗ ಪ್ರಚಾರಕ್ಕೆ ಬಂತು. ಹೆಚ್ಚಾಗಿ ಇವು ರಾಮಾಯಣ ಮಹಾಭಾರತ, ಭಾಗವತ ಇತರೆ ಪುರಾಣಗಳನ್ನು ಅವಲಂಬಿಸಿ ರಚನೆಗೊಂಡಿವೆ. ಇವುಗಳಲ್ಲದೇ ಅನೇಕ ಐತಿಹಾಸಿಕ ಘಟನೆಗಳು ಕಾಲ್ಪನಿಕ ಅಂಶಗಳು ಸಾಮಾಜಿಕ ವಿಚಾರಗಳು ಪ್ರಸಂಗ ರಚನೆಗೆ ಕಾರಣಗಳಾಗಿವೆ.

ಕರಾವಳಿ ಹಾಗೂ ಮಲೆನಾಡಿನಲ್ಲಿ ಪ್ರಚಲಿತವಿರುವ ಯಕ್ಷಗಾನ ಪ್ರಸಂಗಗಳಲ್ಲಿ ಪದ್ಯಭಾಗಗಳು ಮಾತ್ರವಿರುತ್ತದೆ. ಹಿಂದೆಲ್ಲಾ ಬಾಲ್ಯದಲ್ಲೆ ಮೇಳಗಳನ್ನು ಸೇರಿದವರು. ಹಿರಿಯ ಕಲಾವಿದರ ಒಡನಾಟದಲ್ಲೇ ಮಾತುಗಾರಿಕೆ, ಕುಣಿತ, ಅಭಿನಯ ಇತ್ಯಾದಿಗಳನ್ನು ಕಲಿತುಕೊಳ್ಳುತ್ತಿದ್ದರು. ಇಂದು ಈ ವ್ಯವಸ್ಥೆ ಸಂಪೂರ್ಣ ನಿಂತು ಹೋಗಿದೆ. ತರಬೇತಿ ಕೇಂದ್ರಗಳಲ್ಲಿ ಕುಣಿತ, ಅಭಿನಯ, ಬಣ್ಣಗಾರಿಕೆ ಎಲ್ಲಾ ಕಲಿಯುತ್ತಾರೆ. ಆದರೆ ಮಾತುಗಾರಿಕೆಗೆ ಅಲ್ಲಿ ಅವಕಾಶವಿರುವುದಿಲ್ಲ. ಇದಲ್ಲದೇ ಇಂದು ಯಕ್ಷಗಾನಗಳಲ್ಲಿ ಹವ್ಯಾಸಿಗಳು ಹೆಚ್ಚುತ್ತಿದ್ದಾರೆ. ಯಕ್ಷಗಾನ ಹೆಚ್ಚು ನಗರೀಕರಣಗೊಳ್ಳುತ್ತಿದೆ. ನಗರ ಪ್ರದೇಶದ ಹವ್ಯಾಸಿಗಳು ಅಲ್ಲಲ್ಲಿ ಲಭ್ಯವಿರುವ

ಗುರುಗಳಿಂದ ಕುಣಿತದ ಪ್ರಾಥಮಿಕ ಶಿಕ್ಷಣ ಪಡೆಯುತ್ತಾರೆ. ಆದರೆ ಅರ್ಥಗಾರಿಕೆಗೆ ಹಾಗೇ ಹೇಳಿಕೊಡಲು ಬರುವುದಿಲ್ಲ. ಇದನ್ನು ಮನಗಂಡ ಕೆಲವು ಯಕ್ಷಗಾನ ಕವಿಗಳು ಅರ್ಥಧಾರಿಗಳು ಹಳೆಯ ಪ್ರಸಂಗಗಳಿಗೆ ಅರ್ಥಗಳನ್ನು ಬರೆದು ಪ್ರಕಟಿಸುತ್ತಿದ್ದಾರೆ. ಈ ಬಗೆಯ ಅರ್ಥಸಹಿತ ಪ್ರಸಂಗಗಳು ಹವ್ಯಾಸಿಗಳಿಗೆ ಅನುಕೂಲವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಡಾ.ಆರ್.ಆರ್.ಪಾಂಗಾಳ್ ಅವರು ಪ್ರಕಟಿಸಿರುವ ಎರಡು ಯಕ್ಷಗಾನ ಕೃತಿಗಳಾದ ಆಚಾರ್ಯ ದ್ರೋಣ, ನಹುಷ ಮೋಕ್ಷ ಪ್ರಸಂಗಗಳು ಹವ್ಯಾಸಿ ಯಕ್ಷಗಾನ ಕಲಾವಿದರಿಗೆ ವರದಾನವಾಗಿವೆ.

ಮೂಲತಃ ಡಾ॥ ರಾಧಾಕೃಷ್ಣ ಆರ್. ಪಾಂಗಾಳ್ ಅವರು ಆಧುನಿಕ ಕನ್ನಡ ಸಾಹಿತ್ಯದಲ್ಲಿ ತಮ್ಮನ್ನು ತೊಡಗಿಸಿಕೊಂಡವರು. ಅವರು ಕರಾವಳಿಯ ಗಂಡುಕಲೆಯಾದ ಯಕ್ಷಗಾನದಿಂದ ಪ್ರಭಾವಿತರಾದವರು. ದೃಶ್ಯ ಮಾಧ್ಯಮಗಳಲ್ಲಿ ದುಡಿದವರು ಆದುದರಿಂದ ಯಕ್ಷಗಾನಕ್ಕೆ ತಮ್ಮ ಕೊಡುಗೆಯಾಗಿ ಮೇಲಿನ ಎರಡು ಕೃತಿಗಳನ್ನು ನೀಡಿದ್ದಾರೆ. ಸುವರ್ಣ ಪ್ರಸಾಧನ ಯಕ್ಷರಂಗದ ಮೂಲಕ ಅವರು ಯಕ್ಷಗಾನಕ್ಕೆ ತಮ್ಮ ಈ ಸೇವೆಯನ್ನು ಮಾಡಿದ್ದಾರೆ. ಮಿಕ್ಕುಳಿದ ಕರಾವಳಿಯ ಅನೇಕ ಸಾಹಿತಿಗಳು ಕವನ, ಕಥೆ, ಕಾದಂಬರಿ ಹಾಗೂ ನಾಟಕಗಳ ರಚನೆ ಮಾಡಿದ್ದಾರೆ. ಆದರೆ ಅವರಿಂದ ಯಕ್ಷಗಾನಕ್ಕೆ ಅಂತಹ ಕೊಡುಗೆಗಳು ಬಂದೇ ಇಲ್ಲ. ಇದರಿಂದಾಗಿ ವಿದ್ವಾಂಸರ ಹಾಗೂ ಸಾಹಿತ್ಯಿಕ ವಲಯದಲ್ಲಿ ಯಕ್ಷಗಾನಕ್ಕೆ ಹಿರಿಮೆಯ ಸ್ಥಾನ ಲಭಿಸಿಲ್ಲ. ನಮ್ಮ ಹುಟ್ಟೂರು ಕಲೆಯನ್ನು ಮರೆಯದೇ ಪಾಂಗಾಳರಂತೆ ಕೊಡುಗೆ ನೀಡಿದ್ದರೆ ಯಕ್ಷಗಾನ ಇಂದು ಇನ್ನಷ್ಟು ಶ್ರೀಮಂತವಾಗುತ್ತಿತ್ತು. ಜನಾದರಣೆ ಗಳಿಸುತ್ತಿತ್ತು. ಈ ನಿಟ್ಟಿನಿಂದಆರ್. ಆರ್.ಪಾಂಗಾಳ್‌ರವರು ಸ್ತುತ್ಯಾರ್ಹರು. ಅಭಿನಂದನೀಯರು. ಅವರು ಆಯ್ಕೆಗೊಂಡ ಪೌರಾಣಿಕ ವಸ್ತುಗಳಿಗೆ ಆಧುನಿಕ ಸ್ಪರ್ಶವನ್ನು ನೀಡುವ ಮೂಲಕ ಅದಕ್ಕೊಂದು ಘನತೆಯನ್ನು ತಂದುಕೊಟ್ಟಿದ್ದಾರೆ. ವಿಭಿನ್ನ ರೀತಿಯ ಚಿಂತನೆ ಈ ಎರಡೂ ಪ್ರಸಂಗಗಳಲ್ಲಿ ಬಂದಿದೆ. ಪುರಾಣದ ವಸ್ತುವನ್ನು ಆರಿಸಿಕೊಂಡ ಪಾಂಗಾಳರು ಹೊಸ ವಿನ್ಯಾಸವೊಂದನ್ನು, ಗದ್ಯ ಸಂಭಾಷಣೆಯನ್ನು ಪಾತ್ರಗಳಿಗೆ ರಚಿಸಿಕೊಟ್ಟು ಉಪಕರಿಸಿದ್ದಾರೆ. ಹಾಡಲು ಭಾಗವತರಿಗೆ ಅನುಕೂಲವಾಗುವಂತೆ ಇಬ್ಬರು ಪ್ರಸಿದ್ಧ ಯಕ್ಷಗಾನ ಕವಿಗಳಿಂದ ಪದ್ಯಗಳನ್ನು ರಚಿಸಿ ಈ ಕೃತಿಯೊಂದಿಗೆ ನೀಡಿದ್ದಾರೆ. ಸುವರ್ಣ ಪ್ರಸಾಧನ ಯಕ್ಷರಂಗದವರು ರಂಗದಲ್ಲೇ ಇದನ್ನು ಪ್ರಯೋಗಿಸಿದ್ದಾರೆ. ಪ್ರದರ್ಶನಗಳು ಯಶಸ್ವಿಯಾಗಿದ್ದು ಜನಮನವನ್ನು ತಟ್ಟಿದೆ. ಜಾಲತಾಣದಲ್ಲಿ ಲಭ್ಯವಿರುವ ಈ ಪ್ರದರ್ಶನಗಳು ಅಸಂಖ್ಯ ಯಕ್ಷಗಾನ ಅಭಿಮಾನಿಗಳ ಮನ ಕುಣಿಸಿದೆ. ಸಾವಿರಾರು ಜನರು ಇದನ್ನು ವೀಕ್ಷಿಸಿರುವುದೇ ಅದರ ಜನಪ್ರಿಯತೆಗೆ ಸಾಕ್ಷಿ.

'ಆಚಾರ್ಯದ್ರೋಣ' ಎಂಬ ಅವರ ಪ್ರಸಂಗದಲ್ಲಿ ಮಹಾಭಾರತದ ಪ್ರಮುಖ ಪಾತ್ರವಾಗಿ ಬಂದಿರುವ ದ್ರೋಣನ ಸಂಪೂರ್ಣ ಜೀವನ ಚಿತ್ರ ಅಡಗಿದೆ. ಮೂಲ ಮಹಾಭಾರತದಲ್ಲಿ ಬರುವ ದ್ರೋಣನ ಕಥೆಗೆ ಮುಂದೆ ಬಂದ ಅನೇಕ ಸಂಸ್ಕೃತ ಕನ್ನಡ ಕವಿಗಳು ಕೆಲವೊಂದು ಅಸಂಗತ ವಿಚಾರಗಳನ್ನು ತೂರಿಸಿ ಆ ಪಾತ್ರಕ್ಕೆ ಅನ್ಯಾಯ ಮಾಡಿದ್ದಾರೆ. ಏಕಲವ್ಯನ ಪ್ರಸಂಗ ಹಾಗೂ ದ್ರೋಣನಬದುಕಿನ ಅಂತ್ಯಭಾಗದಲ್ಲಿ ಆತನ ಘನತೆಗೆ ಚ್ಯುತಿ ಬಂದಿದೆ. ಇದನ್ನು ಮನಗಂಡ ಪಾಂಗಾಳ್ ಅವರು ಆಧುನಿಕ ಮನಸ್ಸಿನಿಂದ ಹೊಸ ದೃಷ್ಟಿಕೋನದಿಂದ ಕಂಡಿದ್ದಾರೆ. ಮೂಲ ಮಹಾಭಾರತದಲ್ಲಿ ಏಕಲವ್ಯನು ಬೆರಳನ್ನು ಗುರುಕಾಣಿಕೆಯಾಗಿ ನೀಡುವ ವಿಚಾರವಿಲ್ಲ. ಮುಂದೆ ಗುಪ್ತರ ಕಾಲದಲ್ಲಿ ಪ್ರಚುರಗೊಂಡ ಜಾತಿಪದ್ಧತಿಯ ಸಂದರ್ಭದಲ್ಲಿ ಅದನ್ನು ಪುರಸ್ಕರಿಸಲೋಸುಗ ಆ ಕಾಲದ ಕವಿಗಳು ಏಕಲವ್ಯನ ಗುರುಕಾಣಿಕೆಯ ಘಟನೆಯನ್ನು ತಂದಿದ್ದಾರೆ. ಮುಂದೆ ಇದು ಹಾಗೇ ಉಳಿದು ಜನತೆ ಅದನ್ನು ನಂಬಿದ್ದಾರೆ. ಆಧುನಿಕ ದೃಷ್ಟಿಕೋನದಿಂದ ನೋಡಿದಾಗ ಇದು ಅಮಾನುಷವಾದ ಸಂಗತಿಯಾಗಿದೆ. ಒಂದು ವರ್ಗವನ್ನು ಟೀಕಿಸಲು ಅಸ್ತ್ರವನ್ನಾಗಿ ಈ ಘಟನೆ ಬಳಸಿಕೊಳ್ಳುತ್ತಾರೆ. ಇದನ್ನೆಲ್ಲಾ ಮನಗಂಡ ಪಾಂಗಾಳರು ಏಕಲವ್ಯ ಮಗಧರ ರಾಜ್ಯಕ್ಕೆ ಸೇರಿದವನು. ಜರಾಸಂಧನಿಂದ ಪ್ರಚೋದಿತನಾಗಿ ಶಸ್ತ್ರಾಭ್ಯಾಸ ಮಾಡಲು ದ್ರೋಣನಲ್ಲಿಗೆ ಬರುತ್ತಾನೆ. ಹಸ್ತಿನಾವತಿಯ ವಿರೋಧಿಯಾದಜರಾಸಂಧನ ಈ ಜಾಣ ನಡೆಯನ್ನು ಗಮನಿಸಿದ ದ್ರೋಣರು ಆತನಿಗೆ ಶಿಕ್ಷಣ ಕೊಡಲು ಒಪ್ಪುವುದಿಲ್ಲ. ಅಲ್ಲದೇ ದ್ರೋಣನ ಗುರುಕುಲ ಸ್ಥಾಪಿತಗೊಂಡಿರುವುದು ಕುರುಕುಲದ ಪಿತಾಮಹರಾದ ಭೀಷ್ಮಾಚಾರ್ಯರಿಂದ. ಅವರ ಅಪ್ಪಣೆಯಿಲ್ಲದೇ ಅವರ ವಿರೋಧಿಗಳಿಗೆ ಶಿಕ್ಷಣ ಕೊಡುವುದು ತಪ್ಪಾಗುತ್ತದೆ ಎಂಬುದು ದ್ರೋಣರ ನಿಲುವು. ಅದಕ್ಕೆ ಸರಿ ಹೊಂದುವಂತೆ ಏಕಲವ್ಯನು ಬಿಲ್ಲುವಿದ್ಯೆಯನ್ನು ತನಗೆ ನೀಡುವಂತೆ ಕೋರಿದಾಗ ತಿರಸ್ಕರಿಸಿ ಕಳಿಸುತ್ತಾರೆ. ಏಕಲವ್ಯ ತನ್ನ ಕಾಡಿಗೆ ಹಿಂದಿರುಗದೇ ಹಸ್ತಿನೆಯಲ್ಲಿ ಉಳಿದು ಮರೆಯಲ್ಲೇ ಇದ್ದು ದ್ರೋಣಾಚಾರ್ಯರ ಪಾಠವನ್ನು ಗಮನಿಸುತ್ತಾ ಮಣ್ಣಿನ ಮೂರ್ತಿಯನ್ನು ನಿರ್ಮಿಸಿಕೊಂಡು ಅದನ್ನೇ ಗುರುವಾಗಿ ಸ್ವೀಕರಿಸಿ ಬಿಲ್ಲುವಿದ್ಯೆಯಲ್ಲಿ ಪ್ರವೀಣನಾಗುತ್ತಾನೆ. ಒಮ್ಮೆ ನಾಯಿಯೊಂದಕ್ಕೆ ಶಬ್ದವೇಧಿ ವಿದ್ಯೆಯ ಮೂಲಕ ಬಾಯಿಯನ್ನು ಬಾಣಗಳಿಂದ ಮುಚ್ಚಿರುವುದನ್ನು ನೋಡಿದ ದ್ರೋಣರ ಶಿಷ್ಯರು ಈ ವಿಚಾರವನ್ನು ಗುರುಗಳ ಗಮನಕ್ಕೆ ತರುತ್ತಾರೆ. ಆಗ ಅವನಿದ್ದೆಡೆಗೆ ಧಾವಿಸಿದ ದ್ರೋಣರು ಏಕಲವ್ಯನಲ್ಲಿ ಗುರುಕಾಣಿಕೆಗೆ ಬೆರಳನ್ನು ಕೇಳುತ್ತಾರೆ. ಅವನು ತನ್ನ ಬಲಗೈ ಹೆಬ್ಬೆರಳನ್ನು ತುಂಡರಿಸಿ ಗುರುಕಾಣಿಕೆಯಾಗಿ ಕೊಡುತ್ತಾನೆ. ಇಲ್ಲೂ ಕೂಡ ದ್ರೋಣರ ಈ ನಡೆ ಜರಾಸಂಧನನ್ನು ಹಿಮ್ಮೆಟ್ಟಿಸುವ ತಂತ್ರವಾಗಿದೆಯೇ ಹೊರತು ಶಿಷ್ಯ ಅರ್ಜುನನನ್ನು ಮುನ್ನೆಡೆಗೆ ತರಲು ಕೇಳಿರುವುದಲ್ಲ. ಕುವೆಂಪುರವರ ಬೆರಳ್ಗೆ ಕೊರಳ್ ಎಂಬ ನಾಟಕದಲ್ಲಿ ಬಂದಿರುವ ಆಚಾರ್ಯ ದ್ರೋಣನ ಕಥೆಗೂ

ಯಕ್ಷಗಾನ ವಸ್ತುವಿನಲ್ಲಿ ಬಂದಿರುವ ದ್ರೋಣನ ಕಥೆಗೂ ವಸ್ತು ವಿನ್ಯಾಸದಲ್ಲಿ ಭಿನ್ನತೆ ಇದೆ. ಅಲ್ಲಿನ ದ್ರೋಣ ಒಬ್ಬ ಪಕ್ಷಪಾತಿ, ಜಾತಿ ಪದ್ಧತಿ ಪ್ರತಿಪಾದಕನಾಗಿ ಕಾಣಿಸಿಕೊಂಡರೆ ಪಾಂಗಾಳರ ದ್ರೋಣ ಉಪ್ಪುಂಡ ಮನೆಗೆ ಎರಡು ಬಗೆಯದ ಸ್ವಾಮಿನಿಷ್ಠ ದ್ರೋಣನಾಗಿರುತ್ತಾನೆ.

ದ್ರೋಣ ಪಾತ್ರದ ಘನತೆಯನ್ನು ಪಾಂಗಾಳರು ಹೆಚ್ಚಿಸಿದ್ದಾರೆ. ಏಕಲವ್ಯನ ನಿರ್ಗಮನದ ನಂತರ ಕುಸಿದು ಸ್ವಗತವಾಗಿ ಮಾತನಾಡುವ ದ್ರೋಣನ ಮಾತಿನಲ್ಲಿ ಲೇಖಕರು ಗುರುವೊಬ್ಬನ ಮಾನಸಿಕ ತುಮುಲವನ್ನು ತನ್ನ ಪ್ರಾಮಾಣಿಕ ನಡೆಯ ಸಮರ್ಥನೆಯನ್ನು ಬಹು ಸೊಗಸಾಗಿ ಬರೆದಿದ್ದಾರೆ. ವಿಷವುಂಡ ನೀಲಕಂಠನಂತೆ ನಾನು ಇದನ್ನು ನುಂಗುತ್ತೇನೆ ಎಂಬುವುದು ಪ್ರಭಾವಶಾಲಿಯಾಗಿ ಬಂದಿದೆ. ದ್ರೋಣ ಹಾಗೂ ಜರಾಸಂಧರ ಮಧ್ಯೆ ಸಿಲುಕಿದ ಏಕಲವ್ಯನ ಸ್ವಗತವೂ ಕೂಡಾ ಆ ಪಾತ್ರದ ವಿಷಾದವನ್ನು ಮಾರ್ಮಿಕವಾಗಿ ಚಿತ್ರಿಸುತ್ತದೆ. "ದ್ರೋಣರದು ರಾಜನೀತಿಯೆಂಬ ಪಗಡೆಯ ದಾಳ, ಜರಾಸಂಧನದು ರಾಜ್ಯ ಬಲ ಪಡಿಸುವ ರಾಜಧರ್ಮ ಇವರಿಬ್ಬರ ಮಧ್ಯೆ ನನ್ನದು ರಾಷ್ಟ್ರಕ್ಕಾಗಿ ವ್ಯಕ್ತಿ ಸಮರ್ಪಣೆ ಬಲಿದಾನ" ಎಂಬುವುದು ಇಡೀ ಘಟನೆಗೆ ಒಂದು ಹೊಸತಿರುವಾಗಿದೆ. ವಿಷಾದದ ಅಂತ್ಯದಲ್ಲೂ ಗುರುವಿನ ತೇಜೋವಧೆಯಾಗುವುದಿಲ್ಲ.

ದ್ರೋಣನ ಜನ್ಮ, ದ್ರೋಣನ ಪ್ರತಿಜ್ಞೆ, ಏಕಲವ್ಯನ ಗುರುದಕ್ಷಿಣೆ, ದ್ರುಪದನ ಗರ್ವಭಂಗ, ಘಟೋತ್ಕಜನ ಕಾಳಗ, ದ್ರೋಣ ನಿರ್ಯಾಣ, ಹಾಗೂ ನಾರಾಯಣ ಅಸ್ತ್ರ ಪ್ರಯೋಗ ಎಂಬ ಏಳು ಘಟನಾವಳಿಗಳಿಂದ ಕೂಡಿರುವ ಆಚಾರ್ಯ ದ್ರೋಣ ಪ್ರಯೋಗದಲ್ಲೂ ಯಶಸ್ವಿಯಾಗಿದೆ. ಮರಣ ಸನ್ನಿಹಿತವಾಗುವ ಸಂದರ್ಭದಲ್ಲಿ ದ್ರೋಣರು ಆಡುವ ಸ್ವಗತದಲ್ಲಿ ಕೂಡಾ ವಿಶೇಷತೆ ಇದೆ. ರಣರಂಗದಲ್ಲಿ ನಮಸ್ಕರಿಸಿದ ಅರ್ಜುನನೊಂದಿಗೆ ಅವನಾಡುವ ಮಾತಿನಲ್ಲಿ ಒಬ್ಬ ಸ್ವಾಮಿನಿಷ್ಠನನ್ನು ಕಾಣಬಹುದು.

"ನಾನು ಸುಯೋಧನನ ಪರವಾಗಿ ಯುದ್ಧಕ್ಕೆ ಬಂದವನು. ಅವನಿಗೆ ಅಹಿತ ಬಯಸಿದ್ದಲ್ಲಿ ಸ್ವಾಮಿ ದ್ರೋಹವಾಗುತ್ತದೆ. ಹಸ್ತಿನಾವತಿಯ ಅನ್ನ ಉಂಡವ ರಾಷ್ಟ್ರದ್ರೋಹ ಬಗೆಯಲಾರೆ." ಈ ಮಾತುಗಳಲ್ಲಿ ದ್ರೋಣನ ವ್ಯಕ್ತಿತ್ವದ ನಿಚ್ಚಳವಾದ ಪಾರದರ್ಶಕ ಚಿತ್ರ ದೊರೆಯುತ್ತದೆ. ಸಾವಿನ ಹೊಸ್ತಿಲಲ್ಲೂ ಆತನು ಏಕಲವ್ಯನ ಕೈ ಬೆರಳನ್ನು ನೆನಸಿಕೊಂಡು ಮರುಗುತ್ತಾನೆ. ತನ್ನ ಬದುಕಿನ ಪ್ರತಿ ಘಟನೆಯನ್ನು ವಿಮರ್ಶಿಸಿಕೊಂಡು ಸಫಲತೆ ವಿಫಲತೆಯನ್ನು ಪಟ್ಟಿ ಮಾಡುತ್ತಾನೆ. ಗುರುವಾಗಿ ವಿಫಲನಾದೆನೇ? ಎಂದು ಪ್ರಶ್ನಿಸಿಕೊಳ್ಳುತ್ತಾನೆ. ಶ್ರೀಕೃಷ್ಣನು ದ್ರೋಣರ ಸಾವಿಗೆ ನೀಡಿದ ವ್ಯಾಖ್ಯಾನದಲ್ಲಿ ಸತ್ಯ ಅಡಗಿದೆ. ಗುರುಗಳೇನೋ ಧರ್ಮಿಷ್ಠರು ಯೋಗ್ಯರು ಆದರೆ ಕರ್ಮ ನಿಮಿತ್ತ ಹೋರಾಡಿದುದರ ಪ್ರತಿಫಲ ಅನುಭವಿಸಬೇಕಾಯಿತು ಎಂಬುದು ಮಾರ್ಮಿಕವಾಗಿದೆ.

ಈ ಕೃತಿಯ ಪದ್ಯ ರಚನೆಯನ್ನು ಯಕ್ಷಗಾನ ಸಾಹಿತ್ಯದ ಪ್ರಸಿದ್ಧ ಯಕ್ಷಕವಿ ಶ್ರೀ ಕಂದಾವರ ರಘುರಾಮಶೆಟ್ಟಿಯವರು ಮಾಡಿದ್ದಾರೆ. ದುರ್ಯೋಧನ ಹಾಗೂ ದ್ರುಪದರ ನಡುವಿನ ಯುದ್ಧ ಸಂದರ್ಭದ ಮಾತು ಬಹು ಸೊಗಸಾಗಿದೆ. ರಾಗ ಶಂಕರಾಭರಣ ಮಟ್ಟೆ ತಾಳದಲ್ಲಿರುವ ಈ ಭಾಗ ಪ್ರದರ್ಶನದಲ್ಲಿ ಕಳೆ ಕಟ್ಟುವಂತಿದೆ.

ದುರ್ಯೋಧನ – ಕುರುಕುಲೇಶನಣುಗನಯ್ಯಾ । ಕರಿವರನ ದುರ್ಯೋಧನನು।
ಗರುವದಿಂದ ಮೆರೆವ ನಿನ್ನ । ತರಿಯಬಂದಿಹೆ ॥

ದ್ರುಪದ – ಅಂದನಣುಗನೇನು ಬಹಳ । ಚೆಂದವಾಯಿತು ಬರಿದೇರಣದಿ
ಹೊಂದಿ ಹೋಗು ಬೇಡ ತೆರಳು । ಇಂದೇ ಜತನದಿ ॥

ದುರ್ಯೋಧನ – ಕೊಟ್ಟ ಮಾತು ತಪ್ಪಿದಾತ । ಕುಟ್ಟಕಳೆವೆನೆನ್ನುತಾ ಬಾಣ ।
ಬಿಟ್ಟರಲಿಕ್ಕೆದ್ರುಪದನದರ । ನಷ್ಟಗೊಳಿಸಿದ॥

ಇದೇ ಬಗೆಯ ಪದ್ಯ ರಚನೆಗಳನ್ನು ಹಲವೆಡೆ ಕಾಣಬಹುದು. ದ್ರೋಣನ ಅಂತ್ಯಕಾಲದಿ ಆತನಾಡಿದ ಮಾತಿನಲ್ಲಿ ಜೀವನ ಸಂದೇಶ ಅಡಗಿದೆ. ಪಾಂಡವರ ಕುರಿತು ಆಡುವ ಈ ಪದ್ಯ ಸಾಂಗತ್ಯ ರೂಪಕ ತಾಳದಲ್ಲಿದೆ.

ಪಂಜರದಲ್ಲಿಟ್ಟು ಗಿಳಿಯ ಸಾಕುವತೆರ । ಕಂಜನಾಭನುಕಾಯ್ವನವರ।
ಅಂಜಿಸಲರಿದುಪಾಂಡವರನು ಹಾವಿನ । ನಂಜುಕೊಲದುಗರುಡನನು॥

ಸುವರ್ಣ ಪ್ರಸಾಧನ ಯಕ್ಷರಂಗದ ದ್ವಿತೀಯ ಕೊಡುಗೆಯಾಗಿ ತರಳಬಾಳು ಸಭಾಂಗಣ ಕೇಂದ್ರದಲ್ಲಿ ನಡೆದ ಪ್ರದರ್ಶನ ಯೂಟ್ಯೂಬ್‌ನಲ್ಲಿ ಪ್ರಸಾರದಲ್ಲಿದ್ದು, ಅಲ್ಲಿನ ಎಲ್ಲಾ ಕಲಾವಿದರು ಬಹು ಸೊಗಸಾಗಿ ಪ್ರದರ್ಶನ ನೀಡಿದ್ದಾರೆ. ಎಲ್ಲರ ಕಲಾಭಿವ್ಯಕ್ತಿಯಲ್ಲೂ ಒಂದು ವೃತ್ತಿ ಪರತೆಯನ್ನು ಪ್ರಬುದ್ಧತೆಯನ್ನು ಕಾಣಬಹುದು. ಭಾಗವತರಾಗಿ ಶ್ರೀ ಸುಬ್ರಾಯ ಹೆಬ್ಬಾರ್, ಮದ್ದಳೆಗಾರರಾಗಿ ಶ್ರೀಎ.ಪಿ.ಪಾಟಕ್, ಚಂಡೆ ವಾದಕರಾಗಿ ಶ್ರೀ ಆದಿತ್ಯ ಕಾಶ್ಯಪ ಹಿಮ್ಮೇಳದಲ್ಲಿ ಸೊಗಸಾಗಿ ನಡೆಸಿಕೊಟ್ಟಿದ್ದಾರೆ. ಪಾತ್ರಧಾರಿಗಳಾಗಿ ಪ್ರಶಾಂತ್ ಹೆಗಡೆ, ವಿಶ್ವನಾಥ, ಹೊನ್ನಬಯಲು ಅಂಬರೀಷ ಭಟ್ಟ, ನಾಗಶ್ರೀ, ಮಂಜು ಹವ್ಯಕ್, ದೇವಿದಾಸ ಶೆಟ್ಟಿ, ನವೀನ್ ಶೆಟ್ಟಿ, ಚಂದ್ರಶೇಖರ್ ಶೆಟ್ಟಿ, ರಾಧಾಕೃಷ್ಣಭಟ್, ವಸಂತ ಶೆಟ್ಟಿ, ಕೃಷ್ಣಚೈತನ್ಯ ಮುಂತಾದವರ ನಟಿಸಿದ್ದಾರೆ. ನಾಗಶ್ರೀಯವರ ವನವಿಹಾರದ ನರ್ತನ ಸೊಗಸಾಗಿದೆ. ಪ್ರಶಾಂತ್ ಹೆಗಡೆಯವರ ದ್ರೋಣನ ಪಾತ್ರ ಹಾಗೂ ಅಂಬರೀಷ್ ಭಟ್ಟರ ಭಾರದ್ವಾಜನ ಪಾತ್ರ ಮನ ಸೆಳೆಯುವಂತಿದ್ದು ಸಂಭಾಷಣೆ, ಕುಣಿತ ಸೊಗಸಾಗಿದೆ. ಡಾ.ರಾಧಾಕೃಷ್ಣರಾವ್ ಪಾಂಗಾಳ್ರರ ಪರಿಕಲ್ಪನೆಯಂತೆ ಪ್ರದರ್ಶನ ಮೂಡಿ ಬಂದಿದ್ದು ಯಶಸ್ವಿಯಾಗಿದೆ. ಒಂಭತ್ತು ಸಾವಿರಕ್ಕೂ ಹೆಚ್ಚು ಆಸಕ್ತರು ಈ ವಿಡಿಯೋ ನೋಡಿ ಮೆಚ್ಚಿಕೊಂಡಿದ್ದಾರೆ.

ಡಾ॥ ರಾಧಾಕೃಷ್ಣ ಆರ್. ಪಾಂಗಾಳ್ರರ ಇನ್ನೊಂದು ಯಕ್ಷಗಾನದ ಕೃತಿ 'ನಹುಷಮೋಕ್ಷ' ಚಂದ್ರವಂಶದ ದೊರೆ ನಹುಷ ಚಕ್ರವರ್ತಿಯ ಏಳುಬೀಳಿನ ಕಥೆ ಇಲ್ಲಿ ಬಂದಿದೆ. ಕಥಾವಿನ್ಯಾಸದಲ್ಲಿ ಪಾಂಗಾಳರು ಅಂಥಾ ಬದಲಾವಣೆಯನ್ನು ಮಾಡದೇ ಇದ್ದರೂ ಇಲ್ಲಿನ ಸಂಭಾಷಣೆಗಳಲ್ಲಿ ಆಧುನಿಕ ಸಮಾಜಕ್ಕೆ ಅಗತ್ಯವಾಗುವ ತಿಳುವಳಿಕೆಗಳನ್ನು ಪಾತ್ರಗಳ ಮೂಲಕ ನೀಡಿ ಕೃತಕೃತ್ಯರಾಗಿದ್ದಾರೆ. ಅಧಿಕಾರದಲ್ಲಿರುವ ಜನ ಹೇಗೆ ಗರ್ವಿಷ್ಠರಾಗುತ್ತಾರೆ. ಹೇಗೆ ಆಸೆ ಮೋಹಕ್ಕೆ ಬಲಿಯಾಗುತ್ತಾರೆ. ಅದೇ ಅವರ ಅಧಃಪತನಕ್ಕೆ ಮೂಲ ಹೇತು ಎಂಬುವುದನ್ನು ಸಾರುವುದೇ ಈ ಕೃತಿಯ ಆಶಯವಾಗಿದೆ. ಒಂದು ಕಾಲಕ್ಕೆ ಆದರ್ಶ ಪುರುಷನಾಗಿದ್ದ ನಹುಷ ದೇವಲೋಕದ ಅಧಿಪತಿಯಾಗಿ ನಿಯುಕ್ತಗೊಳ್ಳುವುದೇ ವಿಶೇಷ ಸಂದರ್ಭದಲ್ಲಿ, ಒಮ್ಮೆ ಸ್ವರ್ಗದ ಅಧಿಕಾರದ ಭೋಗದ ರುಚಿ ಸಿಕ್ಕಿದೊಡನೆ ಆತನ ಆದರ್ಶಗಳೆಲ್ಲವೂ ಗಾಳಿಗೆ ತೂರಿ ಹೋಗುತ್ತದೆ. ದೇವೇಂದ್ರನ ಪತ್ನಿ ಶಚಿಗೆ ಇಷ್ಟವಿಲ್ಲದಿದ್ದರೂ ಪೀಡಿಸುತ್ತಾನೆ. ಅವಳ ಮೇಲಿನ ಕಾಮವೇ ಅವನಿಗೆ ಮುಂದೆ ಮುಳ್ಳಾಗುತ್ತದೆ. ಸಪ್ತ ಋಷಿಗಳು ಹೊತ್ತ ಪಲ್ಲಕ್ಕಿಯಲ್ಲಿ ಕುಳಿತ ನಹುಷ ಎಡಗಾಲಿನಿಂದ ಅಗಸ್ತ್ಯನನ್ನು ತಿವಿದು ಸರ್ಪ ಸರ್ಪ ಎಂದು ಮೂದಲಿಸಿದ್ದರ ಫಲವಾಗಿ ಶಾಪ ಹೊಂದಿದ ನಹುಷ ದೇವಲೋಕದಿಂದ ಭೂಮಿಗೆ ಬಿದ್ದು ಅಜಗರವಾಗಿ ಬಹಳಷ್ಟು ವರ್ಷ ನರಳಬೇಕಾಗುತ್ತದೆ. ಧರ್ಮರಾಜನ ಮೂಲಕ ಅವನಿಗೆ ಬಂದ ಶಾಪ ವಿಮುಕ್ತಿಗೊಂಡು ಮೋಕ್ಷ ಹೊಂದುವುದರೊಂದಿಗೆ ಪ್ರಸಂಗ ಮುಕ್ತಾಯ ಹೊಂದುತ್ತದೆ.

ಈ ಕೃತಿಯಲ್ಲಿನ ಸಂಭಾಷಣೆಗಳು ಉತ್ಕೃಷ್ಟವಾಗಿದೆ. ಇವತ್ತಿನ ರಾಜಕೀಯ ಸ್ಥಿತಿಯ ವಿಶ್ಲೇಷಣೆಯಂತೆ ಕಾಣುತ್ತದೆ. ಐದು ವರ್ಷಗಳಿಗೊಮ್ಮೆ ನಡೆಯುವ ಚುನಾವಣೆಯಲ್ಲಿ ಆಯ್ಕೆಯಾಗುವ ಮುಖಂಡರು ಅಧಿಕಾರದ ರುಚಿ ಹತ್ತಿದೊಡನೆ ನಹುಷರಂತಾಗಿ ಆರಿಸಿದ ಪ್ರಜೆಗಳನ್ನೇ ಹಿಂಸಿಸುತ್ತಾರೆ. (ನಹುಷ ಅಲ್ಲಿ ದೇವತೆಗಳನ್ನು ದೇವೇಂದ್ರನ ಪತ್ನಿಯನ್ನು ಗೋಳು ಹೋಯ್ದುಕೊಂಡಂತೆ) ಅಂಥವರಿಗೆ ನಹುಷನ ಅಧಃಪತನ ಒಂದು ಪಾಠವಿದ್ದಂತೆ ಇಲ್ಲಿನ ಕೆಲ ಸಂಭಾಷಣೆಯ ಮಾದರಿಗಳನ್ನು ಗಮನಿಸಬಹುದು.

ಅಗ್ನಿ : ಅನ್ಯರ ಉದ್ಧಾರಕ್ಕಾಗಿ ತ್ಯಾಗ ಮಾಡುವುದು ಓರ್ವ ಶ್ರೇಷ್ಠ ವ್ಯಕ್ತಿಯಿಂದ ಮಾತ್ರ ಸಾಧ್ಯ.

ನಹುಷ : ಭಗವಂತನ ಗೊಂಬೆಯಾಟದಲ್ಲಿ ನಾವು ಎಷ್ಟರವರು?

ಶಚಿ : ಮಡದಿ ಸೊತ್ತು ಅಲ್ಲ ಎಂಬುವುದನ್ನು ತಿಳಿಯದಷ್ಟು ಮೂಢ ನೀನು. ಅಧಿಕಾರ ಮದದಿಂದ ನನ್ನನ್ನು ಕಾಮಿಸಿ ಬಂದೆಯಾದರೆ ನಿನ್ನ ಪತನದ ಕಾಲ ದೂರವಿಲ್ಲ.

ಅಗಸ್ತ್ಯ : ಓರ್ವ ರಾಜನಾದವನು ಸಾಮಾಜಿಕ ನೆಲೆಯಲ್ಲಿ ದುರಾಡಳಿತ ನಡೆಸಿದರೆ ಆ ಪೀಠದಲ್ಲಿ ಉಳಿಯಲು ಅಯೋಗ್ಯ. ಆಡಳಿತದಲ್ಲಿರುವವರು ದುರಾಡಳಿತ ಮಾಡಿ ಪ್ರಜೆಗಳಿಗೆ ಕಂಟಕವಾಗುವದಲ್ಲ. ಸ್ತ್ರೀಯರ ಮಾನ ರಕ್ಷಣೆ ಮಾಡದೇ ಇದ್ದಲ್ಲಿ ಗುರುಹಿರಿಯರಲ್ಲಿ ಗೌರವ ತೋರದೇ ಹೋದಲ್ಲಿ ಸಮಾಜವೇ ಅವರನ್ನು ಅಧಿಕಾರದಿಂದ ಕೆಳಗೆ ಇಳಿಸುತ್ತದೆ.

ನಹುಷ : ಭಗವಂತ ಆಯುಷ್ಯ ಇಟ್ಟರೂ ಅದು ಶಾಪವಾಯಿತಲ್ಲಾ ವರವಾಗಲಾರದು.

ಧರ್ಮರಾಜ : ಯಾರಲ್ಲಿ ಮಾನವೀಯ ಗುಣಗಳು ಇರುತ್ತವೆಯೋ ಅವನೇ ಮನುಷ್ಯ. ಸಂತೋಷದ ಮೂಲ ನಿಸ್ವಾರ್ಥ, ತ್ಯಾಗ, ಅನ್ನದಾನ ಹಾಗೂ ವಿದ್ಯಾದಾನವೇ ದೊಡ್ಡ ದಾನ.

ಧರ್ಮಜ : ಮನುಷ್ಯರ ಆಯ್ಕೆ ಹೇಗಿರಬೇಕು. ಮೊದಲನೆಯದು ಆಯುಷ್ಯ ಅದಕ್ಕಾಗಿ ಆರೋಗ್ಯ, ಎರಡನೆಯದು ವ್ಯಕ್ತಿಯ ಗುಣ. ಮೂರನೆಯದು ಜ್ಞಾನಾರ್ಜನೆ, ನಾಲ್ಕನೆಯದು ಅಂತಸ್ತು, ಸ್ಥಾನಮಾನ ಐದನೆಯದು ನಮ್ಮ ನಂಬಿಕೆ ಆಚಾರ ವಿಚಾರಗಳು. ಅಹಂಕಾರ ಹಾಗೂ ಪಾಪ ಎಲ್ಲ ಗುಣಗಳನ್ನು ಮುಗಚಿ ಹಾಕುತ್ತದೆ. ತನ್ನದೆನ್ನುವ ಸ್ವಾರ್ಥವೇ ಮನುಷ್ಯರ ದೊಡ್ಡ ಶತ್ರು.

ಹೀಗೆ ಬದುಕಿಗೆ ಅಗತ್ಯವುಳ್ಳ ವಿಚಾರಧಾರೆಗಳನ್ನು ಡಾ.ಪಾಂಗಾಳರು ಈ ಕೃತಿಯಲ್ಲಿ ನೀಡಿದ್ದಾರೆ. ನಹುಷ ಮೋಕ್ಷಕ್ಕೆ ಅಗತ್ಯವುಳ್ಳ ಪದ್ಯಗಳನ್ನು ರಚಿಸಿದರು. ಪಾರ್ತಿಸುಬ್ಬ ಪ್ರಶಸ್ತಿ ಪುರಸ್ಕೃತ, ಯಕ್ಷಕವಿ ಡಿ.ಎಸ್.ಶ್ರೀಧರ ಅವರು ಇಲ್ಲಿನ ಪದ್ಯಗಳ ಮಟ್ಟುಗಳು ಬಹು ವೈವಿಧ್ಯಮಯವಾಗಿದ್ದು ಹಾಡಲು ಒದಗಿ ಬರುತ್ತವೆ. ಸಾಹಿತ್ಯಿಕವಾಗಿಯೂ ಇವು ಶ್ರೀಮಂತವಾಗಿವೆ. ಶ್ರೀಧರರ ಯಕ್ಷಕಾವ್ಯ ರಚನೆಯ ಒಂದೆರಡು ಮಾದರಿಗಳ ಮೂಲಕ ಈ ಕೃತಿಯ ಸೊಬಗಿನ ಪರಿಚಯವಾಗುತ್ತದೆ. ಶಂಕರಾಭರಣ ರೂಪಕತಾಳದಲ್ಲಿ ಬರುವ ಭಾಗವತರ ಕಂಠದಲ್ಲಿ ಕೇಳುವಾಗ ಬಹಳ ಸುಖಕರವಾಗಿರುತ್ತದೆ.

ಅಮ್ಮಾ ರಮಣನೆಮ್ಮೊಳಿಲ್ಲ । ಹಮ್ಮು ದೊರೆತಿಹನುನಹುಷ ॥

ಸುಮ್ಮಿರಲು ಬಾರದಿರುವೆ । ನಮ್ಮ ಕಷ್ಟವು ॥

ಒಮ್ಮೆ ರಮಣನಿರುವತೋರಿ । ನೆಮ್ಮದಿಯ ನೀಡು ತಾಯೇ ॥

ರಮ್ಯ ಪುಣ್ಯ ಧಾಮ ಕೆಡಲು । ನೆಮ್ಮಿಕರೆದೆನು ॥

ಇದೇ ರೀತಿ ಭಾಮಿನಿಯಲ್ಲಿರುವ ಇನ್ನೊಂದು ಪದ್ಯದಲ್ಲಿ ನಹುಷನಿಗಾದ ಸಂತೋಷವನ್ನು ಕಣ್ಮುಂದೆ ಬರುವಂತೆ ಕವಿ ಡಿ.ಎಸ್.ಶ್ರೀಧರ ರಚಿಸಿದ್ದಾರೆ.

ಇಂದು ವಂಶಜನೆಂಬ ಮಡಿ ಶಿಬಿ ।
ಗಂಡು ಸೋರಿತು ಯುಗಗಳಂತರ।
ದಿಂದ ಕಾಯುವ ಸ್ಮರಣೆ ಸಾಯದ ನಹುಷಭೂಪತಿಗೆ ॥

ಎಂದುದೇನ್ನೈ ಪೇಳು ನೀ ।
ಚಂದ್ರವಂಶಜನೆಂಬ ಹಸಿವಿಂ ।
ಕುಂದಿರುವೆ ಬಹುದಿನದಿ ತಿನ್ನುವೆ ಬಳಿಕ ಮೊದಲರುಹು ॥

ಈ ಪ್ರಸಂಗದಲ್ಲಿ ಯಥೇಚ್ಛವಾದ ಹಾಸ್ಯ ಬಂದಿದೆ. ಬೇಟೆಯ ಸಂದರ್ಭವನ್ನು ತರುವ ಮೂಲಕ ಕಿರಾತ ಪಾತ್ರರ ವೇಷಗಾರಿಕೆಗೆ ಅವಕಾಶ ದೊರೆತಿದೆ. ಋಷಿಗಳು, ದೇವತೆಗಳು, ರಾಜರು, ಅಜಗರ, ಭೀಮ, ಧರ್ಮಜ, ನಹುಷ ಹೀಗೆ ವೈವಿಧ್ಯಮಯವಾದ ಪಾತ್ರಗಳ ವೇಷಗಾರಿಕೆಗೆ ಬರುವುದರಿಂದ ರಾಗದಲ್ಲಿ ಜೀವಂತಿಕೆ ಇರುತ್ತದೆ. ಕಥೆಯು ಸ್ವರ್ಗ ಭೂಮಿ, ಸ್ವರ್ಗ ಭೂಮಿ ಹೀಗೆ ಓಲಾಡುತ್ತಿರುತ್ತಿದೆ. ಸಪ್ತ ಋಷಿಗಳ ಶಾಪ ಪ್ರಸಂಗವಂತೂ ಅಭಿನಯದಲ್ಲಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಲು ಸಾಧ್ಯ. ಉತ್ತಮ ರಾಗ ಸಂಯೋಜನೆ ಈ ಕೃತಿಯ ಯಶಸ್ಸಿಗೆ ಕಾರಣವಾಗುತ್ತದೆ.

ಹೀಗೆ ಡಾ.ಆರ್.ರಾಧಾಕೃಷ್ಣ ಪಾಂಗಾಳರು ಪ್ರಕಟಿಸಿರುವ ಎರಡು ಯಕ್ಷಗಾನ ಕೃತಿಗಳು ಪ್ರಸಂಗ ಸಾಹಿತ್ಯದಲ್ಲಿ ವಿಶಿಷ್ಟವಾಗಿವೆ. ಪಾರಂಪರಿಕ ಪ್ರಸಂಗ ಕೃತಿಗಳಿಂದ ಇವು ಭಿನ್ನವಾಗಿವೆ. ಪ್ರದರ್ಶನದಲ್ಲಿ ಯಶಸ್ವಿಯಾಗಿರುವುದರೊಂದಿಗೆ ಸಮಾಜಕ್ಕೆ ಉತ್ತಮ ಸಂದೇಶವನ್ನು ಇವು ನೀಡಿವೆ. ಇದಕ್ಕಾಗಿ ಪಾಂಗಾಳರ ಕೊಡುಗೆಯನ್ನು ಯಕ್ಷಲೋಕ ಗೌರವಿಸುತ್ತಿದೆ. ಅವರ ಈ ಬಗೆಯ ಸಾಂಸ್ಕೃತಿಕ ಸಾಧನೆಗಳು, ಚಟುವಟಿಕೆಗಳು ಹೆಚ್ಚಲಿ. ಆ ಮೂಲಕ ಯಕ್ಷಗಾನ ರಂಗಕ್ಕೆ ಇನ್ನಷ್ಟು ಕೊಡುಗೆಗಳು ಲಭಿಸಲಿ, ಎಂದು ಹಾರೈಸೋಣ. ಬೆಂಗಳೂರಿನಂತಹ ನಗರ ಪ್ರದೇಶದ ಹವ್ಯಾಸಿ ಕಲಾವಿದರಿಗೆ ಇವರ ಈ ಬಗೆಯ ಸಾಧನೆ ಅನುಕೂಲಕರವಾಗಿದೆ. ಯಕ್ಷಗಾನ ಪ್ರಸಂಗಗಳು ಪುರಾಣ ಲೋಕಕ್ಕೆ ಸಂಬಂಧಿಸಿದ್ದರೂ ಆಧುನಿಕ ದರ್ಶನ ಹೊಸ ಹೊಸ ಚಿಂತನೆಗಳು ಇದ್ದು ವೈಚಾರಿಕತೆ ಸಮಕಾಲೀನವಾದಾಗ ಮಾತ್ರ ಎಲ್ಲರ ಮನ ಸೆಳೆಯುತ್ತದೆ ಎಂಬುವುದನ್ನು ಮರೆಯಬಾರದು. ಪಾಂಗಾಳರು ಈ ಅಂಶವನ್ನು ಮನಗಂಡು ಕೃತಿ ರಚನೆಗೆ ಮುಂದಾಗಿದ್ದಾರೆ ಎಂಬುದು ಈ ಎರಡೂ ಕೃತಿಗಳಿಂದ ಸಾಬೀತಾಗುತ್ತದೆ.

□

ದೇರಾಜೆಯವರ ಯಕ್ಷಗಾನ ವಿವೇಚನೆ

ಪ್ರಸಂಗಗಳು ಯಕ್ಷಗಾನದ ಪದ್ಯ ಸಾಹಿತ್ಯವಾದರೆ ಅದರಲ್ಲಿ ಬರುವ ಅರ್ಥಗಾರಿಕೆ ಗದ್ಯ ಸಾಹಿತ್ಯವಾಗುತ್ತದೆ. ಒಂದಕ್ಕೆ ಲಿಖಿತ ರೂಪದ ದಾಖಲೆ ಇದ್ದರೆ ಮೌಖಿಕವಾಗಿರುವ ಅರ್ಥಗಾರಿಕೆಗೆ ಅಂತಹ ಯಾವುದೇ ಲಿಖಿತ ದಾಖಲೆಗಳಿರುವುದಿಲ್ಲ. ಆದರೆ ಈ ಮೌಖಿಕ ಸಾಹಿತ್ಯವು ನಾಡಾಡಿಗಳಿಗೆ ಆನಂದವನ್ನು, ಪುರಾಣ ಜ್ಞಾನವನ್ನು ಬಾಳಿಗೆ ಅಗತ್ಯವಾದ ಸಂಸ್ಕಾರವನ್ನು ಜೀವನ ವಿವೇಕವನ್ನು ನೀಡುವ ಮೂಲಕ ನಾಡಿನ ಸಂಸ್ಕೃತಿ ಸಂವರ್ಧನೆಯ ಮಹತ್ತರ ಪಾತ್ರವನ್ನು ವಹಿಸುತ್ತದೆ. ಶ್ರೀ ಪೊಳಲಿ ಶಂಕರನಾರಾಯಣ ಶಾಸ್ತ್ರಿ, ಶ್ರೀ ನಾರಾಯಣ ಕಿಲ್ಲೆ, ಶ್ರೀ ಕವಿಭೂಷಣ ವೆಂಕಪ್ಪ ಶೆಟ್ಟಿ, ಶ್ರೀ ಅರ್ಕುಳ ಸುಬ್ಬರಾಯಚಾರ್ಯ, ಶ್ರೀ ಅಣ್ಣಪ್ಪ ಕಾರಂತ, ಶ್ರೀ ತೆಕ್ಕಟ್ಟೆ ಬಾಬಣ್ಣ ಶಾನುಭೋಗ, ಶ್ರೀ ಶೇಣಿಗೋಪಾಲಕೃಷ್ಣ ಭಟ್ಟ, ಶ್ರೀ ಮಲ್ಪೆ ಶಂಕರನಾರಾಯಣ ಸಾಮಗ, ಶ್ರೀ ಮಲ್ಪೆ ರಾಮದಾಸ ಸಾಮಗ, ಶ್ರೀ ದೇರಾಜೆ ಸೀತಾರಾಮಯ್ಯ, ಶ್ರೀ ಪೆರ್ಲ ಕೃಷ್ಣಭಟ್ಟ, ಶ್ರೀ ಎಂ.ಆರ್.ಶಾಸ್ತ್ರಿ, ಶ್ರೀ ಕಿರಿಕ್ಕಾಡು ಮಾಸ್ತರ್ ವಿಷ್ಣುಭಟ್ಟ, ಶ್ರೀ ಕುರಿಯ ವಿಠಲಶಾಸ್ತ್ರಿ ಮುಂತಾದವರು ಸೃಷ್ಟಿಸಿರುವ ಅರ್ಥ ಸಾಹಿತ್ಯ ಕಳೆದ ಶತಮಾನದ ಜನ ಮಾನಸದಲ್ಲಿ ಅಚ್ಚೊತ್ತಿದೆ. ಅಂತಹ ಮೇರು ಅರ್ಥಧಾರಿಗಳಲ್ಲಿ ದೇರಾಜೆ ಸೀತಾರಾಮಯ್ಯನವರು ಪ್ರಮುಖರು. ಇವರು ಪ್ರಖರ ಚಿಂತಕರು, ಪಾಂಡಿತ್ಯಪೂರ್ಣ ಲೇಖಕರು, ಖಚಿತವಾದ ವಿಚಾರ ಪ್ರತಿಪಾದಕರು, ಅಸ್ಖಲಿತವಾಕ್ಧಾರೆಯುಳ್ಳವರು, ಕಳಕಳಿಯ ಸಮಾಜ ಸುಧಾರಕರು, ಅರ್ಥಗಾರಿಕೆಯಲ್ಲಿ ಭಾವ ಶ್ರೀಮಂತಿಕೆಯನ್ನು ಮೇಳೈಸಿದವರು ಆಗಿ ಪ್ರಸಿದ್ಧರಾಗಿದ್ದಾರೆ. ಇವರ ಅರ್ಥಗಾರಿಕೆ ಯಾವ ಸಾಹಿತ್ಯ ಪ್ರಕಾರಕ್ಕೂ ಕಡಿಮೆ ಇಲ್ಲದಿದ್ದು ಸಾಹಿತ್ಯದ ಮೂಲ ಉದ್ದೇಶಗಳ್ಯಾವುವು ಇವೆಯೋ ಅವೆಲ್ಲವೂ ಇವರ ಅರ್ಥಗಾರಿಕೆಯಲ್ಲಿ ಕಂಡು ಬರುತ್ತವೆ. ದೇರಾಜೆ ಸೀತಾರಾಮಯ್ಯನವರು ಕೇವಲ ಅರ್ಥಧಾರಿಗಳಾಗಿರದೇ ಸಮರ್ಥ ಲೇಖಕರೂ ಆಗಿದ್ದರು. ಯಕ್ಷಗಾನ ಸಾಹಿತ್ಯ ಅಭ್ಯಾಸಿಗಳಿಗೆ ಇವರ ಕೃತಿಗಳು ಅನೇಕ ಹೊಳವುಗಳನ್ನು ನೀಡುತ್ತವೆ. ಯಕ್ಷಗಾನದ ವಿವಿಧ ಅಂಗಗಳ ಬಗ್ಗೆ, ಪೌರಾಣಿಕ ವಿಚಾರಗಳ ಬಗ್ಗೆ, ಶಾಸ್ತ್ರಗಳ

ಕುರಿತು ಅಧಿಕೃತವಾಗಿ ಬರೆಯ ಬಲ್ಲ ಶಕ್ತಿಯನ್ನು ಹೊಂದಿದ್ದು, ದೇರಾಜೆಯವರು ವೈಚಾರಿಕತೆಯನ್ನು ಬರಹಗಳಲ್ಲಿ ತಂದಿದ್ದಾರೆ. ಸಂಶೋಧನಾತ್ಮಕವಾಗಿರುವ ಅವರ ಕೃತಿಗಳು ಆಸಕ್ತರಿಗೆ ವಿದ್ಯಾರ್ಥಿಗಳಿಗೆ ಆಕರ ಗ್ರಂಥಗಳಾಗಿವೆ. 'ಯಕ್ಷಗಾನ ವಿವೇಚನೆ'ಯು ಸಂಶೋಧನಾತ್ಮಕ ಲೇಖನಗಳಿಂದ ಕೂಡಿದ್ದು ಅದು ರಚನೆಗೊಂಡ ಕಾಲಕ್ಕೆ ಆ ಬಗ್ಗೆ ಚಿಂತನೆ ನಡೆಸಿದವರು ಬಹಳ ವಿರಳರಾಗಿದ್ದರು. ಈ ಕಾರಣದಿಂದ ಈ ಕೃತಿಗೆ ಐತಿಹಾಸಿಕ ಮಹತ್ವವಿದೆ. ನಮ್ಮಂತಹ ಸಾಹಿತ್ಯದ ಅಧ್ಯಯನ ಮಾಡುವವರಿಗೆ ಅದು ಆಧಾರ ಗ್ರಂಥವಾಗಿ ಸಾಕಷ್ಟು ನೆರವನ್ನು ನೀಡಿತು ಎಂಬುದನ್ನು ಕೃತಜ್ಞತೆಯಿಂದ ನೆನೆಯಬೇಕಾಗಿದೆ. ಉಪಯುಕ್ತ ಮಾಹಿತಿಯೊಂದಿಗೆ ಜಿಜ್ಞಾಸೆ, ಚಿಂತನೆ ಜೊತೆಜೊತೆಯಲ್ಲಿ ಬಂದಿವೆ. ರಂಗಭೂಮಿಯ ಕುರಿತು ಅವರಿಗಿರುವ ಆಳವಾದ ಜ್ಞಾನವನ್ನು ಪ್ರತಿಬಿಂಬಿಸುತ್ತದೆ.

ಯಕ್ಷಗಾನದ ಹುಟ್ಟಿನ ಬಗ್ಗೆ ದೇರಾಜೆಯವರು ವಿಭಿನ್ನವಾಗಿ ಚಿಂತಿಸಿದ್ದಾರೆ. ತಮ್ಮದೇ ಆದ ನಿಲುವನ್ನು ಹೊಂದಿದ್ದರು. ಅವರು ಇಲ್ಲಿ ರಂಗಭೂಮಿಯ ಹಿನ್ನೆಲೆಯಲ್ಲಿ ಚರ್ಚಿಸುತ್ತಾರೆ. ಆದ್ದರಿಂದ ಅವರ ಮಾತಿಗೆ ವಿಶೇಷ ಬೆಲೆ ಕೊಡಬೇಕಾಗುತ್ತದೆ. ಪ್ರಸಂಗ ಸಾಹಿತ್ಯದ ಬಗ್ಗೆ ಕೂಡ ದೇರಾಜೆಯವರು ಹೇಳಿರುವ ಮಾತುಗಳು ಮನನೀಯ. "ಪ್ರಸಂಗವೆಂದರೆ ನಾನಾ ಪುರಾಣಗಳಿಂದ, ಆಯ್ದುಕೊಂಡ ರಾಗ ತಾಳಗಳಿಂದ ಹೊಂದಿಕೊಂಡು ಕನ್ನಡದಲ್ಲಿ ರಚಿತವಾದ ಪದ್ಯ ಕಾವ್ಯಗಳಾಗಿವೆ. ಇವುಗಳನ್ನು ಪದ್ಯ ನಾಟಕಗಳೆಂದೂ ಕರೆಯಬಹುದು. "(ಯಕ್ಷಗಾನ ವಿವೇಚನೆ-ಸೀತಾರಾಮಯ್ಯ ಚೊಕ್ಕಾಡಿ ಪ್ರ:ಕುರಿಯ ವಿಠಲಶಾಸ್ತ್ರಿ, ಕರೋಪಾಡಿ, ಪುಟ 14,)" ಎಂದಿರುವ ಈ ಮಾತುಗಳಲ್ಲಿ ನಾಟಕ ಸಾಹಿತ್ಯದ ಹಿನ್ನೆಲೆಯ ಪರಿಚಯವೂ ಆಗುತ್ತದೆ. ಈ ಕೃತಿಯಲ್ಲಿ ಬಯಲಾಟ ಪರಂಪರೆಯ ಬಗ್ಗೆ ನೈಜ ಚಿತ್ರಣಗಳಿವೆ. ಮೇಳದ ಆಟಗಳು ಪ್ರಾರಂಭಗೊಳ್ಳುವ ಬಗೆ ಹಾಗೂ ಮೇಳದಲ್ಲಿ ಬಳಕೆಯಲ್ಲಿರುವ ಮುಖ್ಯ ಪದಗಳ ಹಿಂದೆ ಅಡಗಿರುವ ತಾತ್ವಿಕ ವಿಚಾರಗಳನ್ನು ಸ್ಥೂಲವಾಗಿ ವಿವರಿಸುತ್ತಾರೆ. ಯಕ್ಷಗಾನದಲ್ಲಿ ಬಳಕೆಯಲ್ಲಿರುವ ಸಾಹಿತ್ಯ, ಸಂಗೀತ, ನರ್ತನ, ಬಣ್ಣಗಾರಿಕೆ ಮುಂತಾದ ಕಲೆಗಳ ಸಮ್ಮಿಶ್ರಣದಿಂದ ಪರಿಪೂರ್ಣ ಕಲೆಯಾಗಿದೆ ಎಂಬುದು ಅವರ ಅಭಿಮತ. ಆಧ್ಯಾತ್ಮಿಕ ಪರಿವೇಷವನ್ನು ಧಾರ್ಮಿಕ ಮಹತ್ವವನ್ನು ಸೊಗಸಾಗಿ ಇಲ್ಲಿ ಲೇಖಕರು ಪ್ರಸ್ಥಾಪಿಸಿದ್ದಾರೆ. ಆಟಗಳನ್ನು ಆಡುವವರಲ್ಲಿ, ನೋಡುವವರಲ್ಲಿ ಇರಬೇಕಾದ ವಿಚಾರವಂತಿಕೆ ಬಗ್ಗೆ ಕೂಡಾ ದೇರಾಜೆಯವರು ಇಲ್ಲಿ ಚಿಂತಿಸಿದ್ದಾರೆ. ಹೀಗೆ ಸಮಗ್ರವಾದ ನೋಟ ಇಲ್ಲಿ ದೊರೆಯುತ್ತದೆ.

ತಾಳಮದ್ದಲೆಯ ಕುರಿತು ಬರೆಯುವಾಗ ದೇರಾಜೆ ಸೀತಾರಾಮಯ್ಯನವರು ಬೇರೆ ಬೇರೆ ಕಲಾ ಪ್ರಕಾರಗಳ ಆವಿರ್ಭಾವ ಇಲ್ಲಿ ಆಗಿದೆ ಎನ್ನುತ್ತಾರೆ. ಈ ಕಲೆಯಲ್ಲಿ ಗಾನಗೋಷ್ಠಿ, ವಾದನ ಗೋಷ್ಠಿ, ಪುರಾಣ ಪ್ರವಚನ, ವಿಚಾರ ಗೋಷ್ಠಿ, ವಚೋ

ರಚಿತವಾದ ಕಾವ್ಯ ಹಾಗೇ ಶ್ರಾವ್ಯವಾದ ನಾಟಕ, ಪೌರಾಣಿಕವಾದ ಆವರಣ ಸೃಷ್ಟಿ, ಸಮಾಜಕ್ಕೆ ಸಂಸ್ಕಾರವನ್ನು ವಿವೇಕವನ್ನು ಕೊಡುವ ಶಿಕ್ಷಣ ಶಾಲೆಯಂತೆ ಇದೆ ಎಂದು ತಿಳಿಸುತ್ತಾರೆ. ಇವರ 'ಯಕ್ಷಗಾನ ವಿವೇಚನೆ' ಸಂಶೋಧನಾತ್ಮಕವಾಗಿರುವಂತೆ ವಿಚಾರ ಪ್ರಚೋದಕವೂ ಆಗಿದೆ. ಇಲ್ಲಿನ ಅಧ್ಯಾಯಗಳಲ್ಲಿ ಯಕ್ಷಗಾನವು ಕಲಾಮಾಧ್ಯಮವಾಗಿ, ಸಾಹಿತ್ಯ ಸಂವಾಹಕವಾಗಿ, ಸಂಸ್ಕೃತಿ ಪ್ರಸಾರಕವಾಗಿ ಜನ ಮಾನಸದಲ್ಲಿ ಸ್ಥಾಯಿಯಾಗಿ ನಿಂತ ಬಗ್ಗೆ ವಿವರಣೆ ಇದೆ. ಯಕ್ಷಗಾನದ ವ್ಯಾಪಕತೆ ಬಗ್ಗೆ ಸುದೀರ್ಘವಾದ ಚಿತ್ರಣ ಲಭಿಸುತ್ತದೆ.

ದೇರಾಜೆ ಸೀತಾರಾಮಯ್ಯನವರು ಅರ್ಥಗಾರಿಕೆಯಲ್ಲಿ ನುರಿತವರು, ಸಾಹಿತ್ಯದ ಸಂಸರ್ಗವುಳ್ಳ ಚಿಂತಕರು ಹೀಗಾಗಿ ಅವರ ಮಾತುಗಳಿಗೆ ಮಹತ್ವವಿದೆ. ಇಲ್ಲಿ ಕಲಾವಿದರು ಹೇಗಿರಬೇಕೆಂಬುದನ್ನು, ಅವರ ಅರ್ಹತೆಗಳು ಹೇಗಿರಬೇಕೆಂಬುದರ ಬಗ್ಗೆ ಸವಿವರವಾಗಿ ತಿಳಿಸಿದ್ದು ಅರ್ಥಗಾರಿಕೆಯಲ್ಲಿ ಅಸ್ತಿವಾದ, ಘರ್ಷಣೆ, ವ್ಯಕ್ತಿತವ ಪ್ರವೇಶ, ರಸಾಭಿವ್ಯಕ್ತಿ, ಚಿತ್ರಣ, ನಿರ್ವಹಣೆ ಎಂಬ ಮಜಲುಗಳು, ಸೋಪಾನಗಳು ಇವೆ. ಇವುಗಳನ್ನು ಆಧರಿಸಿ ಅರ್ಥ ಕಟ್ಟಬೇಕು ಎನ್ನುತ್ತಾರೆ. ರಸಭಂಗವಾಗದ ರೀತಿಯಲ್ಲಿ ಅರ್ಥಗಾರಿಕೆ ಇರಬೇಕೆಂಬುದೇ ಇವರ ದೃಢ ನಂಬಿಕೆ. ಅರ್ಥಧಾರಿಗಳಾಗುವವರಿಗೆ ಕಿವಿಮಾತುಗಳಾಗುವಂತಹ ಸಾಲುಗಳು ಇಲ್ಲಿವೆ. "ಅರ್ಥಧಾರಿಗಳು ಮಾಡುವ ವಾದ ಪ್ರತಿವಾದಗಳು ಒಂದು ಕ್ರಮವನ್ನು ಮೀರಿರಬಾರದು ತರ್ಕಬದ್ಧವಾಗಿಯೇ ಸಹಜವಾಗಿಯೂ ಇರಬೇಕು." ಇದರ ಮುನ್ನೆಲೆಯ ಮಾತುಗಳನ್ನು ಶ್ರೀಮಾಂಬಾಡಿ ನಾರಾಯಣ ಭಾಗವತರ ಅಭಿನಂದನ ಗ್ರಂಥವಾದ "ರಂಗವೈಖರಿ"ಗೆ ಇವರು ಬರೆದಿರುವ 'ಅರ್ಥಗಾರಿಕೆ' ಎಂಬ ಲೇಖನದಲ್ಲಿ ಕಾಣಬಹುದು. "ಪ್ರಸಂಗದಲ್ಲಿ ಉದಾತ್ತಾ, ಉದ್ಧತ, ಲಲಿತ, ಶಾಂತಗಳೆಂಬ ಬಗೆಬಗೆಯ ಲಕ್ಷಣಗಳನ್ನು ಹೊಂದಿರುವ ಪಾತ್ರಗಳಿರುತ್ತವೆ. ಪಾತ್ರಧಾರಿಯು ತನ್ನ ಪರಿಣತಿಗೂ ಸ್ವಭಾವಕ್ಕೂ ಯಾವುದು ಅನುಗುಣವೋ ಅದನ್ನು ಪ್ರಾಮಾಣಿಕವಾಗಿ ಕಂಡುಕೊಂಡು ಅಂತಹವುದನ್ನೇ ನಿರ್ವಹಿಸುವುದು ವಿಹಿತ" ಎಂಬ ಮಾತು (ಪುಟ 206) ಯೋಗ್ಯ ಸಲಹೆಯಾಗಿದೆ. ಎಲ್ಲಾ ಕಾಲದ ಪಾತ್ರಧಾರಿಯಾದವನು ಆ ಪಾತ್ರಕ್ಕೆ ತಕ್ಕ ಭಾಷೆಯನ್ನು ಬಳಸಬೇಕು. ತಿಳುವಳಿಕೆಯ ಮಿತಿಯನ್ನು ಗಮನದಲ್ಲಿಟ್ಟು ಕೊಳ್ಳಬೇಕು. ಒಂದು ಕಥೆಯಲ್ಲಿ ಸೋಲಬೇಕಾದ ಪಾತ್ರವನ್ನು ಅರ್ಥಧಾರಿಯಾದವನು ತನ್ನ ಮಾತಿನ ಚಮತ್ಕಾರದಿಂದ ಗೆಲ್ಲಿಸಬಾರದು. ಪದ್ಯದ ಎಲ್ಲಾ ಆಯಾಮಗಳ ಅರ್ಥವನ್ನು ಅರ್ಥಧಾರಿಯಾದವನು ತನ್ನ ಮುಂದೆ ಕಣ್ಣು, ಕಿವಿಗಳನ್ನು ತೆರೆದು ಕುಳಿತು ಪ್ರೇಕ್ಷಕರಿಗೆ ದಾಟಿಸುವುದರ ಬಗ್ಗೆ ಹೊಣೆಗಾರನಾಗಿರುತ್ತಾನೆ.

ಈ ಎಲ್ಲಾ ಮೇಲಿನ ಅಂಶಗಳನ್ನು ದೇರಾಜೆ ಸೀತಾರಾಮಯ್ಯನವರು ಸ್ವತಃ ಅಳವಡಿಸಿಕೊಂಡಿದ್ದರು. ಅಂತೆಯೇ ತಮ್ಮ ಅರ್ಥಗಾರಿಕೆಯಲ್ಲಿ ಇದೇ

ರೀತಿ ನಡೆಯುತ್ತಿದ್ದರು. ಇದರಿಂದಾಗಿಯೇ ಅವರೊಬ್ಬ ತಾಳಮದ್ದಲೆಯ ಮಹಾನ್ ಅರ್ಥಧಾರಿಯಾಗಿ ತಮ್ಮದೇ ಛಾಪನ್ನು ಮೂಡಿಸಿ ಇಂದಿಗೂ ಜನತೆ ನನೆದುಕೊಳ್ಳುವಂತಹ ಕಲಾವಿದರಾಗಿದ್ದಾರೆ. ನುಡಿದಂತೆ ನಡೆಯುವುದು ಮಹನೀಯರಿಂದ ಮಾತ್ರ ಸಾಧ್ಯ. ದೇರಾಜೆ ಆ ರೀತಿಯ ವ್ಯಕ್ತಿತ್ವವುಳ್ಳವರಾಗಿದ್ದರು. ಯಕ್ಷಗಾನದ ಹಾಡುಗಾರಿಕೆಯ ಬಗ್ಗೆ ಇಂದು ಸಾಕಷ್ಟು ವಾದ ವಿವಾದಗಳು ನಡೆಯುತ್ತಾ "ಯಕ್ಷಗಾನ ಗಾನ ವೈಭವ" ಎಲ್ಲೆಲ್ಲೂ ಮೆರೆಯುತ್ತಿರುವ ಇಂದಿನ ದಿನಮಾನಗಳಲ್ಲಿ ದೇರಾಜೆಯವರ ಚಿಂತನೆಗೆ ಮಹತ್ವವಿದೆ. ಸಂಗೀತಕ್ಕೆ ಬದ್ಧವಾದ ಭಾಗವತಿಕೆ ಹಾಗೂ ಪರಂಪರೆಗೆ ಜೋತು ಬೀಳುವ ಭಾಗವತಿಕೆಗಳ ನಡುವೆ ಸಂಘರ್ಷ ಎಲ್ಲ ಕಾಲಕ್ಕೂ ಇದ್ದದ್ದೆ ಈ ಕೃತಿಯಲ್ಲಿ ಎರಡೂ ಪದ್ಧತಿಗಳ ಬಗ್ಗೆ ವಿಶ್ಲೇಷಿಸಿ ಸಂಗೀತದ ರಾಗಗಳನ್ನು ಬಳಸಿಕೊಂಡು ಯಕ್ಷಗಾನೀಯವಾಗಿ ಭಾವನಾತ್ಮಕವಾಗಿ ಹಾಡುವುದೇ ಉತ್ತಮ ಕ್ರಮ ಎಂದು ಅಭಿಪ್ರಾಯಿಸಿದ್ದಾರೆ. ಭಾಗವತಿಕೆ ಗುಣಧರ್ಮದ ವಿಶ್ಲೇಷಣೆಯನ್ನು ಕೂಡಾ ಸೊಗಸಾಗಿ ಮಾಡಿದ್ದು ಹಿಮ್ಮೇಳದವರು ಗಮನಿಸಬೇಕಾಗಿದೆ.

ಇಪ್ಪತ್ತೊಂದನೆಯ ಶತಮಾನದಲ್ಲಿ ಎಲ್ಲ ರಂಗವೂ ವಾಣಿಜ್ಯೀಕರಣದಿಂದ ಅಯೋಮಯವಾಗುತ್ತಿದೆ. ಪಾರಂಪರಿಕ ಮೌಲ್ಯಗಳು ನಶಿಸುತ್ತಿವೆ. ಎಲ್ಲಾ ಕಲಾಪ್ರಕಾರಗಳಲ್ಲಿ ಹೊಸತನ ದಾಂಗುಡಿ ಇಟ್ಟು, ಅಪಸವ್ಯಗಳು ಮೆರೆಯುತ್ತವೆ. ಯಕ್ಷಗಾನವೂ ಇದಕ್ಕೆ ಹೊರತಾಗಿಲ್ಲ ಯಕ್ಷಗಾನ ಕಲಾವಿದರು ಇಂದು ವಾಣಿಜ್ಯೀಕರಣದ ಸುಳಿಗೆ ಸಿಲುಕಿದ್ದಾರೆ. ಈ ಸುಳಿಯಿಂದ ಪಾರಾಗಲು ದೇರಾಜೆ ಸೀತಾರಾಮಯ್ಯನವರಂತಹ ಮೇರು ವ್ಯಕ್ತಿತ್ವದ ಕಲಾವಿದರ ನುಡಿಗಳು ಅಗತ್ಯವಾಗಿದೆ. 'ಯಕ್ಷಗಾನ ವಿವೇಚನೆ'ಯಲ್ಲಿ ಕಲಾವಿದರಾದವರು ಹೇಗಿರಬೇಕು? ಯಾವ ರೀತಿ ನಡೆದುಕೊಳ್ಳಬೇಕು? ಅವರ ಕರ್ತವ್ಯಗಳೇನು? ಸಮರ್ಥ ಕಲಾವಿದನು ಅನುಸರಿಸಬೇಕಾದ ವಿಧಿವಿಧಾನಗಳು ಯಾವುವು? ಅವರ ಸಾಮಾಜಿಕ ಚಿಂತನೆಗಳು ಹೇಗಿರಬೇಕು? ಸಮಾಜಕ್ಕೆ ಕಲಾವಿದನ ಬಾಧ್ಯತೆಗಳೇನು? ಎಂಬುದೆಲ್ಲದರ ವಿವೇಚನೆ ಇದೆ. ಯಕ್ಷಗಾನದಲ್ಲಿ ಆಗಾಗ ಹೊಸತನಗಳು ಹುಟ್ಟಿಕೊಳ್ಳಲು ಕಾರಣವಾಗುವ ಅಂಶಗಳ ಹಿನ್ನಲೆಯನ್ನು ಕೂಡ ದೇರಾಜೆಯವರು ಇಲ್ಲಿ ಚರ್ಚಿಸಿದ್ದು ಹಣದ ಆಸೆಗೆ, ಕೀರ್ತಿಯ ಲಾಲಸೆಗೆ ಕಲಾರಾಧನೆಯು ಬಲಿಯಾಗಬಾರದೆಂಬುದು ಅವರ ಕಳಕಳಿಯಾಗಿದೆ. ತನ್ನ ಹಿರಿತನ ಮೆರೆಯಲು ರಂಗದಲ್ಲಿ ಇನ್ನೊಬ್ಬರ ಅವಕಾಶವನ್ನು ಕಸಿಯುವುದಾಗಲೀ, ತೇಜೋಭಂಗ ಮಾಡುವುದಾಗಲೀ ಸರಿಯಲ್ಲ. ತನಗೆ ಲಭಿಸಿರುವ ಮಿತಿಯಲ್ಲಿ ಕಾರ್ಯಪ್ರವರ್ತಿಸಿ ಒಟ್ಟು ಪ್ರದರ್ಶನ ಚೆಂದಗಾಣಿಸಬೇಕೆಂಬುದು ಇವರ ನಿಲುವು. ಸಮರ್ಥ ಭಾಗವತನಿಂದ ಮಾತ್ರ ಕಲಾವಿದನ ಶಕ್ತಿಯನ್ನು ತೋರಿಸಿಕೊಡಲು ಸಾಧ್ಯ. ಹಾಗೇ ಅರ್ಥಧಾರಿಗೆ ದಾರಿ

ತೋರುವ, ಮಿತಿಯನ್ನು ಅರಿವು ಮಾಡಿಸುವ ವ್ಯಕ್ತಿತ್ವ ಭಾಗವತರಲ್ಲಿ ಇರಬೇಕು. ತಾಳಮದ್ದಲೆ ಮಾತಿನ ಆಡಂಬೊಲವಾದ್ದರಿಂದ ಇದು ಗದ್ಯಕಾವ್ಯವಾಗಬಲ್ಲ ಎಲ್ಲಾ ಯೋಗ್ಯತೆಯನ್ನು ಹೊಂದಿದೆ. ಇಲ್ಲಿನ ಭಾಗಿದಾರರಾದ ಭಾಗವತ, ಹಿಮ್ಮೇಳದವರು, ಅರ್ಥಧಾರಿಗಳು ಹೇಗೆ ವರ್ತಿಸಬೇಕು ಎಂಬುದರ ವಿವರಣೆಯೂ ಪುಸ್ತಕದಲ್ಲಿದೆ. ಇವೆಲ್ಲ ಇಂದಿನ ಅರ್ಥಧಾರಿಗಳ ಗಮನಕ್ಕೆ ಬರಬೇಕು. "ಅರ್ಥಧಾರಿಯು ಆಯಾ ಸನ್ನಿವೇಶಕ್ಕೆ ತಕ್ಕಂತೆ ರಸಗಳನ್ನು ಅಭಿವ್ಯಕ್ತಿಗೋಳಿಸಬೇಕು. ಅರ್ಥಧಾರಿಯಾದವನು ಪ್ರತಿಯೊಂದು ಪದ್ಯದ ಭಾವರಸಗಳಲ್ಲಿ ತನ್ಮಯವಾಗಿ ಆಸ್ವಾಧಿಸಿ, ಅವುಗಳನ್ನು ಇನ್ನಷ್ಟು ರಸಪ್ರಕರಣದ ಮೂಲಕ ಸಭೆಯ ಮುಂದಿಡಬೇಕು." ಎಂಬುದು ಅವರ ನಿಲುವಾಗಿದೆ. "ತಾಳಮದ್ದಲೆಯಲ್ಲಿ ಮಾತಿನ ಮೂಲಕವೇ ರಸಾಭಿವ್ಯಕ್ತಿಸಬೇಕಾದ್ದರಿಂದ ರಸೋತ್ಕರ್ಷಕ್ಕೆ ಅಗತ್ಯವಾಗುವ ಪಾತ್ರಗಳ ಗುಣಸ್ವಭಾವಗಳನ್ನು, ರಸಗಳ ಒಳಭೇದವನ್ನು ತಿಳಿದು ಅರ್ಥದಲ್ಲಿ ವ್ಯಂಜಿಸಬೇಕಾಗುತ್ತದೆ." ಎಂದು ತಿಳಿಸಿದ್ದಾರೆ.

ದೇರಾಜೆಯವರು ಅರ್ಥಗಾರಿಕೆಗೆ ಸಂಬಂಧಿಸಿದ್ದಲ್ಲದೆ ಪ್ರಸಂಗಗಳ ವಸ್ತುವಿಚಾರಗಳ ಬಗ್ಗೆ ಕೂಡಾ ಚಿಂತಿಸಿದ್ದಾರೆ. ಕವಿಯಾದವನು ಮೂಲ ವಸ್ತುವಿಗೆ ಬದ್ಧನಾಗುವುದೇ ಅಲ್ಲದೆ ತನ್ನ ಕೊಡುಗೆಯನ್ನು ಕೂಡಾ ನೀಡಿ ಪುರಾಣ ಪ್ರಪಂಚವನ್ನು ಬೆಳೆಸುತ್ತಾನೆ. ಈ ವಿಚಾರವಾಗಿ ಉಡುಪಿಯಲ್ಲಿ ನಡೆದ ಯಕ್ಷಗಾನ ಗೋಷ್ಠಿಯಲ್ಲಿ ಅವರು ಪ್ರಬಂಧವನ್ನು ಮಂಡಿಸಿದ್ದಾರೆ (ದಿನಾಂಕ: 31–10–1969 ರಿಂದ 4–11–1969 ವರೆಗೆ ಉಡುಪಿಯಲ್ಲಿ ಸಂಗೀತ ನಾಟಕ ಅಕಾಡೆಮಿಯವರಿಂದ ಪ್ರಬಂಧ ಪ್ರಕಟಗೊಂಡಿದೆ) ಶ್ರೀ ಮದ್ರಾಮಾಯಣಕ್ಕೂ ಹಾಗೂ ಯಕ್ಷಗಾನ ಪ್ರಸಂಗಗಳಲ್ಲಿ ಬಂದಿರುವ ಕಥಾವಸ್ತುವಿನಲ್ಲಿನ ಪ್ರಕರಣಗಳಲ್ಲಿನ ಭಿನ್ನತೆಯನ್ನು ಇಲ್ಲಿ ಬಹುದೀರ್ಘವಾಗಿ ಚರ್ಚಿಸಿದ್ದಾರೆ. ಅನೇಕ ಹೊಸ ವಿಚಾರಗಳು ಪ್ರಸಂಗದಲ್ಲಿ ಬಂದಿರುವುದರ ಹಿನ್ನೆಲೆಯನ್ನು ಕೂಡ ಅವರು ಪಟ್ಟಿ ಮಾಡಿ ಕೊಟ್ಟಿದ್ದಾರೆ. ಈ ಪ್ರಬಂಧ ಪ್ರಸಂಗ ಸಾಹಿತ್ಯದಲ್ಲಿ ಅಧ್ಯಯನ ಮಾಡುವವರಿಗೆ ಅನೇಕ ಒಳನೋಟಗಳನ್ನು ನೀಡುತ್ತದೆ. ಈ ಬರೆಹ ಸಂಶೋಧನಾತ್ಮಕವಾಗಿದೆ.

ಹೀಗೆ ದೇರಾಜೆ ಸೀತಾರಾಮಯ್ಯನವರು ಯಕ್ಷಗಾನಕ್ಕೆ ಸಂಬಂಧಿಸಿದಂತೆ ಚಿಂತಿಸಿದ್ದನ್ನು, ಸಂಶೋಧನಾಶಕ್ತಿಯನ್ನು ಹಾಗೂ ವಿಚಾರದ ಆಳಕ್ಕೆ ಇಳಿಯುವ ಪ್ರವೃತ್ತಿಯನ್ನು ಅವರ ಕೃತಿಗಳಲ್ಲಿ, ಬಿಡಿ ಬರಹಗಳಲ್ಲಿ ಕಾಣಬಹುದು. ಯಕ್ಷಗಾನದ ಕುರಿತು ಅಧ್ಯಯನ ಮಾಡಿದವರಲ್ಲಿ ಮೊದಲಿಗರಾಗಿ ಕಾಣಿಸಿಕೊಳ್ಳುವ ದೇರಾಜೆಯವರು ಕೇವಲ ಅರ್ಥಧಾರಿಗಳಲ್ಲ ಅವರೊಬ್ಬ ಸಮರ್ಥ ಚಿಂತಕರು, ಸಂಶೋಧಕರು, ಉತ್ತಮ ಲೇಖಕರು ಆಗಿ ಎಲ್ಲರ ಗೌರವಕ್ಕೆ ಭಾಜನರಾಗಿದ್ದಾರೆ. □

'ಸುವರ್ಣ' ಸಂಜೀವನ

ಪಾರಂಪರಿಕ ಕಲೆಯಾದ ಯಕ್ಷಗಾನದ ಹೆಚ್ಚಿನ ಕಲಾವಿದರು ಕಲಾ ನೈಪುಣ್ಯತೆಯಲ್ಲಿ ಶ್ರೀಮಂತರಾದರೂ ಅಕ್ಷರಜ್ಞಾನದಿಂದ ವಂಚಿತರಾದವರು. ಬಾಲ್ಯದಿಂದಲೇ ಈ ಕಲಾರಂಗಕ್ಕೆ ತಮ್ಮನ್ನು ಅರ್ಪಿಸಿಕೊಂಡು ಹಿರಿಯ ಕಲಾವಿದರ ಮಾರ್ಗದರ್ಶನದಲ್ಲಿ ಬೆಳೆದು ಕಿರಿಯ ಕಲಾವಿದರಿಗೆ ದಾರಿ ತೋರುತ್ತಾ ಯಕ್ಷಗಾನವನ್ನು ಉಳಿಸಿ, ಬೆಳೆಸಿಕೊಂಡು ಬಂದಿದ್ದಾರೆ. ಅವರ ಅನುಭವಗಳು ಶ್ರೀಮಂತವಾಗಿದ್ದು ಸಾಂಸ್ಕೃತಿಕವಾಗಿ ಮಹತ್ವ ಹೊಂದಿವೆ. ಇದಕ್ಕಾಗಿಯೇ ಇಂದು ಹಿರಿಯ ಯಕ್ಷಗಾನ ಕಲಾವಿದರ ಆತ್ಮಕಥನಗಳನ್ನು ಪರಿಚಯಿಸುವ, ಅವರ ಕಲಾನುಭವಗಳನ್ನು ಬಿತ್ತರಿಸುವ ಕೆಲಸಗಳು ಅಲ್ಲಲ್ಲಿ ನಡೆಯುತ್ತಿವೆ. ಡಾ॥ ಶೇಣಿಯವರ 'ಯಕ್ಷಗಾನ ಮತ್ತು ನಾನು', ಕುರಿಯರ 'ಬಣ್ಣದ ಬದುಕು', ಹಾರಾಡಿರಾಮರ 'ಯಕ್ಷಗಾನದ ಕೋಲ್ಮಿಂಚು, ಹಿರಿಯಡಕ ಗೋಪಾಲರಾಯರ' ಮದ್ದಳೆಯ ಮಾಯಾಲೋಕ', ರಾಮದಾಸಸಾಮಗರ 'ಸಾಮಗಾಯಣ, ಪೆರುವಡಿಯದರ 'ಹಾಸ್ಯಗಾರನ ಅಂತರಂಗ', ಹೊಸ್ತೋಟರ 'ಒಡಲಿನಮಡಿಲು ಯಕ್ಷತಾರೆ', ಪದ್ಯಾಣರ 'ಪದಯಾನ' ಬಲಿಪರ 'ಬಲಿಪಗಾನಯಾನ', ಕಡತೋಕರ 'ಯಕ್ಷವನ ವಿಹಾರ' ಮುಂತಾದವುಗಳು ಇಂತಹ ಕಾರ್ಯಗಳ ಫಲಿತಗಳಾಗಿವೆ. ಇಲ್ಲೆಲ್ಲ ಕಲಾವಿದರ ಕಲಾಬದುಕಿನ ನಿರೂಪಣೆಯೊಂದಿಗೆ ಆ ಕಾಲದ ಯಕ್ಷಗಾನದ ಸ್ಥಿತಿಗತಿಗಳ ಮೇಲೆ ಬೆಳಕು ಚೆಲ್ಲುವ ಅಂಶಗಳಿವೆ. ಈ ಸಾಲಿಗೆ ಈಚಿನ ಮಹತ್ವದ ಸೇರ್ಪಡೆಯೆಂದರೆ ಅಭಿನವ ಪ್ರಕಾಶನದ ಪೃಥ್ವೀರಾಜ ಕವತ್ತಾರು ನಿರೂಪಿಸಿರುವ ಯಕ್ಷಗಾನ ಗುರು ಬನ್ನಂಜೆ ಸಂಜೀವ ಸುವರ್ಣರ ಅಪೂರ್ಣ ಅತ್ಮಕಥನ 'ಸಂಜೀವನ'. ನಿರೂಪಣಾ ನಾವೀನ್ಯತೆಯಿಂದ ವೈವಿಧ್ಯಮಯ ಅನುಭವಗಳ ಚಿತ್ರಣದಿಂದ, ಅಪಾರ ಕಲಾ ಬದುಕಿನ ವಿವರಗಳಿಂದ, ಸುಭಗ ಶೈಲಿಯಿಂದಾಗಿ 'ಸಂಜೀವನ' ಯಕ್ಷಗಾನ ರಂಗಕ್ಕೆ 'ಸಂಜೀವನ'ವಾಗಿದೆ.

ಗುರು ಬನ್ನಂಜೆ ಸಂಜೀವ ಸುವರ್ಣರು ಇಂದು ಬಡಗು ತಿಟ್ಟು ಯಕ್ಷಗಾನದ ಅಧಿಕೃತ ವಕ್ತಾರರಿದ್ದಂತೆ. 68 ವರ್ಷದ ಸಂಜೀವ ಸವರ್ಣರು ಯಕ್ಷಗಾನ

ಕಲೆಯೊಂದಿಗೆ ಸುವರ್ಣ ಮಹೋತ್ಸವವನ್ನು ಆಚರಿಸಿದವರು. ಐವತ್ತು ವರ್ಷಗಳ ಕಾಲ ಯಕ್ಷಗಾನವನ್ನು ಕಲಿಯುತ್ತಾ ಕಲಿಸುತ್ತಾ ವಿಶ್ವದ ವಿಭಿನ್ನ ಭಾಗಗಳಲ್ಲಿ ನಡೆದ ಪ್ರದರ್ಶನಗಳಲ್ಲಿ ಭಾಗವಹಿಸುತ್ತಾ ಬೆಳೆದವರು.

ಈ ಕಾರಣದಿಂದಲೇ ಅವರ ಮಾತಿಗೆ ಮಹತ್ತಿಕೆ ಇದೆ. 'ಅಕ್ಷರ' ಅವರಿಗೆ ಒಲಿಯದಿದ್ದರೂ 'ಯಕ್ಷ' ಅವರಿಗೆ ಒಲಿದಿದ್ದಾನೆ. ಅವರು ಬರೆಯಲು ಸಾಧ್ಯವಾಗದ್ದನ್ನು ಖ್ಯಾತ ಪತ್ರಕರ್ತ ಶ್ರೀ ಪೃಥ್ವೀರಾಜ ಕವತ್ತಾರರು ನೂತನ ಶೈಲಿಯೊಂದಿಗೆ ಬರಹರೂಪಕ್ಕೆ ಇಳಿಸಿದ್ದಾರೆ. 'ಸಂಜೀವನ' ದಲ್ಲಿ 31 ಅಧ್ಯಾಯಗಳಿವೆ. ಬೇರೆ ಬೇರೆ ಘಟನೆಗಳನ್ನು ಆಧರಿಸಿ ಕಥನಗಳನ್ನು ಹೆಣಿಯಲಾಗಿದೆ. ಒಂದು ಅಧ್ಯಾಯದಿಂದ ಇನ್ನೊಂದು ಅಧ್ಯಾಯಕ್ಕೆ ಯಾವುದೇ ಸಂಬಂಧವಿಲ್ಲದೇ ಹೋದರೂ ಒಟ್ಟಂದದಲ್ಲಿ ಸಂಜೀವ ಸುವರ್ಣರ ಬದುಕಿನ ಹಾಗೂ ಕಲಾ ಬದುಕಿನ ಒಳನೋಟವೊಂದು ದಟ್ಟವಾಗಿ ಕಣ್ಣ ಮುಂದೆ ಕಟ್ಟುವಂತೆ ಕವತ್ತಾರರು ನಿರೂಪಿಸಿದ್ದಾರೆ. ಇನ್ನೊಂದು ಸ್ವಾರಸ್ಯಕರ ಅಂಶವೆಂದರೆ ಪ್ರತಿ ಅಧ್ಯಾಯದಲ್ಲೂ ಕಲಾ ಬದುಕಿನ ಹಾಗೂ ನಿಜ ಬದುಕಿನ ಘಟನೆಗಳು ಪರಸ್ಪರ ತಳುಕು ಹಾಕಿಕೊಂಡಂತೆ ನಿರೂಪಿತವಾಗಿವೆ. ಇದರಿಂದಾಗಿ ಕೃತಿಗೊಂದು ಲವಲವಿಕೆ ಲಭಿಸಿದೆ. ಚೆನ್ನಾಗಿ ಓದಿಸಿಕೊಂಡು ಹೋಗುತ್ತದೆ. ಆದರ್ಶ ಕಲಾ ಜೀವನಕ್ಕೆ ಸಂವಾದಿಯಾಗಿ ಬರುವ ನಿಜಜೀವನದ ಘಟನೆ ವಾಸ್ತವದ ಸಂಕಟದೊಂದಿಗೆ ಬಂದಾಗ ಕಣ್ಣು ಒದ್ದೆಯಾಗುತ್ತದೆ. ಒಂದೆರಡು ಘಟನೆಗಳನ್ನು ಇದಕ್ಕೆ ಸಾಕ್ಷಿಯಾಗಿ ನೀಡಬಹುದು.

ಸಂಜೀವರು ದೆಹಲಿಗೆ ಮೊದಲ ಬಾರಿಗೆ ರೈಲಿನಲ್ಲಿ ಪ್ರಯಾಣ ಮಾಡುವಾಗ ಉಟ್ಟ ಬಟ್ಟೆ ಬಿಟ್ಟು ಮತ್ತೆಲ್ಲವೂ ಕಳ್ಳತನವಾಗುತ್ತದೆ. ದಿಗ್ಮೂಢರಾಗಿ, ವ್ಯಥಿತರಾದ ಸಂದರ್ಭದಲ್ಲೇ ಹಿಂದಿನ ಘಟನೆಗಳನ್ನು ನೆನಪಿಸಿಕೊಳ್ಳುತ್ತಾರೆ. ಬಾಲ್ಯದಲ್ಲಿ ಬಡತನದಿಂದ ಹೊಟ್ಟೆಪಾಡಿಗಾಗಿ ತಾನು ಉಳಿದ ಹುಡುಗರೊಂದಿಗೆ ಸೇರಿಕೊಂಡು ಊರಿನಲ್ಲಿ ಕಳ್ಳತನ ಮಾಡಿದ್ದನ್ನು ಹೇಳಿಕೊಳ್ಳುತ್ತಾರೆ. ಕಳ್ಳತನ ಮಾಡಿ ಸಿಕ್ಕಿಬಿದ್ದಾಗ ಸಾರ್ವಜನಿಕರಿಂದ ಹೊಡೆತ ತಿಂದು ಅವಮಾನಿತನಾದ ಬೀದಿಯಲ್ಲೇ ಮುಂದೊಮ್ಮೆ ಸನ್ಮಾನಿತರಾಗುತ್ತಿರುವುದನ್ನು ಹೇಳಿಕೊಳ್ಳುತ್ತಾರೆ. ಮಾಸ್ಕೋಗೆ ಕಾರಂತರೊಂದಿಗೆ ಹೋದಾಗ ನಡೆದ ಯಕ್ಷಗಾನ ಪ್ರದರ್ಶನದ ವಿವರಗಳನ್ನು ಹೇಳುತ್ತಾ ಊರಲ್ಲಿ ಎಳೆಯ ಯುವಕನಾಗಿದ್ದಾಗ ಹುಲಿವೇಷ ಮಾಡಿ ಯಕ್ಷಗಾನದ ಹೆಜ್ಜೆಯಲ್ಲಿ ಕುಣಿದದ್ದಕ್ಕೆ ತಮ್ಮ ಮೊದಲ ಗುರು ನಾರಾಯಣ ಶೆಟ್ಟರಿಂದ ಚೆನ್ನಾಗಿ ಏಟುತಿಂದ ಕಥೆ ತಿಳಿಸುತ್ತಾರೆ. ಅದರಿಂದಾಗಿ ತನಗೆ ಪ್ರತಿಕಲೆಯ ಅನನ್ಯತೆಯನ್ನು ಉಳಿಸಿಕೊಳ್ಳಬೇಕೆಂಬ ಪಾಠ ಎಳೆವೆಯಲ್ಲೇ ಕಲಿತಂತಾಯಿತು' ಎನ್ನುತ್ತಾರೆ.

ದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯ ಅದರಲ್ಲೂ ಬಿ.ವಿ.ಕಾರಂತರ ಮಾರ್ಗದರ್ಶನಗಳನ್ನು ಹೇಳುತ್ತಾ ಊರಿನ ಬಡತನದ ಬವಣೆಗಳ ನಂಟಿನ

ಗಂಟನ್ನು ಬಿಚ್ಚುತ್ತಾರೆ. ಲಂಡನ್‌ನಲ್ಲಿರುವ ಭಾರತೀಯ ವಿದ್ಯಾಭವನದಲ್ಲಿ ನಡೆದ ಯಕ್ಷಗಾನ ಬ್ಯಾಲೆ 'ಅಭಿಮನ್ಯು'ವಿನ ವಿವರಗಳನ್ನು ಕಟ್ಟಿಕೊಡುತ್ತಾ ತನ್ನ ಮದುವೆಯ ಸಂದರ್ಭವನ್ನು ಚಿತ್ರಿಸುತ್ತಾರೆ. ಹೀಗೆ ಪ್ರತಿ ಘಟನೆಯಲ್ಲೂ ತಾನು ಸಕಾರಾತ್ಮಕವಾಗಿ ಬೆಳೆದ ಪರಿಯನ್ನು ಹೇಳಿಕೊಳ್ಳುತ್ತಾರೆ. "ತನ್ನ ಬದುಕಿನ ದಾರಿಯಲ್ಲಿ ಎಷ್ಟೊಂದು ಹೆಜ್ಜೆಗಳಿವೆ" ಎಂದು ಹೇಳುವ ಈ ಯಕ್ಷಗಾನದ ಹೆಜ್ಜೆಗಾರ ತನಗೆ ಹೆಜ್ಜೆ ಕಲಿಸಿದ ಗುರುಗಳ ಬಗ್ಗೆ ಹೇಳುವಾಗಲೆಲ್ಲ ಭಾವುಕರಾಗುತ್ತಾರೆ. ಯಕ್ಷಗಾನದ ಯಾವ ಕಲಾವಿದರಿಗೂ ದೊರೆಯದ 'ಗುರುಭಾಗ್ಯ' ದೊರೆತದ್ದರಿಂದಲೇ ಇಂದು ಸಂಜೀವನ ಸುವರ್ಣರು 'ಗುರು ಸಂಜೀವ ಸುವರ್ಣ'ರಾಗಿದ್ದಾರೆ. ಗುಂಡಿಬೈಲು ನಾರಾಯಣ ಶೆಟ್ಟರು, ಮಟಪಾಡಿ ವೀರಭದ್ರನಾಯಕರು, ಮಾರ್ಗೋಳಿ ಗೋವಿಂದ ಸೇರೆಗಾರರು, ಹಾರಾಡಿ ನಾರಾಯಣ ಗಾಣಿಗರು, ಬಿ.ವಿ.ಕಾರಂತ ಹಾಗೂ ಡಾ" ಶಿವರಾಮ ಕಾರಂತರಂತಹ ಅನೇಕರು ನೀಡಿದ ಕಲಾ ಶಿಕ್ಷಣದ ವಿಚಾರ ಈ ಕೃತಿಯಲ್ಲಿ ಬಂದಿದೆ. ಅದರಿಂದಾಗಿ ಇಂದಿನ ಕಲಾವಿದರಿಗೆ 'ಸಂಜೀವನ' ಸ್ಫೂರ್ತಿಯ ಚಿಲುಮೆಯಾಗಬಲ್ಲದು.

ಸಂಜೀವರ ಸಕಾರಾತ್ಮಕವಾದ 'ಸುವರ್ಣ' ವ್ಯಕ್ತಿತ್ವ ಇಂದು ಅವರನ್ನು ಯಕ್ಷಗಾನರಂಗದ 'ಸುವರ್ಣ'ರನ್ನಾಗಿ ಮಾಡಿದೆ ಎಂಬುದಕ್ಕೆ ಈ ಪುಸ್ತಕ ಸಾಕ್ಷಿಯಾಗಿದೆ. ಅವರು ಕೇವಲ 'ಸುವರ್ಣ'ರಲ್ಲ ಅವರೊಂದು 'ಕಲಾವಜ್ರ'. ಈ ಕಲಾ ವಜ್ರವನ್ನು ಮೊದಲಿಗೆ ಗುರುತಿಸಿದವರು ಹವ್ಯಾಸಿ ಭಾಗವತರಾದ ಗುಂಡಿಬೈಲು ನಾರಾಯಣ ಶೆಟ್ಟರು. ಅವರಿಂದ ಪ್ರಾರಂಭವಾದ ಸಾಣೆ ಹಿಡಿಯುವ ಕಾರ್ಯ ಶಿವರಾಮ ಕಾರಂತರಿಂದಾಗಿ ಇನ್ನಷ್ಟು ಪ್ರಖರವಾಯಿತು. ನಾರಾಯಣ ಶೆಟ್ಟರು ಗದರುತ್ತಿದ್ದ ರೀತಿಯನ್ನು, ಅವರ ಪತ್ನಿ ತೋರುತ್ತಿದ್ದ ಪ್ರೀತಿಯನ್ನು, ಅವರ ಮನೆಯಲ್ಲಿ ಆಳಾಗಿ ಕೆಲಸ ಮಾಡುತ್ತಾ ತಾನು ಯಕ್ಷಗಾನ ರಂಗಕ್ಕೆ ಬಂದ ಬಗೆಯನ್ನು ಆಪ್ತವಾಗಿ ಹೇಳುತ್ತಾರೆ ಮುಂದೆ ಗುರು ದಶಾವತಾರಿ ವೀರಭದ್ರನಾಯಕರ 'ಕಲಿಕಾ ವಿಧಾನ'ವನ್ನು ವಿವರಿಸುತ್ತಾರೆ ನಾಯಕರು ಯಕ್ಷಗಾನ ಕೇಂದ್ರದಲ್ಲಿ ಪಾಠ ಮಾಡುವಾಗ ಮಹಾಬಲ ಶೆಟ್ಟಿ, ರಾಮನಾಯರಿ, ಹಾಗೂ ಸಂಜೀವರ ಮೇಲೆ ಅಪಾರ ಭರವಸೆ ಇಟ್ಟಿದ್ದರು. ಮೊದಲಿನ ಇಬ್ಬರು ಪ್ರಸಿದ್ಧ ವೃತ್ತಿ ಕಲಾವಿದರಾಗಿ ಮೆರೆದು ಕಣ್ಮರೆಯಾಗಿದ್ದಾರೆ. ತಾನು ಮಾತ್ರ ಉಳಿದಿದ್ದೇನೆ ಎಂಬ ವ್ಯಥೆ ಇದೆ. ಒಮ್ಮೆ ವೀರಭದ್ರ ನಾಯಕರು ಕಲಿಸುವಾಗ ನೀಡುತ್ತಿದ್ದ ಶಿಕ್ಷೆಗೆ ಹೆದರಿ ಕೇಂದ್ರವನ್ನು ತ್ಯಜಿಸಿ ಹಳೆಯ ವೃತ್ತಿಗೆ ಹೋದಾಗ ನಾಯಕರು ಬಿಡದೆ ಇವರನ್ನು ಹುಡುಕಿಕೊಂಡು ಬಂದು ಒತ್ತಾಯದಿಂದ ಯಕ್ಷಗಾನ ಕೇಂದ್ರಕ್ಕೆ ಕರೆದುಕೊಂಡು ಹೋಗುತ್ತಾರೆ. ಅದೇ ರೀತಿ ವೀರಭದ್ರ ನಾಯಕರೊಂದಿಗೆ ಸಾಲಿಗ್ರಾಮ ಮೇಳಕ್ಕೆ ಸೇರಿಕೊಂಡು ಅಲ್ಲಿನ ಕಷ್ಟದ ಬದುಕಿಗೆ ಹೆದರಿ ತಪ್ಪಿಸಿಕೊಂಡ ಬಗೆಯನ್ನು

ಹೇಳುತ್ತಾರೆ. ಗೋಳಿಗರಡಿ ಮೇಳದಲ್ಲಿದ್ದಾಗ ಕಂಡ ಯಕ್ಷಗಾನ ಕಲಾವಿದರ ವೃತ್ತಿಜೀವನದ ನೋವುಗಳನ್ನು ಸಂಜೀವರು ಸಂಕಟದಿಂದ ಚಿತ್ರಿಸುತ್ತಾರೆ. ಜಾತಿ ವೈಷಮ್ಯದ ಮಾನಸಿಕ ಹಿಂಸೆಯನ್ನು ತಿಳಿಸುತ್ತಾರೆ.

ಹವ್ಯಾಸಿ ಕಲಾವಿದರಾಗಿದ್ದು, ಅನೇಕ ಸಂಘ ಸಂಸ್ಥೆಗಳ ಆಟಗಳಲ್ಲಿ ಒಂದಲ್ಲಾ ಒಂದು ರೀತಿಯಿಂದ ಭಾಗವಹಿಸುತ್ತಿದ್ದ ಸುವರ್ಣರು ಡಾ॥ ಶಿವರಾಮ ಕಾರಂತರ 'ಯಕ್ಷಗಾನ'ದ ಕಲಾವಿದರಾಗಿ ಆಯ್ಕೆಯಾಗಿ ನಾನಾ ಕಡೆಗಳಲ್ಲಿ ನಡೆದ ಪ್ರದರ್ಶನಗಳಲ್ಲಿ ಭಾಗವಹಿಸಿದ್ದಾರೆ. ಆ ವಿಚಾರಗಳೆಲ್ಲಾ ಈ ಗ್ರಂಥದಲ್ಲಿ ಸವಿವರವಾಗಿ ಬಂದಿದೆ. ಈ ಕೃತಿ ಕೇವಲ ಸಂಜೀವರ ಆತ್ಮ ಕಥನವಾಗದೇ ಅದರೊಂದಿಗೆ ಡಾ॥ ಶಿವರಾಮಕಾರಂತರ ಯಕ್ಷರಂಗದ ಕಲಾಜೀವನದ ಕಥನವೂ ಆಗಿದೆ. 25 ವರ್ಷಕ್ಕು ಹೆಚ್ಚು ಕಾಲ ಡಾ॥ ಕಾರಂತರೊಂದಿಗೆ ಒಡನಾಡಿರುವ ಸಂಜೀವ ಸುವರ್ಣರು ಶಿವರಾಮಕಾರಂತರ ವ್ಯಕ್ತಿತ್ವದ ಅನೇಕ ಮಗ್ಗುಲಗಳನ್ನು ಇಲ್ಲಿ ಪರಿಚಯಿಸುತ್ತಾರೆ. ಯಕ್ಷರಂಗದ ಪ್ರತಿ ಪ್ರವಾಸವು ಒಂದು ಅನುಭವದಾಯಕ ಎನ್ನುತ್ತಾ 'ಕಾರಂತರ ವ್ಯಕ್ತಿತ್ವವೇ' ಒಂದು ವಿಸ್ಮಯ ಎನ್ನುತ್ತಾರೆ. ಅವರು ಕಲಿಸುತ್ತಿದ್ದ ಕುಣಿತದ ವಿಧಾನ, ವೇಷಗಾರಿಕೆಯ ಬಗ್ಗೆ ಅವರ ನಿಲುವುಗಳು, ಅಭಿನಯದಲ್ಲಿ ಭಾವನೆಯನ್ನು ಮೇಳೈಸುವ ಪರಿ, ಹೊಸ ವೇಷಗಳನ್ನು ಸೃಷ್ಟಿಸುವಾಗ ಅದರ ರಚನೆಯ ಹಿನ್ನೆಲೆಯಲ್ಲಿರುವ ಅವರ ಆಳವಾದ ಚಿಂತನೆಗಳು ಇವೆಲ್ಲದರ ವಿವರಣೆಗಳು 'ಸಂಜೀವನ'ದಲ್ಲಿ ಬಂದಿವೆ. ಡಾ॥ ಕಾರಂತರ ಮಾನವೀಯ ಮುಖದ, ಅವರ ಕಲಾಬದ್ಧತೆಯ, ನಿಷ್ಠುರತೆಯ, ಕಲಾವಿದರ ಬಗ್ಗೆ ತೋರುತ್ತಿದ್ದ ಸಹಾನುಭೂತಿಯ ಪರಿಯ, ಮಾತಿನ ಮೊನಚು ಹಾಗೂ ಗಡಸಿನ ಹಿಂದಿರುವ ಆರ್ದತೆಯೇ ಮುಂತಾದ ಚಿತ್ರಣಗಳನ್ನು ಸೊಗಸಾಗಿ ಇಲ್ಲಿ ಕಡೆದಿರಿಸಲಾಗಿದೆ. ಯಕ್ಷರಂಗದ ಕಲಾವಿದರಾಗಿದ್ದ ಅವರು ಯಕ್ಷಗಾನ ಕೇಂದ್ರದ ಗುರುಗಳಾಗಿ ನಿಯುಕ್ತಿಗೊಂಡದ್ದು ಶಿವರಾಮಕಾರಂತರಿಂದಲೇ. ಈ ಯಕ್ಷಗಾನ ಕೇಂದ್ರದ ಸಖ್ಯದಿಂದಾಗಿಯೇ ಸಂಜೀವರು ಉಳಿದೆಲ್ಲ ಯಕ್ಷಗಾನ ಕಲಾವಿದರಿಗಿಂತ ಭಿನ್ನರಾಗಿದ್ದಾರೆ. ಬೇರೆ ಬೇರೆ ರಂಗದ ಮಹಾನ್ ಕಲಾವಿದರ ಪರಿಚಯ ಒಡನಾಟ ಲಭಿಸಿ ಅವರಿಂದೆಲ್ಲಾ ಸುವರ್ಣರು 'ಅಕ್ಷರಜ್ಞಾನ' ಇಲ್ಲದಿದ್ದರೂ 'ಕಲಾಜ್ಞಾನವನ್ನು' ಹೀರಿಕೊಂಡು ಇಂದು ಬೆಳೆದು ನಿಂತಿದ್ದಾರೆ. ಬಿಹಾರದ ರಂಗೋತ್ಸವದಲ್ಲಿ ಭಾಗವಹಿಸಿದಾಗ ಗಾನ ಗಂಧರ್ವ ಬಿಸ್ಮಿಲ್ಲಾಖಾನ್‌ರ ಮೆಚ್ಚುಗೆ ಪಡೆದಿದ್ದು ಮಾತ್ರವಲ್ಲದೆ ಅವರಿಂದ ಕಲಿತ ಪಾಠವನ್ನು ತಿಳಿಸುತ್ತಾರೆ. ಅದೇ ರೀತಿ ವಯೊಲಿನ್ ವಿದ್ವಾಂಸರಾದ ಎ.ವಿ.ಕೃಷ್ಣಮಾಚಾರ್ ಅವರಿಂದ ಅರಿತುಕೊಂಡ ಸಂಗೀತ ಜ್ಞಾನವನ್ನು, ವಿದುಷಿ ಮಾಯಾರಾವ್ ಅವರಿಂದ ತಿಳಿದುಕೊಂಡು ನೃತ್ಯದ ಜ್ಞಾನದ ವಿಚಾರವನ್ನೆಲ್ಲಾ ಸಂಜೀವರು ಸಾಧಾರವಾಗಿ ವಿವರಿಸುತ್ತಾರೆ. ಈ ಮೂಲಕ ಅವರ ಅನುಭವದ ಹರಿವು ಕಂಡು ಬರುತ್ತದೆ. ಇದರಿಂದಾಗಿಯೇ

ಇಂದು ಉಡುಪಿಯ ಯಕ್ಷಗಾನ ಕೇಂದ್ರಕ್ಕೆ ದೇಶದ ರಂಗಕಲೆಗಳ ಸಂಸ್ಥೆಗಳಲ್ಲಿ ಹಿರಿಯಸ್ಥಾನ ಲಭಿಸುವಂತಾಗಿದೆ.

ಒಟ್ಟಿನಲ್ಲಿ 'ಸಂಜೀವನ' ಕೇವಲ ಯಕ್ಷಗಾನ ಕಲಾವಿದನೊಬ್ಬನ ಬದುಕಿನ ಕಥನವಾಗದೇ ಹೊಸತನವನ್ನು ಮೈಗೂಡಿಸಿಕೊಂಡ ಯಕ್ಷಗಾನದ ಕಥನವೇ ಆಗಿದೆ. ಕರ್ನಾಟಕದ ಪ್ರಾತಿನಿಧಿಕ ಕಲೆಯಾದ ಯಕ್ಷಗಾನ ಡಾ॥ ಶಿವರಾಮಕಾರಂತರ ಕನಸಿನಿಂದ, ಮಾರ್ಗದರ್ಶನದಿಂದ ಸಂಜೀವ ಸುವರ್ಣರಂತವರ ಪರಿಶ್ರಮದಿಂದ ವಿಶ್ವಮಾನ್ಯವಾಯಿತೆಂಬುದರ ಚಿತ್ರಣ ಇಲ್ಲಿದೆ. ಇಂತಹ ಒಂದು 'ಅಕ್ಷರ'ವಿಲ್ಲದ ಯಕ್ಷಗಾನ ಕಲಾವಿದನ ಚಿನ್ನದ ಅನುಭವಗಳನ್ನು ಅಕ್ಷರರೂಪಕ್ಕೆ ಇಳಿಸಿದ ಪೃಥ್ವೀರಾಜ ಕವತ್ತಾರು ಅವರ ಶ್ರಮ ಶ್ಲಾಘನೀಯ. ಲೀಲಾಜಾಲವಾಗಿ ಬರುವ ವಿಚಾರಗಳನ್ನು ಮನ ಮುಟ್ಟುವ ನಿರೂಪಣೆಯೊಂದಿಗೆ ಕವತ್ತಾರರು ಇಲ್ಲಿ ನಿರೂಪಿಸಿದ್ದಾರೆ. ಯಕ್ಷಗಾನ ರಂಗಕ್ಕೆ ಹಾಗೂ ಕನ್ನಡ ಸಾಹಿತ್ಯಕ್ಕೆ ಇದೊಂದು ಅಪೂರ್ವ ಕೊಡುಗೆ. ಇದನ್ನು ಪ್ರಕಟಿಸಿದ 'ಅಭಿನವ ಪ್ರಕಾಶನ'ದ ಕಾರ್ಯ ಸ್ತುತ್ಯಾರ್ಹ. ಈ ಕೃತಿಯ ಅನೇಕ ಅಧ್ಯಾಯಗಳು 'ಪ್ರಜಾವಾಣಿ' ದಿನಪತ್ರಿಕೆಯಲ್ಲಿ ಧಾರವಾಹಿಯ ರೀತಿಯಲ್ಲಿ ಪ್ರಕಟಗೊಂಡು ಎಲ್ಲ ಗಮನ ಸೆಳೆದಿರುವುದು ಕೂಡ ಇಲ್ಲಿ ಉಲ್ಲೇಖನಾರ್ಹ.

□

ಯಕ್ಷಗಾನಕ್ಕೆ ಪ್ರೊ. ಎಂ.ಎ. ಹೆಗಡೆಯವರ ಕೊಡುಗೆ

ಕರ್ನಾಟಕ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿದ್ದು ಕಳೆದ ಮೂರು ವರ್ಷಗಳಿಂದ ಅನೇಕ ಯಶಸ್ವೀ ಕಾರ್ಯಕ್ರಮಗಳನ್ನು ನಡೆಸುವ ಮೂಲಕ ಅಕಾಡೆಮಿಗೆ ಹೊಸದಿಕ್ಕೊಂದನ್ನು ತೋರಿಸಿಕೊಟ್ಟ ಪ್ರೊ|ಎಂ.ಎ.ಹೆಗಡೆಯವರು ಈಚೆಗೆ ಅಗಲಿದರು. ಇದೊಂದು ಆಘಾತಕರ ಸುದ್ದಿಯಾಗಿದೆ. ಸಂಸ್ಕೃತದಲ್ಲಿ ದೊಡ್ಡ ವಿದ್ವಾಂಸರಾಗಿದ್ದು ಭಾರತೀಯ ದರ್ಶನ ಶಾಸ್ತ್ರದ ಪಂಡಿತರಾಗಿ ಸಂಸ್ಕೃತದ ಅನೇಕ ಮಹತ್ಕೃತಿಗಳನ್ನು ಕನ್ನಡಕ್ಕೆ ತಂದವರಾಗಿದ್ದರು. ವೃತ್ತಿಯಲ್ಲಿ ಸಿದ್ದಾಪುರದ ಮಹಾತ್ಮಗಾಂಧಿ ಶತಾಬ್ಧಿ ಮಹಾವಿದ್ಯಾಲಯದಲ್ಲಿ ಸಂಸ್ಕೃತ ಪ್ರಾಧ್ಯಾಪಕರಾಗಿ, ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದ್ದರು. ಪ್ರವೃತ್ತಿಯಲ್ಲಿ ಯಕ್ಷಗಾನದಲ್ಲಿ ಪ್ರಸಂಗ ಕವಿಯಾಗಿ, ವಿದ್ವಾಂಸರಾಗಿ, ಸಂಶೋದಕರಾಗಿ, ಹವ್ಯಾಸಿ ವೇಷಧಾರಿಯಾಗಿ ಎಲ್ಲಕ್ಕೂ ಮಿಗಿಲಾಗಿ ಅರ್ಥಧಾರಿಯಾಗಿ ಖ್ಯಾತಿಗೊಂಡವರು. ಕರ್ನಾಟಕದ ಬೇರೆಬೇರೆ ಪಕ್ಷಗಳ ಎರಡೂ ಸರಕಾರಗಳೂ ಯಾವ ಪೂರ್ವಾಗ್ರಹವೂ ಇಲ್ಲದೆ ಅವರನ್ನು ಅಕಾಡೆಮಿಗೆ ಅಧ್ಯಕ್ಷರನ್ನಾಗಿ ಆಯ್ಕೆ ಮಾಡಿದ್ದವು. ಹೀಗೆ ಎರಡನೇ ಬಾರಿಗೆ ಆಯ್ಕೆಯಾಗಿರುವುದೇ ಅವರ ಕಾರ್ಯದಕ್ಷತೆಗೆ ಸಾಕ್ಷಿಯಾಗಿದೆ. ಕೃತ್ರತ್ವಶಕ್ತಿಗೆ ಸಂದಗೌರವವಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಹೆಗ್ಗರಣೆ ಸಮೀಪದ ಜೋಗಿನಮನೆ ಗ್ರಾಮದಲ್ಲಿನ ಅಣ್ಣಪ್ಪ ಹೆಗಡೆ ಹಾಗೂ ಕಾಮಾಕ್ಷಮ್ಮನವರ ಮೊದಲ ಮಗನಾಗಿ ಜನಿಸಿದ ಮಹಾಬಲೇಶ್ವರ ಹೆಗಡೆ ತಮ್ಮ ಹನ್ನೊಂದನೇ ವಯಸ್ಸಿನಲ್ಲೇ ತಾಳಮದ್ದಳೆಯ ಅರ್ಥಧಾರಿಯಾಗಿ ರಂಗ ಪ್ರವೇಶಿಸಿದರು. ಕರ್ನಾಟಕ ವಿಶ್ವವಿದ್ಯಾಲಯದಿಂದ ಸಂಸ್ಕೃತದಲ್ಲಿ ಸ್ನಾತಕೋತ್ತರ ಪದವಿಯನ್ನು ಪ್ರಥಮರಲ್ಲಿ ಪ್ರಥಮರಾಗಿ ಪಡೆದರು. ಸಂಸ್ಕೃತ ಉಪನ್ಯಾಸಕ ವೃತ್ತಿಯನ್ನು 1973ರಲ್ಲಿ ಆರಿಸಿಕೊಂಡು ಅವರು ಸುದೀರ್ಘ ಮೂವತ್ಮೂರು ವರ್ಷಗಳ ಕಾಲ ಪ್ರಾಧ್ಯಾಪಕರಾಗಿ ಸೇವೆ ಸಲ್ಲಿಸಿದರು. ಸಂಸ್ಕೃತಭಾಷೆಯಲ್ಲಿನ ಅವರ ಪಾಂಡಿತ್ಯ, ಪರಿಶ್ರಮ ಅಸಾಧಾರಣವಾದದ್ದು. ಸಿದ್ಧಾಂತ

ಬಿಂದು, ಭಗವದ್ ಭಕ್ತಿ ರಸಾಯನಂ, ಗೀತಾ ಗೂಢಾರ್ಥ ದೀಪಿಕಾ, ಅಲಂಕಾರ ತತ್ವ, ಕುಮಾರಿಲ ಭಟ್ಟ, ಪರಮಾನಂದ ಸುಧಾ, ಶಬ್ದ ಮತ್ತು ಜಗತ್ತು, ಧ್ವನ್ಯಾಲೋಕ ಮತ್ತು ಲೋಚನ, ಭಾರತೀಯ ದರ್ಶನಗಳು–ಭಾಷೆ ಮುಂತಾದ ಕೃತಿಗಳು ಕನ್ನಡ ಸಾಹಿತ್ಯವನ್ನು ಶ್ರೀಮಂತಗೊಳಿಸಿವೆ. ಇವರು ಇನ್ನೊಬ್ಬಖ್ಯಾತ ಅರ್ಥಧಾರಿ ಎಂ.ಪ್ರಭಾಕರ ಜೋಷಿಯವರ ಜೊತೆಗೂಡಿ ಪ್ರಕಟಿಸಿರುವ 'ಭಾರತೀಯ ತತ್ವಶಾಸ್ತ್ರ ಪ್ರವೇಶ' ಎನ್ನುವುದು. ಆಚಾರ್ಯ ಕೃತಿಯಾಗಿದೆ. ಭಾರತೀಯ ವೇದಾಂತಗಳ ಬಗ್ಗೆ, ತತ್ವಶಾಸ್ತ್ರಗಳ ಬಗ್ಗೆ ಅಧಿಕೃತವಾಗಿ ಮಾತನಾಡ ಬಲ್ಲಶಕ್ತಿ ಉಳ್ಳವರಾಗಿದ್ದರು. ಉದ್ದಾಮ ಸಾಹಿತಿಗಳು, ವಿದ್ವಾಂಸರು ಇವರ ಕೊಡುಗೆಗಳನ್ನು ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. ಇವರು ಕನ್ನಡ ಹಾಗೂ ಸಂಸ್ಕೃತಗಳೆರಡರಲ್ಲೂ ಉದ್ದಾಮ ಪಾಂಡಿತ್ಯ ವಿದ್ದುದರಿಂದ ಇದು ಸಾಧ್ಯವಾಗಿದೆ. ಅದ್ವೈತ ಸಿದ್ಧಾಂತದ ಒಳ ಹೊರಗನ್ನೆಲ್ಲ ಹೆಗಡೆಯವರು ಅರಿತಿದ್ದರು. ಸಂಸ್ಕೃತದಲ್ಲಿನ ಇವರ ಶಾಸ್ತ್ರಜ್ಞಾನವು ಕೂಡಾ ಉನ್ನತ ಮಟ್ಟದ್ದು. ಶಿರಸಿಯ ಸ್ವರ್ಣವಲ್ಲಿಶ್ರೀಗಳವರಿಗೆ ಆಪ್ತರಾಗಿದ್ದರು.

ಯಕ್ಷಗಾನರಂಗದಲ್ಲಿ ಅವರು ಮಾಡಿರುವ ಸಾಧನೆ ಅಸಾಧಾರಣವಾದದ್ದು ಯಕ್ಷಗಾನ ಕವಿಯಾಗಿ ಇಪ್ಪತ್ತಕ್ಕೂ ಹೆಚ್ಚು ಪ್ರಸಂಗಗಳನ್ನು ಬರೆದಿದ್ದಾರೆ. ಅದರಲ್ಲಿ ಅವರ ಲವಕುಶ ಕಾಳಗ, ವಿಜಯೀವಿಶ್ರುತ, ತ್ರಿಶಂಕು ಚರಿತೆ, ಧರ್ಮ ದುರಂತ, ಗಣಪತಿ ಪ್ರಾದುರ್ಭಾವ, ರಾಜಾಕರಂಧಮ, ಭಕ್ತ ಕನಕದಾಸ, ಶಿಖಂಡಿಚರಿತ್ರೆ, ಶಬರಿಮಲೆ ಅಯ್ಯಪ್ಪನ್, ಋಷ್ಯಶೃಂಗ, ಪ್ರಚಂಡ ಚಾಣಕ್ಯ, ಶ್ರೀಕೃಷ್ಣಕಥಾ, ವಜ್ರಕಿರೀಟ, ವೈಶಾಲಿನಿ ಪರಿಣಯ ಮುಂತಾದವು ಪ್ರಸಿದ್ಧಿಗೊಂಡಿದೆ. ಲವಕುಶ ಕಾಳಗದಲ್ಲಿ ಅಂತರ್ಗತವಾಗಿರುವ "ಸೀತಾವಿಯೋಗ" ಅಸಂಖ್ಯ ಪ್ರದರ್ಶನಗಳನ್ನು ಕಂಡಿದೆ. ಯಕ್ಷಗಾನ ಕ್ಷೇತ್ರಕ್ಕೆ ಅವರು ನೀಡಿದ ಇನ್ನೊಂದು ಕೊಡುಗೆಯೆಂದರೆ ಕ್ರಿ.ಶ.1350ರಲ್ಲಿ ರಚಿತವಾಗಿರುವ 'ಆದಿಪರ್ವ' ಎಂಬ ಪ್ರಸಂಗವನ್ನು ಸಿದ್ಧಾಪುರದ ಹತ್ತಿರದ ಹೇರೂರು ಕಂಚಿ ಮನೆ ಎಂಬಲ್ಲಿ ಹುಡುಕಿ ಅದರ ಬಗ್ಗೆ ಸಂಶೋಧನೆ ನಡೆಸಿದ್ದು. ಇದರಿಂದಾಗಿ ಹಿಂದೆ ಡಾ॥ ಶಿವರಾಮಕಾರಂತರು ಕ್ರಿ.ಶ.1564ರಲ್ಲಿ ರಚಿತವಾದ 'ವಿರಾಟಪರ್ವ'ವೇ ದೊರೆತ ಪ್ರಸಂಗಗಳಲ್ಲಿ ಮೊದಲನೆಯದ್ದು ಎಂಬ ಹೇಳಿಕೆಯ ಬದಲು ಇವರದ್ದು ಸ್ಥಾಪಿತವಾಯಿತು. ಯಕ್ಷಗಾನ ಪ್ರಸಂಗಗಳ ಕಾಲ ಮತ್ತೆ 150 ವರ್ಷಗಳಷ್ಟು ಹಿಂದಕ್ಕೆ ಸರಿಯಿತು. ಇದೊಂದು ಐತಿಹಾಸಿಕ ವಿಷಯವಾಗಿದ್ದು ಪ್ರೊ.ಎಂ.ಎ.ಹೆಗಡೆಯವರ ಹೆಸರು ಈ ರಂಗದಲ್ಲಿ ಚಿರಸ್ಥಾಯಿಯಾಗಿರಲು ಕಾರಣವಾಗಿದೆ. ಆದಿಪರ್ವವು 1983ರಲ್ಲಿ ಹೆಗಡೆಯವರ ಸಂಪಾದಕತ್ವದಲ್ಲಿ ಪ್ರಕಟಗೊಂಡಿದೆ. ಈ ಕೃತಿಗೊಂದು ದೀರ್ಘ ಪ್ರಸ್ತಾವನೆ ಬರೆದಿದ್ದು, ಕೃತಿಯಲ್ಲಿ ಮಧ್ವಮತದ ಪ್ರಭಾವ ಇದೆ. ಉಡುಪಿ ಸಮೀಪದ ಕವಿಯಾಗಿರಬೇಕು ಎಂದಿದ್ದಾರೆ. ಕಾಲನಿರ್ಣಯಕ್ಕೆ ಸಕಾರಣಗಳನ್ನು ಇಲ್ಲಿ ನೀಡಿದ್ದಾರೆ. ಅರ್ಥಧಾರಿಯಾಗಿ

ಆರು ದಶಕಗಳ ಅನುಭವವುಳ್ಳ ಹೆಗಡೆಯವರು ಶ್ರೇಣಿ, ಪೆರ್ಲ, ಜೋಷಿ, ಮಹಾಬಲಹೆಗೆಡೆ, ಶಂಭುಹೆಗಡೆ, ಉಮಾಕಾಂತಭಟ್, ವಾಸುದೇವರಂಗಾಭಟ್, ಉಜಿರೆ ಅಶೋಕಭಟ್, ವಾಸುದೇವ ಸಾಮಗ ಮುಂತಾದವರ ಒಡನಾಟದಲ್ಲಿ ಅಸಂಖ್ಯ ತಾಳಮದ್ದಳೆಗಳಲ್ಲಿ ಭಾಗವಹಿಸಿದ್ದರು. ವಾಸುದೇವ ಸಾಮಗರು ರಚಿಸಿರುವ ತೆಕ್ಕಟ್ಟೆಯ 'ಸಂಯಮಂ'ದಲ್ಲಿ ಭಾಗಿಯಾಗಿ ಅರ್ಥ ಹೇಳುತ್ತಿದ್ದರು. ಕರಾವಳಿ, ಮಲೆನಾಡು, ಬಯಲು ನಾಡುಗಳಲೆಲ್ಲಾ ಅರ್ಥಧಾರಿಯಾಗಿ ಹೆಸರು ಮಾಡಿದ್ದಾರೆ. ಹವ್ಯಾಸಿ ವೇಷಧಾರಿಯಾಗಿ ಕೆರೆಮನೆ ಶಂಭುಹೆಗಡೆಯವರೊಂದಿಗೆ ವೇಷಗಾರಿಕೆಯನ್ನು ಪ್ರಾರಂಭಿಸಿದ ಇವರು ಕೆರೆಮನೆ ಮೇಳದೊಂದಿಗೆ ಆತ್ಮೀಯ ಸಂಬಂಧವನ್ನು ಇಟ್ಟುಕೊಂಡು ಅಲ್ಲಿನ ಪ್ರದರ್ಶನಗಳಲ್ಲಿ ವೇಷ ಮಾಡುತ್ತಿದ್ದರು. ಯಕ್ಷಗಾನ ಪಾತ್ರಧಾರಿಯಾಗಿ ಕೂಡ ಅಭಿಮಾನಿಗಳನ್ನು ಗಳಿಸಿದ್ದಾರೆ. ಕುಣಿತದಲ್ಲಿ ಹೊಸ್ತೋಟ ಮಂಜುನಾಥ ಭಾಗವತರು ಇವರಿಗೆ ಗುರುಗಳಾಗಿದ್ದರು. ಅತಿಥಿ ಕಲಾವಿದರಾಗಿ ಅಸಂಖ್ಯ ಪ್ರದರ್ಶನಗಳಲ್ಲಿ ಪಾಲ್ಗೊಂಡು ಅಲ್ಲೂ ಖ್ಯಾತರಾಗಿದ್ದಾರೆ.

ಪ್ರೊ.ಎಂ.ಎ.ಹೆಗಡೆಯವರು ಬರೆದಿರುವ ಯಕ್ಷಗಾನ ಪ್ರಸಂಗಗಳು ಸಾಹಿತ್ಯದ ದೃಷ್ಟಿಯಿಂದ ಮಹತ್ವದ್ದಾಗಿವೆ. ಸಂಸ್ಕೃತ ಸಾಹಿತ್ಯದ ಕನ್ನಡಕಾವ್ಯಗಳ ಆಳವಾದ ಪರಿಚಯವುಳ್ಳ ಇವರು ಛಂದೋಬದ್ಧವಾದ ಅನೇಕ ರಚನೆಗಳನ್ನು ಈ ಕಿರುಕಾವ್ಯಗಳಲ್ಲಿ ನೀಡಿದ್ದಾರೆ. ಅವರು ಸಜೀವವಾದ ವರ್ಣನೆಗಳನ್ನು ನೀಡಬಲ್ಲ ಶಕ್ತಿ ಉಳ್ಳವರು. ಅವರ 'ಸೀತಾ ವಿಯೋಗ' ಪ್ರಸಂಗವು ಪ್ರದರ್ಶನದಲ್ಲಿ ಕಳೆಕಟ್ಟಲು ಮುಖ್ಯ ಕಾರಣವೆಂದರೆ ಅಲ್ಲಿ ಬರುವ ಸಜೀವವಾದ ವರ್ಣನೆಗಳಾಗಿವೆ. ಸಂವಾದಕ್ಕೆ ಪೂರಕವಾಗುವ ಅಂಶಗಳನ್ನು ಕೂಡ ಹೆಗಡೆಯವರು ಇಲ್ಲಿ ತಂದಿದ್ದಾರೆ. ತನ್ನ ಮಕ್ಕಳನ್ನು ರಣಾಂಗಣದಲ್ಲಿ ಶ್ರೀರಾಮಚಂದ್ರನು ಕಾಣುತ್ತಾನೆ. ತಾನು ಅಶ್ವಮೇಧಯಾಗಕ್ಕೆ ಬಿಟ್ಟ ಕುದುರೆಯನ್ನು ಈ ಮಕ್ಕಳು ಕಟ್ಟಿದ್ದಾರೆಂಬುದೇ ಆಶ್ಚರ್ಯದ ವಿಚಾರ ಈಗ ನೋಡಿದ ಮೇಲಂತೂ ಅವನ ಅಂತರ್ಯದಲ್ಲಿ ಮೋಹ ಪುಟಿದೇಳುತ್ತದೆ. ಅದನ್ನು ಕವಿ ಹೀಗೆ ವರ್ಣಿಸಿದ್ದಾರೆ.

ಮುಂದೆ ಕೈತರಲುರಣ ಮಂಡಲದಿ ಮೆರೆವ ನಿಜ
ಕಂದರನು ಕಾಣುತ್ತ ಮೋಹಗೊಂಡು
ಹಿಂದಿನದ ನೆನೆಯುತ್ತಾ ಕಂದರ್ಪಪಿತ ಮರುಗಿ
ಸಂದ ಪುಣ್ಯನು ತಾನು ಎಂದು ಹಲುಬಿ ॥

ಚೆಲುವರನು ನೋಡಿದರೆ ನಲಿವುದೆನ್ನಯ ಹೃದಯ
ಕಲಿತನವು ಕರಗುತಿದೆ ಯಾಕೋ ಕಾಣೆ
ಕೊಲುವ ಕಾರ್ಯಕೆ ಬಂದೆ ಛಲವು ಸರಿಯಿತು ಹಿಂದೆ
ಒಲವು ತಲೆದೋರಿತಿದು ತಿಳಿಯದಾಯ್ತು ॥

ಇಲ್ಲಿನ ಸರಳವಾದ ಮಾತುಗಳಲ್ಲಿ ರಾಮನ ಮನಸ್ಸಿನ ಉಮ್ಮಳವೆಲ್ಲವನ್ನೂ ಕವಿ ಹೊರಗೆಡಹಿದ್ದಾರೆ. ಈ ಬಗೆಯ ಸಶಕ್ತವಾದ ಭಾಷೆಯ ಬಳಕೆ ಅವರ ಎಲ್ಲಾ ಪ್ರಸಂಗಗಳಲ್ಲೂ ಬಂದಿವೆ. ಆಧುನಿಕ ಪ್ರಸಂಗಕಾರರಲ್ಲಿ ಪ್ರೊ.ಹೆಗಡೆಯವರ ಸ್ಥಾನ ಹಿರಿದಾದದ್ದು. ಪದ್ಯಗಳು ಸಾಹಿತ್ಯದೃಷ್ಟಿಯಿಂದ ಶ್ರೀಮಂತವಾದಂತೆ ಅವು ಪ್ರದರ್ಶನಗಳಲ್ಲಿ ಭಾಗವತರಿಗೆ ಸುಗಮವಾಗಿ ಹಾಡಿದಾಗ ಪಾತ್ರಧಾರಿಗೆ ಹಾವಭಾವಗಳೊಂದಿಗೆ ಕುಣಿಯಲು ಹಾಗೂ ಸಂವಾದವನ್ನು ಮುಂದುವರಿಸಲು ಸಹಕಾರಿಯಾಗುವಂತೆ ಇದೆ.

ಎಲ್ಲಕ್ಕಿಂತ ಮುಖ್ಯವಾದದ್ದೆಂದರೆ ಕಳೆದ ಮೂರುವರ್ಷಗಳ ಕಾಲ ಕರ್ನಾಟಕದ ಯಕ್ಷಗಾನ ಅಕಾಡೆಮಿಯ ಅಧ್ಯಕ್ಷರಾಗಿ ಪಾರದರ್ಶಕವಾಗಿ ಸೇವೆ ಸಲ್ಲಿಸಿದ್ದು ಅನೇಕ ನೂತನ ಯೋಜನೆಗಳನ್ನು, ವಿಚಾರಗೋಷ್ಠಿಗಳನ್ನು ಹಮ್ಮಿಕೊಂಡು ಅಕಾಡೆಮಿ ಸದಾ ಜೀವಂತ ಇರುವಂತೆ ನೋಡಿಕೊಂಡರು. ಲಾಕ್‌ಡೌನ್ ಸಂದರ್ಭದಲ್ಲಿ ಅಕಾಡೆಮಿಯ ಆಯೋಜಿಸಿದ 'ಮಾತಿನಮಂಟಪ' ಕಾರ್ಯಕ್ರಮವು ಕಲಾವಿದರಿಗೆ ನೈತಿಕ ಸ್ಥೈರ್ಯವನ್ನು ಹೆಚ್ಚಿಸಿದ್ದೇ ಅಲ್ಲದೇ ಗ್ರಾಮೀಣ ಪರಿಸರದ ಕಲಾವಿದರು ತಾಂತ್ರಿಕತೆಯಿಂದ ಮುನ್ನೆಲೆಗೆ ಬಂದು ಎಲ್ಲರಿಗೂ ತಮ್ಮನ್ನು ಪರಿಚಯಿಸಿಕೊಳ್ಳುವಂತಾಯಿತು. ಇದೇ ರೀತಿ 'ನೆನಪಿನಬುತ್ತಿ' ಎಂಬ ಇನ್ನೊಂದು ಇದೇ ಮಾದರಿ ಕಾರ್ಯಕ್ರಮದಲ್ಲಿ ಹಿರಿಯ ಕಲಾವಿದರ, ಸಂಘಟಕ ಜೀವಾನುಭವ, ಕಲಾನುಭವದ ಪರಿಚಯ ಯಕ್ಷಗಾನಾಸಕ್ತರಿಗೆ ಲಭಿಸುವಂತಾಯಿತು. ಇವೆರಡೂ ಕಾರ್ಯಕ್ರಮಗಳನ್ನು ಉಳಿದ ಅಕಾಡೆಮಿಯವರೂ ಕೂಡ ಮುಕ್ತಕಂಠದಿಂದ ಶ್ಲಾಘಿಸಿದ್ದಾರೆ. ಅಕಾಡೆಮಿಯ ಅಧ್ಯಕ್ಷರಾಗಿ ಎಲ್ಲರೊಂದಿಗೂ ಬೆರೆತು, ಹಮ್ಮುಬಿಮ್ಮುಗಳಿಲ್ಲದೆ ಸರ್ವರನ್ನೂ ಒಂದು ನೆಲೆಗೆ ತಂದ ಇವರ ಸಂಘಟನಾ ಶಕ್ತಿಯನ್ನು ಮೆಚ್ಚಲೇಬೇಕು. ಅಕಾಡೆಮಿಯ ಪ್ರಶಸ್ತಿ ಪ್ರದಾನದಲ್ಲಿ ಹಾಗೂ ಪುಸ್ತಕ ಪ್ರಕಟಣೆಗಳಲ್ಲಿ ಅತ್ಯಂತ ಪಾರದರ್ಶಕತೆಯಿಂದ ನಡೆದುಕೊಂಡರು. ಕಲಾವಿದರಿಗೆ ದೊರೆಯಬೇಕಾದ ಮಾಸಾಶನ ಕೊಡಿಸುವಲ್ಲಿ ಶಕ್ತಿಮೀರಿ ಪ್ರಯತ್ನಿಸಿದ್ದರು.

ಯಕ್ಷಗಾನ ಮೂಡಲಪಾಯ ಕಲಾವಿದರನ್ನು ಸಮಾನ ಗೌರವದಿಂದ ನೋಡಿಕೊಂಡಿದ್ದು ಹೆಗಡೆಯವರ ಹೆಚ್ಚುಗಾರಿಕೆಯಾಗಿದೆ. ಇವರ ಕಾಲಾವಧಿಯಲ್ಲಿ ಮೂಡಲಪಾಯಕ್ಕೆ ಸಂಬಂಧಿಸಿದ ಅನೇಕ ಕಾರ್ಯಕ್ರಮಗಳು ನಡೆದವು. ಅಲ್ಲಿನ ಕಲಾವಿದರಿಗೆ ಪ್ರಶಸ್ತಿ, ಪುರಸ್ಕಾರ ಕೊಡುವಲ್ಲಿ ಅಧ್ಯಕ್ಷರು ಪಕ್ಷಪಾತವಿಲ್ಲದೆ ವ್ಯವಹರಿಸಿದ್ದನ್ನು ಅಲ್ಲಿನ ಕಲಾವಿದರೇ ಮೆಚ್ಚಿಕೊಂಡಿದ್ದಾರೆ. ಯಕ್ಷಗಾನ 'ಆದಿಪರ್ವ' ಪುಸ್ತಕಕ್ಕೆ ಪ್ರೊ.ಎಂ.ಎ.ಹೆಗಡೆಯವರು ಬರೆದಿರುವ ದೀರ್ಘ ಪ್ರಸ್ತಾವನೆಯು ಇವರ ಸಂಶೋಧನಾತ್ಮಕ ಪ್ರತಿಭೆಯನ್ನು ಪರಿಚಯಿಸುತ್ತದೆ. ಅಲ್ಲಿ ಇವರು ಈ ಪ್ರಸಂಗದ ಕಾಲ ಕ್ರಿ.ಶ.14ನೇ ಶತಮಾನ ಇರಬೇಕೆಂದು ಸಕಾರಣವಾಗಿ ಪ್ರತಿಪಾದಿಸಿದ್ದಾರೆ.

ಈ ಮೂಲಕ ದೊರೆತಿರುವ ಪ್ರಸಂಗಗಳಲ್ಲಿ 'ಆದಿಪರ್ವ' ಮೊದಲ ಪ್ರಸಂಗವೆಂಬ ಮಾನ್ಯತೆಯ ಗೌರವಕ್ಕೆ ಪಾತ್ರವಾಗಿವೆ.

ಪ್ರೊ. ಮಹಾಬಲೇಶ್ವ ಅಣ್ಣಪ್ಪ ಹೆಗಡೆಯವರಿಗೆ ಅನೇಕ ಬಗೆಯ ಗೌರವಗಳು, ಪ್ರಶಸ್ತಿಗಳು ಸಂದಿವೆ. ಅವರ 'ಸಿದ್ಧಾಂತ ಬಿಂದು' ಗ್ರಂಥಕ್ಕೆ ಪ್ರೊ.ಎಂ.ಹಿರಿಯಣ್ಣ ಪುರಸ್ಕಾರ, ಯಕ್ಷಗಾನದಲ್ಲಿನ ಸೇವೆಗಾಗಿ ಶೇಣಿ ಗೋಪಾಲಕೃಷ್ಣಭಟ್ ಹೆಸರಿ "ಶೇಣಿ ಪ್ರಶಸ್ತಿ", ಸದಾನಂದ ಹೆಬ್ಬಾರರ ಹೆಸರಿನ 'ಸದಾನಂದ ಪ್ರಶಸ್ತಿ', ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಶಿರಸಿಯಲ್ಲಿ ನಡೆದ ಎಂಟನೆಯ ಅಖಿಲ ಭಾರತ ಯಕ್ಷಗಾನ ಸಾಹಿತ್ಯ ಸಮ್ಮೇಳನದಲ್ಲಿ ಸರ್ವಾಧ್ಯಕ್ಷಗಾಗಿ ಗೌರವ ಮುಂತಾದವೆಲ್ಲಾ ಬಂದಿವೆ. ಯಕ್ಷಗಾನ ಪ್ರಸಂಗಗಳ ಡಿಜಿಟಲೀಕರಣವಾಗಬೇಕೆಂಬ 'ಯಕ್ಷವಾಹಿನಿ' ಸಂಸ್ಥೆಗೆ ಅಕಾಡೆಮಿಯು ಸಹಾಯಹಸ್ತ ನೀಡುವಲ್ಲಿ ಪ್ರೊ.ಎಂ.ಎ.ಹೆಗಡೆಯವರ ಪಾತ್ರಹಿರಿದು. ಬೆಂಗಳೂರಿನ ಈ ಸಂಸ್ಥೆ ಇದೀಗ 250ಕ್ಕೂ ಹೆಚ್ಚು ಯಕ್ಷಗಾನ ಪ್ರಸಂಗಗಳನ್ನು ಡಿಜಿಟಲೀಕರಣಗೊಳಿಸಿದ್ದು, ತಂತ್ರಜ್ಞಾನದ ಸಹಾಯದಿಂದ ಮುಂದಿನ ಕಾಲದಲ್ಲೂ ಯಕ್ಷಗಾನ ಪ್ರಸಂಗಗಳು ಉಳಿಯುವಂತಾಗುತ್ತದೆ. ಅಕಾಡೆಮಿ ನಡೆಸುವ ಎಲ್ಲಾ ಕಾರ್ಯಕ್ರಮಗಳಲ್ಲೂ ಹೆಗಡೆಯವರು ಸಕ್ರಿಯವಾಗಿ ಭಾಗವಹಿಸುತ್ತಿದ್ದರು. ಯಕ್ಷಗಾನ ತರಬೇತಿ ಕೇಂದ್ರಗಳಿಗೆ ಅಕಾಡೆಮಿಯ ನೆರವನ್ನು ಒದಗಿಸುವಲ್ಲಿ ಕೂಡಾ ಇವರ ಸಂಕಲ್ಪಶಕ್ತಿ ಕಾರ್ಯಕ್ಷಮತೆ ಹಿರಿದಾಗಿದೆ. ಹೀಗೆ ಯಕ್ಷಗಾನದ ಸರ್ವಾಂಗೀಣ ಬೆಳವಣಿಗೆಗೆ ಪ್ರೊ.ಹೆಗಡೆಯವರು ಕಾರಣರಾಗಿದ್ದಾರೆ. ಅವರಿಗೆ ಇದೇ 2020 ಏಪ್ರಿಲ್ 13ರಂದು ಕೊರೊನಾ ತಗಲಿತ್ತು. ಅದರಿಂದ ಗುಣಮುಖರಾಗಿ ನೆಗೆಟಿವ್ ವರದಿ ಬಂದಿತ್ತು. ಆದರೆ 18ರ ಬೆಳಿಗ್ಗೆ ಹೃದಯಸ್ಥಂಭನದಿಂದ ಅಸು ನೀಗಿದರು. ಅವರು ಪತ್ನಿ, ಪುತ್ರ, ಪುತ್ರಿಯರನ್ನು ಅಗಲಿದ್ದಾರೆ. ಅವರ ಅಕಾಲಿಕ ಸಾವು ಯಕ್ಷಗಾನ ರಂಗಕ್ಕೆ ತುಂಬಲಾರದ ನಷ್ಟವಾಗಿದೆ.

□

ಪ್ರಸಂಗಗಳಲ್ಲಿ ಆಧ್ಯಾತ್ಮಿಕ ವಿಚಾರಗಳು

ಭಾರತೀಯ ಪರಂಪರೆಯಲ್ಲಿ ಆಧ್ಯಾತ್ಮಿಕ ಚಿಂತನೆಗಳು ಹಾಸುಹೊಕ್ಕಂತಿವೆ. ನಮ್ಮಕಲೆ, ಸಾಹಿತ್ಯ, ಸಂಗೀತಗಳಲ್ಲಿ ಆಧ್ಯಾತ್ಮಿಕ ವಿಚಾರಗಳ ಹೊಳಹುಗಳನ್ನು ಕಾಣಬಹುದು. ಯಕ್ಷಗಾನವೂ ಇದಕ್ಕೆ ಹೊರತಾಗಿಲ್ಲ. ಬದುಕು ಮಾಗಿದಂತೆ ಆಧ್ಯಾತ್ಮಿಕ ಚಿಂತನೆಗಳು ಮನುಷ್ಯರಲ್ಲಿ ಬರುವುದು ಸ್ವಾಭಾವಿಕ. ಯಕ್ಷಗಾನ ಕವಿಗಳು ತಮ್ಮ ಕೃತಿಗಳಲ್ಲಿ ಪಾತ್ರಗಳ ಮೂಲಕ ಅನೇಕ ವಿಚಾರಗಳನ್ನು ಅದರಲ್ಲೂ ಧರ್ಮಕ್ಕೆ ಸಂಬಂಧಿಸಿದ, ಬಾಳಿನ ನಂತರದ ಕುರಿತಾಗಿರುವ ಚಿಂತನೆಗೆ ಅವಕಾಶ ಕೊಟ್ಟಿದ್ದಾರೆ. ತತ್ವಶಾಸ್ತ್ರ ತಿಳಿಸುವಂತೆ ನಮ್ಮೆಲ್ಲರನ್ನೂ ಕಾಡುತ್ತಿರುವುದು ಇರುವಿನ ಸಮಸ್ಯೆ, ಅರಿವಿನಸಮಸ್ಯೆ ಹಾಗೂ ನಲಿವಿನ ಸಮಸ್ಯೆಗಳು. ಬದುಕಿನಲ್ಲಿ ಮನುಷ್ಯಪಡುವ ಪರಿಪಾಟುಗಳು ಇರುವಿನ ಸಮಸ್ಯೆಯಾದರೆ ಸ್ವಾನುಭವ ಹಾಗೂ ಓದಿನ ಮೂಲಕ ಪಡೆಯುವ ಅರಿವಿನಿಂದ ಚೋದಿತವಾಗುವ ಪ್ರಶ್ನೆಗಳು ಇನ್ನೊಂದು ಬಗೆ. ಮಾನವ ಸುಖವಾಗಿರಲು, ಆನಂದದಾಯಕವನಾಗಿರಲು ಸಾಧ್ಯವಾಗದಿರುವುದೇ ನಲಿವಿನ ಸಮಸ್ಯೆಯಾಗಿದೆ. ಈ ಮೂರೂ ಜನಸಾಮಾನ್ಯರಲ್ಲಿದ್ದು ಯಕ್ಷಗಾನ ಕವಿಗಳು ಇದಕ್ಕೆ ಉತ್ತರಗಳನ್ನು ಕೊಡಲು ಪ್ರಸಂಗಗಳಲ್ಲಿ ಪ್ರಯತ್ನಿಸಿದ್ದಾರೆ. ಅವು ಯಾವ ಸ್ವರೂಪದಲ್ಲಿ ಬಂದಿವೆ ಎಂಬುವುದನ್ನು ಪರಿಶೀಲಿಸಿದಾಗ ನಮ್ಮ ಪ್ರಸಂಗ ಸಾಹಿತ್ಯದ ಮಹತ್ವ ಅರ್ಥವಾಗುತ್ತದೆ.

ಐದು ಸಾವಿರಕ್ಕೂ ಹೆಚ್ಚಿರುವ ಯಕ್ಷಗಾನ ಪ್ರಸಂಗಗಳಲ್ಲಿ ಶೇಕಡ ಎಂಭತ್ತಕ್ಕೂ ಹೆಚ್ಚಿನ ಪ್ರಸಂಗಗಳು ರಾಮಾಯಣ, ಮಹಾಭಾರತ, ಭಾಗವತ ಹಾಗೂ ಪುರಾಣಗಳಿಗೆ ಸಂಬಂಧಿಸಿದವುಗಳಾಗಿವೆ. ಇವುಗಳ ರಚನೆಯ ಹಿನ್ನೆಲೆಯಲ್ಲಿ ಧಾರ್ಮಿಕ ಪರಿವೇಷವೊಂದು ಇರುವುದನ್ನು ಮರೆಯುವಂತಿಲ್ಲ. ದಾಸಸಾಹಿತ್ಯದ ನೇರಪ್ರಭಾವವನ್ನು ಯಕ್ಷಗಾನದ ಪ್ರಯೋಗಗಳಲ್ಲೂ ಕೂಡಾ ಕಾಣಬಹುದು. ಪ್ರದರ್ಶನದ ಮೊದಲ ವೇಷಧಾರಿಯೇ ಭಾಗವತನೆಂದು ಪರಿಗಣಿಸಲಾಗುತ್ತದೆ. ಆತನೇ ಸೂತ್ರಧಾರ, ಮಾರ್ಗದರ್ಶಕ ಎಲ್ಲಾ ಕಲಾವಿದರು ರಂಗಸ್ಥಳದಲ್ಲಿ

ಆತನ ನಿರ್ದೇಶನದಂತೆ ನಡೆಯುತ್ತಾರೆ. ಈ ಪದವು ಭಾಗವತಧರ್ಮವು ಕರ್ನಾಟಕದಲ್ಲಿ ಹೆಚ್ಚು ಪ್ರಚುರಗೊಂಡಿದ್ದಾಗ ಜನ್ಮ ತಳೆದಿರಬೇಕು. ಭಾಗವತದ ವಿಚಾರವೆಂದರೆ ಎಲ್ಲವೂ ಆ ಪರಮಾತ್ಮನ ಲೀಲಾವಿಲಾಸ. ಆತನ ಇಂಗಿತವಿಲ್ಲದೇ "ತೃಣಮಪಿನಚಲತಿ" ಎಂದು ಇದನ್ನೇ ಯಕ್ಷಗಾನದ ಪಾತ್ರಗಳು ನಂಬಿವೆ. ಅದನ್ನೇ ಕವಿ ಅವುಗಳ ಬಾಯಲ್ಲಿ ಹೇಳಿಸುತ್ತಾ ಇರುತ್ತಾನೆ. ದೇವರ ಅವತಾರವೆಂದರೆ ಅವನು ಮೇಲಿನ ತನ್ನ ಲೋಕದಿಂದ ಭೂಮಿಗೆ ಇಳಿದು ಲೀಲಾವಿಲಾಸದಿಂದ ಜಗತ್ತನ್ನು ನಿಯಂತ್ರಿಸುತ್ತಿರುತ್ತಾನೆ. ಈ ಸಮಸ್ತ ವಿಶ್ವವು ಅವನ ಲೀಲೆಯ ಫಲ. ದೇಶಕಾಲದ ಹಂಗಿಲ್ಲದೇ ಸ್ವತಂತ್ರವಾಗಿ ಯಾವ ಪ್ರೇರಣೆ ಇಲ್ಲದೇ ಪ್ರವೃತ್ತವಾಗಿರುವ ಲೀಲೆಯ ಫಲ ಈ ಜಗದ ವ್ಯವಸ್ಥೆ. ಈ ಚಿಂತನೆಗಳ ಹಿನ್ನೆಲೆಯಲ್ಲಿ ಯಕ್ಷಗಾನದ ಕವಿಗಳು ಪ್ರಸಂಗಗಳನ್ನು ರಚಿಸಿದ್ದಾರೆ. ಭಾಗವತ ಶಿರೋಮಣಿಗಳಾದ ಸುಧನ್ವಾ, ಸುರತ, ಚಂದ್ರಹಾಸ, ಮಯೂರಧ್ವಜ, ರುಕ್ಮಾಂಗದ ಮುಂತಾದವರು ಭಕ್ತಿ, ತ್ಯಾಗ, ಶೀಲ, ಸತ್ಯಪ್ರತಿಜ್ಞೆ ಮುಂತಾದ ಜೀವನಮೌಲ್ಯಗಳನ್ನು ಪ್ರತಿಪಾದಿಸುತ್ತಾ ಯಕ್ಷಗಾನದ ರಂಗದ "ತಾರಾಮಣಿ"ಗಳಾಗಿದ್ದಾರೆ.

ಹೊಸೋತ್ತ ಮಂಜುನಾಥ ಭಾಗವತರ "ಶ್ರೀರಾಮನಿರ್ಯಾಣ"ದಲ್ಲಿ ಶ್ರೀರಾಮ ಮತ್ತು ಕಾಲಪುರುಷರ ಸಂವಾದಕ್ಕೆ ಭಂಗವಾಗಬಾರದು ಎಂಬ ಕಾರಣಕ್ಕೆ ದೂರ್ವಾಸನನ್ನು ತಡೆದ ಲಕ್ಷ್ಮಣನು ಕೈಯ್ಯಾರೆ ಸಾವನ್ನು ತಂದುಕೊಳ್ಳುತ್ತಾನೆ. ಇಲ್ಲಿ ಆತ ತನಗಿಂತ ತಮ್ಮ ಕುಲ ದೊಡ್ಡದೆಂದು ಭಾವಿಸಿದ್ದಾನೆ. ಅದನ್ನೇ ಕವಿ

ನಡುಗಿತೆನ್ನಮನವು ಕುಲವನ್ನು । ಶಾಪಾಗ್ನಿಯಿಂದ

ಸುಡುವಮುನಿಪನೆಂದುಕೊಂಡೆನು ।

ತಡೆದುಕುಲಕ್ಕೆ ಕ್ಷಯವತರದೆ

ಪಡೆವೆಶಿಕ್ಷಾನಾನೆಏನುವ

ದೃಢದಿಕರೆದು ತಡೆದನವನ॥ – ಎಂದಿದ್ದಾರೆ

ಮುಂದೆ ಶ್ರೀರಾಮನು ಮಾತಕತೆಗೆ ಭಂಗ ತಂದ ಲಕ್ಷ್ಮಣನಿಗೆ

ಚೆಲುವ ಲಕ್ಷ್ಮಣ ಕೇಳು ದೇಹಾಂತಶಿಕ್ಷೆಯ

ಸಲ್ಲಿಸುವೆ ರಾಜಧರ್ಮದಲಿ

ಗಳಿಸಬಾರದು ದೋಷ ತೆರಳು ನೀನಿಲ್ಲಿಂದ

ಬಳಿಕೆನ್ನನೋಡಬೇಡೆಂದ ॥

ಮುಂದೆ ಲಕ್ಷ್ಮಣನ ಮಹಾಪ್ರಸ್ಥಾನವನ್ನು ಅರಿತ ರಾಮಚಂದ್ರನು ತಾನು ಬದುಕಿ ಉಳಿದು ಉಪಯೋಗವಿಲ್ಲ ಎಂದು ಯೋಚಿಸಿ –

ನೋವುನಲಿವುಗಳಿಂದತುಂಬಿದ

ಜೀವನವ ಕಂಡಾಯ್ತು ಮತ್ತಿ

ನ್ನಾವಫಲವಿದೆ ನೀತಿಯೊಂದೇ

ದೇವನೆನಿಸಿತು ಎನ್ನನು । ಜಗದೊಳಿಂದು – ಎಂದು ಹೇಳಿ

ನಿರ್ಯಾಣಕ್ಕೆ ಸಿದ್ಧನಾಗುತ್ತಾನೆ. ಪ್ರಸಂಗದ ಈ ಕೊನೆಯ ಭಾಗದಲ್ಲಿ ಆಧ್ಯಾತ್ಮಿಕ ವಿಚಾರಗಳು ಸಾಕಷ್ಟು ಬಂದಿವೆ. ಆಟ-ಕೂಟಗಳೆರಡರಲ್ಲೂ ಈ ಪ್ರಸಂಗ ಮಿಂಚಿದೆ. ಕಾಲಪುರುಷ-ರಾಮರ ನಡುವಿನ ಸಂವಾದದಲ್ಲೂ ಕೂಡ ಜೀವಾತ್ಮ ಪರಮಾತ್ಮರ ಸಂಬಂಧಗಳ ವಿಚಾರವಿದೆ. ಯಕ್ಷಋಷಿ ಹೊಸ್ತೋಟರ ಗಾಢವಾದ ಜೀವನದ ಗುರಿಯ ಚಿಂತನೆ ಈ 'ರಾಮನಿರ್ಯಾಣ'ದಲ್ಲಿ ಹೆಪ್ಪುಗಟ್ಟಿದೆ.

ಕಲ್ಯಾಣಿ ಭೀಮರಾಯರ 'ರಾಜಸೂಯ' ಪ್ರಸಂಗದಲ್ಲಿ ಶ್ರೀಕೃಷ್ಣನಿಗೆ ಅಗ್ರಪೂಜೆ ಸಲ್ಲಿಸಬೇಕೆಂದು ಭೀಷ್ಮಸೂಚಿಸುವಾಗಿನ ಪದ್ಯಗಳಲ್ಲಿ, ಮುಂದೆ ಶಿಶುಪಾಲನೊಂದಿಗೆ ನಡೆಯುವ ಸಂವಾದಗಳಲ್ಲಿ, ದೈವ-ಮಾನವ ಸಂಬಂಧಗಳ ಕುರಿತ ವಿಶ್ಲೇಷಣೆಯಲ್ಲಿ ಪ್ರಸಂಗಕಾರರು ಅನೇಕ ಆಧ್ಯಾತ್ಮಿಕ ವಿಚಾರಗಳನ್ನು ತಿಳಿಸಿದ್ದಾರೆ. ದೈವಪರ-ದೈವವಿರೋಧ ವಿಚಾರಗಳ ತಾಕಲಾಟ ಇಲ್ಲಿ ನಡೆದಿದೆ. ಬದುಕಿನಲ್ಲಿ ಪಕ್ವಗೊಂಡ ಭೀಷ್ಮನ ಪ್ರತಿಮಾತಿನಲ್ಲಿ ಬಾಳಿನ ಮಹತಿಕೆಯ ವಿಚಾರ ಬಂದಿದೆ. ಲೀಲಾಮನಾನುಷನಾದ ಶ್ರೀಕೃಷ್ಣನಭಕ್ತರುಗಳಾದ ದ್ರೌಪದಿ, ಭೀಷ್ಮ, ವಿದುರ, ಪಾಂಡವರುಗಳ ಅನನ್ಯ ಶರಣಾಗತಿಯ ಚಿತ್ರಣವು ಯಕ್ಷಗಾನದ ಮಹಾಭಾರತ ಪ್ರಸಂಗಗಳಲ್ಲಿ ಬಂದಿದೆ.

ದೇವಿದಾಸಕವಿಯು "ಭೀಷ್ಮಪರ್ವ"ದಲ್ಲಿ ಭೀಷ್ಮನ ಭಕ್ತಿ ಪುರಸ್ಸರವಾದ ನಡೆಯನ್ನು, ಸಮರ್ಪಣಾ ಭಾವವನ್ನು ಸೊಗಸಾಗಿ ವಿವರಿಸಿದ್ದಾರೆ. ಕುಮಾರವ್ಯಾಸಭಾರತದಲ್ಲಿ ಕೃಷ್ಣನು ಚಕ್ರವನ್ನು ಹಿಡಿಯುವುದು ಅರ್ಜುನನನ್ನು ಎಚ್ಚರಿಸಲು, ಅವನ ನಿಧಾನ ನಡೆಯನ್ನು ವಿರೋಧಿಸಲು. ಆದರೆ ಪ್ರಸಂಗದಲ್ಲಿ ಆತ ಭೀಷ್ಮನಿಂದ ಘಾತಿಗೊಂಡು ಚಕ್ರಧರಿಸಿ ಭೀಷ್ಮನನ್ನು ಸಂಹರಿಸಲು ಹೊರಡುತ್ತಾನೆ. ಆಗ ಭೀಷ್ಮನ ಬಾಯಿಂದ ಬರುವ–

ಶ್ರೀಮನೋಹರಸ್ವಾಮಿಪರಾಕು ।

ಪ್ರೇಮದೊಳೆನ್ನಯಮಾತಲಾಲಿಸಬೇಕು ॥

ಎನ್ನಯ ಕಂಠವ ನಿರಿಯಲು ಚಕ್ರವ

ಚಿನ್ಮಯ ನೀನಯ್ಯ ಪಿಡಿದಿಹೆಯ

ಚೆನ್ನಾಯ್ತು ಸೇವಕ ಜಯವ ಪಾಲಿಸಿ ಲೋಕ

ವನ್ನು ರಕ್ಷಿಪನಹುದೋ ಮಹಾನುಭಾವ

ಇಂದಿರೇಶನೆ ನಾನು ಇವರ ಜಗಳವನ್ನು ।

ನಿಂದು ಈಕ್ಷಿಸಲಾರೆ ಕಣ್ಣಾರೆ ॥

ಎಂದಾದರೀಕಾಯ ಎರವಿನೊಡೆಯ ಜೀಯ।

ಇಂದೇ ಪೋಗಲಿ ತೀರ್ಚುಚಕ್ರನೀನೆಚ್ಚು ॥

ಎನಗೆ ನಗೆಯು ಬಂತು ನಿನ್ನನು ಕಂಡಿಂತು ।

ತೃಣವ ಮುರಿವುದಕ್ಕೆ ಕೊಡಲಿಯುಬೇಕೆ ॥

ಘನವಾಯ್ತು ಚಕ್ರವ ಕಳುಹಿಸೆನ್ನೆಯ ರೋಮ ।

ವನು ಕಡಿದರೆ ನಾನು ಶರಣನೆ ನಿನಗಿನ್ನು ॥

ಇಲ್ಲಿ ಚಕ್ರವನ್ನು ಹಿಡಿದ ಶ್ರೀಕೃಷ್ಣನ ಮೃದುಕರವನ್ನು ಹಿಡಿದುಕೊಂಡು ಭೀಷ್ಮತೋರ್ಪಡಿಸುವ ಭಕ್ತಿಯಭಾವ ವಿಭಿನ್ನವಾದದ್ದು. ಲೋಕಕ್ಕೆ ಒಡೆಯನಾಗಿರುವ, ಚಿನ್ಮಯ ಸ್ವರೂಪಿಯಾಗಿರುವ, ಲೋಕವನ್ನು ಕಾಯಬೇಕಾದ ಪರಮಾತ್ಮನೇ ಈ ರೀತಿ 'ವಚನಭಂಗ' ಮಾಡಿ ಯುದ್ಧಕ್ಕೆ ಇಳಿದುದರ ಬಗ್ಗೆ ವ್ಯಂಗಭಾವ ಒಂದೆಡೆಯಾದರೆ ಮೊಮ್ಮಕ್ಕಳ ಜಗಳ, ಕುಲನಾಶದ ಪರಿಯನ್ನು ನೋಡುತ್ತಿರುವುದು ಸಾಕಾಗಿದೆ. ಇನ್ನು ಮುಂದೆ ಇದನ್ನೆಲ್ಲಾ ನೋಡಲಾರೆ ಈ ದೇಹ ನಶ್ವರ ಇದನ್ನು ಮುಗಿಸು ಎಂಬ ಆರ್ತಭಾವವೂ ಈ ಪದ್ಯದಲ್ಲಿದೆ. ಕೃಷ್ಣನ ಈ ಹೊಸಬಗೆಯ ಕೆಲಸನೋಡಿ ನಗುತ್ತಾ "ಭಕ್ತನ ರೋಮವನ್ನು ಕೂಡ ಕೃಷ್ಣಚಕ್ರ ಕತ್ತರಿಸುಲಾಗದು. ಇನ್ನು ಪ್ರಾಣಹರಣ ಹೇಗೆ ಸಾಧ್ಯ. ಹಾಗೇನಾದರೂ ಆದರೆ ನಾನು ಕೃಷ್ಣಭಕ್ತನೇ" ಎಂಬ ಆತ್ಮವಿಶ್ವಾಸದ ಸವಾಲನ್ನು ಹಾಕುತ್ತಾನೆ. ಇದನ್ನು ರಂಗಸ್ಥಳದಲ್ಲಿ ದಿ.ಕೆರೆಮನೆ ಮಹಾಬಲಹೆಗಡೆಯವರು ಅಭಿನಯಿಸಿ, ಗಂಭೀರವಾಗಿ ವಿಚಾರಮಂಡನೆ ಮಾಡುವಾಗ ತುಂಬು ಜೀವನದ ಸಂದೇಶವೊಂದು, ಭಕ್ತ-ದೇವರುಗಳ ಸಂಬಂಧದ ಜಿಜ್ಞಾಸೆಯನ್ನು ಕಾಣಬಹುದಾಗಿದೆ. ದೇವಿದಾಸನು ಪ್ರಸಂಗದಲ್ಲಿ ತಿಳಿಸಿದ ಆಧ್ಯಾತ್ಮಿಕ ವಿಚಾರಗಳ ಅನಾವರಣವನ್ನು ಹೆಗಡೆಯವರು ಸಮರ್ಥವಾಗಿ, ಅದ್ವಿತೀಯವಾಗಿ ಮಾಡಿರುವುದು ಪ್ರೇಕ್ಷಕರ ಮನಸ್ಸಿನಲ್ಲಿ ಅಚ್ಚಳಿಯದೇ ಉಳಿದಿದೆ. ಭಕ್ತಶಿರೋಮಣಿಗಳ ಅನನ್ಯ ಶರಣಾಗತಿಯ ಭಕ್ತಿಯ ಚಿತ್ರಣಗಳು ಅತಿಕಾಯ ಕಾಳಗ, ದ್ರೌಪದಿ ವಸ್ತ್ರಾಪಹರಣ, ಬಭ್ರುವಾಹ ಕಾಳಗ, ಚಂದ್ರಹಾಸ, ಮುಂತಾದ ಪ್ರಸಂಗಗಳಲ್ಲಿ ಕಣ್ಣಿಗೆ ಕಟ್ಟುವಂತೆ ಚಿತ್ರಿಸಲಾಗಿದೆ. ಸರ್ವವನ್ನು ದೇವರು ನೋಡಿಕೊಳ್ಳುತ್ತಾನೆ ಎಂಬ ಭಾವದಲ್ಲೇ ಭಕ್ತನಿರುತ್ತಾನೆ. ಪ್ರಸಂಗಕಾರನಾದವನು ಪ್ರಸಂಗದ ಪಾತ್ರಗಳ ಮೂಲಕ ಇದನ್ನು ನಿರೂಪಿಸಿರುವ ಪರಿಯನ್ನು "ಬಭ್ರುವಾಹನ ಕಾಳಗ" ದಲ್ಲಿ ನೋಡಬಹುದು. ಅರ್ಜುನನ ಸಾವಿನ ಸ್ವಪ್ನವನ್ನು ಕಂಡ ಕುಂತಿ ಎಲ್ಲರಿಗೆ ಅದನ್ನು ತಿಳಿಸುತ್ತಾಳೆ. ಆಗ

ಎಲ್ಲರೂ ಗೋಳಾಡುತ್ತಾರೆ. ಸುಭದ್ರೆಯ ದುಃಖ ಮಿತಿ ಮೀರಿದಾಗ, ಕುಂತಿಯು ಅವಳನ್ನು ಸಮಾಧಾನಪಡಿಸುತ್ತಾ ಹೀಗೆ ಹೇಳುತ್ತಾಳೆ –

ವೀರ ಮೂಲೋಕಕ್ಕೆ । ನಿನ್ನ ಪುರುಷನೂ
ಈರೇಳು ಲೋಕದೊಡೆಯ ಕೃಷ್ಣ ರಕ್ಷಿಪನು।
ಅರಗಿನ ಮನೆಯಲ್ಲಿ ಉರಿಸೆ ಕೌರವ ನಮ್ಮ ।
ಪರಿಹರಿಸಿದ ಕೃಷ್ಣನಲ್ಲದಿನ್ನಾರು ॥
ತರಣಿನಂದನ ನೆಚ್ಚ ಉರಗಾಸ್ತ್ರ ಭರದೊಳು ।
ಧರಣಿಗೊತ್ತಿಕಾಯ್ದ ಶಿರವನರ್ಜುನನ ॥

ಇಲ್ಲಿ ಕುಂತಿ ತಮ್ಮ ಬದುಕಿಗೆ ಬಂದೆರಗಿದ ಎಲ್ಲ ಕಷ್ಟಗಳನ್ನು ಪಾರುಮಾಡಿದವನು ಶ್ರೀಕೃಷ್ಣ ಎನ್ನುತ್ತಾಳೆ. ಈ ನಂಬಿಕೆಯೇ ಜನರ ಕಷ್ಟಗಳಲ್ಲಿ ಸಹಾಯ ಒದಗಿಸುತ್ತದೆ. ಪ್ರತಿಯೊಬ್ಬರ ಅರ್ಧದಷ್ಟು ಕಷ್ಟ ಈ ಬಗೆಯ 'ದೇವಕಾರುಣ್ಯ' ಎಂಬ ನಂಬಿಕೆಯಿಂದ ಕಡಿಮೆಯಾಗುತ್ತದೆ. ಆದಕಾರಣ ಕಷ್ಟಸಂಕಷ್ಟಗಳಲ್ಲಿ ದೇವರು ರಕ್ಷಿಸುತ್ತಾನೆ ಎಂಬ ಭಾವನೆ ಜನರಲ್ಲಿ ಬಿತ್ತಲು ಪ್ರಸಂಗ ಕವಿಗಳು ಕಾರಣರಾಗಿದ್ದಾರೆ. ಭಕ್ತಿಯ ಜೀವನಕ್ಕೊಂದು ನಂಬಿಕೆಯನ್ನು, ಭರವಸೆಯನ್ನು ನೀಡುತ್ತದೆ ಎಂಬ ಆಂಶವು ಹೆಚ್ಚಿನ ಪ್ರಸಂಗಗಳಲ್ಲಿ ಬಂದಿದೆ. ಕರ್ಮಸಿದ್ಧಾಂತ ಭಾರತೀಯರಲ್ಲಿ ರಕ್ತಗತವಾಗಿದೆ, ಪ್ರಭಾವಯುತವಾಗಿದೆ. "ಉತ್ತಮಕರ್ಮ ಮಾಡಿದವನಿಗೆ ಉತ್ತಮ ಫಲ, ಅನ್ಯಾಯ ಮಾಡಿದವನಿಗೆ ಕೆಡಕು ಕಟ್ಟಿಟ್ಟದ್ದು. ಪ್ರಾರಬ್ಧಕರ್ಮ ಎಂಥವರನ್ನು ಬಿಟ್ಟಿಲ್ಲ. ಎಲ್ಲವು ವಿಧಿಯ ಅನುಸಾರ ನಡೆಯುತ್ತದೆ. ಧರ್ಮವನ್ನು ನಾವು ರಕ್ಷಿಸಿದರೆ ಧರ್ಮ ನಮ್ಮನ್ನು ರಕ್ಷಿಸುತ್ತದೆ." ಅರ್ಥವನ್ನು, ಕಾಮವನ್ನು, ಜೀವಿತವನ್ನು ತೊರೆದಾದರೂ ಧರ್ಮವನ್ನು ಉಳಿಸಬೇಕು" ಎಂಬೆಲ್ಲ ವಿಚಾರಗಳನ್ನು ಯಕ್ಷಕವಿಗಳು ತಮ್ಮ ಕೃತಿಗಳಲ್ಲಿ ಸಾರಿದ್ದಾರೆ.

"ಭೀಷ್ಮಪ್ರಪಂಚ" ದಲ್ಲಿ–

"ಹಿಂದೆಗೈದಿಹ ಕರ್ಮಬೀಜವು।
ಒಂದು ಹೆಮ್ಮರವಾಗಿ ಫಲವನು
ಇಂದು ಕೊಡುತಿದೆ ಬೇಡವನೆಗೋ।
ಎಂದ ಮಣಿಸದೆ ಬಿಡುವನೆ."

"ಬಭ್ರುವಾಹನಕಾಳಗ" ದಲ್ಲಿ –

"ಧರ್ಮ ಉಪಕಾರಗಳ ತಡೆದದುಷ್ಟರಿಗೆ
ಕರ್ಮಉಣಿಸದೆ ಬಿಡದು ಕೇಳಿರೈ ಕಡೆಗೆ"

"ವಿಶ್ವಾಮಿತ್ರಪ್ರತಾಪ" ಧಲ್ಲಿ –

"ನೂರು ಯಜ್ಞವನ್ನು ಗೈದೊಡೇನು ನಾಕವನು

"ದುರ್ಯೋಧನವಧೆ" ಯಲ್ಲಿ –

"ವನಜಪೀಠನ ಬರೆಹವನು ಮೀರಲಳವಲ್ಲ"

"ಗಧಾಪರ್ವ" ದಲ್ಲಿ –

"ಆದರಿಸುವವರಾರು ವಿಧಿಬರೆ ।

ದಾದಿಯಕ್ಷರಕಿಂದು ಪ್ರತಿಕೂ ।

ಲಾದಿಯಂಟೇನೆಂದು ಕಂಬನಿದುಂಬುತುಸಿರಿದನೋ ॥"

ಹೀಗೆ ದಾರ್ಶನಿಕ ವಿಚಾರಗಳು, ತಾತ್ವಿಕಬೋಧನೆಗಳನ್ನು ಯಕ್ಷಗಾನದ ಪ್ರಸಂಗಗಳಲ್ಲಿ ಕಾಣಬಹುದು. ಭಾರತೀಯ ಪರಂಪರೆಯ ಭಾಗವಾದ ಈ ನಂಬಿಕೆ ನಮ್ಮ ಸಂಸ್ಕೃತಿಯನ್ನು ರೂಪಿಸುವಲ್ಲಿ ಮಹತ್ತರ ಪಾತ್ರವನ್ನು ವಹಿಸಿದೆ.

ಯಕ್ಷಗಾನ ಪ್ರಸಂಗ ಸಾಹಿತ್ಯದಲ್ಲಿ ಕಂಡುಬರುವ ವೈಶಿಷ್ಟವೆಂದರೆ ವಿರೋಧಭಕ್ತಿಯ ಪರಾಕಾಷ್ಠೆ. ಕಾಸರಗೋಡು ಸುಬ್ರಾಯಪಂಡಿತರ "ರಾವಣ ವಧೆ" (ರಾವಣೇಶ್ವರಕಾಳಗ)ಯಲ್ಲಿನ ರಾವಣನ ಪಾತ್ರವು ಉದಾರ ಚಿತ್ತವಾಗಿದ್ದು ಕೊನೆಯಲ್ಲಿ ರಾಮನನ್ನು ವಿಷ್ಣುವಿನ ಅವತಾರವೆಂದು ಒಪ್ಪಿಕೊಳ್ಳುತ್ತಾನೆ. ಆತ ತನ್ನ ಸಾವಿನಲ್ಲೂ ವಿರೋಧಭಕ್ತಿಯನ್ನು ಮೆರೆಯುತ್ತಾನೆ. ಇದೇ ರೀತಿ ದೇವಿದಾಸನ ಕೃಷ್ಣಸಂಧಾನದಲಿ ಯುದ್ಧವನ್ನೇ ನಿಶ್ಚಯಿಸಿ ಮಾತನಾಡಿದ ದುರ್ಯೋಧನನು ಕೊನೆಯಲ್ಲಿ–

ದನುಜರಿಪು ನೀನಿಳೆಯಭಾರವ

ಗೊನೆಯಲವತರಿಸಿದ ಮಾಯಾ

ಮನುಜನಲ್ಲಾ ॥

ಹಿಂದೆ ರಾವಣ ಕಂಸಮುಖ್ಯರ

ಕೊಂದು ಮುಕತಿಯ ಕರುಣಿಸಿದೆನೀ

ನೆಂದರಿತು ವೈರದಿ ತವಾಂಘ್ರಿಯ

ಹೊಂದುತಿಹೆನು ॥

ಧುರಕೆಬೆದರುವನಲ್ಲ ರಿಪುಗಳ ।

ಕರೆಸಿಕೊಡಿಸುವನಲ್ಲ ರಾಜ್ಯವ

ಹರಣದಾಸೆಗಳಿಲ್ಲ ತನಗೆಂ

ದರಸ ನುಡಿದ॥

ಎಲೆ ಮುರಾಂತಕ ಲಾಲಿಸೈಬೆಂ।

ಬಲಕೆ ಭೂಪರ ನೆರಹಿ ಕುರುಮಂ

ಡಲಕೆ ಸನ್ನಾಹವಾಗಿ ಸಮರಕೆ ಬರಲಿ ಪಾಂಡವರ

ಕಲಹದಲಿ ನಿನ್ನಡಿಯೊಳೆನ್ನಯ

ತಲೆಯನೈದೆ ಸರ್ಮಪಿಸುವೆ ನಿನ

ಗಳುಕೆನಿದು ದಿಟವೆಂದು

ವೀಳ್ಯವನಿತ್ತನುಚ್ಯುತಗೆ॥

ಇಲ್ಲೆಲ್ಲ ಪ್ರಸಂಗಕಾರ ಮೂಲಭಾರತಕ್ಕೆ ಭಿನ್ನವಾದ ವಿಚಾರವನ್ನು ಬಹುಸೊಗಸಾಗಿ ನಮ್ಮ ಮುಂದೆ ಇರಿಸಿದ್ದಾರೆ. ತಾಳಮದ್ದಲೆಯಲ್ಲಿ 'ಕೃಷ್ಣ ಸಂಧಾನದ' ಭಾಗವನ್ನು ಬಹಳ ವಿಚಾರ ಪೂರ್ಣವಾಗಿ, ಜಿಜ್ಞಾಸೆಯೊಂದಿಗೆ ಅರ್ಥಧಾರಿಗಳು ಮಂಡಿಸುತ್ತಾರೆ. ಯಕ್ಷಗಾನದ ರಾವಣ, ದುರ್ಯೋಧನರು ಹೀಗೆ ಆಡುವ ಮೂಲಕ ಬದುಕಿನ ಗುರಿಯಾವುದಾಗಬೇಕೆಂಬುದರ ಕಡೆಗೆ ಪ್ರೇಕ್ಷಕರನ್ನು ಸಿದ್ದಗೊಳಿಸುತ್ತಾರೆ.

ಹಟ್ಟಿಯಂಗಡಿ ರಾಮಭಟ್ಟರ 'ಸುಭದ್ರಾ ಕಲ್ಯಾಣ'ದಲ್ಲಿ ಬರುವ 'ಶರಸೇತು ಬಂಧನ'ದ ಭಾಗವು ವಿಲಕ್ಷಣವಾಗಿದೆ. ಅಲ್ಲಿ ಹನುಮಂತ ತನ್ನ ಭಕ್ತಿಸೋತದ್ದರ ಬಗ್ಗೆ ವ್ಯಥೆ ತಾಳುತ್ತಾನೆ. ಅರರೆ ರಾಮಭಕ್ತನೆಂಬ ಬಿರುದು ಪೋಯ್ತೆಂತು ಅಕಟ ದೇಹವಿರಲು ಸಫಲವಾವುದಿದನು ತೊರೆವೆನೆಂದು ನಿಶ್ಚಯಿಸುತ್ತಾನೆ. ಅಗ ಕೃಷ್ಣ 'ಪವನ ಸುತನ' ಮನದ ತಾಪಕ್ಕೆ 'ತಂಪೆರೆಯಲು' ತವಕದಿಂದ ರಾಮರೂಪವನು ತೋರಲು ಹನುಮಂತ ಅದನ್ನು ಕಂಡು ನಮಿಸಿ ಭಕ್ತಿಭಾವದಿಂದಲಿ ಅವನ ಸುತ್ತಿಸಿದ. ಹೀಗೆ ಹಲವು ಪ್ರಸಂಗಗಳಲ್ಲಿ ಬರುವ ಈ ಬಗೆಯ ತಿರುವುಗಳು ನಮಗೆ ಅನೇಕ ಮಹತ್ವದ ವಿಚಾರಗಳನ್ನು ತಿಳಿಸುತ್ತವೆ.

'ಶಿಬಿಯ ಚರಿತ್ರೆ', 'ಜೀಮೂತ ವಾಹನ' ಪ್ರಸಂಗಗಲ್ಲಿ ತ್ಯಾಗದ ಮಹಿಮೆ ಇದ್ದು ಅಲ್ಲಿ ತ್ಯಾಗದ ಹಿರಿಮೆಯ ವ್ಯಾಖ್ಯನ ದೊರೆಯುತ್ತದೆ. ಮಹಾಸತಿ ಅನಸೂಯೆಯಲ್ಲಿ ಪಾತಿವ್ರತ್ಯದ ಮಹಿಮೆಯನ್ನು, 'ದಾನಶೂರಕರ್ಣ' ಹಾಗೂ ಕರ್ಣಪರ್ವದಲ್ಲಿ ದಾನದ ಮಹಿಮಯನ್ನು, 'ಸುಧನ್ವ ಕಾಳಗ'ದಲ್ಲಿ ದಾಂಪತ್ಯದ ಕುರಿತಾದ ಜಿಜ್ಞಾಸೆಯನ್ನು ಹೀಗೆ ವೈವಿಧ್ಯಮಯ ಜೀವನದ ಕುರಿತಾದ ಚರ್ಚೆಗಳನ್ನು ಕಾಣಬಹುದು. ಹೊಸ್ತೋಟ ಮಂಜುನಾಥಭಾಗವತರ "ಮಾಯಾ ಕೋಲಾಹಲ"ದಲ್ಲಿ ಮುಕ್ತಿಯ ದಾರಿಯ ಬಗ್ಗೆ ವಿಚಾರಗಳಿವೆ.

ಕರ್ಮಭೂಮಿಯೊಳು ಸದ್ಧರ್ಮ ಸಾಂಗತ್ಯದಿ।

ನಿರ್ಮಲ ಜ್ಞಾನಗಳಿಸಿ।

ಮರ್ಮವರಿತು ಮುಕ್ತಿ ಪಡೆಯ ಬೇಕ

ಮರತ್ವ ಸಮ್ಮದ ಕೈವಲ್ಲ-ಕರ್ತಾರನ ಕಮ್ಮಟವಾದ

ಈ ಕರ್ಮಭೂಮಿಯಲ್ಲಿ ಮನಸ್ಸನ್ನು ಬಯಲುಗೊಳಿಸಿದಾಗಲೇ ನಿತ್ಯಮುಕ್ತಿ ಸಾಧ್ಯ. ಅರಿವು ಕುರುಹುಗೊಂಡಾಗ ಮುಕ್ತಿಯ ದಾರಿ ಕಾಣುತ್ತದೆ. ಎಂಬ ವಿಚಾರ ಅಲ್ಲಿ ಇದೆ. ಯಕ್ಷಗಾನದ ಅರ್ಥಧಾರಿಯಾಗಿ ಖ್ಯಾತಿಗಳಿಸಿರುವ ಶ್ರೀದೇರಾಜೆ ಸೀತಾರಾಮಯ್ಯನವರು ಪ್ರಸಂಗ ಸಾಹಿತ್ಯದ ಹಿನ್ನೆಲೆಯಲ್ಲಿ ರಾಮಾಯಾಣ ಹಾಗೂ ಮಹಾಭಾರತಗಳ ಕುರಿತು ಅದ್ಭುತವಾದ ಕೃತಿಗಳನ್ನು ರಚಿಸಿದ್ದಾರೆ ಕುರುಕ್ಷೇತ್ರಕ್ಕೊಂದು ಆಯೋಗಕೃತಿಯಲ್ಲಿ ಮಹಾಭಾರತದ ಪ್ರಾತ್ರಗಳ ವಿಶ್ಲೇಷಣೆ ನಡೆಸಿದ್ದಾರೆ. ನಮ್ಮ ಯಕ್ಷಗಾನ ಕವಿಗಳು ತಮ್ಮ ಪಾತ್ರಗಳ ಮೂಲಕ ಜೀವನ ದರ್ಮದ ಮಹತ್ವವನ್ನು ಸಾರಿದ್ದಾರೆ. ಮಾನವ ಧರ್ಮ ಎಲ್ಲಕ್ಕಿಂತ ದೊಡ್ಡದು. ಆತ್ಮಕಲ್ಯಾಣಕ್ಕೆ ಜೀವನ ದರ್ಮದ ಅರಿವು ಅಗತ್ಯ ಎಂಬುದೆಲ್ಲಾ ಪ್ರಸಂಗಗಳಿಂದ ತಿಳಿಯುತ್ತದೆ. ರಾಮಾಯಣದ ಪ್ರಸಂಗಗಳಲ್ಲಿ ಆದರ್ಶ ಮಾನವಧರ್ಮದ ಕುರಿತ ವಿಚಾರವಿದ್ದರೆ, ಮಹಾಭಾರತ ಪ್ರಸಂಗಗಳಲ್ಲಿ ಧರ್ಮರಾಜ್ಯ ಸ್ಥಾಪನೆಯ ಅಗತ್ಯ. ಅದರ ಸ್ಥಾಪನೆಗಾಗಿ ಪಟ್ಟಕಷ್ಟಗಳ ವಿವರವಿದೆ. ಭಾಗವತವೇ ಮುತಾಂದ ಪೌರಾಣಿಕ ಪ್ರಸಂಗಗಳಲ್ಲಿ ಮನುಷ್ಯ ಸ್ವಭಾವದ ಸರಳ ಸಹಜ ಚಿತ್ರಣದೊಂದಿಗೆ ಭಕ್ತಿಯ ಮಹತ್ವಕೆಯ ಸುಳಿವು ಇದೆ. ಹೀಗೆ ಪ್ರಸಂಗ ಸಾಹಿತ್ಯದಲ್ಲಿ ಆಧಾತ್ಮಿಕ ವಿಚಾರಗಳ ನಾನಾ ಸ್ತರಗಳನ್ನು, ನಾನಾ ಒಳಭೇದಗಳನ್ನು, ನಾನಾ ಮುನ್ನೋಟಗಳನ್ನು ಕಾಣಬಹುದು. ಆಧಾತ್ಮಿಕ ವಿಚಾರಗಳನ್ನು ಸಾಮಾನ್ಯ ಜನರಿಗೆ ತಿಳಿಸುವಲ್ಲಿ ಯಕ್ಷಕವಿಗಳು ಹಿಂದೆಬಿದ್ದಿಲ್ಲ ಎಂಬುದು ಪ್ರಸಂಗಗಳ ಅಧ್ಯಯನದಿಂದ ತಿಳಿದುಬರುತ್ತದೆ.

□

"ರುರು- ಪ್ರಮದ್ವರಾ"- ನೂತನ ಯಕ್ಷ ಪ್ರೇಮ ಕಾವ್ಯ

ಪುರಾಣ ಸೃಜನೆಯ ಕಾರ್ಯದಲ್ಲಿ ಯಕ್ಷಗಾನ ಸಾಹಿತ್ಯದ ಕೊಡುಗೆ ಅಪಾರ. ಪೌರಾಣಿಕ ಕಥೆಯನ್ನು ಆಧರಿಸಿ ರಚಿತವಾಗುವ ಪ್ರಸಂಗಗಳು ರಂಗಸ್ಥಳಕ್ಕೆ ಅಗತ್ಯವಾಗಿರುವ ಅಸ್ತಿ, ಮಜ್ಜೆಗಳನ್ನು ತುಂಬಿಸಿಕೊಳ್ಳುವ ಮೂಲಕ ಸುಪುಷ್ಟವಾಗಿ ಕಾಣಿಸಿಕೊಳ್ಳುತ್ತವೆ. ಪುರಾಣದ ಮೂಲ ವಸ್ತುವಿಗೆ ವಿನೂತನ ವಿಸ್ತಾರವನ್ನು ಆಕರ್ಷಕ ಆಯಾಮವನ್ನು ಕಲ್ಪಿಸಲಾಗುತ್ತದೆ. ಇಂತಹ ಪ್ರಯತ್ನಗಳಿಗೆ ಈಚಿನ ಸೇರ್ಪಡೆಯೆಂದರೆ ಹವ್ಯಾಸಿ ಭಾಗವತ, ರಂಗ ನಿರ್ದೇಶಕರಾಗಿರುವ ಶ್ರೀ ಸುಜಯೀಂದ್ರ ಹಂದೆಯವರಿಂದ ರಚಿತವಾಗಿರುವ "ರುರು-ಪ್ರಮದ್ವರಾ" ಎಂಬ ಪ್ರಸಂಗ ಕೃತಿ. ಮಹಾಭಾರತದ ಆದಿಪರ್ವದ ಮೊದಲ ಅಧ್ಯಾಯಗಳಲ್ಲಿ (8/26-11) ಬರುವ ರುರುವಿನ ಕಥೆಯಲ್ಲಿ ಮೊದಲಿಗೆ ಆತನ ಪ್ರೇಮಾಂಕುರ ಹಾಗೂ ಪ್ರೇಯಸಿಯ ಸಾವಿನ ವಿಚಾರ, ಆತನ ಪ್ರಲಾಪದ ವಿವರ ಬಂದಿದೆ. ಮಹಾಭಾರತದಲ್ಲಿ ಹೆಚ್ಚು ಒತ್ತು ಇರುವುದು ಮುಂದೆ ಬರುವ ಸರ್ಪಸತ್ರದ ಕುರಿತಾದ ಜಿಜ್ಞಾಸೆ ಹಾಗೂ ಅಹಿಂಸಾ ಪ್ರತಿಪಾದನೆಗೆ ರುರುವು ತನ್ನ ಪ್ರೇಯಸಿಯ ಸಾವಿಗೆ ಕಾರಣವಾಗಿರುವ ಸರ್ಪಜಾತಿಯೊಡನೆ ವೈರವನ್ನು ಸಾಧಿಸಿ ಹಿಂಸಾಮಾರ್ಗಿಯಾಗುತ್ತಾನೆ. ಡುಂಡುಭನೊಂದಿಗೆ ನಡೆದ ಸಂವಾದದಲ್ಲಿ ಅಹಿಂಸೆಯ ಮಹತ್ವವನ್ನು ಮನಗಂಡು ಧರ್ಮಮಾರ್ಗಿಯಾಗುತ್ತಾನೆ. ಆದರೆ ಸುಜಯೀಂದ್ರ ಹಂದೆಯವರು ತಮ್ಮ ಕೃತಿಯಲ್ಲಿ ಧರ್ಮ ಜಿಜ್ಞಾಸೆಗೆ ಹೊರಡದೆ ರುರುವಿನ ಆದರ್ಶಮಯ ಪ್ರೇಮವನ್ನು, ಪ್ರಿಯತಮೆಗಾಗಿ ಬದುಕಿನ ಅರ್ಧ ಆಯಸ್ಸನ್ನು ಕೊಡಮಾಡುವ ತ್ಯಾಗಕ್ಕೆ ಪ್ರಾಶಸ್ತ್ಯ ನೀಡಿದ್ದಾರೆ. ಆದ್ದರಿಂದ ಇದೊಂದು ಪ್ರೇಮಕಾವ್ಯವಾಗಿದೆ. ರಂಗಕ್ಕೆ ಅಗತ್ಯವಾಗುವ ಬದಲಾವಣೆಗಳನ್ನು, ನೂತನ ಆವಿಷ್ಕಾರಗಳನ್ನು ತರುವ ಮೂಲಕ ಪ್ರಸಂಗವು ಒಂದು ಉತ್ತಮ ರಂಗ ಕೃತಿಯಾಗುವಂತೆ ನೋಡಿಕೊಂಡಿದ್ದಾರೆ.

"ರುರು-ಪ್ರಮದ್ವರೆ"ಯ ಪ್ರಾರಂಭದಲ್ಲಿ ನಯಸೇನನ ಒಡ್ಡೋಲಗವನ್ನು, ಮುಂದೆ ಹಾಸ್ಯ ಪಾತ್ರವಾಗಿ ರುರುವಿನ ಗೆಳೆಯ ಋಷಿ ಕುಮಾರನ ಪಾತ್ರವನ್ನು ಹೊಸದಾಗಿ

ತಂದಿರುವುದರಿಂದ ಕೃತಿ ಯಕ್ಷಗಾನೀಯವಾಗಲು ಸಾಧ್ಯವಾಗಿದೆ. ಸಮಿತ್ತು ತರಲು ಹೋದ ರುರುವು ವನಸೌಂದರ್ಯ ನೋಡಿ ಬೆರಗಾಗುತ್ತಾನೆ. ವನದ ವರ್ಣನೆಯಲ್ಲಿ ಹಂದೆಯವರ ಕವಿತಾ ಶಕ್ತಿಯನ್ನು ಕಾಣಬಹುದು. 'ಉಡುಗಣದ ಮಧ್ಯದೊಳಿರುವ ಉಡುರಾಜನಂತಿರುವ' ಪ್ರಮದ್ವರೆಯನ್ನು ವನದಲ್ಲಿ ನೋಡಿದ ರುರು ಅವಳಿಗೆ ಮಾರು ಹೋಗುತ್ತಾನೆ. ಆಶ್ರಮಕ್ಕೆ ಮರಳಿ ಬಂದವನು ತಂದೆ ಪ್ರಮತಿಯಲ್ಲಿ ತನ್ನ ಪ್ರೀತಿ ವಿಚಾರ ತಿಳಿಸುತ್ತಾನೆ. ಮುಂದೆ ಪ್ರಮತಿ ಮಗನ ಬಯಕೆಯನ್ನು ಪೂರೈಸಲು ಪ್ರಮದ್ವರೆಯ ಸಾಕುತಂದೆಯಾದ ಸ್ಥೂಲಕೇಶನಲ್ಲಿಗೆ ಬಂದು "ಲಾಲಿಸೆನ್ನಯ ಮಾತ ಮುನಿ ಸ್ಥೂಲಕೇಶ ಬಾಲೆಯ ಮಮಸುತ ನಿಂಗೀಯೆ ತೋಷ" ಎನ್ನುತ್ತಾನೆ. ಇವರ ವಿವಾಹ ನಡೆಯ ಬೇಕಾದ ಹಿಂದಿನ ದಿನ ಪ್ರಮದ್ವರೆ ಗೆಳತಿಯೊಂದಿಗೆ ವನವಿಹಾರಕ್ಕೆ ಬರುತ್ತಾಳೆ. ವನದ ಸೊಬಗನ್ನು ನೋಡಿ–

"ನೋಡು ನೋಡು ವಿಮಲೆ ನೀನು ವನದ ಸೊಬಗನು
ಮೋಡಿ ಮಾಡಿ ಮನವ ಸೆಳೆವ ಕುಣಿವ ನವಿಲನು
ಜೋಡಿಯಾಗಿ ಮರದ ಮೇಲೆ ಕುಳಿತಗಿಳಿಗಳು
ನೋಡು ನೀರ ಮಧ್ಯೆ ಈಜುತಿರುವ ಮತ್ಸ್ಯವು
ನೋಡು ಬಾನಿನಲ್ಲಿ ರಂಗುಕಡೆದ ಚಿತ್ರವು

ಉಡುಗೆ ಹಸಿರು ತೊಟ್ಟು ಮೆರೆವ ವನದ ದೇವಿಯ" ಎಂದು ಹಾಡಿ ಕುಣಿದು ನಲಿಯುತ್ತಿರುವಾಗ ವಿಧಿಯ ಲೆಕ್ಕಣಿಕೆ ತಾನಾರು ಬದಲಿಸಲಾಗದೇ ಸರ್ಪದಂಶನದಿಂದ ಅಸುನೀಗುತ್ತಾಳೆ. ವಿಷಯ ತಿಳಿದ ರುರು ತಂದೆ ಎದುರು ಗೋಳಾಡುತ್ತಾನೆ. ಇಲ್ಲಿ ಹಂದೆಯವರು ನೀಲಾಂಬರಿ ಏಕತಾಳದಲ್ಲಿ ರಚಿಸಿದ ಪದ್ಯಭಾಗವು ಆಕರ್ಷಕವಾಗಿದ್ದು ರಸವೊಸರುವಂತಿದೆ. ಮುಂದೆ ಆತ ನಾಡುವ "ಕಂಡೆಯಾ ಜನಕ ನೀ ಗೊಂಡೆ ಸುಮಗಳ ಮೇಲೆ ಕೆಂಡಗಳ ಮಳೆಗೈಯಲೆಂತೊ" ಎಂಬ ಉಪಮೆ ಕೂಡ ಸಮರ್ಪಕವಾಗಿದೆ. ಪ್ರೀತಿಪಾತ್ರಳನ್ನು ಪಡೆಯಲೇಬೇಕೆಂದು ತಪವನಾಚರಿಸಲು ಡಿಂಡಿಕಾ ವನಕ್ಕೆ ಬರುತ್ತಾನೆ. ಪ್ರದರ್ಶನಕ್ಕೆ ಅಗತ್ಯವಾಗುವ ಬಣ್ಣದ ವೇಷಕ್ಕಾಗಿ ಅವಂತಿಯ ದೊರೆ ಪ್ರದೀಪ ಶಾಪಗ್ರಸ್ಥನಾಗಿ ಡಿಂಬಿಕ ಎಂಬ ರಾಕ್ಷಸ ರೂಪದಲ್ಲಿರುತ್ತಾನೆ. ರುರುವಿನ ಸ್ಪರ್ಶದಿಂದ ರಾಜತ್ವ ಪಡೆಯುತ್ತಾನೆ. ರುರುವಿನ ಘನಘೋರ ತಪಕ್ಕೆ ಮೆಚ್ಚಿ ಇಂದ್ರನು ರುರುವು ಅರ್ಧ ಆಯಸ್ಸನ್ನು ಪ್ರಿಯೆಗೆ ಧಾರೆಯೆರೆದರೆ ಅವಳು ಮತ್ತೆ ಬದುಕುತ್ತಾಳೆ ಎಂಬ ಸಂದೇಶವನ್ನು ದೇವ ಪುರುಷನ ಮೂಲಕ ಹೇಳಿ ಕಳಿಸುತ್ತಾನೆ. ಇದಕ್ಕೆ ಸಂತೋಷದಿಂದ ರುರು ಒಪ್ಪುತ್ತಾನೆ. ಯಮಲೋಕದಿಂದ ಪ್ರಮದ್ವರೆಯ ಪ್ರಾಣ ತರಲೋಸಗ ದೇವಪುರುಷನು ಆಕೆಯ ತಂದೆಯಾದ ಗಂಧರ್ವರಾಜ ವಿಶ್ವಾವಸುವನ್ನು ಒಪ್ಪಿಸಿ ಯಮಲೋಕಕ್ಕೆ ಬರುತ್ತಾರೆ.

ವಿಶ್ವಾವಸುವಿನ ಸ್ನೇಹಕ್ಕೆ ಕಟ್ಟು ಬಿದ್ದ ಯಮ ಒಪ್ಪಿಕೊಳ್ಳುತ್ತಾನೆ. ತಪೋವನದಲ್ಲಿ ಕಾಯ್ದಿರಿಸಿದ್ದ ಪ್ರಮದ್ವರೆಯ ಕಾಯವನ್ನು ರುರುವು ಸ್ಪರ್ಶಿಸಿ ತನ್ನ ಬದುಕಿನ ಅರ್ಧ ಭಾಗವನ್ನು ಧಾರೆಯೆರೆಯುತ್ತಾನೆ. ಆಕೆ ಬದುಕಿ ಅವರಿಬ್ಬರೂ ವಿವಾಹವಾಗಿ ಸಂತೋಷಿಸುತ್ತಾರೆ ಎಂಬಲ್ಲಿಗೆ ಪ್ರಸಂಗವು ಮಂಗಳಗೊಳ್ಳುತ್ತದೆ.

ಈ ಮೇಲಿನ ಕಥಾ ಹಂದರವನ್ನು ಶೃಂಗರಿಸಿ ಸೊಗಸುಗೊಳಿಸುವಲ್ಲಿ ಸುಜಯೀಂದ್ರ ಹಂದೆಯವರ ಪ್ರತಿಭೆ ಮಿಂಚಿದೆ. ಯಾವುದೇ ಪ್ರಸಂಗ ಯಶಸ್ವಿಯಾಗಲು ಉತ್ತಮ ಸಂವಾದಕ್ಕೆ, ಪರಸ್ಪರ ಮಾತುಕತೆಗೆ ಪೂರಕವಾಗುವ ಪದ್ಯರಚನೆ ಇರಬೇಕಾಗುತ್ತದೆ. ಈ ಕೃತಿಯಲ್ಲಿ ಹಲವೆಡೆ ಅಂತಹವು ಬಹು ಅರ್ಥವತ್ತಾಗಿ ಬಂದಿವೆ. ರುರುವಿನ ಗೋಳಾಟಕ್ಕೆ ಪ್ರಮತಿಯ ಸಮಾಧಾನದ ಮಾತನ್ನು ಇಲ್ಲಿ ಗಮನಿಸಬಹುದು. ಗುರುವಿನ ಗೋಳಾಟದ ಪ್ರತಿ ಸಾಲಿನಲ್ಲೂ 'ಮುದ್ದು ಸುಗುಣೆ' ಎಂಬುದು ಕೊನೆಯಲ್ಲಿ ಪುನರುಕ್ತಿಯಾಗಿ ಬರುತ್ತಿರುತ್ತದೆ. ಪ್ರಮತಿಯ ಸಮಾಧಾನದ ಮಾತುಗಳ ಪ್ರತಿಸಾಲಿನಲ್ಲಿ 'ಕಂದಾ ಕಂದಾ' ಎಂಬುದು ಪುನರುಕ್ತಿಯಾಗಿ ಬರುತ್ತಿರುತ್ತದೆ.

ರುರು : 'ಯಾಕೆಯಿಂತು ದೂರ ಸರಿದೆ । ಮುದ್ದು ಸುಗುಣೆ । ಮುನಿದು
ಯಾಕೆನ್ನ ತೊರೆದು ಪೋದೆ । ಮುದ್ದು ಸುಗುಣೆ ।
ಲೋಕದಿ ನಿನ್ನ ಪೋಲ್ವರಾರು । ಮುದ್ದು ಸುಗುಣೆ । ವಿರಹ
ಶೋಕಭಾವ ಸಹಿಸಲೆಂತು । ಮುದ್ದು ಸುಗುಣೆ ॥

ಪ್ರಮ : ನೋಯ ಬೇಡ ಮನದಿ ನೀನು। ಕಂದಾ ಕಂದಾ। ಇಂತು।
ಕಾಯವನ್ನು ತವಿಸ ಬೇಡ। ಕಂದಾ ಕಂದಾ।
ಮಾಯೆಯನ್ನು ಮೀರಲಳವೆ। ಕಂದಾ ಕಂದಾ। ಜಗದಿ।
ಕಾಯ್ವಕೊಲುವ ಬಗೆವ ವಿಧಿಯು। ಕಂದಾ ಕಂದಾ॥

(ಸುಭದ್ರಾ ಕಲ್ಯಾಣದಲ್ಲಿ ಸುಭದ್ರೆಯ ಪದ್ಯ 'ಏತಕ್ಕಿಂಥ ಬುದ್ಧಿ ಬಂತು ಕಂದಾ ಕಂದಾ।' ಎಂಬುದು ಇದೇ ಮಾದರಿಯಲ್ಲಿದೆ)

ಇಲ್ಲಿ ವೇಷಧಾರಿಗಳಾದವರು ಅಭಿನಯಿಸುವಾಗ ಕರುಣಾರಸವೊಸರುವಂತೆ ಅಭಿನಯಿಸಲು ಸಾಧ್ಯ. ಭಾಗವತರಿಗೆ ಹಾಡಲು ಕೂಡ ಇದು ಅನುಕೂಲಕರವಾಗಿದೆ. ಇದೇ ರೀತಿಯ ಇನ್ನೊಂದು ಸಂದರ್ಭವೆಂದರೆ ವಿಶ್ವಾವಸು ಹಾಗೂ ಯಮಧರ್ಮರಾಯನ ನಡುವೆ ನಡೆಯುವ ಮಾತುಕತೆಯಾಗಿದೆ. ಪಾತ್ರಧಾರಿಗೆ ಅರ್ಥವನ್ನು ಬೆಳೆಸಲು ವಿಫುಲ ಅವಕಾಶವನ್ನು ಹಂದೆಯವರು ಕೊಟ್ಟಿದ್ದಾರೆ. 'ಸುತೆಯಾದ ಪ್ರಮದ್ವರೆಯ ಪ್ರಾಣ ನೀಡಯ್ಯ' ಎಂದು ವಿಶ್ವಾವಸು ಕೇಳಿದರೆ, ಯಮಧರ್ಮನಿಗೆ ತೋಡಿ ಅಷ್ಟತಾಳದಲ್ಲಿ ಹೀಗೆ ಪದ್ಯ ರಚನೆಯಿದೆ.

ಏನಯ್ಯ ಭ್ರಾಂತಿ। ಏನಯ್ಯ॥ಪ॥

ಏನಿದು ಮರುಳಾಟ ತಳೆದಿರಿ ಹೀಗೆ।

ಮಾನಿನಿಯನು ಬದುಕಿಪುದೀಗ ಹೇಗೆ॥ಅ.ಪ॥

ಪ್ರಾಣಗತರುಗಳ ಮರಳಿ ಪಡೆಯಲುಂಟೆ।

ಹೀನವೃತ್ತಿಗಳೆನ್ನ ಕಜ್ಜದಲುಂಟೆ।

ಜ್ಞಾನವಂತರು ನೀವು ಪೇಳಲಿಕೇನುಂಟು

ಹಾನಿಗೈದರೆ ಮತ್ತೆ ಧರ್ಮವೆಲ್ಲುಂಟು॥

ಇಲ್ಲಿ ಯಮಧರ್ಮ ರಾಜನಿಗೆ ಮಾತಿನಲ್ಲಿ ಸ್ಪಷ್ಟತೆಯಿದೆ. ತಿಳಿದವರೇ ಧರ್ಮಮಾರ್ಗವನ್ನು ಮೀರಿ ನಡೆಯಬಾರದೆಂಬ ಹಿತವಚನ ಇದೆ. ಇವತ್ತಿನ ಕಾಲಧರ್ಮಕ್ಕೆ ಸರಿ ಹೊಂದುವಂತಹ ಮಾತುಕತೆಯಾಗಿದೆ. ದೊಡ್ಡವರೇ ಧರ್ಮವನ್ನು, ನೀತಿ ನಿಯಮವನ್ನು ಗಾಳಿಗೆ ತೂರಿದರೆ ಮತ್ತೆ ಧರ್ಮಕ್ಕೆ ನೆಲೆಯೇ ಇಲ್ಲ ಎಂಬುದು ಕವಿಯ ಸಂದೇಶವಾಗಿದೆ. ಇಂತಹ ಅನೇಕ ವಿಚಾರಗಳು ಈ ಪ್ರಸಂಗದಲ್ಲಿ ಬಂದಿವೆ.

ಪ್ರಸಂಗ ಸಾಹಿತ್ಯ ಕೃತಿಗಳಲ್ಲಿ ಜೀವನ ಧರ್ಮದ ಕುರಿತು ಅಲ್ಲಲ್ಲಿ ವ್ಯಾಖ್ಯೆಗಳು ಬರುತ್ತಿರುತ್ತವೆ. ಪ್ರೇಕ್ಷಕನಿಗೆ ಪಾತ್ರಗಳ ಮೂಲಕ ಕವಿ ಬದುಕಿನ ನಿಜ ದರ್ಶನವನ್ನು ಮಾಡುತ್ತಿರುತ್ತಾನೆ. ಪಾತ್ರಗಳ ಮೂಲಕ ಬರುವ ಇಂತಹ ಉಕ್ತಿಗಳು ಕಾವ್ಯದ ನಿಜವಾದ ಕಾರ್ಯವನ್ನು ಮಾಡುತ್ತವೆ. ಬದುಕಿನ ಅರ್ಥವನ್ನು, ಬಾಳಿಗೊಂದು ಸಂದೇಶವನ್ನು ನೀಡುವ ಪದ್ಯಗಳು ಸದಾಕಾಲ ಕೇಳುಗರಲ್ಲಿ ಉಳಿಯುತ್ತವೆ. "ರುರು-ಪ್ರಮದ್ವರೆ"ಯಲ್ಲಿ ಇಂತಹ ಮಾತುಗಳು ಅಲ್ಲಲ್ಲಿಗೆ ಬರುವುದನ್ನು ಗಮನಿಸಬಹುದು.

ಪ್ರಮತಿ : ಹುಟ್ಟು ಸಾವುಗಳೆಮ್ಮ ಕೈಯೊಳಗಿಲ್ಲ ಕೇಳು।

ಮೆಟ್ಟಿ ನಿಲ್ಲೆ ಬಪ್ಪುದು ದೋಷ।

ಕಟ್ಟು ಪಾಡುಗಳಲಿ ಸರಿವ ಜೀವನ ಚಕ್ರ

ಸೃಷ್ಟಿಯ ಗುಟ್ಟದು ನರನಾ॥

ಯಮಧರ್ಮರಾಯ : ಪುಟ್ಟಿದ ಜೀವಿಗೆ ಮರಣವು ಸರುವಥ।

ಕಟ್ಟಿರ್ಪುದು ನಿಜವೂ।

ಸೃಷ್ಟಿಯೊಳೀತೆರ ಆಯುವ ಕೊಟ್ಟರೆ

ನಿಷ್ಠುರ ಭುವಿಯೊಳಗೆ॥

ಯಕ್ಷ ಕವಿ ಸುಜಯೀಂದ್ರ ಹಂದೆಯವರು ಕಥಾ ಬಿತ್ತರಕ್ಕೆ ರಂಗದಲ್ಲಿ ಯಶಸ್ವಿಗೊಳಿಸಲು ಅಗತ್ಯವಾಗುವ ಒಡ್ಡೋಲಗ, ಹಾಸ್ಯ, ವನವಿಹಾರ, ಬಣ್ಣದ

ವೇಷ, ಯಮಲೋಕ ಪ್ರೇತಗಳ ಪ್ರವೇಶ, ಕೋಲಾಟ ಮುಂತಾದ ವೈವಿಧ್ಯಮಯ ಅಂಶಗಳನ್ನು ತರುವುದರ ಮೂಲಕ ನಾವಿನ್ಯತೆ ತಂದಿದ್ದಾರೆ. ಸರಸವಾದ ಪದ ರಚನೆ, ಹಾಡಲು ಒಗ್ಗುವಂತಿರುವ ಮಟ್ಟುಗಳ ಪ್ರಯೋಗ ಇಲ್ಲಿವೆ. ರುರು ಹಾಗೂ ಪ್ರಮದ್ವರೆಯರು ಯಕ್ಷಗಾನ ಇತಿಹಾಸದಲ್ಲಿ ಉಳಿಯುವಂತೆ ಪ್ರೇಮ ಹಾಗೂ ತ್ಯಾಗಗಳ ಸಮನ್ವಯವನ್ನು ಸಾಧಿಸಿದ್ದಾರೆ. ಎಲ್ಲಾ ಪಾತ್ರಗಳು ಸಜೀವವಾಗಿ ಬಂದಿದೆ. ಅತಿಯಾದ ಮಾತುಗಳಿಲ್ಲದೆ ಹಿತವಾದ ಮಾತುಗಳೇ ತುಂಬಿದೆ. ಪಂಪನ ಯೋಜನಗಂಧಿಯು ಹೇಳುವಂತೆ ಇಲ್ಲಿನ ಪ್ರಮದ್ವರೆ ಆಡುವ ಈ ಮಾತಿನಲ್ಲಿ ಸಹಜತೆ ಇದೆ.

ಸುಂದರಾಂಗನೆ ನಿನ್ನ ಮನದ ವಾಂಛಿತವನ್ನು ।

ಪೊಂದಿಸಲ್ಕಸದಳವು ತರಳೆ ಯಾಗಿಹೆನು।

ಬಂಧುರದಿ ಪಿತನ ಮನವೊಲಿಸಿದಡೆ ನೀ ಮುಂದೆ

ಚಂದದಿಂ ಕೂಡುವೆನು ಪ್ರೇಮ ಶರಧಿಯನು॥

ಇಲ್ಲಿನ ಮಾತುಗಳೆಲ್ಲ ಭಾರತೀಯ ಹೆಣ್ಣೊಂದು ಮೊದಲಿಗೆ ಮಾತನಾಡಿ, ಒಲಿಸಲು ಬಂದವನಿಗೆ ಆಡುವ ಮಾತಿನಂತೆ ಇದೆ.

'ರುರು-ಪ್ರಮದ್ವರೆ' ಹಂದೆಯವರ ಚೊಚ್ಚಲ ಯಕ್ಷಗಾನ ಪ್ರಸಂಗವಾಗಿದೆ. ಈ ಕೃತಿಗೆ ಹಿರಿಯ ಯಕ್ಷಕವಿ, ಅರ್ಥಧಾರಿ ಶ್ರೀ ಡಿ.ಎಸ್.ಶ್ರೀಧರರು ಮುನ್ನುಡಿಯ ಸೇಸೆಯನ್ನು ತಳಿದಿದ್ದಾರೆ. ಪ್ರಯೋಗದಲ್ಲಿ ಖಂಡಿತಾ ಯಶಸ್ವಿಯಾಗುವ ಕೃತಿಯೊಂದನ್ನು ನೀಡಿದ್ದಾರೆ. "ಯಕ್ಷಲೋಕದಲ್ಲಿ ಮೆರೆಯುವ ಎಲ್ಲಾ ಸಾಧ್ಯತೆಗಳನ್ನು ವಸ್ತುವಿನ ಒಳಗೆ ಹುದುಗಿಸಿಕೊಂಡ ಕಥೆಯಿದ್ದು ಸುಜಯೀಂದ್ರರ ಪದ್ಯಗಳ ಹೊರಾವರಣ ಲಭಿಸಿ ಬೆಳಕಿಗೆ ಬರುತ್ತಿದೆ". ಎಂಬ ಶ್ರೀಧರರ ಮಾತಿನಲ್ಲಿ ಸತ್ಯ ಅಡಗಿದೆ. ಹಂದೆಯವರು ಇಲ್ಲಿ ಸೃಷ್ಟಿಸಿರುವ ಪಾತ್ರಗಳಲ್ಲಿ ಸಹಜ ಸ್ವಭಾವವನ್ನು ಕಾಣಬಹುದು. ಆದ್ದರಿಂದ ಪ್ರೇಕ್ಷಕರಿಗೆ ಹತ್ತಿರವಾಗುತ್ತವೆ. ಪ್ರದರ್ಶನಕ್ಕೆ ಅಗತ್ಯವಾದ ಸೂಚನೆಗಳನ್ನು ಮೊದಲೇ ಕೊಟ್ಟಿರುವುದು ಹವ್ಯಾಸಿಗಳಿಗೆ ಅನುಕೂಲಕರ. ಶ್ರೀ ಸುಜಯೀಂದ್ರ ಹಂದೆಯವರ ನೇತೃತ್ವದ ಸಾಲಿಗ್ರಾಮ ಮಕ್ಕಳ ಮೇಳದ ಆಟಗಳು ಯಶಸ್ವಿಯಾಗಿರುವಂತೆ ಈ ಪ್ರಸಂಗದ ಪ್ರದರ್ಶನಗಳು ಜಯಬೇರಿ ಬಾರಿಸಲಿ ಎಂದು ಆಶಿಸೋಣ.

□

ಉತ್ತರ ಕರ್ನಾಟಕದ ರಂಗ ಸಂಪ್ರದಾಯಗಳು

ದ್ರಾವಿಡ ಜನ ವರ್ಗದ ಒಂದು ಸೀಳಾದ ಕನ್ನಡಿಗರು ಸಾಹಸಿಗಳೂ ಶೂರರು, ತ್ಯಾಗಬಲಿ ದಾನಕ್ಕೆ ಹೆಸರಾದವರು ಸಂಸ್ಕೃತಿ, ನಾಟ್ಯ, ಅಭಿನಯ, ವಾಸ್ತುಶಿಲ್ಪ, ಚಿತ್ರಗಾರಿಕೆಯೇ ಮುಂತಾದ ಕಲಾಪ್ರಕಾರಗಳಲ್ಲಿ ಸಿದ್ಧಹಸ್ತರು. ಮೂಲತಃ ಜನಪದ ಕಲೆಯಾದ ಯಕ್ಷಗಾನ ಬಯಲಾಟ ಕರ್ನಾಟಕದ ಗಂಡುಕಲೆಯೆಂದೇ ಕರೆಯಿಸಿಕೊಂಡಿದೆ. ಸಂಪ್ರದಾಯದ ಚೌಕಟ್ಟಿನಲ್ಲೇ ಬೆಳದು ಬಂದು ಈ ಕಲೆಯಲ್ಲಿ ಈ ನೆಲದ ಸಂಸ್ಕೃತಿಯಪಡಿಯಚ್ಚನ್ನು ಕಾಣಬಹುದು. ಜನಪದರ ಉತ್ಕೃಷ್ಟ ಸೃಜನಶೀಲತೆಗೆ ಯಕ್ಷಗಾನ ಬಯಲಾಟದಂತಹ ಪ್ರದರ್ಶಕ ಕಲೆಗಳು ವೇದಿಕೆಗಳಾಗಿವೆ. ಸಾಹಿತ್ಯ ಸಂಗೀತ ಬಣ್ಣಗಾರಿಕೆ, ಅಭಿನಯ, ನರ್ತನ, ಮುಂತಾದ ಕಲೆಗಳು ಇಲ್ಲಿ ಏಕತ್ರ ಸಂಧಿಸಿವೆ. ದಕ್ಷಿಣ ಕರ್ನಾಟಕದಲ್ಲಿ ಯಕ್ಷಗಾನವೆಂತಲೂ, ಉತ್ತರ ಕರ್ನಾಟಕದಲ್ಲಿ ಬಯಲಾಟವೆಂತಲೂ ಹೆಚ್ಚು ಪ್ರಚಲಿತವಿರುವ ಈ ಕಲೆ ಕರ್ನಾಟಕದ ಪ್ರಾತಿನಿಧಿಕ ಕಲೆಯಾಗಿದೆ. ವಿದ್ವಾಂಸರು ಕರಾವಳಿ ಹಾಗೂ ಮಲೆನಾಡಿನಲ್ಲಿ ಪ್ರಚಲಿತವಿರುವ ಯಕ್ಷಗಾನವನ್ನು ಪಡುವಲಪಾಯವೆಂತಲೂ ಬಯಲುಸೀಮೆಯ ಭಾಗದಲ್ಲಿರುವುದನ್ನು ಮೂಡಲಪಾಯವೆಂತಲೂ ಗುರುತಿಸಿದ್ದಾರೆ. ಕರಾವಳಿ ಹಾಗೂ ಮಲೆನಾಡಿನ ಭಾಗದಲ್ಲಿರುವ ಯಕ್ಷಗಾನದಲ್ಲಿ ಬಡಗುತಿಟ್ಟು, ಬಡಾಬಡಗು ತಿಟ್ಟು, ತೆಂಕುತಿಟ್ಟುಗಳೆಂಬ ಒಳಪ್ರಭೇದಗಳಿವೆ. ಅದೇ ರೀತಿ ಕೋಲಾರ, ಮೈಸೂರು, ಮಂಡ್ಯ, ಹಾಸನ ಮುಂತಾದ ಕಡೆಯಲ್ಲಿ ಪ್ರಚಲಿತವಿರುವ ಮೂಡಲಪಾಯ ಯಕ್ಷಗಾನದಲ್ಲಿ ಕೇಳಿಕೆ ಪುಟದ ಘಟ್ಟದ ಕೋರೆಗಳೆಂಬ ಉಪಪ್ರಭೇದಗಳೂ ಇವೆ.

ಉತ್ತರ ಕರ್ನಾಟಕದಲ್ಲಿ ಕಾಣಿಸಿಕೊಳ್ಳುವ ಬಯಲಾಟಗಳಲ್ಲಿ ದೊಡ್ಡಾಟ ಸಣ್ಣಾಟಗಳೆಂಬ ಮುಖ್ಯ ಪ್ರಭೇದಗಳನ್ನು ಕಾಣಬಹುದು. ದೊಡ್ಡಾಟ ಎಲ್ಲ ವಿಧಗಳಲ್ಲೂ ಉತ್ತರ ಕರ್ನಾಟಕದ ಬಯಲಾಟ ಪ್ರಕಾರಗಳಲ್ಲಿ ಹಿರಿಯ ಸ್ಥಾನವನ್ನು ಹೊಂದಿದೆ. ಬಳ್ಳಾರಿ ಜಿಲ್ಲೆಯಿಂದ ಮೊದಲ್ಗೊಂಡು ಉತ್ತರ ಕರ್ನಾಟಕದಲ್ಲಿ ವ್ಯಾಪಿಸಿರುವ ಬಯಲಾಟಗಳಲ್ಲಿ ಕಥಾವಸ್ತು ಹೆಚ್ಚಾಗಿ ಪೌರಾಣಿಕವಾಗಿರುತ್ತವೆ.

ರಾಮಾಯಣ, ಮಹಾಭಾರತ, ಭಾಗವತ, ಶಿವಪುರಾಣವೇ ಮುಂತಾದ ಪುರಾಣಗಳನ್ನೇ ಆಶ್ರಯಿಸಿ ಬಂದಿರುವ ವಿಭಿನ್ನ ಕಥೆಗಳನ್ನು ಬಯಲಾಟಗಳಲ್ಲಿ ಪ್ರದರ್ಶಿಸುತ್ತಾರೆ. ಇಲ್ಲಿ ಪದ್ಯದೊಂದಿಗೆ ಗ್ರಂಥಸ್ಥವಾದ ಸಂಭಾಷಣೆ ಇರುತ್ತದೆ. ಬಾಯಿಪಾಠ ಮಾಡಿ ನಟರು ಇದನ್ನು ರಂಗದಲ್ಲಿ ಆಡಿ ತೋರಿಸುತ್ತಾರೆ ಪ್ರಾಸ, ಅನುಪ್ರಾಸಗಳ ಧಾರಾಳ ಬಳಕೆ ಇಲ್ಲಿವೆ. ಇಲ್ಲಿನ ಕುಣಿತ ಬಹುವೀರವತ್ತಾದದ್ದು. ಯುದ್ಧದ ಸನ್ನಿವೇಶಗಳು ಅಡಕಗೊಂಡಿರುತ್ತವೆ. ಇಲ್ಲಿ ಸಾರಥಿಯೇ ಪಾತ್ರಗಳನ್ನು ಪ್ರೇಕ್ಷಕರಿಗೆ ಪರಿಚಯಿಸುತ್ತಾನೆ. ಈ ಬಗೆಯ ಕ್ರಮವು ನಾಮಾಂಕಿತವಾದ ಮಾತಾಗಿದ್ದು ದೀರ್ಘವಾಗಿ, ತಾರಕಸ್ವರದಲ್ಲಿ ಪೀಠಿಕಾರೂಪದಲ್ಲಿ ಬರುತ್ತದೆ. ಮಾತುಗಾರಿಕೆಯಲ್ಲಿ ಭಾವಾಭಿನಯಕ್ಕಿಂತ ಶಬ್ದಾಡಂಬರಕ್ಕೆ ಹೆಚ್ಚು ಮಹತ್ವ ಲಭಿಸಿದೆ. ಸಾರಥಿಯಾದವನು ಹಾಸ್ಯದ ಕೆಲಸವನ್ನು ಕೂಡ ನಿರ್ವಹಿಸುತ್ತಾನೆ. ಅವನಿಗೆ ಯಾವುದೇ ಕಟ್ಟುಪಾಡು ಇರುವುದಿಲ್ಲ. ಕುಣಿತವು ನಗೆ ತರಿಸುವಂತಹದು. ಅವನ ಹಾಸ್ಯದ ಮಾತುಗಳಲ್ಲಿ ಸ್ಥಳೀಕವಾದ ಅಂಶಗಳು ಗಾದೆಗಳು ನುಡಿಕಟ್ಟಗಳು ತುಂಬಿಕೊಂಡಿದ್ದು ಜನರನ್ನು ರಂಜಿಸುತ್ತವೆ. ಇಲ್ಲಿನ ಕುಣಿತ, ವೇಷಭೂಷಣವಾದ್ಯ ವಿಶೇಷಗಳಲ್ಲಿ ಒಂದು ಬಗೆಯ ಒರಟುತನ ಕಾಣುತ್ತದೆ. ಉತ್ತರ ಕರ್ನಾಟಕದ ಸೊಗಡು ದೊಡ್ಡಾಟದ ಪ್ರದರ್ಶನಗಳಲ್ಲಿ ಢಾಳಾಗಿ ಕಾಣುತ್ತದೆ. ಅಟ್ಟರ ಮೇಲೆ ನಡೆಯುವ ಪ್ರದರ್ಶನಗಳನ್ನು 'ಅಟ್ಟರಾಟ'ಗಳೆಂದು ಕರೆಯುತ್ತಾರೆ. ವೃತ್ತಿರಂಗ ಭೂಮಿ ಹಾಗೂ ಚಲನಚಿತ್ರಗಳಿಂದ ಇವತ್ತು ದೊಡ್ಡಾಟದ ಪ್ರದರ್ಶನಗಳು ಮೂಲೆ ಗುಂಪಾಗುತ್ತಿರುವುದು ಖೇದಕರ ಸಂಗತಿಯಾಗಿದೆ.

ಬಯಲಾಟದ ಹಾಡುಗಳಲ್ಲಿ ಗಣಪತಿಯ ಸ್ತುತಿಯ ನಂತರದ ಪದವಾಗಿ" ಪೊಡವಿಯೊಳು ಕುಡುಲೆನಿಯ ಒಡೆಯ ಭೀಮೇಶನ" ಎಂಬ ಅಂಕಿತ ಬರುವ ಸ್ತುತಿ ಬರುತ್ತದೆ. ಈ ಕುಡುತಿನಿ ಬಳ್ಳಾರಿ ಜಿಲ್ಲೆಯ ಕುರುಗೋಡು ಪ್ರದೇಶಕ್ಕೆ ಸೇರಿಕೊಂಡಿದೆ. ಇದೇ ಕುರುಗೋಡು ಸೀಮೆಯ ಸೋಮಸಮುದ್ರದ ಲಕ್ಷ್ಮೀನಾರಾಯಣ ದೇವಸ್ಥಾನದ ಕ್ರಿ.ಶ.1556ರ ಶಾಸದಲ್ಲಿ 'ತಾಳಮದ್ದಲೆ' ಸೇವೆಯ ಉಲ್ಲೇಖ ಬಂದಿದೆ. ಈ ಕಾರಣದಿಂದ ಬಳ್ಳಾರಿ ಸೀಮೆಯು ಬಯಲಾಟದ ಪ್ರದೇಶವಾಗಿ ಆಕಾಲಕ್ಕಾಗವೇ ಖ್ಯಾತವಾಗಿತ್ತೆಂದು ತಿಳಿಯುತ್ತದೆ. ಕುಡುತಿನಿ ಗ್ರಾಮದ ಹನುಮಂತ ಹೆಚ್ಚಾಗಿ ಬಯಲಾಟದವರ ಪಾಲಿಗೆ ಆರಾಧ್ಯ ದೇವರಾಗಿದ್ದಾನೆ. ಕುಡುತಿನಿ ಭೀಮೇಶನ ಅಂಕಿತವಿರುವ ಅನೇಕ ಪ್ರಸಂಗಗಳು ಕರ್ನಾಟಕದ ಗಡಿಭಾಗವಾದ ಕಲಬುರ್ಗಿ ಬೀದರ್, ವಿಜಯಪುರ, ಬೆಳಗಾವಿ, ಧಾರವಾಡಗಳಲ್ಲಿ ಪ್ರಚಾರದಲ್ಲಿವೆ. ದುಶ್ಯಾಸನ ಕಥಾ, ದ್ರೌಪದಿ ವಸ್ತ್ರಾಪಹರಣ, ಕೀಚಕವಧೆ, ಪಾಂಡುವಿಜಯ, ಶ್ರೀಕೃಷ್ಣಸಂಧಾನ ಮುಂತಾದ ದೊಡ್ಡಾಟಗಳು ಜನಮನ್ನಣೆ ಪಡೆದಿವೆ. ಇಡೀ ರಾತ್ರಿ ಇದರ ಪ್ರದರ್ಶನ ನಡೆಯುತ್ತದೆ. ಬಯಲಾಟದ 'ದೊಡ್ಡಾಟ'ಗಳಲ್ಲಿ ಎರಡು ಬಗೆಯ ಪಾತ್ರಗಳನ್ನು

ಕಾಣಬಹುದು. ಅವೆಂದರೆ ಸೌಮ್ಯ ಪಾತ್ರಗಳು–ಘೋರಪಾತ್ರಗಳು. ಇವಲ್ಲದೆ ಹಾಸ್ಯದ ಪಾತ್ರಗಳು ಸ್ತ್ರೀವೇಷದ ಪಾತ್ರಗಳು, ನಾರದ, ಆಂಜನೇಯ, ಋಷಿ, ಮುನಿ ಮುಂತಾದ ಹೆಚ್ಚು ಆಡಂಬರವಿಲ್ಲದ ಪಾತ್ರಗಳು 'ದೊಡ್ಡಾಟದಲ್ಲಿ' ಕಾಣಿಸುತ್ತವೆ. ರಾಮ, ಲಕ್ಷ್ಮಣ ಪಾಂಡವರು, ಹರಿಭಕ್ತರು, ವಿಭೀಷಣ, ಗಂಧರ್ವರು, ದೇವತೆಗಳು ಮುಂತಾದುವುಗಳು ಸೌಮ್ಯಪಾತ್ರವಾದರೆ, ಅಹಿರಾವಣ, ಮಹಿರಾವಣ, ದುಶ್ಯಾಸನ, ರಾವಣ, ಕೀಚಕ, ದುರ್ಯೋಧನ, ಕರ್ಣರಾಕ್ಷಸ ಪಾತ್ರಗಳು ಘೋರಪಾತ್ರಗಳ ವರ್ಗಕ್ಕೆ ಸೇರುತ್ತವೆ. ಹೀಗೆ ವೇಷಗಾರಿಕೆಯ ಮೂಲಕ ಪಾತ್ರಗಳ ಸ್ವಭಾವವನ್ನು ಹಾಗೂ ವ್ಯಕ್ತಿತ್ವವನ್ನು ಇಲ್ಲಿ ಬಿಂಬಿಸಲಾಗಿದೆ. ಇಲ್ಲಿನ ಹಿಮ್ಮೇಳದಲ್ಲಿ ವಿಜೃಂಭಣೆಯಿದೆ. ನಿಂತೇ ಹಾಡನ್ನು ಹಾಡುತ್ತಾರೆ. ವಾದ್ಯಗಾರರು ಅವರಿಗೆ ಸಹಕಾರವನ್ನು ನೀಡುತ್ತಾರೆ. ಬಯಲಾಟದ ವೇಷಧಾರಿಗಳ ಕಿರೀಟವು ಆಕರ್ಷಕವಾಗಿದ್ದು ಕನ್ನಡಿಯ ಚೂರುಗಳನ್ನು ಅಲ್ಲಲ್ಲಿ ಅಂಟಿಸಿರುತ್ತಾರೆ. ಅವು ಪ್ರದರ್ಶನದಲ್ಲಿ ಹೊಳಪನ್ನು ನೀಡುತ್ತವೆ. ಇಲ್ಲಿನ ಭುಜಕೀರ್ತಿಯೂ ಕೂಡಾ ವಿಶೇಷವಾಗಿದ್ದು ಪಾತ್ರಕ್ಕೆ ಮೆರುಗನ್ನು ತಂದು ಕೊಡುತ್ತದೆ. ಪಾತ್ರದ ಘನತೆ ಗೌರವಕ್ಕೆ ತಕ್ಕಂತೆ ಇದರ ಆಕಾರದಲ್ಲಿ ವ್ಯತ್ಯಾಸವಿರುತ್ತದೆ. ಬಯಲಾಟದ ಎದೆಹಾರವೂ ಕೂಡಾ ವೈವಿಧ್ಯಪೂರ್ಣವಾಗಿ ವಿವಿಧ ಆಕಾರದಲ್ಲಿ ಕಾಣಿಸಿಕೊಳ್ಳುತ್ತದೆ. ಕಿರೀಟ ಹಾಗೂ ಭುಜಕೀರ್ತಿಗೆ ಬಳಸುವ ವಸ್ತುಗಳನ್ನೇ ಇಲ್ಲೂ ಬಳಸುತ್ತಾರೆ. ಸೊಂಟ ಹಾಗೂ ಸೊಂಟದ ಕೆಳಭಾಗದಲ್ಲಿ ವೀರಗಾಸೆಯಂತಹ ಆಭರಣಗಳನ್ನು ಬಳಸುತ್ತಾರೆ. ಆಭರಣ ಧರಿಸುವ ಮೊದಲು ಪಾತ್ರದ ಸ್ವಭಾವಕ್ಕೆ ಅನುಸರಿಸಿ ಬಣ್ಣಬಣ್ಣದ ಬಟ್ಟೆಗಳನ್ನು ಧರಿಸುತ್ತಾರೆ. ಮೇಲ್ಭಾಗಕ್ಕೆ ಬಣ್ಣದ ಬಟ್ಟೆ ಬಳಕೆಯಾದರೆ ಕೆಳಭಾಗಕ್ಕೆ ಕೆಂಪು ಅಥವಾ ಕಪ್ಪು ಬಣ್ಣದ ಬಟ್ಟೆಯನ್ನು ಉಡುತ್ತಾರೆ. ರಾಕ್ಷಸರ ಪಾತ್ರಗಳು ಕಪ್ಪುಚೌರಿಯನ್ನು ಬಳಸುತ್ತವೆ. ಹೀಗೆ ದೊಡ್ಡಾಟ ವೇಷಗಾರಿಕೆ ವೈವಿಧ್ಯಮಯವಾಗಿದೆ ಹಾಗೂ ಆಕರ್ಷಕವಾಗಿದೆ.

ಉತ್ತರ ಕರ್ನಾಟಕ ಜನಪದ ರಂಗಭೂಮಿಯ ಇನ್ನೊಂದು ಪ್ರಕಾರವೆಂದರೆ ಸಣ್ಣಾಟ. ಇದನ್ನು ಕೆಲವೆಡೆ "ಡಪ್ಪಿನಾಟ" ಎಂದೂ ಕೂಡಾ ಕರೆಯುತ್ತಾರೆ. ದೊಡ್ಡಾಟದಲ್ಲಿ ಕಾಣುವ ವೀರವತ್ತಾದ ಕುಣಿತವಾಗಲಿ, ಆರ್ಭಟದ ಸದ್ದುಗದ್ದಲ, ಭವ್ಯವಾದ ವೇಷಭೂಷಣವಾಗಲಿ ಬಿರುಸಾದ ಕಾಳಗಗಳಾಗಲಿ ಇರುವುದಿಲ್ಲ. ಇಲ್ಲಿ ಹಿತಮಿತವಾದ ಕುಣಿತ ಮೃದುವಾದ ಸಂಭಾಷಣೆಯು ಇರುತ್ತವೆ. ಹಿರಿಯರ ಮನೆಯ ಮುಂಭಾಗದಲ್ಲಿ ಗುಡಿಯ ಬಾಗಿಲಲ್ಲಿ ಇದನ್ನು ಆಡುತ್ತಾರೆ. ಬೆಳಗಾವಿ, ಬಳ್ಳಾರಿ, ಬಾಗಲಕೋಟೆ, ಬಿಜಾಪುರ, ಧಾರವಾಡ, ಕಲಬುರ್ಗಿ, ಬೀದರ್, ರಾಯಚೂರು ಮುಂತಾದ ಕಡೆ ಅಸಂಖ್ಯ ಸಣ್ಣಾಟದ ಮೇಳಗಳು ಇವೆ. ಈ ಮೇಳಗಳು ವೃತ್ತಿಪರವಾಗಿದ್ದು ಸಂಗೀತಗಳೊಂದಿಗೆ ಜನರಬದುಕಿಗೆ

ಪ್ರಿಯವಾಗುವಂತೆ ಪ್ರಸಂಗವನ್ನು ಪ್ರದರ್ಶಿಸುತ್ತವೆ. ವಸ್ತು ಪೌರಾಣಿಕ, ಐತಿಹಾಸಿಕ, ಜಾನಪದ, ಸಾಮಾಜಿಕ ಹೀಗೆ ವೈವಿಧ್ಯಮಯವಾಗಿವೆ. ಸೂತ್ರಧಾರನಾಗಿ ಬರುವವನು ಹಾಡನ್ನು ಹಾಡುತ್ತಾನೆ. ಭಕ್ತಿಸಿದ್ಧಾಂತಕ್ಕೆ ಇಲ್ಲಿ ಆದ್ಯತೆ ಕಲಾವಿದರ ಸಂಖ್ಯೆ ಕಡಿಮೆಯಾದರೂ ಪ್ರಭಾವ ಹೆಚ್ಚಿದೆ. ಅಥಣಿ ಮಲ್ಲಯ್ಯ, ಲೋಕಾ;ಪೂರ ದೇಶಪಾಂಡೆ, ತಳೆವಾಡನಬಿ, ಮುಂತಾದವರು ಸಣ್ಣಾಟಗಳಲ್ಲಿ ಖ್ಯಾತಿ ಗಳಿಸಿದ್ದಾರೆ. ಶಿವಪುರಾಣದಿಂದ ಆರಿಸಿದ ಪ್ರಸಂಗಗಳಲ್ಲಿ ಶಿವಭಕ್ತಿಯ ಹಿರಿಮೆ ಇದೆ. ಭಾಗವತ, ರಾಮಾಯಣ, ಮಹಾಭಾರತದ ಪ್ರಸಂಗಗಳಲ್ಲಿ ವಿಷ್ಣು ಪಾರಮ್ಯವಿದೆ. ಸಾಮಾಜಿಕ ಪ್ರಸಂಗಗಳಲ್ಲಿ ಸಂಗ್ಯಾಬಾಳ್ಯ, ಸೋಮ್ರಾಯ್-ಭೀಮ್ರಾಯ್, ಕಡ್ಲೆಯಟ್ಟಿ ಕಾಶೀಬಾಯ್, ಬಸವಂತ-ಬಲವಂತ ಸೋಮಶೇಖರ ಚಂದ್ರಶೇಖರ, ರಾಧಾನಾಟ ಮುಂತಾದವು ಖ್ಯಾತಿಗೊಂಡಿವೆ. ಬೇಡರ ಕಣ್ಣಪ್ಪ ತಿರುನೀಲಕಂಠ, ಶಿವಪಾರಿಜಾತ, ರಾಧಾನಾಟ, ಹೇಮರೆಡ್ಡಿ ಮಲ್ಲಮ್ಮ ಮುಂತಾದುವು ಜನ ಮನ್ನಣೆ ಗಳಿಸಿವೆ.

ಉತ್ತರ ಕರ್ನಾಟಕದ ರಂಗಸಂಪ್ರದಾಯಗಳಲ್ಲಿ ಬಹುಜನಪ್ರಿಯವಾಗಿರುವುದು ಶ್ರೀಕೃಷ್ಣಪಾರಿಜಾತ ಕೆಲವರು ಇದನ್ನು "ಸಣ್ಣಾಟಗಳ ರಾಜ" ಎನ್ನುತ್ತಾರೆ. ಆದರೆ ಇದೊಂದು ಪ್ರತ್ಯೇಕ ಶೈಲಿಯೇ ಸರಿ. ಮೊದಲಿಗೆ ಅಪ್ಪರಾಳ ತಮ್ಮಣ್ಣನು ಪಾರಿಜಾತದ ಕಥೆಯನ್ನು ಯಕ್ಷಗಾನ ರೂಪದಲ್ಲಿ ಹಾಡುಗಬ್ಬವಾಗಿ ಬರೆದನು. ಆದರೆ ಅವನ ಕಾಲಕ್ಕಿಂತ ಅಂದರೆ 1860ಕ್ಕಿಂತಲೂ ಮೊದಲೇ ನೂರುವರ್ಷಕ್ಕಿಂತ ಹಿಂದಿನಿಂದಲೂ ಪಾರಿಜಾತದ ಕೃತಿಗಳಿರಬೇಕೆಂಬ ಅಭಿಪ್ರಾಯವೂ ಇದೆ. ಆದರೆ ಕುಲಗೋಡ ತಮ್ಮಣ್ಣನು ಪಾರಿಜಾತವನ್ನು ರಂಗಪ್ರದರ್ಶನ ಮಾಡಿ ಅದು ಚಿರಸ್ಥಾಯಿ ಆಗುವಂತೆ ಮಾಡಿದನು. ಸಾಕಷ್ಟು ಜನ ಕಲಾವಿದರು ಈ ರಂಗಪ್ರಕಾರವು ಖ್ಯಾತಿಗೊಳ್ಳಲು ಕಾರಣರಾಗಿದ್ದಾರೆ. ಇಲ್ಲಿ ಪಾತ್ರಗಳೇ ಹಾಡನ್ನು ಹಾಡುತ್ತವೆ. ರಂಗನಡೆಯಲ್ಲಿ ಸಣ್ಣಾಟವನ್ನೇ ಇದು ಹೋಲುವುದರಿಂದ ಇದನ್ನು "ಸಣ್ಣಾಟಗಳ ರಾಜ" ಎಂದೇ ಕರೆಯುತ್ತಾರೆ. ಇಲ್ಲಿ ಕೂಡಾ "ಗೊಲ್ಲತಿ" ಬರುತ್ತಾಳೆ. ಶ್ರೀಕೃಷ್ಣನ ಮೇಲಿನ ಭಕ್ತಿಯೇ ಇಲ್ಲಿ ಪ್ರಧಾನ ಅಂಗ. ಕೃಷ್ಣ ಸತ್ಯಭಾಮ ರುಕ್ಮಿಣಿ ಪಾತ್ರಗಳು ಇಲ್ಲಿ ಮುಖ್ಯ. ವೇಷಭೂಷಣ ದೊಡ್ಡಾಟದ ರೀತಿ ತೀರಾ ಪೌರಾಣಿಕವಿರುವುದಿಲ್ಲ. ಧೋತ್ರದ ಜುಬ್ಬ, ತಲೆಗೆ ಚೌರಿಯ ಮುಂಡಾಸಿನೊಂದಿಗೆ ಕೃಷ್ಣ ಬಂದರೆ ರುಕ್ಮಿಣಿ ಸತ್ಯಭಾಮೆಯರು ಸ್ತ್ರೀಯರ ಸಾಮಾನ್ಯ ಅಲಂಕಾರದೊಂದಿಗೆ ರಂಗಕ್ಕೆ ಬರುತ್ತಾರೆ. ಕೊರವಂಜಿ ಮಾತ್ರ ಕರಿಸೀರೆಯುಟ್ಟು ಬರುತ್ತಾಳೆ. ಭಾಗವತನು ಪ್ರಧಾನಪಾತ್ರವಾಗಿದ್ದು "ಧೂತಿ" ಎಂದು ಕರೆಯುತ್ತಾರೆ. ಆತ ಮೊದಲಿನಿಂದ ಕಡೆಯವರೆಗೂ ರಂಗದ ಮೇಲೆ ಇರುತ್ತಾನೆ. ಮಾತಿನ ಚಮತ್ಕಾರಗಳು ಗೂಢವಾಗಿರುವ ಆಧ್ಯಾತ್ಮಿಕ ವಿಚಾರಗಳು ವಿಶಿಷ್ಟವಾದ ಸಂಗೀತದ ಶೈಲಿ ಕೃಷ್ಣಪಾರಿಜಾತವನ್ನು ಜೀವಂತವಾಗಿ ಜನಪ್ರಿಯಗೊಳಿಸಿದೆ.

ಕುಲಗೋಡ ತಮ್ಮಣ್ಣನಷ್ಟೇ ಖ್ಯಾತಿ ಪಡೆದ ಕೃಷ್ಣ ಪಾರಿಜಾತ ಕಲಾವಿದರನ್ನು ಈ ರಂಗ ಸಂಪ್ರದಾಯದಲ್ಲಿ ಕಾಣಬಹುದು. ಕೌಜಲಗಿ ನಿಂಗವ್ವ ತನ್ನ ಹನ್ನೆರಡನೆಯ ವಯಸ್ಸಿನಿಂದ ಕೊನೆಯ ಉಸಿರಿರುವವರೆಗೂ ಈ ಕಲೆಯಲ್ಲಿ ತೊಡಗಿಕೊಂಡವಳು. ಈಚೆಗೆ ಐವತ್ತು ವರ್ಷಗಳಲ್ಲಿ ಅನೇಕ ಹೊಸಮೇಳಗಳು ಹುಟ್ಟಿಕೊಂಡಿವೆ. ಮಹಾಲಿಂಗಪುರದ ಕಂಪನಿ, ಟಕ್ಕಳಕಿ ವಿಠಲರ ಕಂಪೆನಿ, ಜಮಖಂಡಿ, ಅಪ್ಪಾವಾಲನ ಘಾಫರರ ಕಂಪನಿ, ಬಯಲುಹೊಂಗಲದ ಮಲ್ಲವ್ವನ ಮೇಳ, ಸಾರೊಟಗಿ ಮೇಳ ಮುಂತಾದುವು ಶ್ರೀಕೃಷ್ಣ ಪಾರಿಜಾತವನ್ನು ಉಳಿಸಿ ಬೆಳಸಿದ ಮೇಳಗಳಾಗಿವೆ. ಬರಗಿ ರಾಚಯ್ಯ, ಕೃಷ್ಣಾಜಿ ದೇಶಪಾಂಡೆ, ಅಪ್ಪಾಲಾಲ್, ಯಲ್ಲವ್ವ, ದೊಡ್ಡಪ್ಪನವರ ಶ್ರೀಮತಿ ಮಲ್ಲವ್ವ, ಮ್ಯಾಗೇರಿ ಮುಂತಾದವರು ಈ ರಂಗದ ಖ್ಯಾತ ಕಲಾವಿದರಾಗಿದ್ದಾರೆ.

ಕರಾವಳಿ ಹಾಗೂ ಮಲೆನಾಡಿನಲ್ಲಿ ಇಂದಿಗೂ ಜೀವಂತವಾಗಿರುವ ಜನಪ್ರಿಯವಾಗಿರುವ ಯಕ್ಷಗಾನಕ್ಕೂ ಹಾಗೂ ಉತ್ತರ ಕರ್ನಾಟಕದ ಬಯಲಾಟಕ್ಕೂ ಮೂಲತಃ ಅಂತಹ ವ್ಯತ್ಯಾಸವಿಲ್ಲ. ವಿಜಯನಗರ ಸಾಮ್ರಾಜ್ಯದ ಕಾಲಘಟ್ಟದಲ್ಲಿ ಜನ್ಮತಾಳಿದ ಈ ಕಲಾಪ್ರಕಾರ ಪ್ರಾದೇಶಿಕತೆಯಿಂದ ಭಿನ್ನ ದೃಷ್ಟಿಕೋನದಿಂದಾಗಿ ಪ್ರತ್ಯೇಕ ರಂಗಸಂಪ್ರದಾಯವಾಗಿ ಕಾಣಿಸಿಕೊಳ್ಳುತ್ತಾಯಿದೆ. ಕಳೆದ ಶತಮಾನದ ಆದಿಯಲ್ಲಿ ಯಕ್ಷಗಾನವನ್ನು ಆಟಬಯಲಾಟ ಎಂದೇ ಜನತೆ ಕರೆಯುತ್ತಿದ್ದರು. ಅಲ್ಲಿ ಕೂಡಾ ಹಿಮ್ಮೇಳದವರು ನಿಂತೇ ಹಾಡನ್ನು ಹಾಡುತ್ತಿದ್ದರು. ಭಾಗವತ ಮೃದಂಗ ವಾದಕ ಹಾಗೂ ಚಂಡೆ ಬಾರಿಸುವ ಹಿಮ್ಮೇಳದ ತಂಡ ಅಲ್ಲಿ ಈಗ ಎತ್ತರದ ಮಂಚದ ಮೇಲೆ ಕುಳಿತು ಕಾರ್ಯ ನಿರ್ವಹಿಸುತ್ತಾರೆ. ಬಡಗುತ್ತಿಟ್ಟನಲ್ಲಿ ಭಾಗವತ ತಾಳವನ್ನು ಹಿಡಿದರೆ, ತೆಂಕುತಿಟ್ಟನಲ್ಲಿ ಜಾಗಟೆಯನ್ನು ಹಿಡಿದು ಕೊಂಡಿರುತ್ತಾನೆ. ದೊಡ್ಡಾಟ, ಸಣ್ಣಾಟ ಹಾಗೂ ಮೂಡಲಪಾಯಗಳಲ್ಲಿ ಚಂಡೆಯ ಬಳಕೆಯು ಇರುವುದಿಲ್ಲ. ಕರಾವಳಿಯಲ್ಲಿ ಅಸಂಖ್ಯ ಯಕ್ಷಗಾನ ಮೇಳಗಳಿವೆ. ಅಲ್ಲಿನ ದೇವಸ್ಥಾನಗಳು ಹೆಚ್ಚಾಗಿ ಇವಕ್ಕೆ ಆಶ್ರಯ ನೀಡಿದೆ. ಜನತೆಯು ಹರಕೆಯ ಮೂಲಕ ಪ್ರದರ್ಶನ ನಡೆಯುವಂತೆ ನೋಡಿಕೊಳ್ಳುತ್ತಿದ್ದಾರೆ. ಈ ವ್ಯವಸ್ಥೆ ಕರ್ನಾಟಕದ ಉಳಿದ ಭಾಗದಲ್ಲಿ ಕಾಣಿಸುವುದಿಲ್ಲವಾದುದರಿಂದ ಇಲ್ಲಿನ ಮೇಳಗಳು ಸೊರಗಲು ಕಾರಣವಾಗಿವೆ. ಅದೇ ರೀತಿ ಯಕ್ಷಗಾನಕ್ಕೆ ಡಾ॥ಶಿವರಾಮಕಾರಂತರವರು ಪ್ರವೇಶಿಸಿದ್ದರಿಂದ ಶ್ರೀಮಂತ ಕಲೆಯಾಗಿ ಮಾರ್ಪಡಲು ಸಾಧ್ಯವಾಯಿತು. ಉತ್ತರ ಕರ್ನಾಟಕದ ಬಯಲಾಟಗಳಲ್ಲಿ ವಿದ್ಯಾವಂತರ ಪ್ರವೇಶ ಅಷ್ಟಾಗಿ ಇಲ್ಲದಿರುವುದು ಕೂಡಾ ಇದು ಸೊರಗಲು ಇನ್ನೊಂದು ಕಾರಣವಾಯಿತು. ವೃತ್ತಿ ರಂಗಭೂಮಿಗೆ ಮಾರುಹೋದ ಅಲ್ಲಿನ ಜನತೆ ಈ ಪಾರಂಪರಿಕ ಕಲೆಯನ್ನು ಮರೆಯುತ್ತಿರುವುದು ನಾಡಿನ ದೌರ್ಭಾಗ್ಯವೇ ಸರಿ.

ಯಕ್ಷಗಾನದಲ್ಲಿ ಆಡುವ ಗದ್ಯ ಆಶುರೂಪವಾಗಿದ್ದು ಕಲಾವಿದನು ಪರಿಣಿತಿ ಹೊಂದಬೇಕಾಗುತ್ತದೆ. ದೊಡ್ಡಾಟ ಸಣ್ಣಾಟ ಹಾಗೂ ಮೂಡಲಪಾಯಗಳಲ್ಲಿ ಕವಿಯೇ ಪದ್ಯದೊಂದಿಗೆ ಸಂಭಾಷಣೆಯನ್ನು ರಚಿಸಿರುತ್ತಾನೆ. ಪ್ರಾಸ ಅನುಪ್ರಾಸಗಳಿಂದ ಶೈಲೀಕೃತ ಸಂಭಾಷಣೆಯಿಂದ ಆಕರ್ಷಕವಾಗಿರುತ್ತದೆ. ಪಾತ್ರಗಳ ಗತ್ತುಗಮ್ಮತ್ತಿಗೆ ಅನುಗುಣವಾಗಿ ಅದು ವಿನ್ಯಾಸ ಹೊಂದಿಕೊಂಡಿರುತ್ತದೆ. ಕೃಷ್ಣ ಪಾರಿಜಾತ, ಸಣ್ಣಾಟಗಳಲ್ಲಿನ ಸಂಭಾಷಣೆಗಳು ಸರಳವಾಗಿದ್ದು ಆಧ್ಯಾತ್ಮಿಕ ಹೊಳಹಿನಿಂದ ಕೂಡಿರುತ್ತವೆ. ಸಾಮಾಜಿಕ ಪ್ರಸಂಗಗಳಲ್ಲಿ ವರ್ತಮಾನದ ಅಂಶಗಳು ಕವಿ ಸೇರಿಸಿರುತ್ತಾನೆ. ಪಾತ್ರಧಾರಿ ಅದಕ್ಕೆ ಅನುಗುಣವಾಗಿ ಮಾತನಾಡುವುದರಿಂದ ಅವನಿಗೆ ಯಕ್ಷಗಾನದಲ್ಲಿರುವಂತೆ ಸ್ವಾತಂತ್ರ್ಯವಿರುವುದಿಲ್ಲ. ಬಯಲಾಟದ ಎಲ್ಲಾ ರಂಗಸಂಪ್ರದಾಯಗಳು ಆರಾಧನಾ ಪರಿಯಿಂದ ಬಂದವು. ಧಾರ್ಮಿಕ ಕಾರ್ಯಗಳಲ್ಲಿರುವಂತೆ ರಂಗದ ಆರಂಭದಲ್ಲಿ ಹಾಗೂ ಕೊನೆಯಲ್ಲಿ ದೇವತಾ ಸ್ತುತಿ ಇರುತ್ತದೆ.

ಇದೊಂದು ದೇವರ ರಂಗಭೂಮಿ ಎಂಬ ನಂಬಿಕೆ ಇದೆ. ಕಥೆಗಳ ಮೂಲಕ ದೇವರ ಮಹಿಮೆಯನ್ನು ಸಾರುವ ಕಥೆಗಳು ಇಲ್ಲಿ ರಂಗದಲ್ಲಿ ಆಡಲ್ಪಡುತ್ತವೆ. ಭಗವಂತನ ಮಹಿಮೆಯನ್ನು ಹಾಡುವವನೇ "ಭಾಗವತ"ನಾಗುತ್ತಾನೆ. ಭಾಗವತ ಸಂಪ್ರದಾಯದ ಬೆಳವಣಿಗೆಗೆ ಕೂಡಾ ಈ ಹೆಸರು ಬರಲು ಹಿನ್ನಲೆಯಾಗಿರಬಹುದು. ಆದುದರಿಂದ ಯಕ್ಷಗಾನ ಆಟವನ್ನು ಭಾಗವತರಾಟ ದಶಾವತಾರ ಆಟ ಎಂದು ಕೂಡಾ ಕರೆಯುತ್ತಾರೆ. ವಿಷ್ಣು ಪಾರಮ್ಯವನ್ನು ಅಲ್ಲಿ ಸಾರಲಾಗುತ್ತದೆ. ಭಾಗವತರನ್ನು ಯಕ್ಷಗಾನದ ಮೇಳದ ಮೊದಲ ವೇಷಧಾರಿಯೆಂದೇ ಭಾವಿಸುವುದರಿಂದ ಉಳಿದ ಮುಖ್ಯಪಾತ್ರವನ್ನು ಎರಡನೇ ವೇಷಧಾರಿಯೆಂದು ಕೂಡಾ ಕರೆಯುವ ಬಳಕೆ ಬಂದಿದೆ. ಭಾಗವತ ರಂಗವನ್ನು ನಿರ್ದೇಶಿಸುತ್ತಾನೆ. ಪಾತ್ರಗಳ ಸಾಮರ್ಥ್ಯಕ್ಕೆ ಆತತಕ್ಕಂತೆ ಆತ ಕುಣಿಸುತ್ತಾನೆ. ಈ ಎಲ್ಲಾ ಅಂಶಗಳು ದೊಡ್ಡಾಟ ಯಕ್ಷಗಾನ ಮೂಡಲಪಾಯದಲ್ಲಿ ಸರ್ವೇ ಸಾಮಾನ್ಯವಾಗಿದೆ. ಯಕ್ಷಗಾನದಲ್ಲಿ ಬರುವ ವಿದೂಷಕನನ್ನು 'ಹಾಸ್ಯಗಾರ' ಎಂದು ಕರೆಯುತ್ತಾರೆ. ದೊಡ್ಡಾಟಗಳಲ್ಲಿ 'ಸಾರಥಿ' ಎಂದು ಕರೆಯುತ್ತಾರೆ. ಹೀಗೆ ಯಕ್ಷಗಾನಕ್ಕೂ ಬಯಲಾಟಕ್ಕೂ ಸಾಮ್ಯತೆ, ಕೆಲವು ವೈಶಿಷ್ಟ್ಯಗಳಿವೆ. ಬಯಲಾಟ ಎಲ್ಲಾ ಜಾತಿಯವರ ಸ್ವತ್ತಾಗಿದೆ. ಎಲ್ಲಾ ಸಮುದಾಯದವರು ಕೂಡಾ ಇದನ್ನು ಆಡುತ್ತಾರೆ. ಇಲ್ಲಿ ಮುಸ್ಲೀಂ ಸಮುದಾಯದವರೂ ಕೂಡಾ ಭಾಗವಹಿಸಿ ಕಲಾಪ್ರದರ್ಶನ ನೀಡುತ್ತಿರುವ ಸಾಕಷ್ಟು ಉದಾಹರಣೆಗಳು ಸಿಗುತ್ತವೆ. ಕಲಿತಿರುವ, ನುರಿತಿರುವ ಶಿಕ್ಷಕನಿಂದ ಪಾತ್ರಧಾರಿಗಳು ಕೂಡ ಮಾತನ್ನು ಕಲಿತು ಪ್ರದರ್ಶನ ನೀಡುತ್ತಾರೆ. ಊರಿಗೆ ಊರೇ ಬಯಲಾಟದ ಪ್ರದರ್ಶನದಲ್ಲಿ ಬಂದು ಒಂದಾಗುತ್ತಾರೆ. ಸಾಮಾನ್ಯ ವರ್ಗ ಕೂಡಾ ಅಂದು ರಾಜರಾಗಿ, ಮಂತ್ರಿಯಾಗಿ ರಂಗದಲ್ಲಿ ಮೆರೆಯುವಂತಹ

ಅವಕಾಶ ದೊರೆಯುತ್ತದೆ. ದೈನಂದಿನ ಭಾವ ಬದುಕಿಗಿಂತ ಭಿನ್ನವಾದ ಭಾವವನ್ನು ಭಾಷೆಯನ್ನು ರಂಗದಲ್ಲಿ ತೋರಲು ದೊಡ್ಡಾಟ ಸಣ್ಣಾಟಗಳು ಅವಕಾಶವನ್ನು ಕಲ್ಪಿಸುತ್ತವೆ. ಜನರ ಬದುಕು ಸುಂದರವಾಗಲು ಪುರಾಣದ ಅಂಶ ತಿಳಿದುಕೊಳ್ಳಲು ಮೌಲ್ಯಯುತವಾದ ಬಾಳನ್ನು ನಡೆಸಬೇಕೆಂಬ ಸಂಕಲ್ಪ ತೊಡಲು ಬಯಲಾಟ ಕಾರಣವಾಗುತ್ತದೆ. ತಂದೆತಾಯಿಗಳಲ್ಲಿ, ಹಿರಿಯರಲ್ಲಿ ಗೌರವ ತೋರಿಸಬೇಕೆಂಬ ವಿಚಾರವನ್ನು, ಸತ್ಯವನ್ನೇ ನುಡಿದರೆ ಕೊನೆಯಲ್ಲಿ ಜಯ ಗಳಿಸುತ್ತದೆ ಎಂಬ ನಂಬಿಕೆಯನ್ನು, ಪರಸ್ಪರ ಪ್ರೀತಿ ವಿಶ್ವಾಸದಿಂದ ಬದುಕಬೇಕೆಂಬ ಪಾಠವನ್ನು ಈ ಬಯಲಾಟ ರಂಗ ಸಂಪ್ರದಾಯವು ಕಲಿಸಿ ಕೊಟ್ಟಿದೆ. ಇದಕ್ಕಾಗಿ ಕನ್ನಡಿಗರೆಲ್ಲರೂ ಯಕ್ಷಗಾನ ಬಯಲಾಟಕ್ಕೆ ಧನ್ಯರಾಗಬೇಕಾಗಿದೆ. ಇದನ್ನು ಉಳಿಸಿ ಬೆಳೆಸಬೇಕಾಗಿದೆ.

□

ಭಾಗ 2

ಅನಕೃ ಕಾದಂಬರಿಗಳಲ್ಲಿ ಕಲಾಬದುಕಿನ ಚಿತ್ರಣ

ಕಳೆದ ಶತಮಾನದಲ್ಲಿ ಕನ್ನಡಿಗರ ಸಾಂಸ್ಕೃತಿಕ ಬದುಕು ತಾಕಲಾಟಗಳಿಂದ ತಲ್ಲಣಗಳಿಂದ ಕೂಡಿತ್ತು. ವಸಾಹತುಶಾಯಿಯ ವಿರುದ್ಧ ಹೋರಾಟ, ಸ್ವಾತಂತ್ರ ಪಡೆಯಬೇಕೆಂಬ ಹಂಬಲ, ಮಕ್ಕಳಿಗೆ ವಿದೇಶಿ ಶಿಕ್ಷಣ ಕೊಡಿಸಬೇಕೆಂಬ ವ್ಯಾಮೋಹ, ಪರಂಪರೆ ಹಾಗೂ ಹೊಸತನಗಳ ತಿಕ್ಕಾಟ, ನಗರ ಜೀವನ ಪಡೆದುಕೊಳ್ಳುತ್ತಿರುವ ಹೊಸ ಬಗೆಯ ವಿನ್ಯಾಸ, ಮಸುಕಾಗುತ್ತಿರುವ ಆತ್ಮಾಭಿಮಾನ, ಹಣ ಕಳಿಕೆಯು ಬದುಕಿನಲ್ಲಿ ಗಳಿಸಿದ ಪ್ರಾಧಾನ್ಯತೆ ಮುಂತಾದವೆಲ್ಲ ಸೂಕ್ಷ ಜನರಿಗೆ, ಸಂವೇದನಾ ಶೀಲರಿಗೆ ಸವಾಲನ್ನೊಡ್ಡುತ್ತಿದ್ದವು. ಅನಕೃ ಅವರ ಬಾಲ್ಯ ಹಾಗೂ ಯೌವ್ವನದ ದಿನಗಳು ಈ ಹಿನ್ನೆಲೆಯಲ್ಲಿ ರೂಪಿತವಾದದ್ದು. ಅನಕೃ ಅವರು ಜನಿಸಿದ್ದು (9–5–1908) ಸುಸಂಸ್ಕೃತ ಮನೆತನದಲ್ಲಿ. ಅವರ ತಂದೆ ಕಂದಾಯ ಇಲಾಖೆಯಲ್ಲಿ ಒಳ್ಳೆಯ ಉದ್ಯೋಗದಲ್ಲಿದ್ದರು. ಅವರಿಗೆ ಉತ್ತಮ ವಿದ್ಯೆಗಳಿಸುವ ಎಲ್ಲಾ ಅವಕಾಶಗಳು ಇದ್ದವು. ಆದರೆ 'ಬದುಕಿನ ಪಾಠಶಾಲೆ'ಗೆ ತನ್ನನ್ನು ಒಡ್ಡಿಕೊಂಡ ಅನಕೃ ಅರ್ಧಕ್ಕೆ ಕಾಲೇಜು ಶಿಕ್ಷಣ ನಿಲ್ಲಿಸಿ ಸಾಹಿತ್ಯ, ಸಂಗೀತ, ನಾಟಕ, ಪತ್ರಿಕೋದ್ಯಮ ಮುಂತಾದ ವಿವಿಧ ರಂಗಗಳಲ್ಲಿ ತೊಡಗಿಸಿಕೊಂಡರು. ಆ ಕಾಲದ ಶ್ರೇಷ್ಠ ಪ್ರತಿಭಾವಂತರಾದ ಡಿ.ವಿ.ಗುಂಡಪ್ಪ, ಶಿವರಾಮಕಾರಂತ, ಗೊರೂರು ರಾಮಸ್ವಾಮಿ ಅಯ್ಯಂಗಾರ್, ತ.ರಾ.ಸು., ತಿ.ತಾ.ಶರ್ಮ, ನಿರಂಜನ, ಬಸವರಾಜ ಕಟ್ಟೀಮನಿ, ಮುಂತಾದವರೆಲ್ಲಾ ಇದೇ ಮಾದರಿಯಲ್ಲಿ 'ಬದುಕನ್ನು ಪಾಠಶಾಲೆ'ಯಾಗಿ ಸ್ವೀಕರಿಸಿದವರು. ಅಂದಿನ ಸಮಾಜದಲ್ಲಿ ಅಸಂಗತಗಳು, ಸಾಮಾಜಿಕ ತಿಕ್ಕಾಟಗಳು, ಜಡ್ಡುಗಟ್ಟಿದ ಮೌಲ್ಯಗಳು, ಹಣಕ್ಕಾಗಿ ಕೀರ್ತಿಗಾಗಿ ಹಪಹಪಿಕೆಗಳು, ವೈಯಕ್ತಿಕ ಹಿತಾಸಕ್ತಿಗಾಗಿ ದ್ವೇಷಸಾಧನೆಗಳು ಹೀಗೆ ನಾನಾ ಬಗೆಯ ಓರೆಕೋರೆಗಳಿದ್ದವು, ಅನಕೃ ತಮ್ಮ ಸುತ್ತಲಿನ ಪರಿಸರದಲ್ಲಿ

ನಡೆಯುತ್ತಿರುವ ಈ ವಿದ್ಯಮಾನಗಳನ್ನು ತೆರೆದ ಕಣ್ಣಿನಿಂದ ನೋಡುತ್ತಾ, ಸೂಕ್ಷ್ಮ ಸಂವೇದನೆಯ ಮೂಲಕ ತಮ್ಮ ಕಾದಂಬರಿಗಳಲ್ಲಿ ಪಡಿ ಮೂಡಿಸಿದ್ದಾರೆ. ಅವರ ಉದಯರಾಗ, ಸಂಧ್ಯಾರಾಗ, ಪ್ರತಿಬಿಂಬ, ನಟಸಾರ್ವಭೌಮ, ಅಭಿಮಾನ, ಸಾಹಿತ್ಯರತ್ನ, ಭುವನಮೋಹಿನಿ, ಕಲಾವಿದ ಮುಂತಾದ ಕಾದಂಬರಿಗಳಲ್ಲಿ ಕಲಾವಿದರ ಬದುಕಿಗೆ ಸಂಬಂಧಿಸಿದ ನೈಜ ಚಿತ್ರಣಗಳನ್ನು ಕಾಣಬಹುದು. ಸಾಹಿತಿ, ಕಲೆಗಾರ, ನಟ, ನೃತ್ಯಗಾರ ಮುಂತಾದ ಅವರ ಪಾತ್ರಗಳು ಇಲ್ಲಿ ಬಂದಿದ್ದು ಸಮಾಜದೊಂದಿಗಿನ ಅವರ ಸಂಬಂಧದ ಬಗ್ಗೆ ಕಲೆಯ ಕುರಿತಾದ ಅವರ ತುಡಿತದ ಬಗ್ಗೆ ಹಾಗೂ ಅನಕೃ ಅವರ ಕಲಾಧೋರಣೆಯ ಬಗ್ಗೆ ಅನೇಕ ಒಳನೋಟಗಳು ಇಲ್ಲಿ ದೊರೆಯುತ್ತವೆ.

ಚಿತ್ರಕಲಾವಿದನೊಬ್ಬನ ಏಳು ಬೀಳಿನ ಬಗ್ಗೆ ಇರುವ ಅವರ 'ಉದಯರಾಗ' ಮೊದಲಿಗೆ ಪ್ರಕಟವಾದದ್ದು 1934ರಲ್ಲಿ. ವಿಶ್ವಕವಿ ರವೀಂದ್ರರು ಮೈಸೂರಿಗೆ ಬಂದಿದ್ದಾಗ ಅವರ ಪ್ರಭಾವಕ್ಕೆ ಒಳಗಾದ ಅನಕೃ ಶಾಂತಿ ನಿಕೇತನಕ್ಕೆ ಕಲಿಕೆಗಾಗಿ ತೆರಳಿ ಸ್ವಲ್ಪ ಕಾಲ ಅಲ್ಲೇ ಇದ್ದರು. ಅಲ್ಲಿ ಅವರಿಗೆ ಖ್ಯಾತ ಚಿತ್ರಕಲಾವಿದ ನಂದಲಾಲ ಬಸು ಅವರ ಗೆಳೆತನ ಲಭಿಸುತ್ತದೆ. ಶಾಂತಿನಿಕೇತನದಲ್ಲಿ ಅವರು ಗಳಿಸಿಕೊಂಡ ಅನುಭವ ಹಾಗೂ ಕಲಾವಿದರ ಒಡನಾಟದ ಫಲವಾಗಿ ಕಲಾ ಬದುಕಿನ ಚಿತ್ರ ಕಟ್ಟಿಕೊಡಲು ಸಾಧ್ಯವಾಗುತ್ತದೆ. ಅಲ್ಲಿಗೆ ಹೋದದ್ದರಿಂದ ಅನಕೃ ಅವರಿಗೆ ಶಿಕ್ಷಣದಲ್ಲಿ ಪದವಿ ದೊರೆಯಲಿಲ್ಲ. ಆದರೆ ಬದುಕಿನ ಜ್ಞಾನ, ಕಲಾಸ್ವಾದನದ ಪರಿ, ಜಾಗ್ರತವಾದ ಕನ್ನಡ ಅಭಿಮಾನ, ಶ್ರೇಷ್ಠ ಕಲಾವಿದರುಗಳ ಸಹಚರ್ಯ ಮುಂತಾದುವು ದೊರಕಿದವು. ಅನಕೃ 'ಉದಯರಾಗ'ವನ್ನು ತಮ್ಮ ಇಪ್ಪತ್ತಾರನೆಯ ವಯಸ್ಸಿನಲ್ಲೇ (1934) ಬರೆದಿದ್ದರೆಂಬುದನ್ನು ಮರೆಯಬಾರದು. ಬೆಂಗಳೂರಿನ ಹೊಟೇಲ್ ಒಂದರ ಮಾಣಿಯಾಗಿದ್ದ ಹುಟ್ಟು ಕಲಾವಿದನೊಬ್ಬ ಬೆಳಕಿಗೆ ಬಂದು ಎತ್ತರಕ್ಕೆ ಏರಿ ಕೊನೆಗೆ ದುಶ್ಚಟದ ಫಲವಾಗಿ ಅಧಃಪತನಗೊಳ್ಳುತ್ತಾನೆ. ಸಾಮಾನ್ಯ ವ್ಯಕ್ತಿಯಲ್ಲಿ ಅಸಾಮಾನ್ಯ ಪ್ರತಿಭೆ ಅಡಗಿರುವ ಅಂಶ ಈ ಕಾದಂಬರಿಯಲ್ಲಿದೆ.

ಮಾನವ ದುರ್ಬಲತೆಗೆ ಅಧೀನವಾಗಿ ತನ್ನ ದಿವ್ಯಶಕ್ತಿಯನ್ನು ನೀಗಿಕೊಳ್ಳದಂತೆ ಅವನನ್ನು ಮೇಲಕ್ಕೆ ಎತ್ತಿ ಹಿಡಿಯುವ ಮಹಾಶಕ್ತಿ 'ಅನುಕಂಪ'ಕ್ಕಿದೆ ಎಂದು ಅನಕೃ ಅವರೇ ಮುನ್ನುಡಿಯಲ್ಲಿ ಹೇಳಿಕೊಂಡಿದ್ದಾರೆ. ಇಲ್ಲಿ ಗೆಳೆಯನ ಅನುಕಂಪದ ಮಹಾಶಕ್ತಿ ಆ ಅಸಾಮಾನ್ಯ ಪ್ರತಿಭಾವಂತ ಮಾಣಿಯನ್ನು ಮೇಲಕ್ಕೆ ಎತ್ತುತ್ತದೆ. ದೌರ್ಬಲ್ಯಗಳು ಸಹಜ ಆದರೆ ಅದನ್ನು ಅರಿತು ತಿದ್ದಿಕೊಂಡಾಗ ಬದುಕು ಹಸನಾಗುತ್ತದೆ. ಅನಕೃ ಅವರು ಇದಕ್ಕೆ ಉದಾಹರಣೆಯಾಗಿ ಬುದ್ಧ, ಯೇಸು, ರಾಮ, ಕೃಷ್ಣ, ಗಾಂಧಿ,ಕಬೀರ ಮುಂತಾದವರ ಉದಾಹರಣೆ ನೀಡುತ್ತಾರೆ.

ಪಾಪಿ ಎಂದು ಒಬ್ಬರನ್ನು ಕರೆದು ಪ್ರಪಾತಕ್ಕೆ ತಳ್ಳುವುದು ಸರಿಯಲ್ಲ ಎಂಬುದೇ ಕಾದಂಬರಿಕಾರರ ನಿಲುವಾಗಿದೆ. ಚಿತ್ರಕಲಾವಿದ ಮಣೀಂದ್ರ (ಮಾಣಿ) ಗೆಳೆಯ ನೀಲರಂಜನನ ಸ್ನೇಹ ಹಸ್ತದಿಂದ ಸರಿದಾರಿಗೆ ಮರಳಿ 'ಉದಯರಾಗ'ವನ್ನು ಕೇಳಿಕೊಳ್ಳುವುದೇ ಕಥಾವಸ್ತುವಾಗಿದೆ. ಕಲೆಗೆ ಸಂಬಂಧಿಸಿದಂತೆ ಅನಕೃ ಅವರ ವಿಚಾರಧಾರೆಗಳು ಈ ಕಿರುಕಾದಂಬರಿಯಲ್ಲಿ ಇಡಿಕಿರಿದಿವೆ. ಕಲಾವಿದರ ನಡುವೆ ಇರುವ ಅಸೂಯೆ, ನಿಜವಾದ ಗುರುವಿಗೆ ಶಿಷ್ಯನ ಮೇಲೆ ಇರುವ ಪ್ರೀತಿ, ಪ್ರತಿಫಲ ಬಯಸದ ಸ್ನೇಹಶೀಲತೆ ಕೊಡುವ ಶಕ್ತಿ ಮುಂತಾದ ವಿಚಾರಗಳು ಇಲ್ಲಿವೆ. ಸಂಗೀತ ಪರಮೋಚ್ಚ ಕಲೆ ಎನ್ನುವ ಅನಕೃ ಮನಸ್ಸಿಗೂ ಆನಂದಕ್ಕೂ ಸೇತುವೆ ಕಟ್ಟುವ ಕೆಲಸವನ್ನು ಕಲೆ ಮಾಡುತ್ತದೆ ಎನ್ನುತ್ತಾರೆ. ಎಲ್ಲಾ ಕಲೆಗಳು ಆನಂದವನ್ನು ಅನುಭವಿಸುವ ಯೋಗ್ಯತೆಯನ್ನು ಮನಸ್ಸಿಗೆ ಉಂಟು ಮಾಡಿಕೊಡುತ್ತವೆ ಎಂದು ಇಲ್ಲಿ ತಿಳಿಸಿದ್ದಾರೆ.

'ಉದಯರಾಗ'ರಚಿಸಿ ಮೂವತ್ತು ವರ್ಷಗಳ ನಂತರ ಬರೆದಿರುವ ಕಾದಂಬರಿ 'ಕಲಾವಿದ'ನಲ್ಲಿ ಇನ್ನೊಬ್ಬ ಚಿತ್ರಕಾರನ ಜೀವನದ ಇನ್ನೊಂದು ಮಗ್ಗುಲಿನ ಪರಿಚಯವಿದೆ. ಹರ್ಷ ಎನ್ನುವ ಬೆಂಗಳೂರಿನ ಕಲಾವಿದ ಮುಂಬಯಿಗೆ ಉನ್ನತ ಚಿತ್ರಕಲಿಕೆಗಾಗಿ ತೆರಳುತ್ತಾನೆ. ಅಲ್ಲಿ ಗುರ ರಾಮ್‌ಬಾಯ್ ದೇಸಾಯಿಯವರಲ್ಲಿ ಚಿತ್ರಕಲೆ ಕಲಿಯುತ್ತಿರುವಾಗಲೇ ಅವರ ಶಿಷ್ಯೆ ಮಹತ್ವಾಕಾಂಕ್ಷಿಯಾದ ಸುನಾಲಿನಿಯ ಚಕ್ರವ್ಯೂಹದಲ್ಲಿ ಸಿಲುಕುತ್ತಾನೆ. ತನ್ನ ತಪ್ಪಿನ ಅರಿವಾಗುವಷ್ಟರಲ್ಲಿ ಆಗಬಾರದ ಅವಘಡ ನಡೆದಿರುತ್ತದೆ. ಯೋಗಿ ಪುರುಷನಾಗಬೇಕಿದ್ದ ಹರ್ಷ ಯೋಗಭ್ರಷ್ಟನಾಗಿ ಅಲೆಯುತ್ತಿರುವುದರೊಂದಿಗೆ ಕಾದಂಬರಿ ಮುಕ್ತಾಯವಾಗುತ್ತದೆ. ಇಲ್ಲಿ ಕಲೆಗೆ ಸಂಬಂಧಿಸಿದಂತೆ ಎರಡು ವರ್ಗವಿದೆ. ಹೊಟ್ಟೆಪಾಡನ್ನು ಮರೆತಾದರೂ ಲಲಿತ ಕಲೆಗಳ ಉತ್ಕೃಷ್ಟತೆಗೆ ಶ್ರಮಿಸಬೇಕೆಂಬ ಅಭಿಪ್ರಾಯವುಳ್ಳ ಸುಬೋಧ ಗಂಗೂಲಿ, ರಾಮಾಭಾಯಿದೇಸಾಯಿ, ರೇಣು ಮುಂತಾದವರಿದ್ದಾರೆ. ಇನ್ನೊಂದೆಡೆ ಕಲೆಯನ್ನು ವ್ಯಾಪಾರೀ ದೃಷ್ಟಿಯಿಂದ ನೋಡಿ, ಭ್ರಷ್ಟ ಹಾದಿಯಲ್ಲಿ ಸಾಗುತ್ತಿರುವ ಸುನಾಲಿನಿ, ಇಯಾನ್, ಬ್ರೋಕರ್, ಮುಂತಾದವರಿದ್ದಾರೆ. ಈ ಎರಡು ವರ್ಗಗಳ ನಡುವಿನ ತಿಕ್ಕಾಟ, ಸಂಘರ್ಷವನ್ನು ಕಾದಂಬರಿಯುದ್ಧಕ್ಕೂ ನೋಡಬಹುದು. ಎಲ್ಲಾ ಕಲೆಗಳ ಭದ್ರ ಬುನಾದಿಯೇ ಶ್ರದ್ಧೆ ಮತ್ತು ಭಕ್ತಿ ಎಂಬುದು ಅನಕೃ ಅವರ ನಿಲುವಾಗಿದೆ.

ಹೀಗೆ ಕಲಾವಿದರ ಬಗ್ಗೆ, ಕಲೆಯ ಬಗ್ಗೆ ಹಾಗೂ ಸಮಾಜದಲ್ಲಿ ಅವರ ಸಂಬಂಧದ ಬಗ್ಗೆ ಚಿಂತಿಸುವ ವಿಧಾನದಲ್ಲಿ ಬಂದಿರುವ ಜನಪ್ರಿಯ ಕಾದಂಬರಿಯೆಂದರೆ ಅನಕೃ ಅವರ 'ಸಂಧ್ಯಾರಾಗ.' ಇದು ಕೇವಲ ಜನಪ್ರಿಯ ಕಾದಂಬರಿ ಮಾತ್ರವಲ್ಲ ಅತ್ಯುತ್ತಮ ಕಾದಂಬರಿಯೂ ಹೌದು. ಅದಕ್ಕಾಗಿಯ್ ಕೀರ್ತಿನಾಥ ಕುರ್ತುಕೋಟಿಯವರು

"ಲೋಕಪ್ರಿಯ ಕಾದಂಬರಿಗಳ ಅಭಿಜಾತ ಕೃತಿ" ಎಂದು ಹೇಳಿ ಗೌರವಿಸಿದ್ದಾರೆ. ಈ ಕಾದಂಬರಿಯಲ್ಲಿ ಕೂಡ ಕಪ್ಪುಬಿಳುಪಿನ ಚಿತ್ರಣವಿದೆ. ಶ್ರೀನಿವಾಸರಾಯ ಹಾಗೂ ಮೀನಾಕ್ಷಮ್ಮ ದಂಪತಿಗಳ ಪುತ್ರರಾದ ರಾಮಚಂದ್ರ ಮತ್ತು ಲಕ್ಷ್ಮಣರ ವಿರುದ್ಧ ಗುಣ ಸ್ವಭಾವದ ಹಿನ್ನೆಲೆಯಲ್ಲಿ ಕಾದಂಬರಿ ಬಿಚ್ಚಿಕೊಳ್ಳುತ್ತದೆ. ಉತ್ತಮ ಶಿಕ್ಷಣ ಪಡೆದ ರಾಮಚಂದ್ರ ವ್ಯಾವಹಾರಿಕ ಬುದ್ಧಿಯ ಬಳಕೆಯಿಂದ ನ್ಯಾಯಾಧೀಶ ಪದವಿಗೆ ಏರುತ್ತಾನೆ. ಅದರೆ ಅಹಂಕಾರಿ ಹಾಗೂ ಕ್ರೂರಿಯಾದ ಇವನ ವರ್ತನೆಯಿಂದ ಮನೆಯ ವಾತಾವರಣ ಕೆಡುತ್ತದೆ. ಉತ್ತಮ ಸಂಗೀತ ಸಾಧಕ, ಗುಣವಂತ, ವಿನಯವಂತನಾದ ಲಕ್ಷ್ಮಣ ಲೌಕಿಕಕ್ಕೆ ಬಲಿಯಾಗದೇ ಸರ್ವರ ಗೌರವಾದರಗಳಿಗೆ ಭಾಜನನಾಗುತ್ತಾನೆ. ಇಲ್ಲಿ ಎರಡು ಗುಣ ಸ್ವಭಾವಗಳ, ಎರಡು ವಿರುದ್ಧ ಧೋರಣೆಗಳ ಸಂಘರ್ಷ ಹಾಗೂ ವೈದೃಶ್ಯಗಳ ಚಿತ್ರಣವಿದೆ. ಸಮಾಜದಲ್ಲಿ ಕೌಟುಂಬಿಕ ಮೌಲ್ಯಗಳು ನಾಶವಾಗುತ್ತಿರುವುದರ ಸೂಚನೆ ಕಾದಂಬರಿಯಲ್ಲಿದೆ. ವಿಶ್ವಕ್ಕೆ ಭಾರತ ಕೊಟ್ಟ ಅನೇಕ ಕೊಡುಗೆಗಳಲ್ಲಿ 'ಕುಟುಂಬ ವ್ಯವಸ್ಥೆ'ಯೂ ಒಂದು. ಆದರೆ ಇಂದು ಅದೇ ಕುಟುಂಬ ವ್ಯವಸ್ಥೆ ಭಾರತದಲ್ಲೇ ನಾಶವಾಗುತ್ತಿದೆ. ಅನಕೃ ಅವರು ಬಹಳ ಹಿಂದೆಯೇ ಈ ಅಂಶವನ್ನು ತಮ್ಮ 'ಸಂಧ್ಯಾರಾಗ'ದಲ್ಲಿ ಚಿತ್ರಿಸುವ ಮೂಲಕ ಸಾಹಿತಿಯೊಬ್ಬನಲ್ಲಿರಬಹುದಾದ "ಮುಂಗಾಣ್ಕೆ"ಯನ್ನು ಪರಿಚಯಿಸುತ್ತಾರೆ. ಆಧುನಿಕತೆಯು ಕೌಂಟುಂಬಿಕ ಮೌಲ್ಯದ ಮೇಲೆ ಮಾಡುತ್ತಿರುವ ಆಘಾತಗಳನ್ನು ಅನಕೃ ಇಲ್ಲಿ ತಿಳಿಸಿದ್ದಾರೆ. ಹೀಗೆ 'ಸಂಧ್ಯಾರಾಗ' ಕಾದಂಬರಿ ಅನೇಕ ಜೀವನ ಮೌಲ್ಯಗಳ ಬಗ್ಗೆ ಓದುಗರ ಗಮನ ಸೆಳೆಯುತ್ತದೆ.

ಆಗಿನ ಕಾಲದ ಖ್ಯಾತ ರಂಗ ನಟ ಹಾಗೂ ರತ್ನಾವಳಿ ಥಿಯೇಟರ್ ಒಡೆಯರಾದ ವರದಾಚಾರ್ಯರ ಸ್ನೇಹ ಅನಕೃ ಅವರ ತಂದೆಯವರಿಗಿತ್ತು. ಆ ಮೂಲಕ ಅನಕೃ ಅವರಿಗೆ ಅವರ ನಾಟಕ ಮಂಡಳಿ ಸಂಪರ್ಕ ಲಭಿಸಿತ್ತು. ವರದಾಚಾರ್ಯರ 'ಸಾಮಾಜಿಕ ನಾಟಕ ಬರೆಯುವವರಾರು?' ಎಂಬುದಕ್ಕೆ ಉತ್ತರವಾಗಿ 1924ರಲ್ಲಿ ತಮ್ಮ ಹದಿನಾರನೇ ವಯಸ್ಸಿನಲ್ಲಿ 'ಮದುವೆಯೋ ಮನೆಹಾಳೋ' ಎಂಬ ಸಾಮಾಜಿಕ ನಾಟಕವನ್ನು ಬರೆದು ಸವಾಲಾಗಿ ಉತ್ತರವನ್ನು ಕೊಟ್ಟರು. ಮತ್ರವಲ್ಲ ನಾಟಕದಲ್ಲಿ ನಟಿಸಿ ನಿರ್ದೇಶನ ಮಾಡಿ ಬದುಕನ್ನು ಹತ್ತಿರದಿಂದ ನೋಡಿದರು. ನಾಡಿನ ಸಂಸ್ಕೃತಿಯನ್ನು ಉಳಿಸಿ ಬೆಳಸುವಲ್ಲಿ ರಂಗ ಭೂಮಿಯ ಪಾತ್ರ ಮಹತ್ವದ್ದು ಎಂದು ಭಾವಿಸಿದರು. ಆ ಕಾಲದ ಖ್ಯಾತ ರಂಗನಟರುಗಳಾದ ಗುಬ್ಬಿ ವೀರಣ್ಣ, ಹಿರಣ್ಣಯ್ಯ, ವರದಾಚಾರ್, ರಾಘವೇಂದ್ರ ರಾವ್, ಬಸವರಾಜ್ ಮನ್ಸೂರ್, ಮಹಮ್ಮದ್ ಪೀರ್ ಮುಂತಾದವರ ಪರಿಚಯ ಹಾಗೂ ಗೆಳೆತನವಿತ್ತು ಆ ಕಾಲದಲ್ಲಿ ನಾಟಕಗಳೆಗೆಂದೇ ಮೀಸಲಾದ 'ರಂಗಭೂಮಿ' ಎಂಬ ಪತ್ರಿಕೆಗೆ ಲೇಖನಗಳನ್ನು ಬರೆಯುತ್ತಿದ್ದರು.

ಅವರು 24 ಕ್ಕೂ ಹೆಚ್ಚು ನಾಟಕಗಳನ್ನು ಬರೆದಿದ್ದು ಹೆಚ್ಚಿನವು ರಂಗಭೂಮಿಯಲ್ಲಿ ಪ್ರದರ್ಶನ ಕಂಡಿದ್ದವು. ರಂಗಭೂಮಿಯ ಬಗ್ಗೆ ಅನಕೃ ಅವರಿಗೆ ಗೌರವವಿತ್ತು. ರಂಗನಟ ನಟಿಯರ ಬಾಳಿನ ಗೋಳಿನ ಬಗ್ಗೆ ಮರುಗುತ್ತಿದ್ದರು. ಈ ಎಲ್ಲಾ ಹಿನ್ನೆಲೆಯಲ್ಲಿ ರಂಗ ನಟರ ಬಗ್ಗೆ, ನಾಟಕ ಮಂಡಲಿಯ ಬಗ್ಗೆ ಕಾದಂಬರಿಗಳನ್ನು ಬರೆದಿದ್ದಾರೆ. ಅವುಗಳಲ್ಲಿ 'ಅಭಿಮಾನ' ಮತ್ತು 'ನಟಸಾರ್ವಭೌಮ'ಗಳೆಂಬ ಎರಡು ಕೃತಿಗಳು ಮಹತ್ವದ್ದಾಗಿವೆ.

"ಅಭಿಮಾನ" ಕಾದಂಬರಿಯಲ್ಲಿ ನಾಟಕ ಮಂಡಲಿ ನಡೆಸುವವರ ಪಡಿಪಾಟಲುಗಳ ಬಗ್ಗೆ ಸಮಗ್ರ ಚಿತ್ರಣ ದೊರೆಯುತ್ತದೆ. ಕಾದಂಬರಿಯ ಮುನ್ನುಡಿಯಲ್ಲಿ ಅನಕೃರವರು "ನಟಸಾರ್ವಭೌಮದಲ್ಲಿ" ನಾನು ಚಿತ್ರಿಸಿದುದು ಒಬ್ಬ ಆದರ್ಶ ಕಲಾವಿದನನ್ನು "ಅಭಿಮಾನ"ದಲ್ಲಿ ನಾನು ಚಿತ್ರಿಸಿರುವುದು ನಮ್ಮೆಲ್ಲರಿಗೂ ಸುಪರಿಚಿತನಾಗಿರುವ ವಾಸ್ತವ ವ್ಯಕ್ತಿಯನ್ನು ನಾಟಕ ಕಂಪನಿಗಳ ಏಳುಬೀಳುಗಳು ಹೊನ್ನಿಗಿಂತಲೂ ಹೆಚ್ಚಾಗಿ ಹೆಣ್ಣನ್ನು ಅವಲಂಬಿಸಿರುವ ಕಠೋರ ಸತ್ಯದಾವಿಷ್ಕಾರವನ್ನು "ಅಭಿಮಾನ"ದಲ್ಲಿ ಕಾಣಬಹುದು ಎಂದಿದ್ದಾರೆ. ರಂಗಭೂಮಿಯ ನಾಡಿನ ಸಂಸ್ಕೃತಿಯ ಪ್ರತೀಕ ಎಂದು ಹೇಳುವ ಅನಕೃ ಇಲ್ಲೂ ವೈರುಧ್ಯಗಳ ಚಿತ್ರಣ ನೀಡುತ್ತಾರೆ. ಆಕರ್ಷಣೀಯ ಆರ್ಷೆಯ ಸಂಸ್ಕೃತಿಯ ಪ್ರತಿಪಾದಕರು ಒಂದು ಕಡೆಯಾದರೆ ಆಧುನಿಕತೆಯ ಹೆಸರಿನಲ್ಲಿ ಪರ ಸಂಸ್ಕೃತಿಯನ್ನು ವ್ಯಾಮೋಹಿಸುವವರ ಪಡೆ ಇನ್ನೊಂದು ಕಡೆ ಶೆಣೈಯಂತಹ ನಯವಾಗಿ ರಕ್ತ ಹೀರುವ ಸಾಹುಕಾರರು, ಬಲ್ಲಾಳರಂತಹ ವಂಚನೆ ಮಾಡುವ ಮ್ಯಾನೇಜರುಗಳು ಮಂಜಯ್ಯ ಗುಲಾಬಿಯಂತಹ ನಟನೆಗೆ ತಮ್ಮನ್ನು ಒಡ್ಡಿಕೊಂಡಿರುವ ರಂಗ ನಟನಟಿಯರು, ದೊಡ್ಡ ಬಸಪ್ಪ ನಂತಹ ಪತ್ರಕರ್ತರು, ಜಯದೇವಪ್ಪನಂತಹ ಉದಾರ ಹೃದಯದ ಶ್ರೀಮಂತರು, ಜಲಜರಾಜಿಯಂತಹ ಮುಗ್ಧ ನಿಷ್ಕಲ್ಮಶ ಹೃದಯವಂತ ಮಹಿಳೆಯರು, ಲಕ್ಷ್ಮೀ ನರಸಿಂಹ ಶಾಸ್ತ್ರಿಯಂತಹ ಪ್ರಾಮಾಣಿಕ ನಾಟಕ ರಚನಾಕಾರರು, ಕೃಷ್ಣಕುಮಾರಿಯಂತಹ ಚಾಲಾಕಿ ನಟಿಯರು ಈ ಕಾದಂಬರಿಯ ಪಾತ್ರವರ್ಗವಾಗಿದ್ದಾರೆ. ಅನಕೃರವರು ಇನ್ನೊಂದೆಡೆ ನಾಟಕ ಕಂಪನಿಗಳ ಒಳಜೀವನವನ್ನು ಬಲ್ಲವರಿಗೆ ನನ್ನ ಕಾದಂಬರಿಯಲ್ಲಿ ನಿರೂಪಿತವಾಗಿರುವ ಯಾವ ಅಂಶವು ಉತ್ಪ್ರೇಕ್ಷೆ ಎನಿಸುವುದಿಲ್ಲ. ಈ ಕೆಸರಿನಿಂದ ರಂಗಭೂಮಿಯನ್ನು ಮೇಲಕ್ಕೆತ್ತಬೇಕಾಗಿದೆ ಎಂದಿದ್ದಾರೆ. 'ತಾರಾಶಶಾಂಕ' ನಾಟಕದ ಮೂಲಕ ಅನಕೃ ಅವರಿಗೆ ಕಾವ್ಯ ಪರಂಪರೆಯ ಬಗ್ಗೆ ಭಾರತೀಯ ದರ್ಶನಗಳ ಬಗ್ಗೆ ಇರುವ ಜ್ಞಾನದ ಅರಿವಾಗುತ್ತದೆ. ಈ ಕಾದಂಬರಿಯಲ್ಲಿ ಅವರು ಕಲಾವಿದರ ಮನಃಸ್ಥಿತಿಯನ್ನು ಅವರಿಗೆ ಎದುರಾಗುವ ಅವರ ಆಂತರಿಕ ತುಮುಲವನ್ನು ಬಹಳ "ಅಥೆಂಟಿಕ್" ಆಗಿ ಚಿತ್ರಿಸಿದ್ದಾರೆ. 750 ಪುಟಗಳುಳ್ಳ ಬೃಹತ್ ಕಾದಂಬರಿ

"ನಟಸಾರ್ವಭೌಮ"ದಲ್ಲಿ ಅನಕೃ ಆದರ್ಶ ಕಲಾವಿದ ನಟನ ಇಡೀ ಬಾಳಿನ ಚಿತ್ರವನ್ನು ಕಟ್ಟಿಕೊಟ್ಟಿದ್ದಾರೆ. ನರಸಿಂಹಾಚಾರ್ಯರ ಮಗನಾದ ರಾಜ ಕಾಲೇಜಿನಲ್ಲಿದ್ದಾಗ ಹುಟ್ಟು ನಟನಾ ಪ್ರತಿಭೆಯನ್ನು ತೋರಿದವನು. ಅಕಾಡೆಮಿಕ್ ಶಿಕ್ಷಣದಿಂದ ವಿಮುಖನಾದ ರಾಜನಿಗೆ ಆಪ್ತ ಗೆಳೆಯರ ಸಂಘವಿತ್ತು. ಅವರೇ ಅವನ ಎಲ್ಲಾ ಕಷ್ಟಕಾಲದಲ್ಲೂ ಸಹಕರಿಸುವವರು. ಕಾಲೇಜ್ ಯೂನಿಯನ್ನಿನ ನಾಟಕಕ್ಕೋಸ್ಕರ ಸಂಗೀತ ಕಲಿಯಲು ಉಪಕ್ರಮಿಸಿದಾಗ ಅಲ್ಲಿ ನೀಲಾಳ ಸಖ್ಯ ದೊರೆಯುತ್ತದೆ. ಸಂಪರ್ಕವೇರ್ಪಡುತ್ತದೆ. ಆಕೆ ತನ್ನ ತಂದೆಯ ಸಂಪರ್ಕದಲ್ಲಿರುವವಳೆಂದು ತಿಳಿದಾಗ ಆಘಾತಗೊಂಡು ಪತ್ನಿ ಸೀತಮ್ಮನೊಂದಿಗೆ ಮನೆ ತ್ಯಜಿಸಿ ಹೊರಟು ಹೋಗುತ್ತಾನೆ. ಮುಂದೆ ಕೈ ಹಿಡಿದವಳು ಗತಿಸಿದಾಗ ಒಬ್ಬಂಟಿಯಾಗುತ್ತಾನೆ. ಬುಳ್ಳಪ್ಪನ ನಾಟಕ ಮಂಡಳಿ ಸೇರುತ್ತಾನೆ. ಇಲ್ಲಿಂದ ಮುಂದಕ್ಕೆ ಕಾದಂಬರಿ ಸಂಪೂರ್ಣವಾಗಿ ನಾಟಕ ಮಂಡಳಿಯಲ್ಲಿನ ಕಲಾವಿದರ ಬದುಕಿನ ಚಿತ್ರಣಕ್ಕೆ ಮೀಸಲಾಗುತ್ತದೆ. ಓದಿನ ಹಿನ್ನೆಲೆಯಿಂದ ಬಂದ ರಾಜನಿಗೆ ನಟನಟಿಯರ ಸ್ವಚ್ಛಂದ ಬದುಕು ಉಸಿರು ಕಟ್ಟಿಸುತ್ತದೆ. ಅಲ್ಲಿ ಇರುವಾಗಲೇ ನಾಟಕಕ್ಕೆ ಸಂಬಂಧಿಸಿದಂತೆ ಎಲ್ಲಾ ಸಾಹಿತ್ಯವನ್ನು ಪೌರಾಣಿಕ ವಿಚಾರಗಳನ್ನು ಅಧ್ಯಯನ ಮಾಡಿ ಜ್ಞಾನವಂತನಾಗುತ್ತಾನೆ. ನಟನೆ ಅವನ ಉಸಿರಾಗುತ್ತದೆ. ನಾಟಕ ಕಂಪನಿಯ ರಾಜಕೀಯದಿಂದಾಗಿ ತನ್ನದೇ ಆದ ನಾಟಕ ಮಂಡಳಿಯ ಕಟ್ಟ ಬೇಕಾಗುತ್ತದೆ. ಆಗ ಅವನಿಗೆ ವೇದಾಂತಿ ವೆಂಕಟಣ ಮೇಸ್ಟರ ಗೆಳೆತನ ಲಭಿಸುತ್ತದೆ. ಅವನ ನಾಟಕ ಮಂಡಳಿ ಒಮ್ಮೆ ಪ್ರಸಿದ್ಧಿಗೆ ಬಂದರೂ ಕೆಲವೊಂದು ಘಟನೆಗಳಿಂದ ಕಷ್ಟದ ಸುಳಿಗೆ ಸಿಲುಕುತ್ತದೆ. ಆದರೆ ಇವೆಲ್ಲವೂ ರಾಜನ ವ್ಯಕ್ತಿತ್ವವನ್ನು ಇನ್ನಷ್ಟು ಗಟ್ಟಿಗೊಳಿಸುವಂತೆ ಉತ್ತಮಗೊಳ್ಳುವಂತೆ ಮಾಡುತ್ತದೆ. ಉದಾತ್ತ ನಡುವಳಿಕೆಗಳಿಂದ ಎಲ್ಲರ ಮನ ಗೆಲ್ಲುತ್ತಾನೆ. ನಾಟಕ ತಯಾರಿಯಲ್ಲಿ ಆತನ ಅಸ್ಥೆ, ಶ್ರದ್ಧೆ, ಪೂರ್ವ ತಯಾರಿ, ಸಹ ಕಲಾವಿದರಲಲಿ ಆಸಕ್ತಿ, ಕಲಾ ತಪಸ್ಸು, ಆಳವಾದ ಅಧ್ಯಯನ ಇವೆಲ್ಲವೂ ಅವನನ್ನು ಒಬ್ಬ 'ಆದರ್ಶ ನಟ'ನನ್ನಾಗಿ ರೂಪಿಸುತ್ತವೆ. ಕಾದಂಬರಿಯ ಮುನ್ನುಡಿಯಲ್ಲಿ ಅನಕೃ ಅವರು ಹೇಳಿರುವ ಮಾತು ಬಹು ಗಮನಾರ್ಹವಾದುದು. "ನಟಸಾರ್ವಭೌಮ" ಕಾದಂಬರಿಯಲ್ಲಿ ರಂಗ ಪ್ರಪಂಚದ ವಿವಿಧ ಪ್ರಕಾರ, ಪ್ರಭಾವ, ಪ್ರಕಾಶಗಳನ್ನು ಚಿತ್ರಿಸಲೆತ್ನಿಸಿದ್ದೇನೆ. ಅದು ಸಾಮಾನ್ಯ ಜನತೆಗೆ ಪರಿಚಿತವಲ್ಲದ ಪ್ರಪಂಚ, ಲಕ್ಷಾಂತರ ಜನ ಅವಲಂಬಿಸಿದ ಜೀವನ, ಆದರೂ ಅದೊಂದು ವಿಶಿಷ್ಟ ಪ್ರಪಂಚ ಅದರ ಶೀಲ, ನೀತಿ, ರಸಿಕತೆ, ಸಹೃದಯತೆ, ಜೀವದಯಾಪರತೆ ಎಲ್ಲಾ ಒಂದು ವಿಶಿಷ್ಠ ರೀತಿಯಲ್ಲಿ ಇರುತ್ತದೆ. ಈ ಕಾದಂಬರಿಕಾರ ನಾಟಕ ಪ್ರಪಂಚವನ್ನು ಹೊರಗಿನಿಂದ ಒಳಗಿನಿಂದ ಮೂವತ್ತು ವರ್ಷ ನೋಡುತ್ತ ಬಂದಿದ್ದಾನೆ. ನೂರಾರು ನಟರ ಬಳಕೆ ಬೆಳೆಸಿಕೊಂಡು ಅವರ ಜೀವನ ರಹಸ್ಯವನ್ನರಿಯಲೆತ್ನಿಸಿದ್ದಾನೆ." ಈ ಮಾತುಗಳೇ ಕಾದಂಬರಿಯ ಒಟ್ಟು ಆಶಯದ ಮೇಲೆ ಬೆಳಕು ಚೆಲ್ಲುತ್ತದೆ.

ಈ ಕಾದಂಬರಿಯಲ್ಲಿ ನಾಟಕಗಳ ವಸ್ತು ವಿಚಾರಕ್ಕೆ ಸಂಬಂಧಿಸಿದಂತೆ ಬಹು ದೀರ್ಘವಾದ ವಿವರಣೆಗಳು ಬಂದಿವೆ. ರಾಜಾಚಾರ್ಯರು ಪ್ರಯೋಗಕ್ಕೆ ತಂದ ಶಾಕುಂತಲ, ರಾಮವರ್ಮ-ಲೀಲಾವತಿ, ಬಾಹುಬಲಿ ಸ್ವಾಮಿ, ಒಥೆಲೋ, ಚಂದ್ರಗುಪ್ತ, ಮಹಾಭಾರತ ಮುಂತಾದ ನಾಟಕಗಳ ಕುರಿತ ವಿಚಾರ ನಿರೂಪಣೆ ಇಲ್ಲಿ ಬಂದಿದೆ. ಬಾಹುಬಲಿಗೆ ಸಂಬಂಧಿಸಿದಂತೆ ರತ್ನಾಕರ ವರ್ಣಿಯ ಭರತೇಶ ವೈಭವದ ಸಾಲುಗಳು, ಯೋಗಭೋಗದ ಸಮನ್ವಯತೆಯ ವಿಚಾರಗಳು, ಅದೆಲ್ಲವೂ ರಾಜಾಚಾರ್ಯರ ಮೇಲೆ ಉಂಟು ಮಾಡಿದ ಪರಿಣಾಮಗಳ ಕಥನವಿದೆ. ಶೃಂಗಾರ ರಸನಿರೂಪಣೆಯ ಸನ್ನಿವೇಶಗಳ ಬಗ್ಗಿನ ವ್ಯಾಖ್ಯಾನಗಳು. ಅದರೊಂದಿಗೆ ನಾಟಕದ ನಟನ ವ್ಯಕ್ತಿತ್ವದಲ್ಲಿ ಆಗುತ್ತಿದ್ದ ಬದಲಾವಣೆಗಳು ಬಹು ಸೊಗಸಾಗಿ ವಿವರಿಸಲ್ಪಟ್ಟಿದೆ. ಈ ಕಾದಂಬರಿಯಲ್ಲಿ ಬರುವ ಪಾತ್ರಗಳ ವೈವಿಧ್ಯತೆಯು ಅಸಾಧಾರಣವಾದದ್ದು. ನೀಲ, ಮೋಹನ, ಮುಂತಾದ ತ್ಯಾಗಮಯಿ ನಟಿಯರು ಒಂದೆಡೆ ಅನ್ಸಾರಿ, ಭಾಗ್ಯಮ್ಮ ಮುಂತಾದ ಮಹತ್ವಾಕಾಂಕ್ಷಿ ನಟಿಯರು ಇನ್ನೊಂದೆಡೆ ಇದ್ದಾರೆ. ವೆಂಕಣ್ಣ ಮೇಸ್ತ್ರು, ತ್ರಿಮೂರ್ತಪ್ಪ ಮುಂತಾದ ಉತ್ತಮ ನಡೆವಳಿಕೆಯ ನಟರಿದ್ದಂತೆ ಬೆನ್ನಿಗೆ ಚೂರಿ ಹಾಕುವ ಚೆನ್ನಪ್ಪ, ಶಿವಣ್ಣರಂತವರ ಚಿತ್ರಣವೂ ಇಲ್ಲಿದೆ. ಪೆರುಮಾಳ್, ಕೇತ್ಕರ್ ಜನಾರ್ಧನರಾವ್ ಸಾವಂತ, ಬಂಡೆಯಂತಹ ಉತ್ತಮ ಕಲಾಪೋಷಕರು ಇರುವಂತೆ ರುದ್ರಪ್ಪ, ಆಪ್ಟೆ, ಚೆಟ್ಟಿಯಾರ್ರಂತಹ ದುಷ್ಟ ಪಾತ್ರಗಳು ಈ ಕಾದಂಬರಿಯಲ್ಲಿ ತುಂಬಿಕೊಂಡಿವೆ. ಚಿದಂಬರನಂತಹ ಉತ್ತಮ ನಾಟಕ ವಿಮರ್ಶೆ ಮಾಡುವವರು ಒಂದೆಡೆಯಾದರೆ ಭೀಮಯ್ಯನಂತಹ ದುಷ್ಟ ಪತ್ರಿಕಾರಂಗದವರೂ ಇಲ್ಲಿ ಇದ್ದಾರೆ. ರಾಜನ ತೇಜೋವಧೆಗೆ ಆತನ 'ಭರತ ಭೂಮಿ' ಸದಾ ಪ್ರಯತ್ನಿಸುತ್ತಿರುತ್ತದೆ.

ರಾಜನ ಆಪ್ತ ಗೆಳೆಯ ದೇವದಾಸ್ ಮತ್ತು ಸೀತಾರಾಮ ಅವನ ರಕ್ಷಣೆಗೆ ಸದಾ ನಿಂತಿರುತ್ತಾರೆ. ದೇವದಾಸ್ ಜಿಲ್ಲಾಧಿಕಾರಿಯಾಗಿದ್ದರೆ ಸೀತಾರಾಮ ಕಾಲೇಜ್ ಪ್ರೊಫೆಸರ್ ಆಗಿದ್ದು ಇವರಿಬ್ಬರ ಸಕಾಲಿಕ ನೆರವು ರಾಜಾಚಾರ್ಯನ ವ್ಯಕ್ತಿತ್ವವನ್ನು ರೂಪಿಸುವಲ್ಲಿ ಮಹತ್ತರ ಪಾತ್ರ ವಹಿಸುತ್ತದೆ. ನೀಲಳನ್ನು ರಾಜಾ ಕೊನೆಯವರೆಗೂ ತಂಗಿಯಂತೆ, ಸ್ನೇಹಿತನಂತೆ ನಡೆಸಿಕೊಳ್ಳುತ್ತಾನೆಯೇ ಹೊರತು ತಪ್ಪಿನ ಅರಿವಾದ ನಂತರ ಎಂದು ಅವಳ ದೈಹಿಕ ಸಂಪರ್ಕ ಮಾಡುವುದಿಲ್ಲ. ಮೋಹನಳೊಂದಿಗೆ ದೈಹಿಕ ಸಂಪರ್ಕದಲ್ಲೂ ಆಧ್ಯಾತ್ಮಿಕ ಛಾಯೆ ಇದೆ. ಅಕೆಯೂ ಕೂಡಾ ಕೊನೆಯ ಘಳಿಗೆವರೆಗೂ ರಾಜನನ್ನು ಕೈ ಬಿಡುವುದಿಲ್ಲ. ಅವನ ಕಷ್ಟಸುಖಕ್ಕೆ ಆಗುತ್ತಾಳೆ. ಅನ್ಸಾರಿಯ ಭೋಗಲಾಲಸೆ ರಾಜನ ದಿಕ್ಕು ತಪ್ಪಿಸಿ ಅಧಃಪತನಕ್ಕೆ ತಳ್ಳುತ್ತದೆ. ಆದರೆ ಹಿತೈಷಿ ವೆಂಕಣ್ಣನ ಸಮಯೋಚಿತ ನೆರವಿನಿಂದ ದೊಡ್ಡ ಗಂಡಾಂತರದಿಂದ ಪಾರಾಗುತ್ತಾನೆ. ಹೀಗೆ ಕಾದಂಬರಿಯಲ್ಲಿ ಅನೇಕ ತಿರುವುಗಳು ಜೀವನದ ಕುರಿತು

ಅನೇಕ ಜಿಜ್ಞಾಸೆಗಳು ಬಂದಿವೆ. ಇದೇ ರೀತಿ ಕಾದಂಬರಿ ಬೆಳಗಾವಿ ಮದ್ರಾಸ್ ಹುಬ್ಬಳ್ಳಿ, ಮೈಸೂರು ಬಳ್ಳಾರಿ ಬೆಂಗಳೂರು, ಪುಣೆ, ಮುಂಬೈ ಹೀಗೆ ನಾನಾ ಕಡೆಗಳಲ್ಲಿನ ವಿವರಗಳನ್ನು ಕಟ್ಟಿ ಕೊಡುತ್ತದೆ. ವಿಭಿನ್ನ ಪ್ರದೇಶದ ಜನಜೀವನ ವಿಭಿನ್ನ ಸ್ವಭಾವದ ಜನವರ್ಗ ಅಲ್ಲಿನ ನಡೆನುಡಿ ಸಂಸ್ಕೃತಿಗಳ ಪರಿಚಯವಾಗುತ್ತದೆ. ಕನ್ನಡದ ಅಭಿಮಾನಕ್ಕೆ ಸಂಬಂಧಿಸಿದಂತೆ ಅನಕೃರವರ ವಿಚಾರಧಾರೆ ಈ ಕಾದಂಬರಿಯಲ್ಲಿ ಬಂದಿದೆ. ಬೆಳಗಾವಿಯಲ್ಲಿ ಕನ್ನಡಿಗರಿಗೆ ಆಗುತ್ತಿರುವ ಅನ್ಯಾಯಗಳು ಅದಕ್ಕೆ ರಾಜನು ಮಾಡಿದ ಸಾಹಸ ಕನ್ನಡ ನಾಟಕ ಮಂಡಳಿ ಮುಂಬೈ ಬೆಳಗಾವಿ, ಪುಣೆ ಮುಂತಾದ ಕಡೆ ಸಾಧಿಸಿದ ದಿಗ್ವಿಜಯಗಳ ವಿವರಗಳು ಇಲ್ಲಿವೆ.

'ನಟಸಾರ್ವಭೌಮ' ಕಾದಂಬರಿಯ ಹಿರಿಮೆ ಇರುವುದು ಅಲ್ಲಿ ಕಲೆಯ ಕುರಿತು ಅದರಲ್ಲೂ ರಂಗಭೂಮಿಯ ಕುರಿತು ಅನಕೃ ರವರ ದೃಷ್ಟಿಧೋರಣೆಗಳ ಅನಾವರಣಗೊಳ್ಳುವುದರಲ್ಲಿ ಇಲ್ಲಿನ ಪಾತ್ರಗಳ ಬಾಯಿಂದ ಬಂದಿರುವ 'ಕಲಾವಿದನ ಅಹಂಕಾರ, ಆತ್ಮಾವಲಂಬನದ ಲಕ್ಷಣ' ನಾಟಕ ಯಶಸ್ವಿಗೆ ದೊಡ್ಡ ಪಾತ್ರವು ಎಷ್ಟು ಮುಖ್ಯವೋ ಸಣ್ಣ ಪಾತ್ರವು ಅಷ್ಟೇ ಮುಖ್ಯ.

"ಕೆಲಸ ಮನಸ್ಸಿನಂತೆ ನಡೆದರೆ ಅದೇ ವಿಶ್ರಾಂತಿ ಕಲೆ ಪಿತ್ರಾರ್ಜಿತ ಸ್ವತ್ತಲ್ಲ ಅದರ ಪೂರ್ಣ ಕಲೆಯನ್ನು ಯಾವ ಮಾನವನು ಅರಿಯಲಾರ" "ಹೆಣ್ಣನ್ನು ವಿಲಾಸಕ್ಕೂ ಉಪಯೋಗಿಸಿಕೊಳ್ಳಬಹುದು, ಆತ್ಮ ಕಲ್ಯಾಣಕ್ಕೂ ಉಪಯೋಗಿಸಿಕೊಳ್ಳಬಹುದು." ನಾಟಕವೆಂದರೆ ಏನೋ ಒಂದು ಅಲ್ಪ ವಿಹಾರ ಸಾಧನವಲ್ಲ. ನಮ್ಮ ಸಂಸ್ಕೃತಿಯನ್ನು ನಿತ್ಯ ಉಳಿಸಿ ಅದಕ್ಕೆ ಒಂದು ವಿಶಿಷ್ಟ ಸಿದ್ಧತೆಯನ್ನು ನಾಟಕ ಕೊಡುತ್ತದೆ. ರಂಗಭೂಮಿಯನ್ನು ಶ್ರೀಮಂತರು ಸುಸಂಸ್ಕೃತರು ಗಮನಿಸಬೇಕಾಗುತ್ತದೆ. ಅದನ್ನು ಕೈಗೆತ್ತಿಕೊಳ್ಳಬೇಕು. ಆಗ ರಂಗಭೂಮಿ ಉಚ್ಚ ಸ್ಥಿತಿ ತಲುಪುತ್ತದೆ. ಈ ಬಗೆಯ ಅನೇಕ ಸಾಲುಗಳು ಈ ಕಾದಂಬರಿಯಲ್ಲಿ ಬಂದಿವೆ. ಶಿವಪಾರ್ವತಿ ನಾಟಕಕ್ಕೆ, ಮಹಾಭಾರತ ನಾಟಕಕೆ ಬಾಹುಬಲಿ ನಾಟಕಕ್ಕೆ ವಸ್ತುವನ್ನು ಆಯ್ದುಕೊಳ್ಳುವಾಗ ಸಂಭಾಷಣೆ ಸಿದ್ದ ಪಡಿಡುವಲ್ಲೆಲ್ಲಾ ಅನಕೃರವರ ಅಗಾಧ ಪಾಂಡಿತ್ಯವನ್ನು, ಉತ್ತಮ ಪ್ರತಿಮೆಯನ್ನು, ಜೀವನದ ದೃಷ್ಟಿಕೋನವನ್ನು ನೋಡಬಹುದು. ಭಾರತೀಯ ದರ್ಶನ ಶಾಸ್ತ್ರದ ಸಾರವನ್ನು ಇಲ್ಲಿ ಕಾದಂಬರೀಕಾರರು ಸರಳವಾಗಿ ಮನತುಂಬುವಂತೆ ಭಟ್ಟಿ ಇಳಿಸಿದ್ದಾರೆ. ಅನಕೃ ಅವರು ಕೃತಿಯನ್ನು ಉಗ್ರತಪಸ್ಸು, ಅದೇ ಪರಮ ಎಂದು ಕೊಂಡಿದ್ದಾರೆ. ರಾಜನ ಅಂತ್ಯ ಚಿತ್ರಣದಲ್ಲಿ ಓದುಗರ ಕಣ್ಣು ತೇವವಾಗುತ್ತದೆ. ಆತ ಕೊನೆಯಲ್ಲಿ ಆಡುವ "ಸಂಗೀತ ಗುರುಗಳಿಂದ ನಾಟಕ ಗುರುಗಳಿಂದ ನಾನೂ ನಾಟಕದವನಾದೆ." ಪತ್ನಿ ಸೀತೆ ಕೈ ಬಿಟ್ಟು ಹೋದಳು. ದೇವ್, ಸೀತೂ, ಅಚ್ಚೂ, ತಿರುಮಲ, ನೀಲಾ ನನ್ನ ಕೈ ಹಿಡಿದಿರಿ ಮತ್ತು ರಂಗಭೂಮಿ ಪ್ರವೇಶಿಸಿದೆ. ವೆಂಕಣ್ಣ

ನನಗೆ ತಮ್ಮ ಜೀವ ತೇಯಲು ನನ್ನ ಬಾಳಿಗೆ ಪ್ರವೇಶ ಮಾಡಿದರು. ನಾಲ್ಕಾರು ಕಡೆ ಹೋದ್ದೆ ಮೆಚ್ಚುವವರು ಮೆಚ್ಚಿದರು ತೆಗಳುವವರು ತೆಗಳಿದರು. ಪೆರುಮಾಲ್ ಚಿದಂಬರರಾವ್ ಸಾವಂತ್, ಕಿಕ್ಕೇರ, ಬಂಡೆ ನನ್ನನ್ನಪ್ಪಿ ಪ್ರೀತಿಯ ಮಳೆಗೆರೆದರು. ಮೋಹನ ನನ್ನ ಬಾಳಿನ ವಸಂತದಂತೆ ಪ್ರವೇಶಿಸಿದಳು. ರುದ್ರಪ್ಪನವರು ಉಪಕಾರ ಮಾಡಿದರು. ತ್ರಿಮೂರ್ತಪ್ಪ ಕಷ್ಟಸುಖಗಳಲ್ಲಿ ನನ್ನ ಕೈ ಬಿಡಲಿಲ್ಲ. ನೀವೆಲ್ಲಾ ಪೋಷಿಸಿದ ದೇಹವಿದು. ನಿಮ್ಮ ಪ್ರೇಮವು ನನ್ನ ಕೈಯಿಂದ ಸ್ವಲ್ಪ ಕೆಲಸ ಮಾಡಿಸಿತು. ನನ್ನ ಬಾಳಿಗೂ ಒಂದು ಕೊನೆ ಇದೆ. ಆದರೆ ಎಂತಹ ಸುಖಕರವಾರ ಕೊನೆ" ಎಂದು ಹೇಳುತ್ತಾನೆ. ಎಲ್ಲರನ್ನೂ ಹತ್ತಿರ ಕರೆದು ಮಾತನಾಡುತ್ತಲೇ ಅಸು ನೀಗುತ್ತಾನೆ. ಹಾಗೇ ರಾಜನಲ್ಲಿ ಒಬ್ಬ ಆದರ್ಶ ರಂಗನಟನನ್ನು ಅನಕೃ ಚಿತ್ರಿಸಿದ್ದಾರೆ. ರಾಜ ಕೊನೆಯಲ್ಲಿ ರಾಜಾಚಾರ್ಯರಾಗುತ್ತಾರೆ. ಹಾಗೇ ಭೌತಿಕವಾಗಿಯೂ ಬೆಳೆಯುತ್ತಾರೆ. "ನಟಸಾರ್ವಭೌಮ" ಅನಕೃರವರಿಗೆ ಜನಮನ್ನಣೆಯನ್ನು ಗಳಿಸಿಕೊಟ್ಟ ಕಾದಂಬರಿ.

ನಾಟಕ ಕಲಾವಿದೆಯ ಬದುಕಿನ ಚಿತ್ರಣ "ಭುವನ ಮೋಹಿನಿ"ಯಲ್ಲಿ ವಿವರವಾಗಿ ಬಂದಿದೆ. ತಂದೆ ಇಲ್ಲದ ಮೋಹಿನಿ ನರ್ತನ ಕಲಿಯಬೇಕೆಂಬ ಹುಮ್ಮಸ್ಸಿನಲ್ಲಿ ಸಾಹುಕಾರರ ಹೊನ್ನಪ್ಪನ ಬಲೆಗೆ ಬೀಳುವುದು. ಮುಂದೆ ಮದ್ರಾಸಿನಲ್ಲಿ ಕಮ್ಯುನಿಸ್ಟ್ ನೇತಾರ ಸಂಬಂದಂನ ಒತ್ತಾಯಕ್ಕೆ ಮಣಿಯುವಳು. ಅವನೊಂದಿಗೆ ರಷ್ಯಾ ಪ್ರವಾಸಕ್ಕೆ ತೆರಳುವುದು. ಅಲ್ಲೂ ಖ್ಯಾತಿ ಪಡೆಯುವಳು. ಮುಂದೆ ಅವಳ ಮಹತ್ವಾಕಾಂಕ್ಷೆ ಚಿತ್ರರಂಗಕ್ಕೆ ಕರೆದುಕೊಂಡು ಹೋಗುತ್ತದೆ. ಅಲ್ಲಿ ರೋಸನ್ ಎಂಬ ಹಾಲಿವುಡ್ ನಿರ್ದೇಶಕನ ಕೈ ಹಿಡಿಯುವುದು. ಅಲ್ಲಿಗೂ ನಿಲ್ಲದೇ ಇನ್ನೊಬ್ಬ ನಟನೊಂದಿಗೆ ಓಡಿ ಹೋಗುವುದರೊಂದಿಗೆ ಮುಕ್ತಾಯವಾಗುತ್ತದೆ. ಹಣ ಹಾಗೂ ಕೀರ್ತಿಯ ಬೆನ್ನು ಹತ್ತಿದ ಕಲಾವಿದೆ ಮುಗ್ಗರಿಸುವುದರ ಚಿತ್ರಣ ಇಲ್ಲಿದೆ. ಸಾಹಿತಿಗಳಿಗೆ ಸಂಬಂಧಿಸಿದಂತೆ ಅನಕೃ ರವರು 'ಸಾಹಿತ್ಯರತ್ನ' ಎಂಬ ಕಾದಂಬರಿ ರಚಿಸಿದ್ದಾರೆ. ಹೀಗೆ ಕಲಾವಿದರ ಬದುಕಿನ ಬಗ್ಗೆ ಅನಕೃ ಅವರು ಉತ್ತಮ ಕೃತಿ ರಚಿಸಿದ್ದಾರೆ. ಆ ಪ್ರಕಾರವನ್ನು ಕನ್ನಡ ಸಾಹಿತ್ಯಕ್ಕೆ ತರುವಲ್ಲಿ ಅನಕೃ ಅವರ ಹಿರಿಮೆ ಇದೆ.

"ಬದುಕಿನ ಪಾಠಶಾಲೆಗೆ" ಧುಮಿಕಿದ ಅನಕೃ ತಾವು ಕಂಡ ಪ್ರಪಂಚವನ್ನು ಗಳಿಸಿದ ಅನುಭವವನ್ನು ಉಂಡನೋವು ನಲಿವುಗಳನ್ನು ಈ ಮೇಲ್ಕಂಡ ನಾಲ್ಕೈದು ಕಾದಂಬರಿಗಳಲ್ಲಿ ಸವಿವರವಾಗಿ ಬಿತ್ತರಿಸಿದ್ದಾರೆ. ಸ್ವತಃ ಕಲಾವಿದರಾದ ಅನಕೃ ಕಲಾವಿದರ ಮನಃಸ್ಥಿತಿಯನ್ನು ಸರಿಯಾಗಿಯೇ ಗ್ರಹಿಸಿದ್ದಾರೆ. ಸಮಾಜದೊಂದಿಗೆ ಕಲಾವಿದನ ಸಂಬಂಧ, ಸಮಾಜ, ಕಲಾವಿದನನ್ನು ನಡೆಸಿಕೊಳ್ಳುವ ರೀತಿ, ಎಲ್ಲವೂ ಬಹಳ ನಿಖರವಾಗಿ ಖಚಿತವಾಗಿ ಬಂದಿದೆ. ವಾಸ್ತವದ ದೃಷ್ಟಿಕೋನ ಅವರ ಕಾದಂಬರಿಗಳಲ್ಲಿದೆ. ಕಲೆಯ ಗುರಿ, ಕಲಾವಿದನ ಆರ್ಥಿಕ ಸಮಸ್ಯೆಗಳು, ಆತನ

ಕಲಾ ಜೀವನ ಈ ಎಲ್ಲಾ ವಿಚಾರಗಳೇ ಈ ಕಾದಂಬರಿಗಳ ವಸ್ತು ಪ್ರಪಂಚವಾಗಿದೆ. ಅನಕೃ ಅವರಿಗೆ ಸಾಕಷ್ಟು ಜನ ನಟರು ನಾಟಕ ಮಂಡಳಿಯವರು ನೃತ್ಯಪಟುಗಳು, ಚಿತ್ರಕಾರರು, ಹೀಗೆ ವಿವಿಧ ಪ್ರಕಾರದ ಕಲಾವಿದರ ಒಡನಾಟವಿತ್ತು. ಅವರ ಏಳುಬೀಳುಗಳನ್ನು ಉತ್ಕರ್ಷವನ್ನು ಅಧಃಪತನವನ್ನು ಅವರು ಎಡತಾಕಿದ ಸವಾಲುಗಳನ್ನು ಬಹಳ ಹತ್ತಿರದಿಂದ ನೋಡಿದ್ದರು. ಅದರಂತೆ ಈ ಎಲ್ಲಾ ಅಂಶಗಳನ್ನು ಮೇಲಿನ ಕಾದಂಬರಿಗಳಲ್ಲಿ ಕಾಣಬಹುದಾಗಿದೆ. ಹೀಗೆ ಕಲಾ ಬದುಕಿಗೆ ಸಂಬಂಧಿಸಿದ ಕಾದಂಬರಿಗಳನ್ನು ಕನ್ನಡ ಸಾಹಿತ್ಯ ದೇವಿಯ ಶ್ರೀಮುಡಿಗೆ ಮುಡಿಸಿದ ಖ್ಯಾತಿ ಅ.ನ.ಕೃ.ರವರದು.

□

ಪುರಾಣಿಕರ ಕಾದಂಬರಿಗಳ ಸ್ವಂತಿಕೆ

ಹೊಸಗನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಕಾದಂಬರಿಗಳ ಸ್ಥಾನ ವಿಶಿಷ್ಟವಾದದ್ದು. ಕಳೆದ ಶತಮಾನದಲ್ಲಿ ನಿಷ್ಠಾವಂತ ಓದುಗರ ಸಮೂಹವೊಂದನ್ನು ಸೃಷ್ಟಿಸುವಲ್ಲಿ ಹಾಗೂ ಕನ್ನಡದ ಬರವಣಿಗೆಯ ಭಾಷೆಯನ್ನು ಜನರ ಆಡು ಭಾಷೆಯ ಸಮೀಪಕ್ಕೆ ಕೊಂಡೊಯ್ಯುವಲ್ಲಿ ಕಾದಂಬರಿಗಳ ಮಹತ್ವ ಅಡಗಿದೆ. ಆ ಕಾಲದ ಎಲ್ಲಾ ಹಿರಿಯ ಸಾಹಿತಿಗಳು ಈ ಪ್ರಕಾರದಲ್ಲಿ ಕೃಷಿ ನಡೆಸಿ ಗಾತ್ರದಲ್ಲಿ ಮಾತ್ರವಲ್ಲದೆ ಸತ್ವದಲ್ಲಿ ಇದೊಂದು ಪರಿಪುಷ್ಟ ಪ್ರಕಾರವಾಗುವಂತೆ ಮಾಡಿದರು. ವಿಭಿನ್ನ ವಸ್ತುಗಳನ್ನು ವಿಭಿನ್ನ ತಂತ್ರಗಾರಿಕೆಗಳ ಮೂಲಕ, ವಿಶಿಷ್ಟ ನಿರೂಪಣ ವಿಧಾನಗಳ ಮೂಲಕ ಜನಮಾನಸಕ್ಕೆ ಮುಟ್ಟುವಂತೆ, ತಟ್ಟುವಂತೆ ಮಾಡುವಲ್ಲಿ ಅವರು ಯಶಸ್ವಿಯಾದರು. ಕನ್ನಡಿಗರಲ್ಲಿ ವಾಚನಾಭಿರುಚಿಯನ್ನು ತಿದ್ದಿ ತೀಡಿ ಬೆಳೆಸುವಲ್ಲಿ ಕೂಡಾ ಕಾದಂಬರಿಕಾರರ ಪಾತ್ರ ಹಿರಿದು. ಅದರಲ್ಲೂ ಸಾಮಾಜಿಕ ಕಾದಂಬರಿಗಳು ಜನರನ್ನು ಹತ್ತಿರದಿಂದ ನೋಡಿದ್ದೇ ಅಲ್ಲದೆ ಅವರ ದೈನಂದಿನ ನೋವು-ನಲಿವುಗಳನ್ನು ಬಿಂಬಿಸುವ ಅವು ಓದುಗರ ಹೃದಯಕ್ಕೆ ಹತ್ತಿರವಾಗುವಂತೆ ಮಾಡಿದವು.

ಭಾರತಕ್ಕೆ ಸ್ವಾತಂತ್ರ್ಯ ಬಂದದ್ದು ಸಮಾಜದಲ್ಲಿನ ತ್ವರಿತ ಬದಲಾವಣೆಗೆ ಕಾರಣವಾಯಿತು. ಆ ಕಾಲದಲ್ಲಿ ರಚಿತಗೊಂಡ ಸಾಮಾಜಿಕ ಕಾದಂಬರಿಗಳು ಸಾಮಾಜಿಕ ದಿಕ್ಸೂಚಿಯಾದವು. ಆ ಕಾಲದ ಅಸಂಖ್ಯ ಸಮಸ್ಯೆಗಳಿಗೆ ಸಂವೇದನಾಶೀಲರಾದ ಸಾಹಿತಿಗಳು ಸ್ಪಂದಿಸಿ ತಮ್ಮ ಕಾದಂಬರಿಗಳಿಗೆ ಅವನ್ನು ವಸ್ತುವಾಗಿ ಆರಿಸಿಕೊಂಡು, ಅವುಗಳ ನಿವಾರಣೋಪಾಯಗಳನ್ನು ಹುಡುಕುವಲ್ಲಿ ಯಶಸ್ವಿಯಾಗಿರುವುದನ್ನು ಕಾಣಬಹುದು. ಹೀಗೆ ಸಮಕಾಲೀನ ವಿಚಾರಗಳಿಗೆ ತಮ್ಮ ಕಣ್ಣು ಹೃದಯಗಳೆರಡನ್ನೂ ತೆರೆದು ಮನ ಮಿಡಿದು ಚಿಂತಿಸಿ ತಮ್ಮ ಕಾದಂಬರಿಗಳ ಮೂಲಕ ಪ್ರತಿಕ್ರಿಯಿಸಿದವರಲ್ಲಿ ಕೃಷ್ಣಮೂರ್ತಿ ಪುರಾಣಿಕರು ಮುಂಚೂಣಿಯಲ್ಲಿದ್ದರು. ತಮ್ಮ ಎಂಭತ್ತಕ್ಕೂ ಹೆಚ್ಚು ಕಾದಂಬರಿಗಳ ಮೂಲಕ ಜನಮಾನಸವನ್ನು ಗೆದ್ದ ಹಿರಿಯ ಕಾದಂಬರಿಕಾರರು. ಆಕರ್ಷಕ ಬರವಣಿಗೆ, ಹೃದಯ ತಟ್ಟುವ

ನಿರೂಪಣೆ, ನೇರವಾದ ವಿಚಾರಮಂಡನೆ, ಪರಿಪೂರ್ಣವಾದ ಪಾತ್ರ ಸೃಷ್ಟಿ, ಎಲ್ಲೂ ಜಾಳಾಗದಂತೆ ಹೆಣೆದಿರುವ ಕಥಾಹಂದರ ಇವರ ಕಾದಂಬರಿಗಳ ವೈಶಿಷ್ಟ್ಯವಾಗಿವೆ. ಈ ಕಾರಣದಿಂದಾಗಿಯೇ ಅವರು ಜನಪ್ರಿಯರಾದವರು.

ಕೃಷ್ಣಮೂರ್ತಿ ಪುರಾಣಿಕರು ತಮ್ಮ ಸಾಮಾಜಿಕ ಕಾದಂಬರಿಗಳ ಮೂಲಕವೇ ಮನೆಮಾತಾದವರು. ಜನಜೀವನದ ಒಳ ತಂತಿಯನ್ನು ಅರಿತು ನೀಡುವಲ್ಲಿ ಅವರು ಸಿದ್ಧಹಸ್ತರು. ಜೀವನ ಮೌಲ್ಯದ ಪ್ರತಿಪಾದನೆ ಅವರ ಕಾದಂಬರಿಗಳಲ್ಲಿ ಸದಾ ಅಡಗಿರುತ್ತದೆ. ಹೆಚ್ಚಾಗಿ ಸಮಾಜದ ಸಮಸ್ಯೆಯನ್ನು ಮನಗಂಡು ಅದಕ್ಕೆ ಚಿಂತಿಸಿ ತಮ್ಮ ಮನದಾಳದಲ್ಲಿ ಹೊಳೆದ ಕಥಾವಸ್ತುವನ್ನು ಆಯ್ದು ಅದಕ್ಕೆ ಸಮರ್ಪಕ ಪರಿಪ್ರೇಕ್ಷವನ್ನು ನೀಡಬಲ್ಲ ಸಾಮರ್ಥ್ಯ ಪುರಾಣಿಕರಲ್ಲಿದೆ. ಇದಕ್ಕಾಗಿ ಹೆಚ್ಚಾಗಿ ಅವರು ತಮ್ಮ 'ಅರಿಕೆ'ಯಲ್ಲಿ ಸಮಸ್ಯೆಯನ್ನು, ವಿಚಾರವನ್ನು ಪ್ರಸ್ತಾಪಿಸುತ್ತಾರೆ. ಅದು ಎಷ್ಟು ಪ್ರಸ್ತುತ ಎಂಬುದನ್ನು ಹೇಳುತ್ತಾರೆ. ಕಾದಂಬರಿ ಹಾಗೂ ಕಾದಂಬರಿಕಾರನ ಆಶಯ ಹೇಗೆ ಕಾದಂಬರಿಯ ಒಳಗೆ ಹೆಣಿದಿದೆ ಎಂಬುವುದನ್ನು ಓದುಗನು ಅರ್ಥೈಸಲು ಇದರಿಂದ ಅನುಕೂಲವಾಗುತ್ತದೆ. ಇದಕ್ಕೆ ಉತ್ತಮ ಉದಾಹರಣೆಯೆಂದರೆ ಅವರ 'ಮನಸೋತ ಮನದನ್ನೆ' ಎಂಬ ಕಾದಂಬರಿ. ಅಲ್ಲಿ 'ವಿಧವಾ ವಿವಾಹ'ದ ಸಮಸ್ಯೆಯನ್ನು ಕುರಿತು ಒಬ್ಬರು ಅವರಲ್ಲಿ ಪ್ರಶ್ನಿಸಿದಾಗ, ಅದಕ್ಕೆ ಅವರು ಚಿಂತಿಸುತ್ತಾರೆ. ಅದನ್ನೇ ಚಿಂತಿಸಿ ಈ ಕಾದಂಬರಿಗೆ ವಸ್ತುವಾಗಿ ಆಯ್ದುಕೊಳ್ಳುತ್ತಾರೆ. ಈ ಬಗ್ಗೆ ತಮ್ಮ ಚಿಂತನೆ ಏನು ಎಂಬುದನ್ನು ಹೀಗೆ ಹೇಳಿದ್ದಾರೆ. "ವಿಧವಾ ವಿವಾಹ"ದ ಪ್ರಶ್ನೆಗಳಿಗೆ ಮಾತಿನ ಜಾಣ್ಮೆಯಲ್ಲಿ ಉತ್ತರ ಕೊಡುವುದು ಸುಲಭವಾಗಿದ್ದರೂ ಜೀವನದಲ್ಲಿ ಆ ಸಮಸ್ಯೆಗಳನ್ನು ಬಿಡಿಸುವುದು ಅಷ್ಟು ಸುಲಭ ಸಾಧ್ಯವೆಂದು ನನಗೆ ಅನಿಸಲಿಲ್ಲ. ನಮ್ಮ ಸಂಸ್ಕೃತಿ ನಮ್ಮ ಪರಂಪರೆಗಳಿಗೆ ಅನುಗುಣವಾಗಿ ನಮ್ಮ ಜೀವನ ಸಮಸ್ಯೆಗಳನ್ನು ಬಿಡಿಸಿಕೊಳ್ಳಬೇಕಾಗಿರುವಾಗ ಈ ಪ್ರಶ್ನೆ ಇನ್ನೂ ಜಟಿಲವೆಂದುತೋರಿತು. ನಾನು ಈ ಯೋಚನೆಯನ್ನೇ ಮಾಡುತ್ತಿರುವಾಗ ಜೀವನ ನನಗೆ ಒಂದು ಕಥಾ ವಸ್ತುವನ್ನು ದಯಪಾಲಿಸಿತು. ಇದರಲ್ಲಿ ಸಮಸ್ಯೆಗಿಂತ ಜೀವನವೇ ಎದ್ದು ಕುಣಿಯಿತು. ಇದೇ ನನ್ನ ಕರ್ತವ್ಯವೆಂದು ತಿಳಿದು ಜೀವನ ಚಿತ್ರಣದಲ್ಲಿ ಸಮಸ್ಯೆಗಳನ್ನು ಕೇಳಿ ಬಿಡಬೇಕೆಂದು ನಿರ್ಧರಿಸಿದ್ದೆನು. ಲೇಖಕನ ದರ್ಶನದೃಷ್ಟಿ ಜೀವಸೃಷ್ಟಿಗೆ ತವಕ ಪಡುತ್ತಿತ್ತು. ಇದರ ಪರಿಣಾಮವಾಗಿ 'ಮನಸೋತ ಮನದನ್ನೆ' ರೂಪಗೊಂಡಿತ್ತು. ಹೀಗೆ ಹೇಳುವ ಮೂಲಕ ಪುರಾಣಿಕರು ತಮ್ಮ ಕಥಾವಸ್ತುವಿನ ಆಯ್ಕೆಯಲ್ಲಿ ಅವರ ಸ್ವಂತ ವಿಚಾರಧಾರೆ ಹಾಗೂ ಜೀವನಾನುಭವಗಳು ಹೇಗೆ ಕಥಾವಸ್ತುವಾಗುತ್ತದೆ ಎಂಬುವುದನ್ನು ಹೇಳಿದ್ದಾರೆ.

ಈ ಕಾದಂಬರಿ ಕೇವಲ ವಿಧವಾ ಸಮಸ್ಯೆಯೊಂದನ್ನೇ ಹೇಳುತ್ತಿಲ್ಲ. ಅದರೊಂದಿಗೆ ಹೆಣ್ಣುಮಕ್ಕಳ ನಿಜವಾದ ಸಮಸ್ಯೆ ಏನು ಎಂಬುದನ್ನು ವಿಶ್ಲೇಷಿಸುತ್ತದೆ. ಆದರೆ

ವಿಚಾರದ ಕೇವಲ ನಿರೂಪಣೆ ಇಲ್ಲಿ ಇಲ್ಲ. ಅವರ ಬರವಣಿಗೆಯ ಆಕರ್ಷಕ ಶೈಲಿ, ವಿಚಾರವನ್ನು ಗರ್ಭೀಕರಿಸಿಕೊಂಡಿರುವುದರಿಂದ ಕಾದಂಬರಿ ಸಹಜವಾಗಿ ಓದಿಸಿಕೊಂಡು ಹೋಗುತ್ತದೆ. ಜೀವನ ವಿಸ್ತಾರ ಹಾಗೂ ವೈವಿಧ್ಯದ ನಿರೂಪಣೆ ಇಲ್ಲಿ ಸೊಗಸಾಗಿ ಪಡಿಮೂಡಿದೆ. ಇಲ್ಲಿ ಬರುವ ಶಾರದೆ, ಕಾವೇರಿ, ಸರಸ್ವತಿ ಮೂವರೂ ಮೂರು ಬಗೆಯ ಜೀವನ ಮೌಲ್ಯದ ಪ್ರತಿಪಾದಕರು.

ಇವರ ಬಾಳಿನಲ್ಲಿ ಸಂಭವಿಸುವ ಘಟನೆಗಳಿಗೆ ಅವರವರು ಪ್ರತಿಕ್ರಿಯಿಸಿದ ಬಗೆ ಹಾಗೂ ಅದರ ಪರಿಣಾಮಗಳು ಕಾದಂಬರಿಯನ್ನು ಒಂದು ವೈಚಾರಿಕ ನೆಲೆಗೆ ಕೊಂಡು ಹೋಗಿದೆ. ಭಾರತೀಯ ಜೀವನ ಪರಂಪರೆಯ ಹಿನ್ನೆಲೆಯಲ್ಲಿ ಎಪ್ಪತ್ತು-ಎಂಭತ್ತು ವರ್ಷಗಳ ಕೆಳಗಿನ ಸಾಮಾಜಿಕ ಪರಿಸ್ಥಿತಿಯಲ್ಲಿ ಕುಟುಂಬದ ದಾಂಪತ್ಯದ ಸಮಸ್ಯೆಗಳನ್ನು ಪರಿಹರಿಸಿಕೊಳ್ಳಬೇಕಾದ ವಿಧಿವಿಧಾನಗಳ ಬಗ್ಗೆ ಪುರಾಣಿಕರು ಸಾಕಷ್ಟು ಒಳನೋಟಗಳನ್ನು ನೀಡುತ್ತಾರೆ. ಅವರೇ ಹೇಳುವಂತೆ ಸಮಸ್ಯೆ ಅಷ್ಟೊಂದು ಸರಳವಲ್ಲ. ಭಾವ ಬುದ್ಧಿಗಳು ಹೇಗೆ ಬದುಕನ್ನು ನಿಯಂತ್ರಿಸುತ್ತವೆ ಎಂಬುವುದನ್ನು ಈ ಕಾದಂಬರಿಯಲ್ಲಿ ಪುರಾಣಿಕರು ಶೋಧಿಸುತ್ತಾರೆ. ಮೊದಲಿಗೆ ಗೆದ್ದವಳಂತೆ ಕಂಡು ಬರುವ ಶಾರದೆ ಹೇಗೆ ಎಡವಿದಳು, ಕಡೆಗೆ ಹೇಗೆ ಸೋತು ಸತ್ಯವನ್ನು ಅರಿತುಕೊಂಡಳು ಎಂಬ ವಿಚಾರವನ್ನು ಪುರಾಣಿಕರು ಮನೋಜ್ಞವಾಗಿ ಚಿತ್ರಿಸಿದ್ದಾರೆ. ಅದೇ ಸರಸ್ವತಿ ಪರಿಸ್ಥಿತಿಯ ಕೈಗೂಸಾಗಿ ದುರಂತಕ್ಕೆ ತಳ್ಳಲ್ಪಟ್ಟಳು. ಕಾವೇರಿಯ ಬದುಕಿನ ತಿರುವುಗಳನ್ನು ನೋಡಿ, ಅಲ್ಲಿ ಅಡಗಿರುವ ಘೋರ ಸತ್ಯಗಳನ್ನು ಅರಿತು, ಪ್ರೀತಿಯ ಶಕ್ತಿಯನ್ನು ಕಂಡುಕೊಂಡು ದುರಂತದೆಡೆಗೆ ಸಾಗುತ್ತಿದ್ದ ತನ್ನ ಬದುಕನ್ನು ಹೇಗೆ ಉಳಿಸಿಕೊಳ್ಳುತ್ತಾಳೆ, ಹಳಿ ತಪ್ಪಿದ ಬಂಡಿ ಹೇಗೆ ಸರಿದಾರಿಗೆ ತರಲು ತರುತ್ತಾಳೆ ಎಂಬುದನ್ನು ಬಹು ಸಮರ್ಪಕವಾಗಿ ಪುರಾಣಿಕರು ಇಲ್ಲಿ ತೋರಿಸಿಕೊಟ್ಟಿದ್ದಾರೆ. ಒಬ್ಬ ಕನ್ನಡ ಅಧ್ಯಾಪಕರ ಮಗಳಾಗಿ ಬಡತನದಲ್ಲಿ ಬೆಳೆದರೂ ಬಾಳಿನ ನಡೆನುಡಿಗಳಲ್ಲಿ ಶುದ್ಧತೆಯನ್ನು ಕಾಪಾಡಿಕೊಂಡು ಇದ್ದಿದ್ದರಲ್ಲಿ ಆನಂದವನ್ನು ಕಂಡುಕೊಂಡು ಕಾವೇರಿ ಒಮ್ಮೆ ತನ್ನ ವಿಚಾರವಂತಿಕೆಯನ್ನು ಭಾವದ ಕೈಗೆ ಕೊಟ್ಟರೂ ಮತ್ತೆ ಅರಿತು ಅದನ್ನು ಬದಲಾಯಿಸಿಕೊಂಡು ಸರಿ ನಿರ್ಧಾರ ತೆಗೆದುಕೊಳ್ಳುತ್ತಾಳೆ. ಆಕೆಯ ಮನಸ್ಸಿನಲ್ಲಿ ಎದ್ದ ದ್ವಂದ್ವ ನಿಲುವುಗಳಲ್ಲಿ ಅವಳ ನಿಜವಾದ ವ್ಯಕ್ತಿತ್ವವೇ ಗೆಲ್ಲುತ್ತದೆ. ಕಾವೇರಿ ಭಾರತೀಯ ಜೀವನ ಮೌಲ್ಯಕ್ಕೆ ಶರಣಾಗುವ ಮೂಲಕ ಕುಬೇರಪ್ಪ ಹಾಗೂ ಗಿರಿಜಾಬಾಯಿ ಅವರ ಕುಟುಂಬದ ಆಸರೆಗೆ ನಿಲ್ಲುತ್ತಾಳೆ. ಆ ಮೂಲಕ ಎಲ್ಲಾ ನೋವುಗಳಿಗೆ ಇತಿಶ್ರೀ ಹಾಡಿ, ಭಾರತೀಯ ಪರಂಪರೆಯಲ್ಲೇ ವಿಶಿಷ್ಟ ಸ್ಥಾನ ಗಳಿಸಿರುವ ಕುಟುಂಬ ವ್ಯವಸ್ಥೆಗೆ ಜೀವಶಕ್ತಿಯನ್ನು ತುಂಬುತ್ತಾಳೆ. ಜಾಗತಿಕ ರಂಗಕ್ಕೆ ಭಾರತ ಕೊಟ್ಟ ದೊಡ್ಡ ಕೊಡುಗೆಯೆಂದರೆ 'ಕುಟುಂಬ' ವ್ಯವಸ್ಥೆ. ಅದು ಇಲ್ಲಿ ಗೆದ್ದು, ಭಾರತೀಯ ಪಾರಂಪರಿಕ ಮೌಲ್ಯವನ್ನು ಗೆಲ್ಲಿಸುತ್ತದೆ.

ಕೃಷ್ಣಮೂರ್ತಿ ಪುರಾಣಿಕರ ಸ್ವಂತಿಕೆ ಇರುವುದೇ ಈ ಬಗೆಯ ನಿರೂಪಣೆಯಲ್ಲಿ. ಇಡೀ ಕಾದಂಬರಿಯ ವಸ್ತು ವಿಧವಾ ವಿವಾಹದ ಸಮಸ್ಯೆ ಎಂದುಕೊಂಡರೂ ಅದು ಕೇವಲ ಅಲ್ಲಿಗೆ ನಿಲ್ಲುವುದಿಲ್ಲ. ಇಡೀ ಸ್ತ್ರೀಕುಲದ ಸಮಸ್ಯೆಯ ಅನಾವರಣವಾಗುತ್ತದೆ. ಭಾರತೀಯ ಸಮಾಜದಲ್ಲಿ ಅಡಗಿರುವ ಮಹಿಳೆಯರ ನೋವಿನಿಂದ ಕೂಡಿದ ಜೀವನದ ಚಿತ್ರಣ ಇಲ್ಲಿದೆ. ಕಾದಂಬರಿಕಾರರ ಪ್ರಖರವಾದ ಚಿಂತನೆ ಹರಿದು ಒಂದು ಸುಖದ ಬದುಕನ್ನು ಕಟ್ಟಿಕೊಳ್ಳಬಹುದೆಂಬ ಸೂಚನೆ ಅಡಗಿದೆ. ಶಾರದೆ, ಕಾವೇರಿ ಹಾಗೂ ಸರಸ್ವತಿಯರು ಬಾಳಿನಲ್ಲಿ ಸುಖವನ್ನು ತಂದುಕೊಂಡರು ಎಂದು ಹೇಳುವ ಮೂಲಕ ಕಾದಂಬರಿ ಅಂತ್ಯಗೊಳ್ಳುತ್ತದೆ. ಸಮಸ್ಯೆಗಳನ್ನು ಅರಿಯುವುದಕ್ಕಿಂತ ಸಮಸ್ಯೆಗಳನ್ನು ಪರಿಹರಿಸುವುದೇ ಮುಖ್ಯ ಎಂಬುದು ಕೃಷ್ಣಮೂರ್ತಿ ಪುರಾಣಿಕರ ಸ್ಪಷ್ಟ ನಿಲುವು. ಇದು ಗಾಢವಾಗಿ ಹಾಗೂ ಢಾಳಾಗಿ ಕಾದಂಬರಿಯಲ್ಲಿ ಕಂಡುಬಂದಿದೆ. ಭಾರತೀಯ ಕುಟುಂಬ ವ್ಯವಸ್ಥೆ ಭದ್ರ ಬುನಾದಿಯ ಮೇಲೆ ನಿಂತಿದೆ. ಆದುದ್ದರಿಂದಲೇ ಎಂತಹ ಪಾಶ್ಚಾತ್ಯ ಗಾಳಿಗೂ ಅದು ಹೊಯ್ದಾಡುವುದಿಲ್ಲ. ಎಲ್ಲಾ ಹೊಸತನ ತರುವ ಆಮಿಷವನ್ನು ಮೆಟ್ಟಿ ನಿಲ್ಲವ ಸಾಮರ್ಥ್ಯ ಅದಕ್ಕೆ ಇದೆ. ಆದ್ದರಿಂದಲೇ ನಮ್ಮ ಕುಟುಂಬ ವ್ಯವಸ್ಥೆ ಇಂದಿಗೂ ಗಟ್ಟಿಯಾಗಿ ನೆಲೆ ನಿಂತಿದೆ. ಇದರ ಪ್ರತಿಪಾದನೆಯಲ್ಲಿ ಪುರಾಣಿಕರ ಸ್ವಂತಿಕೆ ಅಡಗಿದೆ.

ಕೃಷ್ಣಮೂರ್ತಿ ಪುರಾಣಿಕರ ಕಾದಂಬರಿಗಳ ಇನ್ನೊಂದು ವೈಶಿಷ್ಟ್ಯವೆಂದರೆ ಅಥೆಂಟಿಕ್ ಆಗಿರುವ ಸಂಭಾಷಣೆ.ಇಲ್ಲಿನ ಪಾತ್ರಗಳು ಆಡುವ ಮಾತುಗಳು ಎಲ್ಲೂ ಕೃತಕವೆನಿಸುವುದಿಲ್ಲ.ಸೃಜನಶೀಲ ವಿಶೇಷಗಳು ಕಾದಂಬರಿಯಲ್ಲಿ ಬರುವ ಸಂಭಾಷಣೆಗಳಲ್ಲಿ ಮಾರ್ದನಿಗೊಳ್ಳತ್ತವೆ.ಇದಕ್ಕೆ ಉತ್ತಮ ಉದಾಹರಣೆಯೆಂದರೆ ಅವರ 'ಮಾತಿನ ಮಲ್ಲಿ' ಕಾದಂಬರಿಯಲ್ಲಿ ಬರುವ ಒಂದು ಸಂಭಾಷಣೆ ವಾಕ್ಯ ಹೀಗಿದೆ. 'ಇಲ್ಲಿ ನೋಡು ಚಿತ್ರ' ನಿಮ್ಮ ಜಗಳವನ್ನು ಬಗೆಹರಿಸಬೇಕೆಂದು ನಿರ್ಧರಿಸಿದ್ದೇನೆ. ಈಗ ಬಗೆ ಹರಿದಿದೆಯಲ್ಲ. "ಇಡಿಗಾಳು ಬಿಡಿಕಾಳು ಆಗುವುದು ಜಗಳ ಬಗೆಹರಿಯದ ಲಕ್ಷಣವಲ್ಲ. ಕೂಡಿ ಬೆಳೆಯುವದೇ ಸಹಕಾರದ ಸಂತೋಷ. ಈ ಸಹಕಾರವನ್ನು. ಈ ಸಂತೋಷವನ್ನು. ಈ ಸೌಖ್ಯವನ್ನು ನೀನು ಅರ್ಥ ಮಾಡಿಕೊಳ್ಳಬೇಕು. ಜೀವನವು ಜಗಳದ ಮಲ್ಲ ಸಾಲೆಯಲ್ಲ. ಚಿತ್ರ ಅದೊಂದು ಅಂತಃಕರಣದ ಅಕ್ಕರೆಯ ತಿಳುವಳಿಕೆಯ ಜೇನುಹಾಲಿನ ಝುರಿ, ಗಂಡ, ಹೆಂಡತಿ, ತಾಯಿ, ಅಣ್ಣ, ತಮ್ಮ ಎಲ್ಲರೂ ಪ್ರೀತಿಯಿಂದ ಇರುವುದೇ ಜೀವನದ ಮಹತಿ. ಈ ಮಹತಿಯನ್ನು ಕಡೆಗಣಿಸುವುದು ಜೀವನದ ಅವಲಕ್ಷಣ. ಲಕ್ಷಣವಂತೆಯಾದ ನೀನು ಅವಲಕ್ಷಣಳಾಗಿ ಪೂತ್ಕರಿಸ ಬೇಡ. ಸಹಕಾರ, ಸೌಹಾರ್ದತೆ, ಸಹ ಜೀವನವೇ ಉದ್ಧಾರ, ಮಾರ್ಗ ತಿಳಿಯಿತೇನು? ಇದು ಕುಟುಂಬಕ್ಕೆ ಅನ್ವಯಿಸುವಂತೆ ದೇಶಕ್ಕೂ ಅನ್ವಯಿಸುತ್ತದೆ ತಿಳಿಯಿತೇನು?"

ಇಲ್ಲಿ ಈ ಬಗೆಯ ವಾಕ್ಯಗಳಲ್ಲಿ ಬದುಕಿನ ಮಹತಿಯನ್ನು ಪುರಾಣಿಕರು ಬಹು ಸೊಗಸಾಗಿ ವಿವರಿಸಿದ್ದಾರೆ. ದಾಂಪತ್ಯದ ಮೇಲ್ಮೈಯನ್ನು ಈ ಕಾದಂಬರಿಯಲ್ಲಿ ಅನೇಕ ಕಡೆ ಸಾರಿದ್ದಾರೆ. ಪ್ರೀತಿ ತ್ಯಾಗಗಳೇ ಕುಟುಂಬ ವ್ಯವಸ್ಥೆಯ ಮೂಲಾಧಾರ. ಅದರ ಮೇಲೆ ನಿಂತ ಕುಟುಂಬ ಎಂದು ಮುಕ್ಕಾಗುವುದಿಲ್ಲ. ಅದರ ಬದಲು ಸ್ವಾರ್ಥ, ಹಿಂಸೆ ತನ್ನದೇ ಗೆಲ್ಲಬೇಕೆಂಬ ಹಠಗಳೇ ಮುಂದೆ ಬಂದಾಗ ಕುಟುಂಬ ವ್ಯವಸ್ಥೆ ಸೋಲುತ್ತದೆ. ಚಿತ್ರಾಳ ಹಠವೇ ಅವಳ ಕುಟುಂಬ ಒಡೆಯಲು ಕಾರಣವಾಗುತ್ತದೆ. ಅವಳ ಬದುಕು ಮೂರಾಬಟ್ಟೆಯಾದದ್ದು ಮಾತ್ರವಲ್ಲದೆ, ಡಾಕ್ಟರ್ ಶಂಕರರಾಯರ ಬದುಕನ್ನು ಕೂಡ ನಾಶಪಡಿಸುತ್ತದೆ. ಇದರಿಂದಾಗಿ ಶಂಕರರಾಯರು "ಮಾತಿನ ಮಲ್ಲಿ"ಯ ಬಲೆಗೆ ಬೀಳುತ್ತಾರೆ. ತಮ್ಮ ಸರ್ವಸ್ವವನ್ನು ಕಳೆದುಕೊಳ್ಳುತ್ತಾರೆ.

ಕೃಷ್ಣಮೂರ್ತಿ ಪುರಾಣಿಕರು 'ಕಾದಂಬರಿಗಳು ಸಮಾಜದ ನಿಜವಾದ ಪ್ರತಿಬಿಂಬವನ್ನು ನೀಡಬೇಕೆಂದು' ನಂಬಿ ಸಾಹಿತ್ಯ ಸೇವೆ ಮಾಡಿದವರು. ಜೀವನದ ಗತಿ ಸ್ಥಿತಿಯ ನಿರೂಪಣೆಯೇ ಕಾದಂಬರಿಯೆಂದು ಬಗೆದವರು. ಇದನ್ನೇ ತಮ್ಮ "ಮಾತಿನ ಮಲ್ಲಿ" ಕಾದಂಬರಿಯಲ್ಲಿ ಹೇಳಿಕೊಂಡಿದ್ದಾರೆ. ಕಾದಂಬರಿಯು ಕಲ್ಪನೆಯ ಹೂವು ಅಲ್ಲ, "ಮುಗಿಲ ಮಲ್ಲಿಗೆ"ಯೂ ಅಲ್ಲ, ಈ ಬಳ್ಳಿಯ ಬೇರು ನೆಲದಲ್ಲಿ ಬಿಟ್ಟಿದೆ. ಸಮಾಜ ಜೀವನದಲ್ಲಿ ಅದರ ರೆಂಬೆ-ಕೊಂಬೆಗಳು ವಿಸ್ತಾರವಾಗಿ ಹಸಿರು ಚಿಗುರುಗಳನ್ನು ಪಡೆದುಕೊಂಡು ಚಿತ್ತಾಕರ್ಷಕವಾಗಿ ಹರಡಿಕೊಂಡಿದೆ. ಜನಜೀವನದ ಜೀವಂತ ವಾಣಿಯ ವೀಣೆಯನ್ನು ಪಡೆದುಕೊಂಡ ಶಾರದೆಗೆ ಕಾದಂಬರಿಯ ಹೊರಡಿಸುವ ಮಂಜುಳ ಧ್ವನಿ ಅತ್ಯಂತ ಪ್ರಿಯವಾಗಿರುತ್ತದೆ.

ಜೀವಂತ ಜನರ ಜೀವನದ ಪ್ರತಿನಿಧಿಯೇ ಕಾದಂಬರಿ ಎಂತಲೇ ಸಾಮಾಜಿಕ ಕಾದಂಬರಿ ಸಾಹಿತ್ಯ ಸಾಮ್ರಾಜ್ಯದ ಪಟ್ಟದರಾಣಿಯಾಗಿ ಮೆರೆಯುತ್ತದೆ. ಈ ಮಾತು ಅಕ್ಷರಶಃ ಸತ್ಯ. ಒಬ್ಬ ಪ್ರಬುದ್ಧ ಕಾದಂಬರಿಕಾರ ದಾರ್ಶನಿಕ ಇದ್ದಂತೆ ಆತ ಸಮಾಜ ಜೀವನವನ್ನು ಅಂತರ್ಮುಖಿಯಾಗಿ ನೋಡಿ, ಅದರ ಒಳ ಮುಗ್ಗುಲುಗಳನ್ನು ಸೂಕ್ಷ್ಮವಾಗಿ ಅವಲೋಕಿಸಿ ತನ್ನ ಕಾದಂಬರಿಯಲ್ಲಿ ಸಾಕ್ಷಾತ್ಕರಿಸುತ್ತಾನೆ. ತಾನೆ ಆ ಮೂಲಕ ತನ್ನ ಸ್ವಂತಿಕೆಯನ್ನು ಮೆರೆಯುತ್ತಾನೆ. ಪುರಾಣಿಕರ ಕಾದಂಬರಿಗಳನ್ನು ಈ ನಿಟ್ಟಿನಿಂದ ನೋಡಿದಾಗಲೂ ಅವರ ಸ್ವಂತಿಕೆ ಎದ್ದು ಕಾಣುತ್ತದೆ.

ಪುರಾಣಿಕರ ಕಾದಂಬರಿಗಳಲ್ಲಿ ಬರುವ ಪಾತ್ರಗಳು ಜೀವಂತ ಪಾತ್ರಗಳು. ಅವರ ಪಾತ್ರಚಿತ್ರಣ, ಶಕ್ತಿ ಅನನ್ಯವಾದದ್ದು. ಮಲ್ಲ, ಶಂಕರ, ರಾಯರು, ಕುಬೇರಪ್ಪ, ಮಾಧು, ಸರಸ್ವತಿ, ರಂಗರಾಯರು, ಮಧುಕರ ಮುಂತಾದ ಪಾತ್ರಗಳೆಲ್ಲ ಸದಾ ಕಣ್ಮುಂದೆ ನಿಲ್ಲುವಂತಹವು. ಈ ಎಲ್ಲಾ ಪಾತ್ರಗಳ ಬೇರೆಬೇರೆ ಪಾತಳಿಯ ಮೇಲೆ ಪುರಾಣಿಕರು ಕಡೆದು ನಿಲ್ಲಿಸಿದ್ದಾರೆ. ಒಬ್ಬೊಬ್ಬರು ಅವರವರ ನಂಬಿದ ಜೀವನ ವ್ಯವಸ್ಥೆಗೆ ಬದ್ಧರಾದವರು. "ಮಲ್ಲಿ" ಮೂಲತಃ ದೇವದಾಸಿ ವಿಧಾನದಲ್ಲಿ ಅಪಾರ

ನಂಬಿಕೆ ಉಳ್ಳವಳು. ಅದಕ್ಕಾಗಿಯೇ ತಾನು ನಡೆಯುತ್ತಿರುವ ದಾರಿ ಸರಿಯೆಂದು ಬಗೆದವಳು. ಅವಳ ವಿಚಾರಧಾರೆಯಲ್ಲಿ ಸ್ಪಷ್ಟತೆ ಇದೆ. ಆದುದರಿಂದಲೇ ತಾನು ಮಾಡುತ್ತಿರುವುದು ವಂಚನೆ ಎನಿಸುವುದೇ ಇಲ್ಲ. ಅಲ್ಲದೆ ಅದಕ್ಕೆ ಹೊಂದುವಂತೆ ಅವಳಲ್ಲಿ ಮಾತಿನ ಶಕ್ತಿ ಇದೆ. ತನ್ನ ಕಾರ್ಯವನ್ನು ಸಾಧಿಸಿಕೊಳ್ಳಲು ತನ್ನ ಮಾತಿನ ಜಾಣ್ಮೆಯನ್ನು ದೈಹಿಕ ಸೌಂದರ್ಯವನ್ನು ಬಳಸಿಕೊಳ್ಳುತ್ತಾಳೆ. ಇದೆಲ್ಲಾ ಕೃತಕ ಎಂದೆನಿಸುವುದೇ ಇಲ್ಲ. ಕೃಷ್ಣಮೂರ್ತಿ ಪುರಾಣಿಕರ ಕಾದಂಬರಿಗಳಿಗೆ ಸ್ವಂತಿಕೆ ಇಂತಹ ಪಾತ್ರಗಳ ನಿರೂಪಣೆಯಲ್ಲಿದೆ. ಇವರ ಕಾದಂಬರಿಯ ಪಾತ್ರಗಳು ಸಮಾಜದಿಂದ ಎದ್ದು ಬಂದಂತಿವೆ. ಕೃತಕೃತೆಯ ಮುಖವಾಡವನ್ನು ಅವು ಎಲ್ಲೂ ತೊಟ್ಟಿಲ್ಲ. ನಮ್ಮ ಅಕ್ಕ ಪಕ್ಕದಲ್ಲಿ ಇಂಥವರು ಇದ್ದಾರೆ ಎಂಬುದನ್ನು ಈ ಪಾತ್ರಗಳು ನೆನಪಿಸುತ್ತವೆ. ಇಂತಹ ಸಜೀವ ಪಾತ್ರ ನಿರ್ಮಿತಿ ಮಾಡಿದ ಪುರಾಣಿಕರು ಧನ್ಯರು. ಕಳೆದ ಶತಮಾನದಲ್ಲಿ ಅವರ ಕಾದಂಬರಿಗಳು ಅಪಾರ ಜನಪ್ರಿಯತೆಯನ್ನು ಗಳಿಸಿದ್ದು, ಇಂತಹ ಪಾತ್ರಗಳ ಸೃಷ್ಟಿಯಿಂದ. ಕಥಾವಸ್ತುವಿನ ಆಯ್ಕೆಯಲ್ಲಿ ಆಕರ್ಷಕ ಬರವಣಿಗೆಯಲ್ಲಿ, ಮನ ಮುಟ್ಟುವ ಸಂಭಾಷಣೆಯಲ್ಲಿ, ಸಜೀವ ಪಾತ್ರ ಚಿತ್ರಣದಲ್ಲಿ ಪುರಾಣಿಕರ ಸ್ವಂತಿಕೆ ಇದೆ.

□

ತಮಿಳು ಕನ್ನಡದ ಮಧುರ ಸೇತುವೆ

"ಎಲ್ಲಾದರು ಇರು ಎಂತಾದರು ಇರು ಎಂದೆಂದಿಗೂ ನೀ ಕನ್ನಡವಾಗಿರು" ಎಂಬ ಕುವೆಂಪು ರವರ ಕವಿವಾಣಿಯನ್ನು ನಿಜವಾಗಿಸಿದವರು ಕನ್ನಡ ಸಾಹಿತ್ಯ ಹಾಗೂ ವಿದ್ವತ್ ಲೋಕದಲ್ಲಿ ಖ್ಯಾತರಾಗಿದ್ದ ಪಾ.ಶ. ಶ್ರೀನಿವಾಸರು ತಮ್ಮ 85ರ ಇಳಿ ವಯಸ್ಸಿನಲ್ಲಿ ಇನ್ನಿಲ್ಲವಾಗಿದ್ದಾರೆ. ಇವರು ಮೂಲತಃ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹುಟ್ಟಿದ್ದರೂ ಬಾಲ್ಯ ಹಾಗೂ ವಿದ್ಯಾಭ್ಯಾಸವನ್ನು ನಡೆಸಿದ್ದು ಸಕ್ಕರೆ ನಾಡಾದ ಮಂಡ್ಯದಲ್ಲಿ. ಆದರೆ ಕಾಯಕದ ಕ್ಷೇತ್ರವಾಗಿ ಇವರಿಗೆ ಒಲಿದು ಬಂದದ್ದು ತಮಿಳರ ಸಾಂಸ್ಕೃತಿಕ ನಗರಿಯಾದ ಮಧುರೈ. ಐದು ದಶಕಗಳ ಕಾಲ ತಮಿಳುನಾಡಿನಲ್ಲಿ ನೆಲೆ ನಿಂತು ಹೊರನಾಡಿನಲ್ಲಿ ಕನ್ನಡ ಕಟ್ಟಬೇಕೆಂಬ ಮನಸ್ಸುಳ್ಳವರಿಗೆ ಇವರು ಮಾದರಿಯಾಗಿದ್ದಾರೆ. ಕನ್ನಡ ಸಾಹಿತ್ಯಕ್ಕೆ ಅದರಲ್ಲೂ ಅನುವಾದ ಸಾಹಿತ್ಯಕ್ಕೆ ಇವರು ನೀಡಿದ ಕೊಡುಗೆ ಅನನ್ಯ. ಅವರ ಈಚಿನ ಅಗಲಿಕೆಯಿಂದ ತಮಿಳು ಕನ್ನಡ ಸಾಹಿತ್ಯಕೊಂಡಿಯೊಂದು ಕಳಚಿದಂತಾಗಿದೆ.

ಪಾ.ಶ. ಶ್ರೀನಿವಾಸರು ತಮ್ಮ ಎಳೆಯ ವಿದ್ಯಾರ್ಥಿ ಜೀವನದಲ್ಲೇ ಮಂಡ್ಯದ 'ಕಿರಣ ಸಾಹಿತ್ಯ ಸಂಘ'ದ ಸಕ್ರಿಯ ಸದಸ್ಯರಾಗಿದ್ದು, 'ಜನ್ಮಭೂಮಿ' ಎಂಬ ಹಸ್ತಪತ್ರಿಕೆಯ ಸಂಪಾದಕರಾಗಿದ್ದರು. ಮೈಸೂರಿನ ಮಾನಸ ಗಂಗೋತ್ರಿಯ ಕನ್ನಡ ಎಂ.ಎ. ತರಗತಿಗಳಲ್ಲಿರುವಾಗಲೇ ವಿದ್ವತ್‌ಪೂರ್ಣ ಲೇಖನಗಳನ್ನು ಬರೆದು ಅಂದಿನ ಹಿರಿಯ ಸಾಹಿತಿಗಳ ವೆಚ್ಚುಗೆ ಪಡೆದಿದ್ದರು. ಅ.ರಾ. ಮಿತ್ರ, ಹಂಪನಾಗರಾಜಯ್ಯ, ಎಂ.ಎಚ್. ಕೃಷ್ಣಯ್ಯ, ಲಕ್ಷ್ಮಿನಾರಾಯಣ ಭಟ್ಟ, ಕಮಲಾ ಹಂಪನಾ ಮುಂತಾದವರು ಇವರ ಸಹಪಾಠಿಗಳಾಗಿದ್ದರು. ಅರವತ್ತು ವರ್ಷಗಳ ಹಿಂದೆ ವೃತ್ತಿ ಬದುಕಿಗಾಗಿ ಮದ್ರಾಸ್ ಸೇರಿ ಅಲ್ಲಿನ 'ದಕ್ಷಿಣ ಭಾಷಾ ಪುಸ್ತಕ ಸಂಸ್ಥೆ'ಯ ಸಂಪಾದಕರಾಗಿ ಐದು ವರ್ಷ ಕಾರ್ಯನಿರ್ವಹಿಸಿದರು. ಇದರಿಂದ ಸೋದರ ಭಾಷೆಗಳ ಸಂಪರ್ಕ ಲಭಿಸಿ ತೌಲನಿಕ ಅಧ್ಯಯನಕ್ಕೆ ಒಗ್ಗಿ ಹೋದರು. 1964 ರಲ್ಲಿ ಮದ್ರಾಸ್ ವಿಶ್ವವಿದ್ಯಾಲಯದ ಕನ್ನಡ ವಿಭಾಗದ ಉಪನ್ಯಾಸಕಾರಾಗಿ ಆಯ್ಕೆಯಾಗಿ 8 ವರ್ಷಗಳ ಕಾಲ ಮದ್ರಾಸ್‌ನ ಕನ್ನಡ

ಪರ ಚಟುಪಟಿಕೆಗಳಲ್ಲಿ ಮುಂಚೂಣಿಯಲ್ಲಿದ್ದರು. ಶರಣ ಹಾಗೂ ದಾಸ ಸಾಹಿತ್ಯದ ತೌಲನಿಕ ಅಧ್ಯಯನವನ್ನು ಇಂಗ್ಲೀಷ್‌ನಲ್ಲಿ ಬರೆದು ಪಿ.ಹೆಚ್.ಡಿ ಪದವಿಯನ್ನು ಮದ್ರಾಸ್ ವಿಶ್ವವಿದ್ಯಾಲಯದಿಂದ ಗಳಿಸಿದರು.

1972ರಲ್ಲಿ ಮಧುರೈ ಕಾಮರಾಜ ವಿಶ್ವವಿದ್ಯಾಲಯದಲ್ಲಿ ಕನ್ನಡ ವಿಭಾಗ ಪ್ರಾರಂಭವಾದಾಗ ಅದರ ಮುಖ್ಯಸ್ಥರಾಗಿ ನೇಮಕಗೊಂಡ ಶ್ರೀನಿವಾಸರು 3 ದಶಕಗಳ ಕಾಲ ಮಧುರೈಯಲ್ಲಿ ನೆಲೆಸಿ ಕನ್ನಡ ಹಾಗೂ ತಮಿಳು ಸಾಹಿತ್ಯ ಸೇತುವೆಯಾಗಿ ನಿರಂತರವಾಗಿ ಸಾಹಿತ್ಯ ಸೇವೆ ನಡೆಸಿದರು. ಪಾ.ಶ. ಶ್ರೀನಿವಾಸರ ಕಾರ್ಯನಿಷ್ಠೆ, ಅಧ್ಯಯನಾಸಕ್ತಿ, ಹೊರನಾಡಿನಲ್ಲಿ ಕನ್ನಡವನ್ನು ಬೆಳೆಸಬೇಕೆಂಬ ಸಂಕಲ್ಪ, ಬೇರೆ ಭಾಷೆಯ ವಿದ್ವಾಂಸರೊಂದಿಗಿನ ಸುಮಧುರ ಸಂಬಂಧ ಮುಂತಾದವುಗಳಿಂದಾಗಿ ಮಧುರೈ ವಿಶ್ವವಿದ್ಯಾಲಯದ ಕನ್ನಡ ವಿಭಾಗ ಸದೃಢವಾಗಿ ಬೆಳೆಯಿತು. ತಮಿಳುನಾಡಿನ ಶ್ರೇಷ್ಠ ವಿದ್ವಾಂಸರುಗಳಾದ ಡಾ॥ ಮೀನಾಕ್ಷಿಸುಂದರಂ, ಡಾ॥ ಟಿ.ಬಿ. ಸಿದ್ದಲಿಂಗಯ್ಯ ಮುದಮಾರಿ ಜಗನ್ನಾಥರಾಜು, ಪ್ರೊ॥ಸುಂದರಮೂರ್ತಿ, ಟಿ. ಕೋದಂಡರಾಮಯ್ಯ ಮುಂತಾದವರು ಇವರ ಒಡನಾಡಿಗಳಾಗಿದ್ದು ತೌಲನಿಕ ಅಧ್ಯಯನ ಹಾಗೂ ಅನುವಾದ ಕ್ಷೇತ್ರದಲ್ಲಿ ಒಳ್ಳೆಯ ಕೆಲಸಗಳಾದವು. ಇವರು ಮಾಡಿದ "ತಿರು ಕುರುಳ್"ನ ಸಮಗ್ರ ಅನುವಾದವು ಕನ್ನಡ ಭಾಷಾಂತರ ಕ್ಷೇತ್ರದಲ್ಲಿ ಅದ್ವಿತೀಯವಾದದ್ದು ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಈ ಕೃತಿಗೆ ಲಭಿಸಿದೆ. ಹೊರನಾಡಿನ ವಿಶ್ವವಿದ್ಯಾಲಯವೊಂದು ಈ ಕನ್ನಡ ಕೃತಿಯನ್ನು ಪ್ರಕಟಿಸಿರುವುದು ಈ ಪುಸ್ತಕದ ಹೆಚ್ಚುಗಾರಿಕೆಯಾಗಿದೆ. ಇವತ್ತಿಗೂ ತಮಿಳರು ಶ್ರೀನಿವಾಸರ ಈ ಕಾರ್ಯವನ್ನು ಮುಕ್ತಕಂಠದಿಂದ ಶ್ಲಾಘಿಸುತ್ತಾರೆ. ತಮಿಳರ ಪಾಲಿಗೆ "ತಿರುವಳ್ಳುವರ್" ಎಂದರೆ ದೇವರ ಸಮಾನ ಪಾ.ಶ. ಶ್ರೀನಿವಾಸರು ಕನ್ನಡದಲ್ಲಿ ಅವರ ಬಗ್ಗೆ ಕೃತಿಯನ್ನು ರಚಿಸಿದ್ದಾರೆ. ಅಸಂಖ್ಯ ಶಿಷ್ಯರಿಗೆ ಮಾರ್ಗದರ್ಶಕರಾಗಿ ಕನ್ನಡದಲ್ಲಿ ಉತ್ತಮ ಪ್ರೌಢ ಪ್ರಬಂಧಗಳು ರಚನೆಯಾಗಲು ಕಾರಣರಾಗಿದ್ದಾರೆ. ಇವರ "ಸಾಹಿತ್ಯಕಾವೇರಿ" ಕನ್ನಡ ತಮಿಳು ಸಾಹಿತ್ಯ ಸಂಬಂಧದ ಕುರಿತಾದ ವಿದ್ವತ್‌ಪೂರ್ಣ ಲೇಖನಗಳ ಸಂಕಲನವಾಗಿದ್ದು ಪ್ರೌಢ ಅಧ್ಯಯಶೀಲ ಕೃತಿಯಾಗಿದೆ.

ಡಾ॥ ಪಾ.ಶ. ಶ್ರೀನಿವಾಸರಇನ್ನೊಂದು ಸಾಧನೆಯೆಂದರೆ ಮಧುರೈಯಲ್ಲಿ 'ಕರ್ನಾಟಕ ಸಂಘ' ವನ್ನು ಬೆಳೆಸಿದ್ದು 'ಸಾಕಷ್ಟು ಕಾಲ ಆ ಸಂಘಕ್ಕೆ ಇವರೇ ಅಧ್ಯಕ್ಷರಾಗಿದ್ದರು. ಡಾ॥ ಶಿವರಾಮಕಾರಂತ, ಡಾ॥ ಜಿ.ಎಸ್. ಶಿವರುದ್ರಪ್ಪ, ಡಾ॥ ಚಿದಾನಂದ ಮೂರ್ತಿ, ಡಾ॥ ಹಂಪನಾ, ಡಾ॥ಕೆ.ಎಂ.ಕೃಷ್ಣರಾವ್ ಮುಂತಾದ ಶ್ರೇಷ್ಠ ಕನ್ನಡ ಸಾಹಿತಿಗಳನ್ನು, ವಿದ್ವಾಂಸರನ್ನು ಮಧುರೈಗೆ ಕರೆಸಿ ಅಲ್ಲಿನವರಿಗೆ ಕನ್ನಡ ಸಂಸ್ಕೃತಿಯ ಸವಿಯನ್ನು ಪರಿಚಯಿಸಿದರು. 1996ರಲ್ಲಿ ಕರ್ನಾಟಕ ಸಂಘದ ಬೆಳ್ಳಿ ಹಬ್ಬವನ್ನು ಮೂರು ದಿನಗಳ ಕಾಲ ಆಚರಿಸಿ ತಮಿಳು ಕನ್ನಡ

ಬಾಂಧವ್ಯಗಳಿಗೆ ಸಂಬಂಧಿಸಿದ ಗೋಷ್ಠಿಗಳನ್ನು ಏರ್ಪಡಿಸಿದರು. ನಿವೃತ್ತಿಯ ನಂತರವೂ ತಮಿಳುನಾಡಿನಲ್ಲೇ ಇದ್ದು ಕನ್ನಡ-ತಮಿಳು ದ್ವಿಭಾಷಾ ನಿಘಂಟನ್ನು ರಚಿಸುವಲ್ಲಿ ಸಕ್ರಿಯರಾದರು. ಇದರಲ್ಲಿ 40ಸಾವಿರಕ್ಕೂ ಹೆಚ್ಚು ಪದಸಂಗ್ರಹವಿದ್ದು ತಮಿಳು ಕನ್ನಡ ಅನುವಾದಕರಿಗೆ ಇದೊಂದು ಮಾದರಿಯ ಉತ್ಕೃಷ್ಟ ಆಧಾರ ಗ್ರಂಥವಾಗಿದೆ. ಆದ್ದರಿಂದಿಲೇ ತಮಿಳು ಶಾಸ್ತ್ರೀಯ ಭಾಷಾ ಪ್ರಾಧಿಕಾರದ ಯೋಜನೆಯಾದ "ಸಂಗಂ ಸಾಹಿತ್ಯ"ದ ಕನ್ನಡ ಅನುವಾದ ಕರ್ಯಗಳಿಗೆ ಇವರು ಮಾರ್ಗದರ್ಶಕರಾಗುವಂತಾದರು. 'ಕಾವ್ಯಾನುಶೀಲನ' ಎಂಬ ವಿಮರ್ಶಾಕೃತಿ" 'ಹೆಜ್ಜೆ ಗುರುತು' ಎಂಬ ಲೇಖನಗಳ ಸಂಕಲನ, 'ಚಿತ್ತಾರ' ಎಂಬ ಸಣ್ಣಕತೆಗಳ ಸಂಗ್ರಹ, 'ಕಂಬ ಹಾಗೂ ಕುವೆಂಪು ರವರ ರಾಮಾಯಣದ ಕುರಿತ ತೌಲನಿಕ ಸಮೀಕ್ಷೆ, "ಸಾರೂಪ್ಯ" ಎಂಬ ಅಧ್ಯಯನಪೂರ್ಣ ಪ್ರಬಂಧಗಳ ಸಂಕಲನ, 'ಜ್ಞಾನರಥ', 'ಪ್ರಸಾದ', 'ವಿಚಾರಣೆ ಕಮಿಷನ್' ಮುಂತಾದ ಅನೇಕ ತಮಿಳು ಅನುವಾದ ಕೃತಿಗಳು ಹೀಗೆ ಒಟ್ಟು 27ಕ್ಕೂ ಹೆಚ್ಚು ಕೃತಿಗಳನ್ನು ಡಾ॥ ಪಾ.ಶ. ಶ್ರೀನಿವಾಸರು ರಚಿಸಿದ್ದು ಕನ್ನಡ ಸಾರಸ್ವತ ಲೋಕವನ್ನು ಶ್ರೀಮಂತಗೊಳಿಸಿದ್ದಾರೆ.

ಶ್ರೀನಿವಾಸರ ಅನುವಾದದ ತಿರುಕ್ಕುರುಳ್ :

ತಮಿಳು ಪಂಚದ್ರಾವಿಡ ಭಾಷೆಗಳಲ್ಲಿ ಒಂದಾಗಿದ್ದು ಅನೇಕ ಉತ್ತಮ ಪ್ರಾಚೀನ ಕೃತಿಗಳಿಂದ ತುಂಬಿಕೊಂಡಿದೆ. ಮಧುರೈಯ ಪಾಂಡ್ಯರಾಜನ ಆಶ್ರಯದಲ್ಲಿ ವಿಪುಲವಾಗಿ ರಚಿತವಾಗಿರುವ ಅನೇಕ ಕೃತಿಗಳನ್ನು 'ಸಂಗಂಸಾಹಿತ್ಯ'ವೆಂದು ಕರೆಯಲಾಗಿದೆ. ಇವುಗಳಲ್ಲಿ ತಮಿಳರಿಗೆ ಆದರಣೀಯ ಕೃತಿ ಎಂದರೆ 'ತಿರುಕ್ಕುರುಳ್'ಜನರು ಈ ಕೃತಿಯನ್ನು ಭಕ್ತಿ ಗೌರವಗಳಿಂದ 'ತಮಿಳುವೇದ'ವೆಂದೇ ಪರಿಗಣಿಸಿದಾರೆ.

ಸುಮಾರು ಕ್ರಿ.ಶ.1ನೆಯ ಅಥವಾ 2ನೆಯ ಶತಮಾನದಲ್ಲಿ ರಚಿತವಾಗಿರಬಹುದೆಂದು ಊಹಿಸಲಾಗಿದೆ. ಬರೆದವರು 'ತಿರುವಳ್ಳುವರ್' ಎಂದು ಭಾವಿಸಲಾಗಿದೆ. ಧರ್ಮ, ಅರ್ಥ ಮತ್ತು ಕಾಮಗಳೆಂಬ ಮೂರು ಪುರುಷಾರ್ಥಗಳ ಕುರಿತಾದ ಚಿಂತನೆಗಳಿರುವುದರಿಂದ 'ಮುಪ್ಪಾಲ್' ಎಂಬುದು ಇದರ ಪ್ರಾಚೀನವಾದ ಹೆಸರು. 'ಕುರುಳ್‌ವೆಣ್ಬಾ' ಎಂಬ ಛಂದಸ್ಸಿನಲ್ಲಿ ಬರೆದಿರುವುದರಿಂದ 'ತಿರುಕ್ಕುರುಳ್' ಎಂದು ಪ್ರಸಿದ್ಧವಾಗಿದೆ. ತಿರುವಳ್ಳವರ್ ಕುರಿತಾಗಿ ಹೆಚ್ಚಿನ ವಿವರಗಳು ತಿಳಿಯದೇ ಇದ್ದರೂ ಎಲ್ಲಾ ಧರ್ಮ, ಜಾತಿಗಳವರು ತಮ್ಮವರೆಂದು ಕರೆದುಕೊಂಡಿದ್ದಾರೆ. ಜೀವನದ ಅಪಾರ ಅನುಭವ ಅಧ್ಯಯನ ಶೀಲತೆ ಗಾಢ ಚಿಂತನೆಗಳೇ ಮೈವೆತ್ತಿ ಒಂದಂತೆ ಈ ಕೃತಿ ರಚನೆಯಾಗಿದೆ.

ಒಟ್ಟಿಗೆ 133 ಅಧ್ಯಾಯ ಹಾಗೂ 1330 ಪದ್ಯಗಳಿಂದ ಕೂಡಿರುವ 'ತಿರುಕ್ಕುರುಳ್'ನಲ್ಲಿ ಧಾರ್ಮಿಕ, ಆಧ್ಯಾತ್ಮಿಕ ಸಂಗತಿಗಳೊಂದಿಗೆ ಅರ್ಥನೀತಿ ಹಾಗೂ ರಾಜಾಡಳಿತದ

ಅಂಶಗಳು ಸೇರಿಕೊಂಡಿವೆ. ಕೊನೆಯ 24 ಅಧ್ಯಾಯಗಳು ದಾಂಪತ್ಯ ಜೀವನದ ಕುರಿತಾಗಿದೆ. ಇಲ್ಲಿ ಗೃಹಸ್ಥಾಶ್ರಮದ ತಿರುಳನ್ನು ಕಾಣಬಹುದು. ಸತಿಪತಿಗಳು ಹೇಗೆ ಬದುಕಬೇಕು? ಹೇಗೆ ಪರಸ್ಪರ ಪ್ರೀತಿ ವಿಶ್ವಾಸದಿಂದ ನಡೆದುಕೊಳ್ಳಬೇಕೆಂಬುದರ ವಿವರಣೆಇದೆ.

ಮೊದಲನೆಯ ಧರ್ಮ ಭಾಗದಲ್ಲಿ ಮನುಷ್ಯನು ಸಾಮಾಜಿಕವಾಗಿ ಬದುಕುತ್ತಲೇ ಧಾರ್ಮಿಕ ಶ್ರೇಯಸ್ಸನ್ನು ಗಳಿಸಿಕೊಳ್ಳುವ ಬಗೆಗಿನ ವಿಚಾರಗಳಿವೆ. ತಿರುವಳ್ಳುವರ್ ಪುರುಷ ಪ್ರಯತ್ನಕ್ಕೆ ಹೆಚ್ಚಿನ ಒತ್ತನ್ನು ಕೊಟ್ಟವನು. ವಿಧಿಯಕಾರಣದಿಂದ ಯಶಸ್ಸು ದೊರೆಯದೇ ಹೋದರೂ ಮಾಡಿದ ಪ್ರಯತ್ನದ ಕೂಲಿಯಾಗಿ ಒಂದಲ್ಲ ಒಂದು ದಿನ ಫಲ ದೊರತೇ ದೊರೆಯುತ್ತದೆ ಎಂದು ತಿಳಿಸಿದ್ದಾರೆ. ಈ ಕೃತಿಯ 62ನೇ ಅಧ್ಯಾಯದ 619ನೇ ಪದ್ಯದ ಸಾರದಲ್ಲಿ ಸಕಾರಾತ್ಮಕ ಭಾವ, ಕಾರ್ಯಗಳ ಬಗ್ಗೆ ಹೆಚ್ಚು ಒತ್ತು ನೀಡಲಾಗಿದೆ. ಹೀಗೆ ಪ್ರತಿ ಪದ್ಯವೂ ಒಂದಲ್ಲಾಒಂದು ಸಂದೇಶವನ್ನು ಸಾರುತ್ತದೆ. ಎರಡನೆಯ ವಿಭಾಗದ 70 ಅಧ್ಯಾಯಗಳಲ್ಲಿ ರಾಜನಾದವನು ಬಾಳಿಬದುಕ ಬೇಕಾದರೀತಿ, ಪ್ರಜೆಗಳನ್ನು ಪೋಷಿಸುವ ವಿಧಾನ, ಉಳಿಸಿಕೊಳ್ಳಬೇಕಾದ ನೈತಿಕಬಲ ಮುಂತಾದುವುಗಳ ವಿವರಣೆಇದೆ. ಮನುಷ್ಯ ಗತಿಸಿ ಹೋದ ನಂತರವೂ ಮಾಡಿದ ಒಳ್ಳೆಯ ಕೆಲಸವನ್ನು ಜನರು ನೆನೆಯುವಂತಿದ್ದರೆ ಅದೇ ಯಶಸ್ಸು ಎನ್ನುತ್ತಾರೆ. ತನ್ನದ್ದು, ಪರರದ್ದು ಎಂಬ ಭೇದ ಭಾವನೆ ಇಲ್ಲದಿರುವುದೇ ನಿಜವಾದ ತ್ಯಾಗ ಎನ್ನುತ್ತಾರೆ. ತಿರುವಳ್ಳುವರ ಪ್ರಕಾರ ತಪಸ್ಸು ಮಾಡಲು ಕಾಡಿಗೆ ಹೋಗಬೇಕಾಗಿಲ್ಲ. ಸಮಾಜದಲ್ಲಿ ಇದ್ದೇ ಕಷ್ಟ ನಷ್ಟಗಳನ್ನು ಅನುಭವಿಸಿಯೂ ತನ್ನ ಕೈಲಾದಷ್ಟು ಒಳ್ಳೆಯದನ್ನು ಮಾಡುವುದೇ ತಪಸ್ಸು. ಮೂರನೆಯ ಭಾಗದಲ್ಲಿ ಪ್ರಣಯ ನಿರೂಪಣೆ, ಪ್ರೇಮ ಕಾಮಗಳ ವಿವೇಚನೆಗಳು ಇಡಿಕಿರಿದಿವೆ. ದಾಂಪತ್ಯ ಜೀವನಕ್ಕೆ ಅಗತ್ಯವಾದ ಶಿಸ್ತು, ಸಂಯಮ, ಪರಸ್ಪರ ಗೌರವಗಳ ಬಗ್ಗೆ ಉಲ್ಲೇಖವಿದೆ. 'ಕುರುಳ್' ಎಂಬುದು ಅತ್ಯಂತ ಹಿರಿದಾದ ದ್ರಾವಿಡ ಛಂದೋಪ್ರಕಾರವಾಗಿದ್ದು ಸರಳ ನಿರೂಪಣೆಗೆ ಹೇಳಿ ಮಾಡಿಸಿದಂತಿದೆ. ನಮ್ಮ ತ್ರಿಪದಿಯಂತೇ ಈ ಪ್ರಕಾರವೂ ತಮಿಳಿನಲ್ಲಿ ಜನಪ್ರಿಯವಾಗಿದೆ. ಸರ್ವಜ್ಞನ ವಚನಗಳ ಮಾದರಿಯಲ್ಲಿ ಅಲ್ಲಿನ ಜನರು 'ತಿರುಕ್ಕುರುಳ್'ನ ಉಲ್ಲೇಖಗಳನ್ನು ಆಗಾಗ ಮಾಡುತ್ತಿರುತ್ತಾರೆ. ನಮ್ಮವರೇ ಆದ ಪಾ.ಶ.ಶ್ರೀನಿವಾಸ (ಪಾಂಡೇಶ್ವರ ಶಂಕರನಾರಾಯಣ ಬಾಯರಿಯವರ ವರಪುತ್ರ ಶ್ರೀಶ್ರೀನಿವಾಸ ಬಾಯರಿ)ರು ಕನ್ನಡೀಕರಿಸಿದ್ದಾರೆ. ತಿವಳ್ಳುವರ್ ಸಾರಿರುವ ಶ್ರೇಷ್ಠ ಚಿಂತನೆಗಳನ್ನು ಅವರು ಕನ್ನಡಿಗರಿಗೆ ಉಣಬಡಿಸಿದ್ದಾರೆ. ಅವರ ಕೃತಿಯಿಂದ ಆಯ್ದ ಕೆಲವು ತುಣುಕುಗಳನ್ನು ಇಲ್ಲಿ ಪರಾಂಬರಿಸಬಹುದು.

* ಮೃದುವಾಗಿ ಇನ್ನೊಬ್ಬರಿಗೆ ಸಂತೋಷವನ್ನು ಉಂಟು ಮಾಡುವಂತೆ ಮಾತನಾಡುವವರಿಗೆ ದುಃಖ ಪೂರಿತವಾದ ಬಡತನ ಎಂದಿಗೂ ಬರುವುದಿಲ್ಲ.

ವಿನಯಶೀಲನಾಗಿ ಮಾತನಾಡುವುದೇ ವ್ಯಕ್ತಿಯೊಬ್ಬನ ನಿಜವಾದ ಅಲಂಕಾರ. (ತಿರು.10– 94,98)

* ನಡತೆಯೇ ಒಳ್ಳೆಯದನ್ನು ತರುವುದರಿಂದ ಮನುಷ್ಯರು ಪ್ರಾಣಕ್ಕಿಂತ ಮೇಲಾಗಿ ನಡತೆಯನ್ನು ಕಾಪಾಡಿಕೊಳ್ಳಬೇಕು. ಉತ್ತಮ ನಡತೆಯುಳ್ಳವರು ಮರೆತು ಕೂಡ ಕೆಟ್ಟ ಮಾತು ಆಡುವುದಿಲ್ಲ. (ತಿರು 14–131,139)

* ಯಾವುದೇ ವಿಷಯವನ್ನಾಗಲೀ, ಓದಿ, ಕೇಳಿ ತಿಳಿದುಕೊಂಡರೆ ಸಾಲದು. ಆ ವಿಷಯದಿಂದ ಒಳ ಸತ್ಯವನ್ನು ಕಂಡುಕೊಳ್ಳುವುದೇ ನಿಜವಾದ ಜ್ಞಾನ, ಲೋಕಹೇಗೆ ನಡೆದುಕೊಳ್ಳವುದು ಅದಕ್ಕೆ ಹೊಂದಿಕೊಂಡಂತೆ ಬಾಳುವುದೇ ನಿಜವಾದ ಅರಿವು. (ತಿರು 43–423,426)

* ಆಲೋಚನೆ ಮಾಡಿದ ಮೇಲೆಯೇ ಕೆಲಸ ಕೈಗೊಳ್ಳುವ ನಿರ್ಧಾರ ಮಾಡಬೇಕು. (ತಿರು 47–461)

* ಬರುವ ಆದಾಯ ಕಡಿಮೆ ಇದ್ದರೂ ಮಾಡುವ ಖರ್ಚು ಮಿತಿಯಲ್ಲಿಇದ್ದರೆ ಮನುಷ್ಯ ಕೆಡುವುದಿಲ್ಲ. ಮಿತಿ ಅರಿತು ಯಾರು ಬಾಳುವುದಿಲ್ಲವೋ ಅವರ ಸ್ವತ್ತು ಇರುವಂತೆ ತೋರಿ, ಕ್ರಮೇಣ ಇಲ್ಲವಾಗಿ ಬಿಡುತ್ತದೆ. (ತಿರು 48–478, 479)

* ವಿಷಯ ಅರಿತಿದ್ದರೆ ಸಾಲದು, ಅದನ್ನು ಮನಮುಟ್ಟುವಂತೆ ಹೇಳಲಾರದವರಿಂದ ಪ್ರಯೋಜನವಿಲ್ಲ. (ತಿರು 78–728)

* ಇತರರ ಲೋಪದೋಷಗಳನ್ನು ಮರೆಯುವುದೇ ದೊಡ್ಡಗುಣ. ಅದನ್ನು ಆಡಿಕೊಳ್ಳುವುದೇ ಕೀಳುತನ. ಯಾವಾಗಲೂತಗ್ಗಿ ನಡೆಯುವುದೇ ಹಿರಿಯಗುಣ. ತನ್ನನ್ನು ಹೊಗಳಿಕೊಳ್ಳುತ್ತಾ ಅಹಂಕಾರದಿಂದ ಮೆರೆಯುವುದು ಕೀಳುತನ. (ತಿರು 98–978, 980)

* ಪ್ರೀತಿ ವಿನಯಶೀಲತೆ, ಉಪಕಾರ ಬುದ್ಧಿ, ಹಸನ್ಮುಖಿಯಾಗಿರುವುದು, ಸತ್ಯಶೀಲನಾಗಿರುವುದು, ಇವು ಸದ್ಭಾವನೆ ಎಂಬ ಕಟ್ಟಡದ ಐದು ಆಧಾರ ಸ್ತಂಭಗಳು. (ತಿರು 99–983)

ಹೀಗೆ ವೈವಿಧ್ಯಮಯವಾದ ಜೀವನಾನುಭವವನ್ನು ಮುಕ್ತಕಗಳ ರೂಪದಲ್ಲಿ ತಿರುವಳ್ಳುವರ್ ನೀಡಿದ್ದಾರೆ. ತಮಿಳರು ತಮ್ಮ ಬದುಕಿನಲ್ಲಿ ಹಾಸುಹೊಕ್ಕಂತಿರುವ 'ತಿರುಕ್ಕುರುಳ್'ನ್ನು ಗೌರವಿಸಿ ವೇದದ ಸ್ಥಾನ ನೀಡಿದ್ದಾರೆ. ಸರಕಾರ ಕೂಡ ಕನ್ಯಾಕುಮಾರಿಯಲ್ಲಿ ಬೃಹತ್ ಆಕಾರದ ಪ್ರತಿಮೆ ನಿರ್ಮಿಸಿ ಗೌರವಿಸಿದೆ.

ಡಾ॥ ಪಾ.ಶ. ಶ್ರೀನಿವಾಸ ಹಾಗೂ ಶ್ರೀಮತಿ ಸುಶೀಲ ದಂಪತಿಗಳದ್ದು ಅನುರೂಪದಾಂಪತ್ಯ ಅತಿಥಿ ಸತ್ಕಾರಕ್ಕೆ ಹೇಳಿ ಮಾಡಿಸಿದ ಕುಟುಂಬ. ಕನ್ನಡದ

ಹಿರಿಯ ಸಾಹಿತಿಗಳು, ಕನ್ನಡ ವಿದ್ಯಾರ್ಥಿಗಳು ಚೆನ್ನೈ ಹಾಗೂ ಮಧುರೈಗೆ ಬರುವಕರ್ನಾಟಕದ ಅತಿಥಿಗಳು ಅವರ ಆಪ್ತ ಹಾಗೂ ಪ್ರೀತಿಯ ಸತ್ಕಾರವನ್ನು ಸವಿದಿದ್ದಾರೆ. ಈಚೆಗೆ ಮಂಡ್ಯಕ್ಕೆ ಬಂದು ನೆಲೆಸಿದ್ದ ಅವರು ಸ್ವಲ್ಪಕಾಲ ಅನಾರೋಗ್ಯಕ್ಕೆ ಗುರಿಯಾಗಿದ್ದರೂ, ಸಾಹಿತ್ಯದ ಹಾಗೂ ಅನುವಾದದ ಕೆಲಸಲ್ಲಿ ಹಿಂದೆ ಬಿದ್ದಿರಲಿಲ್ಲ. 2019ರ ಜನವರಿ ತಿಂಗಳಲ್ಲಿ ಪತ್ನಿಯನ್ನು ಕಳೆದುಕೊಂಡ ಈ ಹಿರಿಯ ಜೀವ, ಏಕಾಂಗಿತನದಿಂದ ಹಾಗೂ ಅನಾರೋಗ್ಯದಿಂದ ಜರ್ಜರಿತರಾಗಿ 2019ರ ಅಕ್ಟೋಬರ್ ತಿಂಗಳ 14ರಂದು ಇಹಲೋಕದಿಂದ ಗತಿಸಿದರು. ಅಪಾರ ತಮಿಳು ವಿದ್ವಾಂಸರ, ಕನ್ನಡ ಸಾಹಿತಿಗಳ, ಕನ್ನಡದ ಅಭಿಮಾನಿ ವಿದ್ಯಾರ್ಥಿಗಳ ಪಾಲಿಗೆ ಇದೊಂದು ತುಂಬಲಾರದ ನಷ್ಟವಾಗಿದೆ. ತಮಿಳು ಮತ್ತು ಕನ್ನಡಕ್ಕೆ ಮಧುರ ಸೇತುವೆಯಂತೆ ಮಧುರೈಯಲ್ಲಿ 25ವರ್ಷಗಳ ಕಾಲ ನೆಲೆಸಿ ಕನ್ನಡ ನುಡಿಯ ಸೇವೆಯನ್ನು ಮಾಡಿದ ಇವರನ್ನು ಅಭಿಮಾನಿಗಳು ಸನ್ಮಾನಿಸಿ ಗೌರವಿಸಿದ್ದಾರೆ. ಕನ್ನಡ ಸಾರಸ್ವತ ಲೋಕಕ್ಕೆ ಇವರು ಕೊಟ್ಟ ಕೊಡುಗೆ ಅನನ್ಯವಾಗಿದ್ದು ಅಂದು 'ಮಧುರ ಸೇತು ಪಾ.ಶಾ.ಶ್ರೀನಿವಾಸ್' ಎಂಬ ಪುಸ್ತಕವನ್ನು ಬಿಡುಗಡೆಗೊಳಿಸಲಾಯಿತು.

□

ಬುದ್ಧಿಭಾವಗಳಿಗೆ ಪ್ರೇರಕ ಅಮ್ಮಮ್ಮ ಹೇಳಿದ ಕತೆಗಳು

ಆದಿ ಕಾಲದಿಂದಲೂ ಸೃಜನಶೀಲತೆಯ ಅಭಿವ್ಯಕ್ತಿಗೆ ಕತೆಗಾರಿಕೆ ಉತ್ತಮ ಮಾಧ್ಯಮವಾಗಿ ಹೊರ ಹೊಮ್ಮಿದೆ. ವಿಶ್ವದೆಲ್ಲೆಡೆ ಕತೆಗಳು ಕಲಾವಂತಿಕೆಯ ನಿಸರ್ಗದತ್ತ ಹೂವುಗಳಾಗಿ ಅರಳಿವೆ. ಪ್ರಾಚೀನ ಕಾಲದಿಂದಲೂ ಎಲ್ಲಾ ಭಾಷೆಗಳಲ್ಲೂ ವಿಭಿನ್ನ ಮಾದರಿಯ ಕಥಾಲೋಕಗಳು ಸೃಷ್ಟಿಗೊಂಡಿವೆ. ಮನುಕುಲದ ಮಾನಸಿಕ ಬೆಳವಣಿಗೆಯಲ್ಲಿ, ಕಲ್ಪನಾವಿಕಾಸದಲ್ಲಿ, ಸಂಸ್ಕೃತಿಯ ಸಂವರ್ಧನೆಯಲ್ಲಿ ಕತೆಗಳ ಪಾತ್ರ ವಿಶಿಷ್ಟವಾದದ್ದು. ಕನ್ನಡ ಸಾಹಿತ್ಯ ಲೋಕದಲ್ಲಿ ಶಿವಕೋಟ್ಯಾಚಾರ್ಯನ ವಡ್ಡಾರಾಧನೆ ದುರ್ಗಸಿಂಹನ ಪಂಚತಂತ್ರ ಕತೆಗಳಿಂದ ಪ್ರಾರಂಭಗೊಂಡ ಈ ಕಥಾಪರಂಪರೆ ಪರಿಪುಷ್ಟವಾಗಿ ಬೆಳೆದು ಬಂದಿದೆ. ಬೃಹತ್ಕಥಾಸರಿತ್ಸಾಗರ ಮುಂತಾದವೆಲ್ಲ ನಮ್ಮಲ್ಲಿ ಬಂದಿವೆ. ಅದೇ ರೀತಿ ಜಾನಪದ ಮೂಲದ ಅನೇಕ ಕತೆಗಳು ಜನಜನಿತವಾಗಿವೆ. 19-20ನೇ ಶತಮಾನದಲ್ಲಿ ವಿಶ್ವದಲ್ಲೆಡೆ ರಮ್ಯ ಕತೆಗಳು ಇಲ್ಲಿ ದಾಂಗುಡಿ ಇಟ್ಟವು. ಈಸೋಪನ ನೀತಿ ಕತೆಗಳು, ರಾಬಿನ್‌ಸನ್ ಕ್ರೂಸೋ ಅರೇಬಿಯ ನೈಟ್ಸ್, ಅಲ್ಲಾವುದ್ದೀನ್ ಅದ್ಭುತ ದೀಪ, ರಾಜಾಮಾರ್ತಾಂಡ, ವಸಂತ ಕೋಗಿಲೆ, ಶುಕ ಸಪ್ತತಿ, ಬತ್ತಿಸಪುತ್ಥಳಿ ಮುಂತಾದವುಗಳು ಕನ್ನಡದಲ್ಲಿ ಮೈದಾಳಿವೆ. ಎಲ್ಲಾ ಕತೆಗಳು ಕನ್ನಡಿಗರ ಜನಜೀವನವನ್ನು ಜೀವಂತಗೊಳಿಸಿವೆ, ಜನಮಾನಸವನ್ನು ಶ್ರೀಮಂತಗೊಳಿಸಿವೆ.

ಮನುಷ್ಯನ ಸುಪ್ತ ಮನಸ್ಸನ್ನು ಬಡಿದೇಳಿಸುವ, ಬುದ್ಧಿ-ಭಾವಗಳಿಗೆ ಕಸರತ್ತು ಕೊಡುವ ಕತೆಗಳು ಬಾಲ್ಯಕ್ಕಿಂತಲೂ ತೀರಾ ಅಗತ್ಯ. ಮಕ್ಕಳ ಮನಸ್ಸನ್ನು ಅರಳಿಸುವುದು, ಅಲ್ಲದೆ ದೊಡ್ಡವರನ್ನು ಕೂಡ ಚಿಂತನೆಗೆ ಹಚ್ಚಬಲ್ಲ ಶಕ್ತಿ ಹೊಂದಿರುತ್ತವೆ. ಆದರೆ ಕನ್ನಡ ಸಾಹಿತ್ಯದಲ್ಲಿ ನವೋದಯದ ನಂತರ ಈ ರಮ್ಯ ಕಥಾ ಪರಂಪರೆ ಮುಂದುವರಿದಂತೆ ಕಾಣುವುದಿಲ್ಲ. ನವ್ಯ ಹಾಗೂ ನವ್ಯೋತ್ತರ ಕಾಲದ ಸಾಹಿತ್ಯದ ಬಿರಿಸಿನೊಂದಿಗೆ ರಮ್ಯ ಕಥಾಪರಂಪರೆ ಬತ್ತಿ ಹೋದಂತಾಯಿತು. ಇದರಿಂದ ಸಾಹಿತ್ಯ ಲೋಕಕ್ಕೆ ಮಾತ್ರವಲ್ಲ ಜನಮಾನಸಕ್ಕೆ ಅಗತ್ಯವಾದ ಬುದ್ಧಿ-

ಭಾವಗಳ ಪರಿ ಪೋಷಣೆಗೆ ತೊಡಕುಂಟಾಯಿತು. ರಂಜನೀಯ ಕತೆಗಳು ನೀಡುವ ವಿಶಿಷ್ಟವಾದ ಎಳೆಯೊಂದು ತುಂಡಾಗಿ ಸಾಹಿತ್ಯ ಅಪ್ಪರಮಟ್ಟಿಗೆ ಬದಲಾಯಿತು. ಇದೀಗ ಅಂತಹ ಬತ್ತಿ ಹೋದ ಕಥಾಸರಸ್ಸಿಗೆ ಮರುಜಲ ಪೂರಣ ಮಾಡುವ ಕೆಲಸವನ್ನು ತಮ್ಮ ಹೊಸ ಬಗೆಯ ಕಾದಂಬರಿಗಳ ಮೂಲಕ ಖ್ಯಾತಿಗೊಂಡಿರುವ ಶ್ರೀಮತಿ ರಜನಿನರಹಳ್ಳಿಯವರು ಮಾಡಿದ್ದಾರೆ. ಈಚೆಗಷ್ಟೇ ಪ್ರಕಟಗೊಂಡಿರುವ ಅವರ "ಅಮ್ಮಮ್ಮ ಹೇಳಿದ ಕತೆಗಳು" ಈ ಮಾದರಿಯ ಮೊದಲು ಪ್ರಯತ್ನವಾಗಿದೆ. ಇಲ್ಲಿನ 16 ಕತೆಗಳು ಅನೇಕ ಬಗೆಯಲ್ಲಿ ವಿಶಿಷ್ಟ ಅಂಶಗಳಿಂದ ಕೂಡಿವೆ ಇಲ್ಲಿರುವ ಜೀವನ ಪ್ರೀತಿ, ಗ್ರಾಮೀಣ ಬದುಕಿನ ಚಿತ್ರ, ರಮ್ಯ ಕಲ್ಪನಾಲೋಕ, ಪ್ರಾಣಿ-ಪಕ್ಷಿಗಳ ಒಡನಾಟ, ಕಚಗುಳಿಯಿಡುವ ವಿನೋದಗಳು, ಮಾಂತ್ರಿಕ ಶಕ್ತಿಯ ವಿಸ್ಮಯ ವಿಲಾಸ ಮುಂತಾದವುಗಳೆಲ್ಲ ರಂಜನೆಯೊಂದಿಗೆ ಬುದ್ಧಿಯನ್ನು ಚಿಂತನೆಗೆ ಹಚ್ಚುತ್ತವೆ. ಬಾಲ್ಯದ ಕಲ್ಪನೆಯ ಮೂಸೆಗೆ ಚಂದದ ಕುಲಾವಿ ತೊಡಿಸಿ ಓದುಗರ ಮುಂದೆ ರಜನಿಯವರು ರಂಜನೀಯವಾಗಿ ಇಟ್ಟಿದ್ದಾರೆ. ಈ ಬಗೆಯ ರಮ್ಯ ಕಥಾ ಪರಂಪರೆಯ ಮರುಹುಟ್ಟಿಗೆ ಹೊರಟಿರುವ ರಜನಿ ನರಹಳ್ಳಿಯವರ ಕಥಾಸಂಕಲನ ಎಲ್ಲಾ ಬಗೆಯಿಂದಲೂ ಅಧ್ಯಯನ ಯೋಗ್ಯವಾಗಿದೆ.

ಇಲ್ಲಿನ ಹೆಚ್ಚಿನ ಕತೆಗಳಲ್ಲಿ ಪ್ರಾಣಿ ಪಕ್ಷಿಗಳು ಪಾಲ್ಗೊಳ್ಳುತ್ತವೆ. ಅವುಗಳು ಸತ್ಯವಂತರ ಕಡೆಗೆ, ವಿನಯವಂತರ ಕಡೆಗೆ ವಾಲಿಕೊಂಡಿರುತ್ತವೆ. ಪ್ರೀತಿಸುವವರನ್ನು ಗೌರವಿಸುತ್ತವೆ. ಇದಕ್ಕೆ ಒಳ್ಳೆಯ ಉದಾಹರಣೆಯೆಂದರೆ 'ಬೆಕ್ಕಾದ ಅಕ್ಕ' ಎಂಬ ಕತೆ. ಇಲ್ಲಿ ತಂಗಿ ಒಳ್ಳೆಯವಳು. ಪ್ರಾಣಿ-ಪಕ್ಷಿಗಳನ್ನು ಪ್ರೀತಿಸುವವಳು. ಆಕೆಗೆ ಒಂದು ಹಾಡುವ ಹಕ್ಕಿಯ ಮೇಲೆ ಮಮತೆ. ಅದು ತಂಗಿಗಾಗಿ ಹಾಡುತ್ತಿರುತ್ತದೆ. ದುಷ್ಟಬುದ್ಧಿಯ ಸ್ವಾರ್ಥಿಯಾದ ಅವಳ ಅಕ್ಕ ಸೇಡಿನಿಂದ ಹಾಡುವ ಹಕ್ಕಿಯ ನಾಲಿಗೆ ಕತ್ತರಿಸುತ್ತಾಳೆ. ಸೃಜನಶೀಲತೆಯ ಕತ್ತು ಹಿಸುಕುವ ಕೃತ್ಯ ಇದು. ಉಳಿದ ಪ್ರಾಣಿ-ಪಕ್ಷಿಗಳಿಗೆ ಈ ಕೃತ್ಯ ನೋವನ್ನು ತರುತ್ತದೆ. ಅವು ತಂಗಿಗೆ ಎಲ್ಲಾ ಬಗೆಯ ಸಹಾಯ ಮಾಡುತ್ತವೆ. ಅದೇ ಅಕ್ಕ ಕಾಡಿಗೆ ಬಂದಾಗ ಅಲ್ಲಿನ ಎಲ್ಲಾ ಪ್ರಾಣಿ ಪಕ್ಷಿಗಳು, ಮರಗಿಡಗಳು ಕಡೆಗೆ. ಜೀವ ಇಲ್ಲದ ಮರದ ಸೇತುವೆ ಕೂಡ ಒಂದಾಗುತ್ತವೆ. ಅವಳನ್ನು ಶಿಕ್ಷಿಸುತ್ತವೆ. ಕೊನೆಯಲ್ಲಿ ಆಕೆಗೆ ತಕ್ಕಶಾಸ್ತಿಯಾಗಿ ಅವಳು ಬೆಕ್ಕಾಗಿ ಮಾರ್ಪಡುತ್ತಾಳೆ. ಮೇಲು ನೋಟಕ್ಕೆ ಕತೆ ಸರಳವೆಂದು ಕಾಣುತ್ತದೆ. ಆದರೆ ಮನುಕುಲಕ್ಕೆ ಇಲ್ಲಿ ಪಾಠ ಅಡಗಿದೆ. ನಮ್ಮ ಸ್ವಾರ್ಥದಿಂದ ದುಷ್ಟತನದಿಂದ ನಿಸರ್ಗ ನಿಯಮವನ್ನು ತುಂಡರಿಸಿ ಪ್ರಾಣಿ-ಪಕ್ಷಿಗಳ ಹಕ್ಕನ್ನು ಮೊಟಕುಗೊಳಿಸಿದರೆ ಅವು ನಮಗೆ ಒಟ್ಟಾಗಿ ಪಾಠ ಕಲಿಸುತ್ತವೆ. ಸೃಜನಶೀಲತೆಗೆ ಕುತ್ತು ತರುವವರಿಗೂ ಇಲ್ಲಿ ಪಾಠ ಅಡಗಿದೆ.

ಹಳ್ಳಿಯಲ್ಲಿ ವಾಸಿಸುತ್ತೇವೆ ಎಂಬ ಕಾರಣಕ್ಕೆ ಹಿಂಜರಿಕೆ ಬೇಕಾಗಿಲ್ಲ, ನಿಜವಾದ ಬುದ್ಧಿವಂತಿಕೆ ಇದ್ದರೆ ಎಂಥವರು ಮುಂದೆ ಬರಬಹುದು. 'ಚತುರೆ ಹಳ್ಳಿಯ

ಹುಡುಗಿ' ಮಂತ್ರಿಯೊಬ್ಬನ ಸೊಸೆಯಾಗುವುದು. ಈ ಬುದ್ಧಿವಂತಿಕೆಯಿಂದಲೇ. ನಮ್ಮ ಆಡಳಿತ ವ್ಯವಸ್ಥೆಯು ತನ್ನಲ್ಲಿ ಅಡಗಿಸಿಕೊಂಡಿರುವ ಪೊಳ್ಳುತನ, ಬುದ್ಧಿಗೇಡಿತನ, ಜಗಜ್ಜಾಹಿರಾಗಿರುವ ವಿಚಾರ. ಇದನ್ನೇ ರಾಣಿಯೊಬ್ಬಳ ಕತೆಯ ಮೂಲಕ ರಜನಿಯವರು ಹಾಸ್ಯಮಯವಾಗಿ ವಿಡಂಬಿಸಿದ್ದಾರೆ. ಒಂದು ರಾಜ್ಯದ ರಾಣಿಯು ಮೀನು ನಕ್ಕಿತೆಂಬುದನ್ನು ಕಾರಣವಾಗಿಟ್ಟುಕೊಂಡು ಇಡೀ ವ್ಯವಸ್ಥೆಯನ್ನು ಮೇಲೆ ಕೆಳಗೆ ಮಾಡುತ್ತಾಳೆ. ಕಡೆಯಲ್ಲಿ ಒಬ್ಬಳು ಹಳ್ಳಿಯ ಹೆಣ್ಣು ಮಗಳು ತನ್ನ ನಿಜವಾದ ಬುದ್ಧಿ ಶಕ್ತಿಯಿಂದ ರಾಣಿಯ ಮಗ್ಗುಲಲ್ಲೇ ಅಪಾಯ ಅಡಗಿರುವುದನ್ನು ತೋರಿಸಿಕೊಡುತ್ತಾಳೆ. ವ್ಯವಸ್ಥೆಯ ಹುಂಬತನವನ್ನು ಅಕೆ ತನ್ನ ಸಾಮಾನ್ಯ ಜ್ಞಾನದಿಂದ, ಚತುರತೆಯಿಂದ ಸಾಬೀತುಪಡಿಸುತ್ತಾಳೆ. ನಮ್ಮ ಅಧಿಕಾರಿ ಶಾಹಿಯ ಆಂತರ್ಯವನ್ನು ಇಲ್ಲಿ ತೆರೆದಿಡಲಾಗಿದೆ. ಗ್ರಾಮೀಣರು ವಿಚಾರವನ್ನು ಗ್ರಹಿಸುವ ವಿಧಾನ, ಅವರು ಆಡುವ ಮಾತುಗಳಲ್ಲಿ, ಒಗಟುಗಳಲ್ಲಿ, ಕತೆಗಳಲ್ಲಿ ಅಡಗಿರುವ ಬುದ್ಧಿ ಮತ್ತೆ ಅಸಾಮಾನ್ಯವಾದದ್ದು. ಇಂದಿನ ಆಡಳಿತ ವ್ಯವಸ್ಥೆಗೆ ಇಂತಹ ಅಪ್ಪಟ ಪ್ರತಿಭೆಗಳ ಅಗತ್ಯವಿದೆ.

ಕತೆಗೆ ಹೇಗೆ ಜೀವಜಲದ ಶಕ್ತಿ ಇರುತ್ತದೆ ಎಂಬುವುದಕ್ಕೆ 'ಕಟ್ಟುಕತೆ ಹೇಳುವ ತಮ್ಮ' ಎಂಬುದು ಸಾಕ್ಷಿ. ಮೇಲ್ನೋಟಕ್ಕೆ ಇದು ವಿನೋದದ ಕತೆ ಅಂತ ಅನಿಸಿದರೂ, ಕತೆಯ ಆಶಯ ವಿಶಿಷ್ಟವಾದದ್ದು. ಕತೆಯ ಮೂಲಕ ನೀತಿ ನಿರೂಪಣೆ ಭಾರತೀಯ ಪರಂಪರೆಯ ಅಂಶವಾಗಿದೆ. ಅದೇ ರೀತಿ ಕತೆಯೊಳಗೆ ಕತೆ ಬರುವ ತಂತ್ರಗಾರಿಕೆ ಕೂಡ ನಮ್ಮ ಪರಂಪರೆಯಾಗಿದೆ.

ಹಳ್ಳಿಯ ರೈತನೊಬ್ಬನ ಎರಡು ಮಕ್ಕಳಲ್ಲಿ ಒಬ್ಬ ಬುದ್ಧಿವಂತನಾಗಿ, ಚೆನ್ನಾಗಿ ಓದಿ, ಶಾಲೆಯೊಂದರಲ್ಲಿ ಪಂಡಿತನಾಗಿ ತಂದೆಯ ಮೆಚ್ಚಿನ ಮಗನಾಗಿ ಕುಟುಂಬಕ್ಕೆ ಆಧಾರವಾಗುತ್ತಾನೆ. ಆದರೆ ಎರಡನೆಯ ಮಗನಿಗೆ ಓದು-ಬರಹ ತಲೆಗೆ ಹತ್ತದೇ ಹೊಲದಲ್ಲಿ ದುಡಿಯಬೇಕಾಗುತ್ತದೆ. ಜನರನ್ನು ಪ್ರಾಣಿ-ಪಕ್ಷಿಗಳನ್ನು ಪ್ರೀತಿಸುತ್ತಾ ಎಲ್ಲರೊಂದಿಗೆ ಬೆರೆಯುತ್ತ ಇದ್ದ ಅವನಿಗೆ ಕತೆ ಕಟ್ಟಿ ಹೇಳುವ ಕಲೆ ಕರಗತವಾಗಿರುತ್ತದೆ. ತಾಯಿಯ ಹೃದಯಕ್ಕೆ ಹತ್ತಿರದವನಾದ ಆತ ಎಲ್ಲರ ಕಷ್ಟಕ್ಕೆ ದುಃಖಕ್ಕೆ ಮರುಗುವವನು. ಸೃಜನಶೀಲತೆಗೆ ಅಗತ್ಯವಾದ ಮುಗ್ಧತೆ ಅವನಲ್ಲಿತ್ತು. ಅಲ್ಲಿನ ರಾಜಕುಮಾರಿ ಅರಮನೆಯ ಕಟ್ಟುನಿಟ್ಟಿಗೆ, ಸ್ವಾತಂತ್ರ್ಯವಿಲ್ಲದ ಬದುಕಿಗೆ ರೋಸಿ ಹೋಗಿ ಕಾಯಿಲೆ ಬೀಳುತ್ತಾಳೆ. ಅವಳ ಮನೋರೋಗ ಗುಣವಾಗುವುದು. ರಂಜನೀಯ ಕತೆಯಿಂದ ಮಾತ್ರ ಎಂದು ವೈದ್ಯರು ಹೇಳುತ್ತಾರೆ. ರಾಜ ಕತೆ ಹೇಳಿ ರೋಗ ಗುಣಪಡಿಸುವವರಿಗೆ ಬಂಡಿ ಹೊನ್ನನ್ನು ಕೊಡುವುದಾಗಿಯೂ, ವಿಫಲರಾದರೆ ಶಿಕ್ಷಿಸುವುದಾಗಿಯೂ ಘೋಷಿಸುತ್ತಾನೆ. ಸಾಕಷ್ಟು ಜನ ಪ್ರಯತ್ನಿಸಿ ವಿಫಲರಾಗುತ್ತಾರೆ. ಬಹುಮಾನದ ಆಸೆಗೆ ಕತೆ ಹೇಳಲು ಹೋದವರಲ್ಲಿ 'ಪಂಡಿತ

ಪುತ್ರ' ಅಣ್ಣನು ಕೂಡ ಒಬ್ಬ. ಛಡಿಯೇಟಿನಿಂದ ತತ್ತರಿಸಿದ ಅಣ್ಣನನ್ನು ಓದದ ತಮ್ಮ ಉಪಚರಿಸುತ್ತಾ ರಾಜಕುಮಾರಿಗೆ ಬಂದೊದಗಿದ ಕಾಯಿಲೆಗೆ ಮರುಗುತ್ತಾನೆ. ಅವಳನ್ನು ಗುಣ ಪಡಿಸಬೇಕೆಂಬ ಪ್ರಾಂಜಲ ಮನಸ್ಸಿನ ಉದ್ದೇಶದಿಂದ ಅರಮನೆಗೆ ಬರುತ್ತಾನೆ. ಕತೆ ಹೇಳಲು ಪ್ರಾರಂಭಿಸಿ ಕುತೂಹಲದ ಘಟ್ಟದಲ್ಲಿ ನಿಲ್ಲಿಸಿ ಅವಳು ಆಹಾರ ತಿನ್ನುವಂತೆ ಮಾಡುತ್ತಾನೆ. ತಂತ್ರಗಾರಿಕೆಯಿಂದ ಅವಳನ್ನು ರಂಜಿಸಿದ್ದೇ ಅಲ್ಲದೆ ಗುಣಪಡಿಸುತ್ತಾನೆ. ರಾಜ ಬಂಡಿ ಹೊನ್ನನ್ನು ನೀಡಲು ಬಂದಾಗ ಬಹುಮಾನದ ಆಸೆಗೆ ಬಂದಿಲ್ಲ. ರಾಜಕುಮಾರಿ ಗುಣವಾದಳಲ್ಲ ಅದೇ ಸಾಕು ಬಿಡಿ ಎಂದು ಹೊನ್ನನ್ನು ತಿರಸ್ಕರಿಸುತ್ತಾನೆ. ಅವನ ಸರಳತೆ, ನಿಷ್ಕಪಟ ನಡೆ, ಉದಾತ್ತ ಮನೋಭಾವಗಳನ್ನೆಲ್ಲ ಮೆಚ್ಚಿದ ರಾಜಕುಮಾರಿ ಆ ಹಳ್ಳಿಯ ಬಡ ರೈತನ ಮಗನನ್ನೇ ಮದುವೆಯಾಗುವುದಾಗಿ ಪಟ್ಟು ಹಿಡಿದು ರಾಜನನ್ನು ಒಪ್ಪಿಸುತ್ತಾಳೆ. ರಾಜಕುಮಾರಿಯನ್ನು ಮದುವೆಯಾದ ತಮ್ಮನನ್ನು ಎಲ್ಲರೂ ಹಾಡಿ ಹೊಗಳುತ್ತಾರೆ. ಹೀಗೆ ಪಾಂಡಿತ್ಯದ ಮುಂದೆ ಸೃಜನಶೀಲತೆ ಗೆಲ್ಲುತ್ತದೆ. ತಂದೆಯ ವ್ಯಾವಹಾರಿಕ ಬುದ್ದಿಯ ಮುಂದೆ ತಾಯಿಯ ಮಮತೆ ಮೇಲುಗೈ ಪಡೆಯುತ್ತದೆ. ನೀತಿವಾಕ್ಯವೊಂದು ಸದ್ದಿಲ್ಲದೆ ಈ ರಂಜನೀಯ ಕತೆಯೊಳಗೆ ಸೇರ್ಪಡೆಗೊಂಡಿದೆ. ಶುಷ್ಕ ಪಾಂಡಿತ್ಯಕ್ಕಿಂತ ಹೃದಯವಂತಿಕೆಗೆ ಯಾವತ್ತು ಗೆಲವು ಎನ್ನುವುದೇ ಇಲ್ಲಿ ನಿರೂಪಿತವಾಗಿದೆ.

ಪ್ರಾಣಿಪಕ್ಷಿಗಳ ಭಾಷೆಯ ಬಗ್ಗೆ ಮನುಷ್ಯವರ್ಗಕ್ಕೆ ಮೊದಲಿನಿಂದಲೂ ಒಂದು ಬಗೆಯ ಕುತೂಹಲ. ಅದನ್ನೇ ವಸ್ತುವಾಗಿಟ್ಟುಕೊಂಡು ಹೆಣೆದ ಕತೆ ಇಲ್ಲಿದೆ. (ಪ್ರಾಣಿ ಪಕ್ಷಿಗಳ ಭಾಷೆ ಅರಿತ ಹುಡುಗ) ತನ್ನ ಮಾವನ ಮಗಳನ್ನು ವರಿಸಲು ಇದ್ದ ತೊಡಕುಗಳನ್ನು ನಿವಾರಿಸಲು ಕಷ್ಟಪಡುತ್ತಿದ್ದ ಹುಡುಗನಿಗೆ ಪ್ರಾಣಿಪಕ್ಷಿಗಳ ಭಾಷೆ ಅರಿಯುವಂತಾದದ್ದು ಒಂದು ವರವಾಗಿ ಪರಿಣಮಿಸುತ್ತದೆ. ಆದರೆ ಅದನ್ನು ದುರುಪಯೋಗ ಪಡಿಸಿಕೊಳ್ಳದೇ ಸದ್ಬಳಕೆ ಮಾಡಿ ಅಪಾರ ಸಂಪತ್ತುಗಳಿಸಿ ಮಾವನ ಮಗಳನ್ನು ಮದುವೆಯಾಗುತ್ತಾನೆ. ರಮ್ಯಕತೆಗಳಲ್ಲಿ ವಿನೋದಪ್ರಿಯತೆಗೆ ಅಗ್ರಸ್ಥಾನ. ಮೋಜಿನಕತೆಗಳಾಗಿ ಕಾಣಿಸಿಕೊಳ್ಳುವ "ಮುರ್ಖರ ಜಗತ್ತು" ಹಾಗೂ "ಒಂಟಿ ಕಾಲಿನ ಸಕ್ಕರೆ ಮಿಠಾಯಿಕೋಳಿ" ಓದುತ್ತಿದ್ದರೆ ಕಚಗುಳಿ ಇಟ್ಟ ಅನುಭವವಾಗುತ್ತದೆ. ತಮ್ಮ ಬುದ್ಧಿಶಕ್ತಿಯೇ ಸರಿಯಾದದ್ದೆಂದು ವಾದಿಸುವ ಮೂರ್ಖರು ಪಡುವ ಪರಿಪಾಟಲನ್ನು ಮೊದಲ ಕತೆಯಲ್ಲಿ ಹೃದ್ಯವಾಗಿ ಹೇಳಲಾಗಿದೆ. ಮಕ್ಕಳ ಕಲ್ಪನಾಶಕ್ತಿಯ ದ್ಯೋತಕವೆನ್ನುವಂತೆ ಕಾಣುವ ಎರಡನೆಯ ಕತೆಯಲ್ಲಿ 'ಜೀವ ಬಂದ ಮಿಠಾಯಿ ಕೋಳಿ' ಎಲ್ಲರನ್ನು ಗೋಳಾಡಿಸುವ ರೀತಿ ನಗು ತರಿಸುತ್ತದೆ. ಅದರ ಹಿಂದೆ ಮೆರವಣಿಗೆ ಸಾಗುವ ಹುಡುಗ, ಅಮ್ಮ, ಬೆಕ್ಕು, ನಾಯಿ, ಹಸು, ಕರು, ಕುಂಬಾರ, ಬಡಗಿ, ಅಂಗಡಿಯ ಶೆಟ್ಟಿಯರ ಚಿತ್ರ ಕಣ್ಣಿಗೆ ಕಟ್ಟುವಂತಿದೆ. ಮಿಠಾಯಿಕೋಳಿ

ಎಲ್ಲರನ್ನು ಭೇಡಿಸುವಾಗ ಹಾಡುವ ಹಾಡನ್ನಂತು ರಜನಿಯವರು ಆಕರ್ಷಕವಾಗಿ ಕಟ್ಟಿದ್ದಾರೆ. ಇಡೀ ಕತೆಯೇ ವಿನೋದದೊಂದಿಗೆ ಮಕ್ಕಳನ್ನು ನಕ್ಕು ನಗಿಸುವಂತಿದೆ. ಕಡೆಯಲ್ಲಿ ಅದು ಮೊಸಳೆಯ ಬಾಯಿಗೆ ಸಿಗದೆ ನೀರಿನಲ್ಲಿ ಕರಗಿ ನದಿಯ ನೀರು ಸಿಹಿಯಾಗುವುದು, ಮೊಸಳೆಯ ಕಣ್ಣೀರು ಉಪ್ಪಾಗುವ ಕಲ್ಪನೆಯಂತೂ ಬಹಳ ವಿಶೇಷವಾದದ್ದು. ಕತೆಯ ಓಟವಂತೂ ಬಹಳ ಚುರುಕಾಗಿದ್ದು ಓದುಗರನ್ನು ನಗೆಗಡಲಲ್ಲಿ ಮುಳುಗಿಸುತ್ತದೆ.

ನಿಸರ್ಗ ನಿಯಮಕೆ ಕಾರಣ ಹುಡುಕುತ್ತಾ ಕತೆಗಳನ್ನು ಸೃಷ್ಟಿಸುವುದು ಹಿಂದಿನಿಂದಲೂ ನಡೆದುಕೊಂಡು ಬಂದ ಬಗೆ. ಆ ಬಗೆಯ ರೀತಿಗೆ ಸೇರಿರುವ ಕತೆ 'ಜಗತ್ತಿನ ಮೊದಲ ಹುಂಜದ ಕತೆ.' ಇಲ್ಲಿ ಬೆಳಿಗ್ಗೆ ಕೋಳಿ ಕೂಗುವುದಕ್ಕೂ, ಅಮಾವಾಸ್ಯೆಯಾಗುವುದಕ್ಕೂ ಲೇಖಕಿಯರು ಒಂದು ತಾರ್ಕಿಕ ಅಂಶವನ್ನು ಹೆಣೆದಿದ್ದಾರೆ. ಒಂದು ಕಾಲಕ್ಕೆ ಕಾಡಿನಲ್ಲಿದ್ದ ದೊಡ್ಡ ಹುಂಜವೊಂದು ಗರ್ವದಿಂದ ನಡೆದು ಎಲ್ಲರ ವೈರ ಕಟ್ಟಿಕೊಂಡು ಸೂರ್ಯಚಂದ್ರರನ್ನು ನುಂಗಿದ್ದರಿಂದ ನಾಡಹಕ್ಕಿಯಾಗಿ ಮಾರ್ಪಡಬೇಕಾಗುತ್ತದೆ. ಉಳಿದ ಪ್ರಾಣಿಗಳ ಭಯದಿಂದಲೇ ತಾನು ಕೂಗಿದೊಡನೆ ಮೂಡಬೇಕೆಂದು ಸೂರ್ಯನಲ್ಲಿ ಮಾತು ತೆಗೆದುಕೊಳ್ಳುತ್ತದೆ. ಅದಕ್ಕಾಗಿಯೇ ಕೋಳಿ ಕೂಗಿದೊಡನೆ ಸೂರ್ಯೋದಯವಾಗುತ್ತದೆ. ಇಂದಿಗೂ ಚಂದ್ರ ದೊಡ್ಡಹುಂಜದ ಭಯದಿಂದಲೇ ತಿಂಗಳಿಗೊಮ್ಮೆ ಮೋಡದ ಮನೆ ಸೇರುವುದರಿಂದಲೇ ಅಮಾವಾಸ್ಯೆಯಾಗುತ್ತದೆ. ಅದಕ್ಕಾಗಿಯೇ ಜನರು ಅಂದು ಶುಭಕಾರ್ಯ ಮಾಡುವುದಿಲ್ಲ. ತೋಳ, ನರಿಗಳು, ಹಳೆಯ ದ್ವೇಷದಿಂದಲೇ ಹುಂಜಗಳನ್ನು ತಿನ್ನುತ್ತವೆ. ಎರೆಹುಳದಿಂದ ಬಂದ ಆಪತ್ತಿನಿಂದಲೇ ತನಗೆ ಈಗತಿ ಬಂತೆಂದು ಹುಂಜ ಈಗಲೂ ಎರೆಹುಳುಗಳನ್ನು ಹುಡುಕಿ ಹುಡುಕಿ ತಿನ್ನುತ್ತದೆ. ಹೀಗೆ ಒಂದಕ್ಕೊಂದು ತರ್ಕ ಬೆಳೆದು ಕತೆ ಹೆಣೆಯಲಾಗಿದೆ.

ಮಾಂತ್ರಿಕತೆ, ವಿಸ್ಮಯ, ನಿಗೂಢತೆಗಳು ಎಲ್ಲ ವರ್ಗದ ಓದುಗರನ್ನು ಸೆಳೆಯಬಲ್ಲವು. ಶ್ರೀಮತಿ ರಜನಿ ನರಹಳ್ಳಿಯವರು ಈ ಸಂಕಲನದಲ್ಲಿ ಇಂತಹ ವಿಶೇಷತೆಗಳುಳ್ಳ ಕತೆಗಳನ್ನು ರಚಿಸಿದ್ದಾರೆ. ಕೆಲವು ಕತೆಗಳಲ್ಲಿ ಮಾಂತ್ರಿಕತೆಯ ಬೆರಗು, ವಿಸ್ಮಯ ಲೋಕದ ವಿಲಾಸಗಳಿದ್ದು ಅವು ಸಂಕಲನಕ್ಕೆ ಒಂದು ಮಾಂತ್ರಿಕ ಸ್ಪರ್ಶವನ್ನು ನೀಡಿವೆ. 'ಏಳು ಕಾಲಿನ ಕುಂಟಪಿಡಿಯ ಕತೆ', 'ಅಕ್ಕ ಕಿನ್ನರಿ ತಂಗಿ ಚಿನ್ನಾರಿ' 'ಮಲ್ಲಣ ಮತ್ತು ಕಬ್ಬಿನ ಗಿಡ' 'ಕೊಳದ ಭೂತ' ಮತ್ತು 'ಸೋಂಬೇರಿ ಮಗನ ಕತೆ' ಮುಂತಾದವುಗಳಲ್ಲಿ ಮಾಯ, ಮಂತ್ರಗಳ ವಿಸ್ಮಯ ಅಡಗಿದೆ. ಕುತೂಹಲ ಬೆಳೆಯುತ್ತಾ ಹೋಗಿದೆ. ಇಲ್ಲೆಲ್ಲ ಅಮಾಯಕರಿಗೆ ಸಹಾಯಹಸ್ತದ ರೂಪದಲ್ಲಿ ಮಾಂತ್ರಿಕತೆ ಬರುತ್ತದೆ, ಅಕ್ಕ ಕಿನ್ನರಿಗೆ ಸತ್ತ ತಾಯಿ, ಕೊಂದ ಹಸು ಕೈಹಿಡಿದು ಕಾಪಾಡಿ ರಾಜಕುಮಾರನನ್ನು ವರಿಸುವಲ್ಲಿ ಸಹಕರಿಸುವುದು ಒಂದು

ಬಗೆಯಾದರೆ, ಶಾಪದಿಂದಾಗಿ ಏಳುಕಾಲಿನ ಕುಂಟ ಏಡಿಯಾಗಿ ಪರಿವರ್ತನೆಗೊಂಡ ರಾಜಕುಮಾರಿ ಗೌಡನ ಕಿರಿಯ ಮಗನ ಕೀಳರಿಮೆಯನ್ನು ಹೊಡೆದೋಡಿಸಿ ಶಾಪವಿಮೋಚನೆಯೊಂದಿಗೆ ಅವನನ್ನು ವರಿಸುತ್ತಾಳೆ. ಇಲ್ಲಿ ಬರುವ ರಾಕ್ಷಸರು, ಭೂತಗಳು ದುಷ್ಟರನ್ನು ಶಿಕ್ಷಿಸುವ, ಒಳ್ಳೆಯವರನ್ನು ಪೊರೆದು ರಕ್ಷಿಸುವ ಕೆಲಸಗಳನ್ನು ಮಾಡುತ್ತವೆ. ಇಲ್ಲೆಲ್ಲ ಅತಿಮಾನುಷ ಘಟನೆಗಳು ತುಂಬಿವೆ. ಇದರ ವರ್ಣನೆಗಳಲ್ಲಿ ಆತ್ಮೀಯವಾದ, ಹತ್ತಿರವಾಗುವ ಧಾಟಿಯಲ್ಲಿ ರಜನಿಯವರು ಕತೆ ಹೇಳುತ್ತಾರೆ. ಮಕ್ಕಳು ಬಿಡಿ, ದೊಡ್ಡವರಿಗೂ ಕೂಡ ಓದುದಾಗ ಖುಷಿಯಾಗುತ್ತದೆ. ಈ ವರ್ಗದ ಕತೆಗಳನ್ನುಓದುತ್ತಿದ್ದರೆ ಹಿಂದಿನ ಕಾಲದ ರಮ್ಯ ಕತಾಲೋಕವೇ ನಮ್ಮ ಕಣ್ಮುಂದೆ ಬಂದಂತಾಗುತ್ತದೆ. ಹಿಂದೆಲ್ಲ ಅನುಭವಿಸಿದ ಸುಖ ಸಂತೋಷಗಳು ಮರುಕಳಿಸುತ್ತವೆ. ಮಾಂತ್ರಿಕ ಶಕ್ತಿಯ ನಡುವೆ ಮಾನವೀಯ ಸ್ಪರ್ಶವಿರುವುದರಿಂದಲೇ ಈ ಕತೆಗಳು ಅಧ್ಯಯನ ಯೋಗ್ಯವಾಗಿವೆ. ಇಲ್ಲಿ ರಾಕ್ಷಸಿಯರು, ದೇವತೆಗಳು, ಸತ್ತು ಸ್ವರ್ಗ ಸೇರಿದ ಆತ್ಮಗಳು, ಭೂತಗಳು ಸೇರಿ ಭ್ರಮಾಲೋಕದ ಸೃಷ್ಟಿಯಾಗಿದೆ. ವಿಸ್ಮಯ ವಿಶೇಷಗಳು ಈ ಬಗೆಯ ಕತೆಗಳ ಜೀವಾಳವಾಗಿವೆ.

ಒಟ್ಟಿನಲ್ಲಿ ಶ್ರೀಮತಿ ರಜನಿ ನರಹಳ್ಳಿಯವರ ಹೊಸ ಪ್ರಯೋಗ ಕನ್ನಡ ಸಾಹಿತ್ಯದ ಇಂದಿನ ಸಂದರ್ಭದಲ್ಲಿ ಹೊಸ ಶಕೆಯೊಂದನ್ನು ತೆರೆಯಲು ಕಾರಣವಾಗಬಲ್ಲರು. ಮಕ್ಕಳು ದೂರದರ್ಶನಗಳ ಮೂಲಕ ಫ್ಯಾಂಟಸಿ ಚಿತ್ರಗಳ ಚಟಕ್ಕೆ ಅಡಿಯಾಗುತ್ತಿರುವಾಗ ಅಕ್ಷರ ಮಾಧ್ಯಮದಲ್ಲೂ ಇಂತಹ ಕತೆಗಳ ಅವಿಷ್ಕಾರದಿಂದ ಅವರನ್ನು ಓದಿನ ಕಡೆಗೆ ಸೆಳೆಯಲು ಸಾಧ್ಯವಾಗಬಹುದು. ಕನ್ನಡ ದೃಶ್ಯಮಾಧ್ಯಮದಲ್ಲಿ ವಿರಳವಾಗಿರುವ ಇಂತಹ ಕತೆಗಳನ್ನು ರಚಿಸುವ ಮೂಲಕ ಕಿರುತೆರೆಯವರಿಗೆ ಒಂದು ವಸ್ತು ಪ್ರಪಂಚವನ್ನು ಕೊಟ್ಟಿದ್ದಾರೆ. ಕನ್ನಡದ ಬಾಲಕರಿಗೆ ಇದೊಂದು ಅನಿರ್ವಚನೀಯ ಆನಂದಕ್ಕೆ ಕಾರಣವಾಗಬಹುದು. ಓದಿನ ದೃಷ್ಟಿಯಿಂದ ದೂರ ಸರಿಯುತ್ತಿರುವ ಕನ್ನಡ ಮಕ್ಕಳನ್ನು ಹತ್ತಿರ ಸೆಳೆಯುವಲ್ಲಿ ಇದೊಂದು ಉತ್ತಮ ಪ್ರಯತ್ನ. ಕುಟುಂಬದ ಹಿರಿಯರು ಓದಿ ಇದನ್ನು ಮಕ್ಕಳಿಗೆ ಹೇಳಿದರೆ ಆ ಮೂಲಕ ಕನ್ನಡದ ಬೆಳವಣಿಗೆಗೆ ಕಾರಣವಾಗಬಹುದು. ಎಲ್ಲಾ ಹದಿನಾರು ಕತೆಗಳು ವಿಭಿನ್ನರೀತಿಯಲ್ಲಿ ರಚನೆಗೊಂಡಿದ್ದು ರಜನಿಯವರ ಕತೆಕಟ್ಟುವ ಶಕ್ತಿಗೆ ದ್ಯೋತಕವಾಗಿದೆ. ಕನ್ನಡಕ್ಕೆ ಪ್ಯಾಂಟಸಿಲೋಕವನ್ನು ತಂದು, ತೆರೆದು ಕೊಟ್ಟಿದ್ದಕ್ಕೆ ಅವರು ಅಭಿನಂದನಾರ್ಹರು. ಈ ಬಗೆಯ ಪ್ರಯತ್ನಕ್ಕೆ ಕನ್ನಡ ಓದುಗ ಲೋಕ ಯಾವ ಪ್ರತಿಕ್ರಿಯೆ ನೀಡುತ್ತದೆಂಬುದು ಕುತೂಹಲದ ವಿಚಾರ.

□

ಪ್ರಾದೇಶಿಕ ಸೊಗಡಿನ "ಪಡುಕಡಲ ತಡಿಯಲ್ಲಿ"

ಡಾಕ್ಟರ್ ವಿಷ್ಣುಮೂರ್ತಿ ಐತಾಳರು ಒಂದು ಪ್ರದೇಶದ ಹಾಗೂ ಜನವರ್ಗದ ಜೀವನ ವಿಧಾನಗಳನ್ನು ಆಚಾರ-ವಿಚಾರಗಳನ್ನು, ನಂಬಿಕೆ, ಶ್ರದ್ಧೆ, ಬದುಕಿನ ಸಿದ್ಧಾಂತಗಳನ್ನು, ತಮ್ಮ "ಪಡುಕಡಲ ತಡಿಯಲ್ಲಿ" ಎಂಬ ಕೃತಿಯಲ್ಲಿ 25 ಕಿರು ಪ್ರಸಂಗಗಳ ಮೂಲಕ ದಾಖಲಿಸಿದ್ದಾರೆ. ಈ ಮೂಲಕ ಇದೊಂದು ಅಪರೂಪದ ಕೃತಿಯಾಗುವಂತೆ ಮಾಡಿದ್ದಾರೆ. ಐತಾಳರು ವೃತ್ತಿಯಲ್ಲಿ ವೈದ್ಯರಾದರೂ ಪ್ರವೃತ್ತಿಯಲ್ಲಿ ನಾನಾ ಬಗೆಯ ಜೀವನಾಸಕ್ತಿ ಉಳ್ಳವರು. ಪರಂಪರೆಯ ಬಗ್ಗೆ ತುಡಿತ, ಸಮಾಜಸೇವೆಯ ಬಗ್ಗೆ ಕಳಕಳಿ, ಸಾಹಿತ್ಯ ಸಂಸ್ಕೃತಿಯ ಬಗ್ಗೆ ಆಸಕ್ತಿ, ಪುರೋಹಿತ ವೃತ್ತಿಯ ಬಗ್ಗೆ ನಿಷ್ಠೆ, ಕೂಟ ಜನಾಂಗದ ಬಗ್ಗೆ ಹೆಮ್ಮೆ, ಹುಟ್ಟೂರಿನ ಬಗ್ಗೆ ಪ್ರೀತಿ, ಬಡತನದ ಬಗ್ಗೆ ಅನುಕಂಪೆ ಇವೆಲ್ಲ ಐತಾಳರಲ್ಲಿದ್ದು ಈ ಕೃತಿಯಲ್ಲಿ ಅವು ಪದರುಪದರಾಗಿ ಮೈತಾಳಿವೆ. ಅದೇ ರೀತಿ ಬಾಲ್ಯದ ನೆನಪುಗಳು ಯೌವ್ವನದ ಕನಸುಗಳು, ಜೀವನದ ಆಸೆಗಳು, ಬಡತನದ ನೋವುಗಳು ಇಲ್ಲಿ ಭಿನ್ನಕಥಾನಕಗಳಾಗಿ ಹೊರಹೊಮ್ಮಿವೆ. ಆರ್. ಕೆ.ನಾರಾಯಣ್ ಅವರ 'ಮಾಲ್ಗುಡಿ ಡೇಸ್'ನ ಮಾದರಿಯ ತಂತ್ರಗಾರಿಕೆಯನ್ನು ಬಳಸಿ ಬೇರೆ ಬೇರೆ ಘಟನೆಗಳ ಮೂಲಕ ಕಥಾಹಂದರವನ್ನು ಹಬ್ಬಿಸಿರುವ ಕ್ರಮ ವಿಶಿಷ್ಟವಾದದ್ದು. ಡಾ॥ಶಿವರಾಮ ಕಾರಂತರ 'ಮರಳಿ ಮಣ್ಣಿಗೆ'ಯಿಂದ ಎಳೆಯೊಂದನ್ನು ತೆಗೆದುಕೊಂಡು ಅದರ ಮುಂದುವರಿದ ಭಾಗವೆನ್ನುವರೀತಿಯಲ್ಲಿ ಕಥಾ ಸರಣಿಯನ್ನು ಸೃಷ್ಟಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆಯ ಬಡಗು ಭಾಗದ ಗತ ವರ್ಷಗಳ ಜೀವನ ಚಿತ್ರಣವನ್ನು ಕೊಡಲು ಪ್ರಯತ್ನಿಸಿದ್ದಾರೆ. ಇಲ್ಲೂ ಕೂಡಾ ಮೂರು ತಲೆಮಾರಿನ ಕಥೆ ಬರುತ್ತದೆ. ಇಲ್ಲಿನ ಅಂತ್ಯವೂ ಕೂಡ ಮರಳಿ ಮಣ್ಣಿಗೆಯ ರೀತಿಯಲ್ಲಿ ಮೂರನೇ ತಲೆಮಾರು ಅಮೇರಿಕಾ ತ್ಯಜಿಸಿ ಹುಟ್ಟೂರಿನಲ್ಲಿ ನೆಲೆಸಲು ಬರುತ್ತದೆ. ಪಾತ್ರಗಳು ಕೂಡ ಅದೇ ರೀತಿ ರೈತಾಪಿ ಬ್ರಾಹ್ಮಣರು ಹಾಗೂ ಬಡತನದ ಬೇಗೆಯಲ್ಲಿ ಬೆಂದವರು. ಈ ಪ್ರದೇಶದ ಬದುಕಿನ ವಿವರಗಳನ್ನು ಡಾ॥ ಐತಾಳರು ಬಹಳ ಅಥೆಂಟಿಕ್ ಆಗಿ ಪಡಿ ಮೂಡಿಸಿದ್ದಾರೆ.

ಇಲ್ಲಿನ ಕಥಾ ಪ್ರಸಂಗಗಳು ಪ್ರಾರಂಭವಾಗುವ ಮೊದಲು ಲೇಖಕರು ಈ ಪ್ರದೇಶದ ಭೌಗೋಳಿಕ ಹಾಗೂ ಚಾರಿತ್ರಿಕ ಹಿನ್ನೆಲೆಗಳನ್ನು ನೀಡಿರುವುದಲ್ಲದೆ, 'ಮರಳಿ ಮಣ್ಣಿಗೆ'ಯ ನಂತರ ಕಾಲಮಾನದ ಬದುಕಿನ ಬಗ್ಗೆ ಕ್ಷಕಿರಣ ಬೀರಿದ್ದಾರೆ. ಈ ಪ್ರದೇಶದಲ್ಲಿ ಬಳಕೆಯಲ್ಲಿರುವ ವಸ್ತುಗಳ ಪರಿಚಯ, ನಡೆನುಡಿಗಳ ಪರಿಚಯ, ಆಚರಣೆಗಳ ಪರಿಚಯ, ಸವಿವರವಾಗಿ ಬಂದಿದ್ದು ಸಮಾಜಶಾಸ್ತ್ರೀಯ ಅಧ್ಯಯನಕ್ಕೆ ಪೂರಕವೆಂಬಂತಿದೆ. ಇದು ಈ ಪ್ರದೇಶದ ಹೊರಗಿನವರಿಗೆ ಕಾದಂಬರಿ ಓದಲು ಸಹಕಾರಿಯಾಗುತ್ತದೆ. ಈ ಕೃತಿಯಲ್ಲಿನ ಮುಖ್ಯ ಪಾತ್ರಗಳೆಂದರೇ ನಾಗಪ್ಪ ಐತಾಳರು, ಅವರ ತಾಯಿ ಕಾವೇರಮ್ಮ, ಅವರ ಪತ್ನಿ ನಾಗಮ್ಮ ಹಾಗೂ ಅವರ ಮಗ ಶಂಕರ ಈಕುಟುಂಬದ ಸುತ್ತ ನಡೆದ, ನಡೆಯಬಹುದಾದ ಘಟನೆಗಳನ್ನು ಒಟ್ಟು 25 ಪ್ರಸಂಗಗಳಲ್ಲಿ ಹೆಣೆಯಲಾಗಿದೆ. ನಾಗದರ್ಶನ, ಮಳೆಗಾಲ, ಪಗಡೆಯಾಟ, ಇಸ್ಪೀಟಿನ ಆಟ, ಮದುವೆಯ ಮನೆಯಲ್ಲಿನ ಅವಾಂತರಗಳು, ಬೇಸಾಯದ ವಿವರಗಳು, ಹಬ್ಬ ಹರಿದಿನಗಳ ಸಂಭ್ರಮ, ಕಂಬಳದ ಚಿತ್ರಣ, ಠಕ್ಕ ಸನ್ಯಾಸಿಗಳ ಕಥೆ, ಲೇವಾದೇವಿಯ ಒಳ ವ್ಯವಹಾರಗಳು, ನಾಯಿ ಸಾಕುವ ಪಡಿ ಪಾಟಲು, ಹೆಂಗಸರ ಪಾರುಪತ್ಯ, ನಂಬಿಕೆ ಶ್ರದ್ಧೆಗಳು, ವಿಚಾರಗಳು, ಸ್ವಜಾತಿಯ ಗರ್ವಗಳು, ಊಟ ತಿಂಡಿಗಳಲ್ಲಿ ಸ್ಪರ್ಧೆಗಳು ಹೀಗೆ ವೈವಿಧ್ಯಮಯ ಸಂಗತಿಗಳು ಅಡಕಿರಿದಿವೆ.ಈ ಎಲ್ಲಾ ವಿವರಗಳ ಒಳಗೆ ಒಂದು ಅಂತರ್ ಸಂಬಂಧಿಯಾದ ಹೆಣಿಗೆಯೊಂದನ್ನು ನೇಯ್ದಿರುವುದರಿಂದ ಇದು ಸಮಾಜಶಾಸ್ತ್ರದ ಪುಸ್ತಕವಾಗದೆ ಕಲಾಕೃತಿಯಾಗಿ ಮೂಡಿದೆ. ಡಾ॥ವಿಷ್ಣುಮೂರ್ತಿ ಐತಾಳರ ಸ್ವಯಂ ಅನುಭವಗಳೇ ಇಲ್ಲಿ ಕೆಲವಡೆ ಕಥೆಯಾಗಿ ಬಂದಿವೆ. ಅವರ ಕಲ್ಪನೆಗೂ ಅನುಭವದ ಹಿನ್ನಲೆಯ ಪರಿವೇಷವಿದೆ. ಈ ಕಾರಣ ಕೃತಿ ಸರಾಗವಾಗಿ ಓದಿಸಿಕೊಂಡು ಹೋಗುತ್ತದೆ. ಓದುಗರಿಗೆ ಅಚ್ಚುಮೆಚ್ಚಿನದಾಗುತ್ತದೆ.

'ಪಡುಕಡಲ ತಡಿಯಲ್ಲಿ' ಬರುವ ಕೆಲವು ಘಟನೆಗಳಂತೂ ಚಿತ್ತಾಕರ್ಷಕ. ಉದಾಹರಣೆಗೆ ನಾಗಪ್ಪ ಐತಾಳರ ಮಗ ಶಂಕರ 'ನಾಯಿಮರಿ ಸಾಕಿದ ಪರಿ'ಅಪ್ಪಟ ವೈದಿಕರಾದ ಮನೆಯವರೆಲ್ಲರ ವಿರೋಧದ ನಡೆಯುವೆಯೂ ಮನೆಗೆ ನಾಯಿಮರಿ ತರುತ್ತಾನೆ. ಅದರಿಂದ ಐತಾಳರಿಗೆ ಅವರ ಅಮ್ಮನಿಗೆ ಹಾಗೂ ಪತ್ನಿಗೆ ಆದ ಪೇಚಾಟಗಳನ್ನು ಹಾಸ್ಯಮಯವಾಗಿ ನಿರೂಪಿಸಲಾಗಿದೆ. ಹಾಸ್ಯದ ಹಿಂದೆ ಶ್ರದ್ಧೆ, ನಂಬಿಕೆಗಳ ಬಗ್ಗಿನ ಚಿಂತನೆ ಕೂಡ ಇದೆ. ಕಡೆಯಲ್ಲಿ ಸಮಾಜದ ಕಟ್ಟುಪಾಡುಗಳಿಗಿಂತ ಮಾನವೀಯತೆ ದೊಡ್ಡದು ಎಂಬುದರ ನಿರೂಪಣೆ ಇದೆ. ಮನೆಯವರು ನಾಯಿಗೆ ಅಂದುಕೊಂಡ ಹಾಗೆ ನಾಯಿಯೂ ಕೂಡ ಮುಂದೆ ಬದಲಾಗುವ ವಿವರವಿದೆ. ಕಾದಂಬರಿಕಾರ್ತಿ ಶ್ರೀಮತಿ ರಜನಿನರಹಳ್ಳಿಯವರ 'ಆತ್ಮವೃತ್ತಾಂತ'ದಲ್ಲಿರುವಂತೆ ಇಲ್ಲಿನ ನಾಯಿ 'ರಾಜು' ಯೋಚಿಸುವಪರಿ, ಅದರ ಸ್ವಾಗತಗಳು ಕಡೆಗೆ ಅದು

ಒಂದು ಪಾತ್ರ ಎಂಬಂತೆ ನಿರೂಪಿಸಿದಬಗ್ಗೆ ಸೊಗಸಾಗಿದೆ. ಐತಾಳಕ್ಕಳ ಕುಲಕ್ಕೆ ಬಂದ ಕುತ್ತಾದ ನಾಯಿಯೇ ಮುಂದೆ ಎಲ್ಲರ ಪ್ರೀತಿಗೆ ಪಾತ್ರವಾಗುತ್ತದೆ. ಇಪ್ಪತ್ತಕ್ಕೂ ಹೆಚ್ಚಿನ ಪುಟಗಳಲ್ಲಿಈ ಪ್ರಸಂಗವಿದ್ದು ರೋಚಕವಾಗಿ ಮೂಡಿದೆ. ಚಿಟ್ಟೆ ಹುಲಿಯಿಂದ ಒಡತಿಯನ್ನು ರಕ್ಷಿಸಿರುವುದರಿಂದ ಇಡೀ ಕುಟುಂಬದ'ಮಗ'ನಂತಾಗುತ್ತದೆ. ಊರಿನವರ 'ಹೀರೋ' ಆಗುತ್ತದೆ. ಇದರಿಂದಾಗಿಯೇ ಐತಾಳರ ಮನೆ ಹುಲಿ ಐತಾಳರ ಮನೆಯಾದದ್ದು. ನಾಗಪ್ಪ ಐತಾಳರು ಹುಲಿ ಐತಾಳರಾಗುತ್ತಾರೆ. ಇದೇ ರೀತಿಯ ಇನ್ನೊಂದು ಘಟನೆ 'ಕಂಬಳ'ಕ್ಕೆ ಸಂಬಂಧಿಸಿದ್ದು. ಇಲ್ಲಿ ಕಂಬಳದ ಸಮಗ್ರ ವಿವರವೂ ಬಂದಿದೆ. ಹೆಚ್ಚಾಗಿ ಆಢ್ಯ ಮನೆತನದವರು ಕಂಬಳದ ಕೋಣಗಳನ್ನು ಸಾಕುವುದು ಪದ್ಧತಿ. ವೈದಿಕರಾದ ನಾಗಪ್ಪ ಐತಾಳರಲ್ಲಿ ಇದರಿಂದಾಗಿ ಒಂದು ಬಗೆಯ ಕೀಳರಿಮೆ. ಐತಾಳರ ಸುಪ್ತ ಮನಸ್ಸಿನಲ್ಲಿ ಇದ್ದು ಹೆಪ್ಪುಗಟ್ಟಿ ತಾವು ಕೋಣ ಸಾಕಬೇಕು. ದೊಡ್ಡ ಮನೆಯವರಂತೆ ಎಲ್ಲರ ಗೌರವ ಸಂಪಾದಿಸಬೇಕೆಂಬ ಹಂಬಲವಿರುತ್ತದೆ. ಇದೇ ಅವರ ಕನಸಿನಲ್ಲಿ ಬಂದಂತೆ ಲೇಖಕರು ವಿವರಿಸಿದ್ದಾರೆ. ಈ ಮೂಲಕ ಅಂದಿನ ಸಮಾಜದಲ್ಲಿ ಪುರೋಹಿತರಿಗೆ ಮೇಲ್ನೋಟಕ್ಕೆ ಜನತೆ ಗೌರವ ಕೊಟ್ಟರೂ ನಿಜವಾದಲ್ಲಿ ಅದು ತೋರಿಕೆಯೆಂಬ ಭಾವ ಅವರುಗಳಲ್ಲಿದೆ. ಆ ಬಗ್ಗೆ ವೇದನೆಯೂ ಇದೆ. ಇದು ಹೆಚ್ಚಿನ ಪುರೋಹಿತರುಗಳ ಮನೋಭಾವನೆ ಹೌದು. ಡಾ॥ ಐತಾಳರು ಕನಸಿನ ಅಭಿವ್ಯಕ್ತಿಯ ಮೂಲಕ ಇದನ್ನು ಪ್ರಕಟಿಸಿದ್ದಾರೆ.

ನಾಗಪ್ಪ ಐತಾಳರು ಪುರೋಹಿತರಲ್ಲಿ ಕ್ರಾಂತಿಕಾರಿ ಮನೋಭಾವದವರು. ಅವರ ಪ್ರಗತಿಗಾಮಿ ಧೋರಣೆ ಅನೇಕ ಕಡೆ ಬಿಂಬಿತವಾಗಿದೆ. ಅವರ ಜಾಣ್ಮೆ ವ್ಯವಹಾರಿಕ ಕೌಶಲ್ಯಗಳಲ್ಲಿ ಇಲ್ಲಿ ಬಂದಿವೆ. ಮಧುಮಗಳು ಹೊರಗಾದ್ದರಿಂದ ನಿಂತು ಹೋಗಬೇಕಾಗಿದ್ದ ಮದುವೆಯನ್ನು 'ಸಹಸ್ರಧಾರೆ' ಎಂಬ ಹೆಸರಿನಲ್ಲಿ ಶಾಸ್ತ್ರೋಕ್ತ ಸ್ನಾನ ಮಾಡಿಸಿ, ಮದುವೆ ನಡೆಸಿಕೊಡುವ ಅವರ ನೂತನ ಕಲ್ಪನೆ ವಿನೂತನವಾದದ್ದು. ಅದೇ ರೀತಿ ಕೋಟದನ ತಾನೆಂಬ ಬಗ್ಗೆ ಹೆಮ್ಮೆಯಿದೆ. ಉಳಿದವರು ಹಿಂದಿನಿಂದ 'ಕೋಟದ ಕಾಕಿ' ಎಂದು ಆಡಿಕೊಳ್ಳುತ್ತಿದ್ದರು. ಕೇಳಿ ನೊಂದು ಆ ಅವಮಾನದ ಸೇಡು ತೀರಿಸಿಕೊಂಡ ಪರಿ ಬಹು ದೀರ್ಘವಾಗಿ ಬಂದಿದೆ. ಈ ಪ್ರಸಂಗದಲ್ಲಿ ಕಾಗೆಯ ಬಗ್ಗೆ ಅವರು ಕೊಡುವ ಉಪನ್ಯಾಸ ತರ್ಕ ಪೂರಿತವಾಗಿದ್ದರೂ ಕಾದಂಬರಿಯ ಓಟಕ್ಕೆ ಹೊಂದುವುದಿಲ್ಲ. ಇಲ್ಲಿ ನಾಗಪ್ಪ ಐತಾಳರ ಮನಃಸ್ಥಿತಿಯು ಲೇಖಕರದ್ದೇ ಎಂಬ ಭಾವ ಬರುತ್ತದೆ. ಒಂದು ರೀತಿಯಿಂದ ಹೇರಿದಂತೆ ಕಾಣಿಸುತ್ತದೆ. ಕಾದಂಬರಿಯ ಇನ್ನೊಂದು ವಿಶೇಷವೆಂದರೆ, ಈ ಪ್ರದೇಶದ ಕೆಲವೊಂದು ಐತಿಹಾಸಿಕ ಕ್ಷಣಗಳನ್ನು ಅದು ದಾಖಲಿಸಿರುವುದು. ಕೋಟ ಪ್ರದೇಶಕ್ಕೆ ಬೇಳೆಸಾರಿನ ಪ್ರವೇಶವಾದ ಬಗೆ, ಕಾಫಿಯ ರುಚಿಯನ್ನು ಜನರಿಗೆ ಹತ್ತಿಸಲು ಮಾಡಿದ ಮಾರಾಟಗಾರರ ಪ್ರಾರಂಭಿಕ ಪ್ರಯತ್ನಗಳು 'ಡಿಸಲ್

ಇಂಜಿನ್' ಆಗಮನವಾದ ಬಗೆ ತೀವ್ರ ಹಣವಸೂಲು ಮಾಡುವ ಪರಿ ಇವೆಲ್ಲಾ ಆಕರ್ಷಕವಾಗಿ ಬಂದಿವೆ. ಅಧಿಕಾರಿಗಳ ಕಾಯಿಸಿದ ಕಬ್ಬಿಣದ ಶಿಕ್ಷೆಯಿಂದ ಬಟ್ಟೆ ಉಳಿಸಿಕೊಳ್ಳಲು ರೈತಾಪಿ ಜನರು ಮಾಡುವ ಕರುಣಾಜನಕ ಪ್ರಯತ್ನದಲ್ಲಿ ವಿಷಾದದ ಎಳೆ ಇದೆ. ಪಾರಂಪಳ್ಳಿ ಗ್ರಾಮದೇವತೆ ವಿಷ್ಣುಮೂರ್ತಿ ದೇವಸ್ಥಾನದಲ್ಲಿ ನಡೆಯುವ ಮುಡಿಯಕ್ಕಿ ದೋಸೆಯ ಸೇವೆ, ಆ ಸಮಾರಾಧನೆಯಲ್ಲಿ ಆಗುವ ಅವಾಂತರಗಳೆಲ್ಲಾ ಕಣ್ಣಿಗೆ ಕಟ್ಟುವಂತೆ ಡಾ॥ಐತಾಳರು ಚಿತ್ರಿಸಿದ್ದಾರೆ. ಅದೇ ರೀತಿ ಆಷಾಢದ ಜಿರಾಪತಿ ಮಳೆಗೆ ಕೊಚ್ಚಿ ಹೋದ ಗದ್ದೆಯ ಒಡಕನ್ನು ಕಟ್ಟಲು ಸ್ವತಃ ನಾಗಪ್ಪ ಐತಾಳರೇ ಒಡಕಿಗೆ ಅಡ್ಡವಾಗಿ ಮಲಗಿದ ಪ್ರಸಂಗವನ್ನು ಓದುವಾಗ 'ಮರಳಿ ಮಣ್ಣಿಗೆ'ಯ ಎಂದು ರಾಮೈತಾಳರು ಹೊಳೆಯ ಕೆಸರನ್ನು ತೆಗೆಯುವ ಮಯ್ಯೆಲ್ಲಾ ಕೆಸರು ಮಾಡಿಕೊಂಡಿದ್ದು ನೆನಪಿಗೆ ಬರುವಂತಿದೆ. ಈ ಪ್ರದೇಶದ ಶ್ರಮ ಪೂರ್ಣ ಜೀವನಕ್ಕೆ ಇದು ಸಾಕ್ಷಿ.

ನಾಗಪ್ಪ ಐತಾಳರು, ಜಾತಕ ಜ್ಯೋತಿಷ್ಯ ಎಲ್ಲ ಬಲ್ಲವರಾದರೂ ದುರುಪಯೋಗ ಪಡಿಸಿಕೊಂಡವರಲ್ಲ. ಊರವರ ಹೊಳೆತಿಗೆ ಸ್ಪಂದಿಸಿದವರು. ಜನರಿಗೂ ಅವರ ಮೇಲೆ ನಂಬಿಕೆ ಇದಕ್ಕೆ ರಫಿಕ್ ಪ್ರಕರಣವೇ ಸಾಕ್ಷಿ. ಧರ್ಮ ಬೇರೆಯಾದರೂ, ನಂಬಿಕೆ ಬೇರೆಯಾದರೂ ಸಹಬಾಳ್ವೆ, ಪರಸ್ಪರ ವಿಶ್ವಾಸ ಆ ಗ್ರಾಮೀಣ ಪ್ರದೇಶದಲ್ಲಿ ಮನೆ ಮಾಡಿತು ಎಂಬುವುದಕ್ಕೆ ಈ ಕಾದಂಬರಿಯಲ್ಲಿ ಸಾಕಷ್ಟು ಉದಾಹರಣೆ ಸಿಗುತ್ತದೆ. ಅದೇ ರೀತಿ ವರಾಡ ಎತ್ತಲು ಬೆಂಗಳೂರಿಗೆ ಬರುತ್ತಿದ್ದ ಐತಾಳರಿಗೆ ನಗರ ಜೀವನದ ಅನೇಕ ವಿಚಾರಗಳು ತಿಳಿದಿತ್ತು. ಅವರ ಅನೇಕ ಪ್ರಯೋಗಕ್ಕೆ ಆ ಪ್ರಯೋಗಗಳ ಪ್ರೇರಕವಾಗಿದ್ದವು. ಕಾದಂಬರಿಯ ಅಂತ್ಯ ಮಾತ್ರ ಬಹಳ ಚುರುಕಿನಿಂದ ನಾಟಕೀಯವಾಗಿ ಬಂದಂತಿದೆ. ಡಾ॥ಐತಾಳರಿಗೆ ಪರಂಪರೆಯ ಮೇಲಿದ್ದ ವಿಶ್ವಾಸ ಶ್ರದ್ಧೆಗಳೇ ಈ ಬಗೆಯ ಅಂತ್ಯ ತರಲು ಕಾರಣವಾಗಿರಬೇಕು. ವರ್ಣ ಸಂಕರವು ಅನಿವಾರ್ಯ ಹಾಗೂ ಸಹ್ಯ ಎಂಬುವುದನ್ನು ನಿರೂಪಿಸುವುದು 25ನೆಯ ಪ್ರಸಂಗ ಬರೆದಂತಿದೆ. ನಾಗಪ್ಪ ಐತಾಳರ ಮಗ ಅಮೇರಿಕಾಗೆ ತೆರಳಿ ಒಳ್ಳೆಯ ಉದ್ಯೋಗ ಹೊಂದಿ ಐದಾರು ವರ್ಷ ಅಲ್ಲೇ ಇರುತ್ತಾನೆ. ಅಲ್ಲಿನ ಹೆಣ್ಣು ಮಗಳನ್ನು ಮದುವೆಯಾಗುತ್ತಾನೆ. ಕೊನೆಗೆ ಈ ವಿಚಾರ ಐತಾಳರಿಗೆ ತಿಳಿಯುತ್ತದೆ. ಅದು ಮಗ ಸೊಸೆ ಮೊಮ್ಮಕ್ಕಳ ಆಗಮನ ನಂತರ ಆಕಾಶವೇ ಕಳಚಿ ಬಿದ್ದೆಂಬ ರೀತಿಯಲ್ಲಿ ಕುಟುಂಬ ಸೊಸೆ ಸಂಪೂರ್ಣ ಭಾರತೀಯ ನಾರಿಯ ರೀತಿಯಲ್ಲಿ ಪರಿವರ್ತನೆ ಆಗಿರುವುದನ್ನು ತಿಳಿದಾಗ ಅಲ್ಲದೇ ಶಂಕರ ಜಪತಪಾದಿ ಸಂಪ್ರದಾಯಗಳನ್ನು ಮರೆತಿಲ್ಲ. ಎಂಬುವುದನ್ನು ತಿಳಿದಾಗ ಆನಂದ ಪರವಶರಾಗುತ್ತಾರೆ. ತಮ್ಮ ಸಾಂಪ್ರದಾಯ ಒಡಲಿನಲ್ಲಿ ಎಂಬುವುದೇ ಅವರ ಸಂತೋಷಕ್ಕೆ ಕಾರಣ. ಮಗ ಸೊಸೆ ಊರಿನಲ್ಲೇ ಮುಂದೆನೆಲೆಸುತ್ತಾರೆ. ಗಳಿಸಿದ

ಸಂಪತ್ತನ್ನು ಊರಿನವರ ಉದ್ಧಾರಕ್ಕೆ ಬಳಸಲಿದ್ದಾರೆಂದಾಗ ಇನ್ನಷ್ಟು ಖುಷಿಯಾಗಿ ಶ್ರೀಗುರುನರಸಿಂಹನಿಗೆ ಇನ್ನರೆಡು ಸುತ್ತು ಪ್ರದಕ್ಷಿಣೆ ಹೆಚ್ಚು ಹಾಕುತ್ತಾರೆ.

ಈ ಕಾದಂಬರಿಯು ಅಪ್ಪಟ ಕೋಟ ಕುಂದಾಪುರದ ಭಾಷೆಯೊಂದಿಗೆ ಮಿಳಿತವಾಗಿ ಬಂದಿದೆ. ಡಾ॥ಐತಾಳರು ಬಳಸುವ ಉದಾಹರಣೆಗಳು ಕೂಡಾ ಸೊಗಸಾಗಿವೆ. 'ಶ್ರಾದ್ಧಕ್ಕೆ ಕರಿದ ಕೊಚ್ಚಕ್ಕಿ ವಡೆ ತರಹ ಕೆಂಪಾಯ್ತು'. 'ದಿಬ್ಬಣದ ಹೆಂಗ್ಸ್‌ಗೆ ಕೊಟ್ರೆ ನನ್ ಕೊಚ್ಚಾಕ್' ಎಂಬುವುದೆಲ್ಲಾ ಚಾಲ್ತಿ ನುಡಿಕಟ್ಟುಗಳಾಗಿವೆ. ಇನ್ನೂ ಪದ ಪರಿಚಯಗಳು ಸಾಕಷ್ಟು ತುಂಬಿಕೊಂಡಿವೆ. ಕಾದಂಬರಿಯ ಇಪ್ಪತ್ತನೆ ಶತಮಾನದ ಸಂಕ್ರಮಣಾವಸ್ಥೆಯನ್ನು ಸಾವಧಾನವಾಗಿ ಪರಿಚಯಿಸಿದೆ. ಅನೇಕ ಹಾಸ್ಯ ಪ್ರಸಂಗಗಳ ನಿರೂಪಣೆಯ ಸಶಕ್ತವಾಗಿ ಬಂದಿವೆ. ಹೀಗೆ ಬಿಡಿಬಿಡಿ ಘಟನೆಗಳನ್ನು ಪೋಣಿಸಿ ಮನೆ ಮಾಡಿ ರಚಿಸಿರುವ ಈ ಕೃತಿ ಒಂದು ಉತ್ತಮ ಪ್ರಾದೇಶಿಕ ಕಾದಂಬರಿಯಾಗಿ ರೂಪುಗೊಂಡಿದೆ. ಡಾ॥ಐತಾಳರ ಯೋಚನಾ ಲಹರಿಗಳಲ್ಲಿ ಹೀಗೆ ಕಥೆಯಾಗಿ ಜನರನ್ನು ಮೆಚ್ಚಿಸುವುದರೊಂದಿಗೆ ಕೋಟದವರ ಶ್ರಮಪೂರ್ಣ ಬದುಕಿಗೆ ಅಚಲ ನಂಬಿಕೆಯ ಬಾಳಿಗೆ ಕೈಗನ್ನಡಿಯಾಗಿದೆ.

□

ಡಾ. ಅರಳು ಮಲ್ಲಿಗೆಯವರ ಉಗಾಭೋಗಗಳು

ಕಳೆದ ಐನ್ನೂರು ವರ್ಷಗಳಿಂದ ದಾಸ ಸಾಹಿತ್ಯವು ಕನ್ನಡನಾಡಿನ ಜನಜೀವನದ ಮೇಲೆ ಮೂಡಿಸಿರುವ ಪ್ರಭಾವ ಅಪಾರ ಹಾಗೂ ಅಗಾಧ. ಕೀರ್ತನೆ ಸುಳಾದಿ ಉಗಾಭೋಗವೇ ಮುಂತಾದ ರಚನೆಗಳ ಮೂಲಕ ದಾಸರು ಭಕ್ತಿಯ ಪರಾಕಾಷ್ಠೆಯನ್ನು ಬಿಂಬಿಸಿರುವುದು ಮಾತ್ರವಲ್ಲದೆ ಸಮಾಜಕ್ಕೆ ಬೋಧನೆ ಹಾಗೂ ಸಮಾಜ ವಿಮರ್ಶೆಗಳಲ್ಲೂ ತೊಡಗಿಕೊಂಡಿದ್ದಾರೆ. ದಾಸ ಸಾಹಿತ್ಯದಲ್ಲಿ ದಾಸಶ್ರೇಷ್ಠರ ನಿರ್ಮಮ ಹಾಗೂ ನಿರ್ಮಲ ಅಂತಃಕರಣದ ಪರಿಚಯವಾಗುತ್ತದೆ. ಮಧ್ವಸಿದ್ಧಾಂತದಲ್ಲಿ ಸಂಪೂರ್ಣ ಶ್ರದ್ಧೆ, ನಿಷ್ಠೆಯುಳ್ಳ ಈ ರಚನೆಗಳಲ್ಲಿ ಆತ್ಮನಿವೇದನೆಯು ಆರ್ತವಾಗಿ, ಆಪ್ತವಾಗಿ ಪಡಿಮೂಡಿದೆ. ವಿಜಯನಗರ ಸಾಮ್ರಾಜ್ಯ ಕಾಲದಲ್ಲಿ ದಾಸ ಸಾಹಿತ್ಯವು ಉಚ್ಛ್ರಾಯ ಸ್ಥಿತಿಯನ್ನು ತಲುಪಿದೆ. ದಾಸಸಾಹಿತ್ಯ ಇಂದಿಗೂ ಬೆಳೆಯುತ್ತಲೇ, ತುಂಬಿಕೊಳ್ಳುತ್ತಲೇ ಇದೆ. ಈ ಶತಮಾನದಲ್ಲಿ ಕೂಡ ಅಸಂಖ್ಯರು ದಾಸವಾಙ್ಮಯಕ್ಕೆ ತಮ್ಮ ಕೊಡುಗೆಗಳನ್ನು ನೀಡಿದ್ದಾರೆ. ಅವರಲ್ಲಿ ಅಗ್ರಗಣ್ಯರೆಂದರೆ ಡಾ.ಅರಳು ಮಲ್ಲಿಗೆ ಪಾರ್ಥಸಾರಥಿಯವರು. 'ಪಾರ್ಥಸಾರಥಿ ವಿಠಲ' ಎಂಬ ಅಂಕಿತನಾಮದಿಂದ ರಚಿತವಾಗಿರುವ ಇವರ ಹಾಡುಗಳು ಸುಳಾದಿಗಳು ಹಾಗೂ ಉಗಾಭೋಗಗಳು ತಮ್ಮ ಕಾವ್ಯಾತ್ಮಕ ಶಕ್ತಿಯಿಂದ ದಾಸ ಸಾಹಿತ್ಯ ಭಂಡಾರವನ್ನು ಶ್ರೀಮಂತಗೊಳಿಸಿವೆ. ಕಾದಂಬರಿ, ವ್ಯಕ್ತಿಚಿತ್ರ, ವಿಮರ್ಶೆ, ಜೀವನಚರಿತ್ರೆ, ಇತಿಹಾಸ ರಚನೆ ಮುಂತಾದ ಆಧುನಿಕ ಕನ್ನಡ ಸಾಹಿತ್ಯ ಪ್ರಕಾರಗಳಲ್ಲಿ ಕೃಷಿ ಮಾಡಿರುವ ಇವರು 60ಕ್ಕೂ ಹೆಚ್ಚು ಕೃತಿಗಳನ್ನು ಪ್ರಕಟಿಸಿ, ಕನ್ನಡ ಸಾಹಿತ್ಯ ಸರಸ್ವತಿಯ ಮಡಿಲನ್ನು ತುಂಬಿದ್ದಾರೆ. ಇವರ ಅನುಭಾವಿಕ ನೆಲೆಗಳನ್ನು ಅರಿಯಬೇಕಾದರೆ ಇವರು ರಚಿಸಿದ ಹಾಡುಗಳು, ಸುಳಾದಿಗಳು ಹಾಗೂ ಉಗಾಭೋಗಗಳನ್ನು ಪರಿಶೀಲಿಸಬೇಕಾಗುತ್ತದೆ.

ವಚನ, ಗದ್ಯ ಹಾಗೂ ಕೀರ್ತನೆಗಳ ನಡುವಣ ಒಂದು ಲಯಬದ್ಧವಾದ, ಒಂದೊಂದು ತಾಳದಲ್ಲಿ ಹಾಡಬಲ್ಲ ಚಿಕ್ಕ ಪ್ರಬಂಧಗಳನ್ನು ಸುಳಾದಿಗಳೆಂದು ಕರೆಯುತ್ತಾರೆ. ಇಲ್ಲಿ ಮಾತ್ರೆಗಳ ಲೆಕ್ಕಾಚಾರಕ್ಕಿಂತ ಲಯಕ್ಕೆ ಪ್ರಾಧಾನ್ಯ ಉಗಾಭೋಗಗಳು ಸ್ವರಪ್ರಧಾನ ಗೀತೆಗಳಾಗಿದ್ದು ಸುಳಾದಿಗಳಿಂದ ಸ್ವತಂತ್ರವಾದ, ಭಿನ್ನವಾದ ರಚನೆಗಳಾಗಿವೆ. ಭಾವ ರೂಪದಲ್ಲಿ ವಚನಕ್ಕೆ ಇವು ಹತ್ತಿರವಾಗುತ್ತವೆ. ಆತ್ಮನಿವೇದನೆ ಮಾಡುವಲ್ಲಿ, ತಾತ್ವಿಕ ವಿಚಾರ ನಿರೂಪಿಸುವಲ್ಲಿ, ನೀತಿ ಮಾರ್ಗವನ್ನು

ಹೇಳುವಲ್ಲಿ, ಬದುಕನ್ನು ತಿದ್ದಿ ತೋರಿಸಿಕೊಡುವಲ್ಲಿ ಉಗಾಭೋಗಗಳ ಮಹತ್ತಿಕೆ ಇದೆ. ಇವು ಸರಳವಾದ ರಚನೆಗಳಾಗಿದ್ದು ಮಾರ್ಮಿಕವಾಗಿ ವಿಷಯವನ್ನು ತಿಳಿಸುತ್ತದೆ. "ಸ್ವಯಂಪೂರ್ಣವಾದ ಏಕಮೇವ ಭಾವದ ನಿರೂಪಣೆಯಿಂದ ಅದು ಭಾವಗೀತೆಯ ಸ್ವರೂಪ ತಾಳಿದೆ" ಎಂಬ ರಂ.ಶ್ರೀ.ಮುಗಳಿಯವರ ಮಾತು ಒಪ್ಪಬಹುದು (ರಂ.ಶ್ರೀ.ಮುಗಳಿ ಸಮಗ್ರ ಸಾಹಿತ್ಯ ಸಂಪುಟ ಪುಟ ಸಂಖ್ಯೆ 317). ಡಾ.ಅರಳುಮಲ್ಲಿಗೆಯವರ ಪಾರ್ಥಸಾರಥಿ 'ವಿಠಲದಾಸರ ಉಗಾಭೋಗಗಳು ಸುಳಾದಿಗಳ' ಎಂಬ ಕೃತಿಯು ವಿದ್ವತ್ ವಲಯದ ಗಮನಸೆಳೆದಿದೆ. ಈ ಕೃತಿಯಲ್ಲಿ 155 ಉಗಾಭೋಗಗಳು ಹಾಗೂ ಮೂರು ವಿಚಾರಗಳಿಗೆ ಸಂಬಂಧಿಸಿದ ಸುಳಾದಿಗಳು ಅಡಕವಾಗಿವೆ. ಇದಲ್ಲದೆ 'ಲೌಕಿಕಗಾಥಾ' ಎಂಬ ವಿಭಾಗದಲ್ಲಿ ಇದುವರೆಗಿನ ಅವರ ಸಾಧನೆ ಬಗ್ಗೆ ನಾಡಿನ ಬೇರೆ ಬೇರೆ ವಿದ್ವಾಂಸರು, ದೇಶ-ವಿದೇಶದ ಗಣ್ಯರು, ಪ್ರಾಜ್ಞರು ನುಡಿದ 'ನುಡಿಮಾಣಿಕ್ಯ'ಗಳು ಇಲ್ಲಿ ಒಂದೆಡೆ ಸಂಗ್ರಹವಾಗಿದೆ. ಇದರಿಂದಾಗಿ ಡಾ.ಪಾರ್ಥಸಾರಥಿಯವರ ಅನುಭಾವಿಕ ನೆಲೆ ಹಾಗೂ ಅವರ ಕಾವ್ಯಾತ್ಮಕ ಶಕ್ತಿಯನ್ನು ತಿಳಿದುಕೊಳ್ಳುವಲ್ಲಿ ಈ ಕೃತಿ ತುಂಬಾ ಸಹಕಾರಿಯಾಗುತ್ತದೆ.

ಶ್ರೀ ಕೃಷ್ಣನ ಬಾಲಲೀಲೆಗಳನ್ನು ವರ್ಣಿಸುವಲ್ಲಿ, ಹಾಡುವಲ್ಲಿ ನಮ್ಮ ದಾಸರು ಎಂದೂ ತಣಿದಿಲ್ಲ. ಕೃಷ್ಣನ ಬಾಲಲೀಲೆಗಳ ವರ್ಣನೆ ದಾಸಸಾಹಿತ್ಯದ ಹೆಗ್ಗುರುತುಗಳಲ್ಲಿ ಒಂದು ಪಾರ್ಥಸಾರಥಿ ವಿಠಲದಾಸರ ಅನೇಕ ಉಗಾಭೋಗಗಳಲ್ಲಿ ಶ್ರೀಕೃಷ್ಣಪಾರಮ್ಯದ ವರ್ಣನೆಗಳು ಸಜೀವವಾಗಿ ಬಂದಿವೆ. ಅವರ 'ಗಡಿಗೆ ಒಡೆದು ಬೆಣ್ಣೆ ಕದ್ದ' ಎಂಬ ಉಗಾಭೋಗ ಹೀಗಿದೆ.

ಗಡಿಗೆ ಒಡೆದು ಬೆಣ್ಣೆಕದ್ದ ಮಗು ಎಲ್ಲಿ ಗೋಪಿ

ಎಲ್ಲೆ ಮೀರಿ ಬಾಲಲೀಲೆ ತೋರಿದವನೆಲ್ಲೆ ಗೋಪಿ

ಗೋವರ್ಧನ ಗಿರಿ ಕಿರುಬೆರಳಲೆತ್ತಿದವನೆಲ್ಲೆ ಗೋಪಿ

ಗೋಪಿ ಗೋಪ್ಯರ ಕಾಯ್ದ ಗೋಪಾಲನೆಲ್ಲೆ ಗೋಪಿ

ಗೊಲ್ಲ ಬಾಲಕರೊಡನೆ ಯಮುನೆಮಡುವ ಕಲಕಿದವನಲ್ಲೆ ಗೋಪಿ

ಮುಚುಕುಂದನ ಕಾಯ್ದ ಮುಕುಂದ ನೆಲ್ಲೆಗೋಪಿ

ಸುಧಾಮನಿಗೆ ಅಕ್ಷಯ ಫಲವನಿತ್ತ ಪರಮಾಪ್ತ ಸಖ

ನಮ್ಮ ಪಾರ್ಥಸಾರಥಿ ವಿಠಲನ ತಂದು ತೋರೆ ಗೋಪಿ (ಪುಟ ಸಂಖ್ಯೆ 44)

ಇಲ್ಲಿ ಕೃಷ್ಣನು ಅಸಾಮಾನ್ಯ ಸಾಧನೆಗಳಲ್ಲಿ ಒಂದೊಂದಾಗಿ ಬರುವುದರೊಂದಿಗೆ ನಮ್ಮ ಕಣ್ಮುಂದೆ ಪ್ರಕರಣಗಳೆಲ್ಲ ಬರುತ್ತವೆ. ಇದೇ ರೀತಿ ನಂಬಿದ ಜನರಿಗೆ ಇಂಬು ನೀಡುವ ಕೃಷ್ಣನ ವಿಶೇಷತೆಗಳನ್ನು 'ಸೀರೆ ಕದ್ದ ಮನವ ಗೆದ್ದ'ಎಂಬ ಉಗಾಭೋಗದಲ್ಲಿ ಪ್ರಸ್ತಾಪವಾಗಿದೆ. ದಾಸರು ಇಲ್ಲಿ (ಪುಟಸಂಖ್ಯೆ 82)

ಕೃಷ್ಣನ್ಯಾರೆಂಬುದರ ಪ್ರಶ್ನೆಗಳನ್ನು ಕೇಳುತ್ತಾ ಆತ ನಡೆಸಿದ ಲೀಲಾ ವಿನೋದಗಳ ಪಟ್ಟಿಯನ್ನು ಕೊಡುತ್ತಾರೆ. ಸಂಕಲನದಲ್ಲಿ ಯಶೋಧೆಯ ತುಂಟ (ಪುಟ ಸಂಖ್ಯೆ 23), ಮತಿವಂತ ಬಲವಂತ (ಪುಟ ಸಂಖ್ಯೆ 70), ಬೇಡುವ ಕಷ್ಟ (ಪುಟಸಂಖ್ಯೆ 68) ಮುಂತಾದ ಉಗಾಭೋಗಗಳು ಈ ವರ್ಗಕ್ಕೆ ಸೇರಿವೆ.

ದಾಸಸಾಹಿತ್ಯದಲ್ಲಿ ಆತ್ಮನಿವೇದನೆ ಗೆಮಹತ್ವವಿದೆ. ಹರಿಕಾರುಣ್ಯಕ್ಕಾಗಿ ಪರಿತಪಿಸುವ ಜೀವಿಯ ಹೃದಯ ತುಡಿತದ ಚಿತ್ರಣ ಕೆಳಗಿನ ಉಗಾಭೋಗದಲ್ಲಿ ಮನಮಿಡಿಯುವಂತಿದೆ.

ಉದರ ಚಿಂತೆಯುಬಿಡಿಸೊ ಉದ್ಧಾರಕರ್ತ
ಸಾದರದಿಸನ್ಮನದಿ ಸಾಧನೆಯ ಮಾಡಿಸು
ಆದರಿಸಿ ನಿನ್ನವರ ಸಂಗದಲ್ಲಿರಿಸು
ಸಾಧು-ಸಂತರ ಒಡನಾಟಕೊಡಿಸು
ಮೂದಲಿಪ ಸಣ್ಣಜನರ ಸಂಗವನ್ನು ಬಿಡಿಸು
ಪಾರ್ಥಸಾರಥಿ ವಿಠಲ ಕೈಹಿಡಿದು ನಡೆಸು

(ಉದರ ಚಿಂತನೆಯ ಬಿಡಿಸೊ (ಪುಟ ಸಂಖ್ಯೆ 33)

ಇದೇ ಬಗೆಯಲ್ಲಿ ವಿಷ್ಣುವಿನ ಬೇರೆಬೇರೆ ನಾಮಗಳ ಮಹತ್ವವನ್ನು ಸಾರುತ್ತದೆ. 'ದಾರಿ ತೋರು' ಎಂದು ಹೇಳುವ ಇನ್ನೊಂದು ಉಗಾಭೋಗದಲ್ಲಿ 'ಅನಂತ ಪುಣ್ಯದ ದಾರಿ ತೋರೋ' ಎಂದು ಬೇಡಿಕೊಳ್ಳುತ್ತಾರೆ. ಇಲ್ಲಿ ವಿಷ್ಣುವಿನ ಒಂದೊಂದು ನಾಮಕ್ಕೂ ಒಂದೊಂದು ಪರಿಯ ಶಕ್ತಿ ಇದೆ ಎಂದು ಸಾರುತ್ತಾರೆ.

ಕೇಶವನೆಂದರೆ ಕ್ಲೇಶವಿನಿತಿಲ್ಲ
ಮಾಧವನೆಂದರೆ ಮದ ಮತ್ಸರಗಳ ಸುಳಿವಿಲ್ಲ
ಗೋವಿಂದ ಎಂದೊಡನೆ ಬಂದೊದಗಿಸಲಹುವನು
ವಾಮನನೆಂದರೆ ಶುಭಕಾಮನೆ ಪೂರೈಪ
ಶ್ರೀಧರನೆಂದರೆಸಿರಿ ಸಂಪದವ ನೀವ
ಅಚ್ಚುತನೆಂದರೆ ಭಕ್ತಿಯ ಹುಚ್ಚು ಹಿಡಿಸುವ
ನರಹರಿ ಎಂದರೆ ನಿರ್ಮಲ ಮನವೀವ
ಶ್ರೀಕೃಷ್ಣ ಎಂದೊಡನೆ ತನ್ನೆಡೆಗೆ ಸೆಳೆಯುವ
ನಿಂತಿರುವ ನಾಮದಲ್ಲಿ ಯಾವುದಾದರೂ ನುಡಿದು
ಅನಂತ ಪುಣ್ಯದ ದಾರಿತೋರೋ ಪಾರ್ಥಸಾರಥಿವಿಠಲ (ಸಂಖ್ಯೆ 42)

ಲೋಕಾಂತ ಬಿಡಿಸಲು ಕೇಳುವ ಇನ್ನೊಂದು ಉಗಾಭೋಗ ಎಂದರೆ

"ಚಿತ್ತದಿ ಚಿತ್ತಜ ಪಿತನ" (ಪುಟ ಸಂಖ್ಯೆ 48) ಎಂಬುದು ಇಲ್ಲಿ ದಾಸರು ಅನನ್ಯ ಭಕ್ತಿಯಿಂದ, ಲೌಕಿಕದಿಂದ ಮುಕ್ತಿಕೊಡು ಎಂದು ಕೇಳುತ್ತಾರೆ. ಹರಿಗುರು ಸ್ಮರಣೆಯ ಅನೇಕ ಮುಖಗಳನ್ನು ಉಗಾಭೋಗಗಳಲ್ಲಿ ದಾಸರ ಅನುಭಾವಿಕ ಅಂಶಗಳನ್ನು ಕಾಣಬಹುದು.

ಸಮಾಜದ ಕುರಿತ ಚಿಂತನೆ, ಜನರ ಬದುಕಿನ ಬಗ್ಗೆ ಯೋಚನೆ ಇವರ ಕೆಲವು ಉಗಾಭೋಗಗಳಲ್ಲಿ ಬಂದಿವೆ, ನಾವು ಹೇಗೆ ಬದುಕಿದರೆ ಚೆಂದ, ನಿತ್ಯದ ಜೀವನದಲ್ಲಿ ಹೇಗೆ ನಡೆದುಕೊಳ್ಳಬೇಕು ಎಂಬುದನ್ನು ಸೂಚ್ಯವಾಗಿ ಸೂಚಿಸುತ್ತಾರೆ. ಇಂದು ಎಲ್ಲೆಡೆ ವಿಷಮಪರಿಸ್ಥಿತಿ ಇದೆ. ದುಷ್ಟರೇ ಎಲ್ಲೆಡೆ ವಿಜೃಂಭಿಸುತ್ತಿದ್ದಾರೆ. ಪಾರ್ಥಸಾರಥಿ ಅವರು ಅಂಥವರಿಂದ ದೂರವಿರಿ ಎಂದು ಕರೆಕೊಡುವ ರಚನೆ ಹೀಗಿದೆ.

ಗುಡಿ ಗುಂಡಾರ ವಾಸ ನಿವಾಸಿಗಳಿಗೆ ಬೆಂಕಿ ಇಡುವ

ಅನ್ಯರಿಗೆ ವಿಷ ಉಣಿಸುವ ದುರ್ಬುದ್ಧಿಯ

ಕೈಯಲ್ಲಿ ಮಾರಕಾಸ್ತ್ರಗಳಪಿಡಿದು ಬೆದರಿಸುವ

ಅನ್ಯರ ಧನದ ಅಹಂಕಾರಕ್ಕೆ ಮನಸ್ಸು ಹಾಕಿರುವ

ಕ್ಷೇತ್ರದಲ್ಲಿಯ ಅನ್ಯ ಸ್ತ್ರಿಯರ ಅಪಹರಿಸುವ ಜನರ

ಆತ ತಾಯಿಗಳೆಂದು ಅವರಿಂದ ದೂರವಿರಿ (ಪುಟ್ಟ 45)

ಇದೇ ರೀತಿ ಇವತ್ತಿನ ಕಾಲದ ಜನತೆ ಹೇಗೆ ಬದುಕುತ್ತಿದ್ದಾರೆ ಎಂಬ ಚಿತ್ರಣವನ್ನು 'ಕೇಳಿರಣ್ಣ ಕೇಳಿರಿ' ಎಂಬ ಉಗಾಭೋಗದಲ್ಲಿ ಸ್ಪಷ್ಟವಾಗಿ ಚಿತ್ರಿಸಿದ್ದಾರೆ. (ಪುಟ್ಟ 43) ಒಂದು ಒಣಗಿದ ಮರ (ಪುಟ್ಟ 39) ಕಲಹ ತುರಿಕೆದ್ಯುತಪಾನ (ಪುಟ್ಟ39), ಅಜ್ಞಾನಿಯೊಡನೆ ಮಾಡುವ (ಪುಟ್ಟ 27) ಮುಂತಾದ ಉಗಾಭೋಗಗಳಲ್ಲಿ ಸಾಮಾಜಿಕ ಚಿಂತನೆ ಧಾಳಾಗಿ ಕಾಣುತ್ತದೆ. ಉಗಾಭೋಗ, ಸುಳಾದಿ, ಕೀರ್ತನೆಗಳ ಭಾಷೆ ಸರಳವಾಗಿದ್ದು ಸೊಗಸಾಗಿರುತ್ತದೆ. ಅದನ್ನು ಹಾಡಿದಾಗ ನೇರವಾಗಿ ಶ್ರೋತೃವಿನ ಮನಸ್ಸನ್ನು ಪ್ರವೇಶಿಸಬೇಕು. ಅದರ ಅಂತರಾರ್ಥವು ತಕ್ಷಣ ಹೊಳೆಯಬೇಕು. ಆಗ ಮಾತ್ರ ಇಂತಹ ರಚನೆಗಳು ಸಾರ್ಥಕ್ಯ ಪಡೆಯುತ್ತವೆ. ಅವು ಕಬ್ಬಿಣ ಕಡಲೆಗಳಂತಿದ್ದು ಗೂಡಾರ್ಥಗಳಿಂದ ತುಂಬಿಕೊಂಡಿದ್ದರೆ ಉಪಯೋಗವಿಲ್ಲ. ಇವು ಓದುವ ಕಾವ್ಯವಲ್ಲ. ಹಾಡುವ ಕಾವ್ಯ. ಈ ಕಾರಣ ಇವುಗಳ ಸತ್ವವನ್ನು ತಿಳಿಯಲು ಬೇರೆಯೇ ಮಾನದಂಡ ಬೇಕಾಗುತ್ತದೆ. ಇವರ ಸರಸವಾದ ಪ್ರಿಯವಾಗಿರುವ ಒಂದು ರಚನೆಯನ್ನು ಇಲ್ಲಿ ಮಾದರಿಯಾಗಿ ಗಮನಿಸಬಹುದು.

ಎತ್ತಲೂ ಸುತ್ತಲೂ ಬರಿಯ ಕತ್ತಲು

ಸುತ್ತಮುತ್ತಲೂ ಗಾಢಾಂಧಕಾರ ಮುತ್ತಲು

ಉದ್ಧಾರಕ್ಕಾಗಿ ದುಡಿದು ವ್ಯರ್ಥ ಕಾಲ ಕಳೆದು

ನಿನ್ನ ಚರಣ ಹಿಡಿಯದೇ ಜನ್ಮ ವ್ಯರ್ಥವಾಯಿತು (ಪುಟ 35)

ಇದೇ ರೀತಿಯ ಇನ್ನೊಂದು ಉಗಾಭೋಗವೆಂದರೆ ಅವರ "ಅಂದವಾಗ ಬಲ್ಲ ಚೆಂದವಾಗ ಬಲ್ಲ" ಎಂಬುವುದು ಅವರ ನಾದಮಯತೆಯನ್ನು ಇಲ್ಲಿ ಗಮನಿಸಬಹುದು.

ಅಂದವಾಗಬಲ್ಲ ಚೆಂದವಾಗಬಲ್ಲ

ನಂದವಾಗಬಲ್ಲ ಆನಂದವಾಗಬಲ್ಲ

ಕಾರಣವಾಗಬಲ್ಲ ತಾರಣವಾಗಬಲ್ಲ

ಭಯಕೃತ್ ಆಗಬಲ್ಲ ಭಯ ನಿವಾರಣನಾಗಬಲ್ಲ

ಬೆಳಕೂ ಆಗಬಲ್ಲ ಬೆಳದಿಂಗಳಾಗಬಲ್ಲ

ಕಂಡೂ ಕಾಣಬಲ್ಲ ಕಾಣದೆಯೂ ಇರಬಲ್ಲ

ಏನಾದರೇನೋ ಸ್ವಾಮಿ ನೀ ಬಂದು ಮಿಂಚಿನಂತೆ ಪೊಳೆದು

ಬಾಳ ಬೆಳಕಾಗೋ ಪಾರ್ಥಸಾರಥಿ ವಿಠಲ

ಇಲ್ಲಿ ದೈವಶಕ್ತಿಯ ಮಿಂಚಿನ ಸೆಳಕನ್ನು ಹೃದಯಂಗಮವಾಗಿ, ಸರಸವಾಗಿ, ಅರ್ದ್ರವಾಗಿ ತೋಡಿಕೊಂಡಿದ್ದಾರೆ. ಆಗಬಲ್ಲ ಎಂದು ಬರುವ ಅಂತ್ಯ ಪ್ರಾಸದಿಂದಾಗಿ ಹಾಡಿದಾಗ ಗಾಢ ಪರಿಣಾಮ ಬೀರುತ್ತದೆ.

ಪೌರಾಣಿಕ ಕಥೆಗಳು ಒಂದು ಸಾಲುಗಳಲ್ಲಿ ಬಂದು ಇಡೀ ಪ್ರಸಂಗದ ಚಿತ್ರವೇ ಕಣ್ಣಿಗೆ ಕಟ್ಟುವಂತೆ ಮಾಡುವುದು ದಾಸರ ಕೃತಿಗಳಲ್ಲಿ ಸಾಮಾನ್ಯವಾಗಿ ಕಂಡು ಬರುವ ಅಂಶ. ಪಾರ್ಥಸಾರಥಿ ವಿಠಲದಾಸರ ರಚನೆಗಳಲ್ಲೂ ಇದು ಕಂಡು ಬರುತ್ತದೆ. ಅವರ ಕೆಲವು ಉಗಾಭೋಗಗಳಲ್ಲಿ ಬರುವ ಸಾಲುಗಳ ಮೂಲಕ 'ಭಾಗವತ'ದ ಅನೇಕ ಕಥೆಗಳು ಓದುಗರಿಗೆ ಪರಿಚಯವಾಗುತ್ತದೆ. ಪುರಾಣದಕಥೆಯನ್ನು ಕೆಲವೇ ಪದಗಳ ಜೋಡಣೆಯ ಮೂಲಕ ನಮ್ಮ ಕಣ್ಮುಂದೆ ಕಡೆದು ನಿಲ್ಲಿಸಿರುವುದನ್ನು 'ಅತಿಮೋಹ ಧೃತರಾಷ್ಟ್ರನಿಗೆ' (ಪುಟ 27), ಭೃಗುಮುನಿ ಒದ್ದಾಗ (ಪುಟ್ಟ 68) ಸತ್ಯ ಧರ್ಮವ ಬಿಡದೆ ನಡೆಯಲಿಬೇಕು (ಪುಟ 80) ಎಂಬ ಉಗಾಭೋಗಗಳಲ್ಲಿ ಕಾಣಬಹುದು. 'ಬೇಡುವ ಕಷ್ಟ' ಎಂಬ ರಚನೆಯಲ್ಲಿ ಬಲಿಯ ಕಥೆಯನ್ನು, ಕುಚೇಲನ ಕಥೆಯನ್ನು ಸಾರಸ್ಯಕರವಾಗಿ ಹೇಳಿರುವ ಪರಿಯನ್ನು ಇಲ್ಲಿ ಗಮನಿಸಬಹುದು.

ಈ ಪುಸ್ತಕದಲ್ಲಿ 3 ಸುಳಾದಿಗಳನ್ನು ತಾಳ ಸಹಿತವಾಗಿ ತರಲಾಗಿದೆ. ಶ್ರೀಕೃಷ್ಣ ಚಿಂತನ ಸುಳಾದಿ ಭ್ರಮನಿವಾರಣಾ ಸುಳಾದಿ ಹಾಗೂ ಭಗವಾನ್ ಮಹಿಮ ಸುಳಾದಿಗಳೆಂಬ ಹೆಸರಿನಿಂದ ಬಂದಿರುವ ಸುಳಾದಿಗಳಲ್ಲಿ ಪಕ್ವವಾದ ಭಾಷೆಯನ್ನು,

ಗಾಢವಾದ ಅನುಭೂತಿಯನ್ನು, ದೇವಕಾರುಣ್ಯದ ಬಗ್ಗೆ ತುಡಿತವನ್ನು, ಕಾಣಬಹುದು. ಪಾರ್ಥಸಾರಥಿ ವಿಠಲದಾಸರ ಭಕ್ತಿಯ ಪರಾಕಾಷ್ಠೆ 3 ಸುಳಾದಿಗಳಲ್ಲಿ ಎದ್ದು ಕಾಣುತ್ತದೆ. ಮೊದಲ ಸುಳಾದಿಯಲ್ಲಿ ಬಂದಿರುವ ರೂಪಕ ತಾಳದ 'ವೃಂದಾವನದ ಕೆಂದಾವರೆಯ ಅಂದದ ಅರಸನಾಗಿ' ಎಂದು ಪ್ರಾರಂಭವಾಗುವ (ಪುಟ 86) ರಚನೆಯನ್ನು ಹಾಗೂ 'ಭ್ರಮೆನಿವಾರಣಾ ಸುಳಾದಿ'ಯ ಅಟ್ಟತಾಳದ 'ದೇಹ ಸವೆಯುತಿದೆ ದಾಹ ನೀಗುತ್ತಿದೆ' ಎಂಬ ರಚನೆಯನ್ನು ಅವರ ಉತ್ತಮ ಕಾವ್ಯದ ಶಕ್ತಿಗೆ ಉದಾಹರಣೆಗೆ ಬಳಸಬಹುದು. ಕೊನೆಯ ಸುಳಾದಿಯಲ್ಲಿ ಅಟ್ಟತಾಳದಲ್ಲಿ ಬಂದಿರುವ 'ಅನಾಥಬಂಧು ನೀನು ಕಾರುಣ್ಯಸಿಂಧು ನೀನು' ಎಂಬಲ್ಲಿ ದಾಸರ ಆರ್ದ್ರತೆ ಮನಮಿಡಿಯುವಂತಿದ್ದು ಪದಗಳ ಬಳಕೆಗೆ ಹಾಗೂ ಭಾವದ ನಿರೂಪಣೆ ಹೃದಯವನ್ನು ತಟ್ಟುತ್ತದೆ. 'ಸ್ತುತಿ ಕೃತಿ'ಗಳು ಎಂಬ ವಿಭಾಗದಲ್ಲಿ ನಾಡಿನ ಬೇರೆ ಬೇರೆ ಕವಿಗಳು, ಸಾಹಿತಿಗಳು ಅರಳುಮಲ್ಲಿಗೆಯವರ ಕುರಿತು ಬರೆದಿರುವ ಪದ್ಯಗಳ ಸಂಗ್ರಹವಿದೆ. ಅಂಬಾತನಯ ಮುದ್ರಾಡಿ ತಿಂ.ವಿದ್ಯಾಶ್ರೀ ಕಟ್ಟೆ, ಡಾ.ಕೆ. ಎಸ್.ರಮೇಶ್, ಶೇಷನ್, ಜೆವಿ ಕುಲಕರ್ಣಿ, ಎಂ.ಆರ್.ರುಕ್ಮಿಣಿ, ಎಂಎನ್. ವ್ಯಾಸರಾವ್, ದೊಡ್ಡರಂಗೇಗೌಡ ಮುಂತಾದ ಖ್ಯಾತ ಕವಿಗಳ ರಚನೆಗಳಲ್ಲಿ ಅರಳುಮಲ್ಲಿಗೆ ಪಾರ್ಥಸಾರಥಿಯ ವ್ಯಕ್ತಿತ್ವದ ಪರಿಚಯವಾಗುತ್ತದೆ. ಕೃತಿಯ ಕೊನೆಯ ಭಾಗವಾದ 'ತಾರ್ಕಿಕಗಾಥ' ಎಂಬುವುದರಲ್ಲಿ ಡಾ.. ಅರಳುಮಲ್ಲಿಗೆ ಪಾರ್ಥಸಾರಥಿಯವರ ಕೃತಿಗಳ ಪರಿಚಯವಿದೆ. ಇದು ಅಲ್ಲದೇ ಅನೇಕ ವಿದ್ವಜ್ಜನರ ಅಭಿನಂದನೆ ನಾಡುನುಡಿಗಳ ಸಂಗ್ರಹವಿದೆ. ಡಾ.ಕೆ.ಎಸ್.ನಾರಾಯಣಚಾರ್ಯ, ಡಾ.ಸಾ.ಶಿ.ಮರುಳಯ್ಯ, ರಾಜರ್ಷಿ, ಡಿ.ವೀರೇಂದ್ರ ಹೆಗ್ಗಡೆ, ಶ್ರೀವಿಶ್ವೇಶ್ವತೀರ್ಥ ಸ್ವಾಮೀಜಿ, ರಾಜ್ಯಪಾಲ ಟಿ.ಎನ್.ಚತುರ್ವೇದಿ, ಬಿ.ಪಿ.ರಾವ್ ಮುಂತಾದ ಮಹನೀಯರು ಅರಳುಮಲ್ಲಿಗೆಯವರ ಕಾವ್ಯವೈಶಾಲ್ಯವನ್ನು, ಸಹೃದಯತೆಯನ್ನು, ಹರಿದಾಸ ಸಾಹಿತ್ಯಕ್ಕೆ ಕೊಟ್ಟ ಕೊಡುಗೆಯನ್ನು ಮುಕ್ತಕಂಠದಿಂದ ಹೊಗಳಿದ್ದಾರೆ. ಅವರ ಮೇರು ವ್ಯಕ್ತಿತ್ವವನ್ನು ಇಲ್ಲಿನ ಅಭಿಪ್ರಾಯಗಳ ಕನ್ನಡಿಯಂತೆ ಪ್ರತಿಬಿಂಬಿಸುತ್ತವೆ.

ಹೀಗೆ ಈ ಪಾರ್ಥಸಾರಥಿ ವಿಠಲದಾಸ ಉಗಾಭೋಗಗಳು ಹಾಗೂ ಸುಳಾದಿಗಳು ಕೃತಿ ವೈವಿಧ್ಯಮಯವಾಗಿದ್ದು ಕನ್ನಡ ಸಾಹಿತ್ಯಕ್ಕೆ ಉತ್ತಮ ಸೇರ್ಪಡೆಯಾಗಿದೆ. ಡಾ. ಅರಳುಮಲ್ಲಿಗೆಯವರ ಸಾಹಿತ್ಯ ವ್ಯಕ್ತಿತ್ವವನ್ನು ತಿಳಿಯಲು ಹಾಗೂ ಅವರ ಅನುಭಾವಿಕ ದೃಷ್ಟಿಕೋನದ ಆಳವನ್ನು ಕಾಣುವಲ್ಲಿ ಈ ಕೃತಿ ಬಹಳ ಸಹಕಾರಿಯಾಗುತ್ತದೆ. ಇದಕ್ಕಾಗಿ ಅವರಿಗೆ ಕನ್ನಡ ಸಾಹಿತ್ಯಾಸಕ್ತರು ಋಣಿಗಳಾಗಿದ್ದಾರೆ.

□

ಡಾ॥ ರಾಮಮೂರ್ತಿಯವರ ಸುರಭಿ

ಈಚೆಗೆ ಆಧುನಿಕ ಕನ್ನಡ ಸಾಹಿತ್ಯದ ಎಲ್ಲಾ ಪ್ರಕಾರಗಳಲ್ಲೂ ಹುಲುಸಾದ ಬೆಳೆ ಎದ್ದು ಕಾಣುತ್ತಿದೆ. ಕತೆ, ಕವನ, ಕಾದಂಬರಿ ನಾಟಕ, ಪ್ರಬಂಧ, ಪ್ರವಾಸ ಸಾಹಿತ್ಯ, ಶಿಶು ಸಾಹಿತ್ಯ, ವಿಚಾರ ಸಾಹಿತ್ಯ, ವಿಜ್ಞಾನ ಸಾಹಿತ್ಯ, ಹೀಗೆ ಹತ್ತು ಹಲವು ಬಗೆಗಳನ್ನು ವೈಶಿಷ್ಟ್ಯಮಯವಾಗಿ ತುಂಬಿಕೊಳ್ಳುತ್ತಿರುವ ಕನ್ನಡ ಸಾಹಿತ್ಯದಲ್ಲಿ ಸಂಶೋಧನಾ ಬರಹಗಳ ಬರ ಕಾಲಿಟ್ಟಿದೆ. ಕಳೆದ ಶತಮಾನ ಹೀಗಿರಲಿಲ್ಲ. ಆಗ ಸಂಶೋಧನಾ ರಂಗದಲ್ಲಿ ಅದರಲ್ಲೂ ಪ್ರಾಚೀನ ಸಾಹಿತ್ಯದ ಕುರಿತಾದ ಅಧ್ಯಯನ, ಅಧ್ಯಾಪನ, ಚರ್ಚೆ, ಗೋಷ್ಠಿಗಳು ನಡೆಯುತ್ತಿದ್ದವು. ಆಗಿನ ವಿಶ್ವವಿದ್ಯಾಲಯಗಳಲ್ಲಿ ಈ ಬಗ್ಗೆ ಕಮ್ಮಟ, ವಿಚಾರಸಂಕಿರಣ, ಪ್ರಚಾರೋಪನ್ಯಾಸಗಳು ಮೇಲುಗೈ ಪಡೆದಿದ್ದು ಅವುಗಳ ಫಲಗಳು ಪುಸ್ತಕ ರೂಪದಲ್ಲಿ ಹೊರ ಬರುತ್ತಿದ್ದವು. ಆದರೆ ಈಗ ಹಳೆಗನ್ನಡನ ಹಾಗೂ ನಡುಗನ್ನಡ ಸಾಹಿತ್ಯ ಕೃತಿಗಳು ಶೈಕ್ಷಣಿಕ ಪಠ್ಯಗಳಿಂದ ದೂರ ಸರಿಯುತ್ತಿದ್ದು, ವಿದ್ವತ್ ವಲಯದಲ್ಲೂ ಆಸಕ್ತಿ, ಚರ್ಚೆ, ಪ್ರಕಟಣೆ ಯಾವುದೂ ಕಾಣಿಸುತ್ತಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಡಾ.ಎಸ್.ರಾಮಮೂರ್ತಿ ಶರ್ಮ ಅವರ ಸುರಭಿಕೃತಿಯ ಪ್ರವೇಶವು ವಿದ್ವತ್ ಲೋಕಕ್ಕೆ ಆಗಿರುವುದು ಗಮನಾರ್ಹ ಬೆಳವಣಿಗೆಯಾಗಿದೆ.

ಶ್ರೀಯುತರು ನಿತಾಂತ ಪಂಡಿತರು. ಸಂಸ್ಕೃತವನ್ನು ಅದರಲ್ಲೂ ಯಜುರ್ವೇದವನ್ನು ಸಾದ್ಯಂತವಾಗಿ ಅಧ್ಯಯನ ಮಾಡಿಕೊಂಡವರು. ತೆಲುಗು ಭಾಷೆ ಮತ್ತು ಸಾಹಿತ್ಯದ ಪರಿಚಯ ಉಳ್ಳವರು. ಅವರ ಚಿಂತನ ಕ್ರಮ ಮತ್ತು ಬರವಣಿಗೆಗಳು ಈ ಹಿನ್ನೆಲೆಯಲ್ಲಿ ರೂಪುಗೊಂಡದ್ದು. ಪುರಾಣ ಹಾಗೂ ಇತಿಹಾಸದ ಬಗ್ಗೆ ಕುತೂಹಲ ಮತ್ತು ಆಳವಾದ ಅರಿವು ಹಾಗೂ ಅದನ್ನು ಬಗೆದು ಕಾಣುವ ಶಕ್ತಿ ಅವರಲ್ಲಿದೆ. ವಿದ್ವತ್ಪೂರ್ಣ ಬರವಣಿಗೆಗೆ ಪೂರ್ವಸಿದ್ಧತೆ ಅಗತ್ಯ. ಆರಿಸಿಕೊಂಡ ವಿಷಯದ ಮೇಲೆ ಪಾಂಡಿತ್ಯವಿರಬೇಕಾಗುತ್ತದೆ. ಆಳವಾದ ಒಳನೋಟ ಇದ್ದು ತಾಳ್ಮೆಯಿಂದ ವಿಷಯ ಮಾಡಿಸಬೇಕಾಗುತ್ತದೆ. ಹಿಡಿದ ಕೆಲಸದಲ್ಲಿ ಅಚ್ಚುಕಟ್ಟುತನ ಇದ್ದಾಗ ಮಾತ್ರ ಯಶಸ್ಸು ಲಭಿಸುತ್ತದೆ. ಈ ಎಲ್ಲಾ ಅಂಶಗಳು ರಾಮಮೂರ್ತಿಯವರಲ್ಲಿರುವುದರಿಂದಲೇ

ಅವರು ತಮ್ಮ ಪಿ.ಎಚ್.ಡಿ. ಪದವಿಗಾಗಿ "ಬಸವಣ್ಣ-ಒಂದು ಐತಿಹಾಸಿಕ ಮತ್ತು ಪೌರಾಣಿಕ ಸಮೀಕ್ಷೆ"- ಎಂಬ ವಿಷಯವನ್ನು ಆಯ್ದುಕೊಂಡು ಸಾದರಪಡಿಸಿದ್ದಾರೆ. ಅಲ್ಲೂ ಕೂಡ ಕನ್ನಡ, ತೆಲುಗು ಮತ್ತು ಸಂಸ್ಕೃತ ಸಾಹಿತ್ಯದಲ್ಲಿ ಪಡಿಮೂಡಿದ ಬಸವಣ್ಣನ ಪೌರಾಣಿಕ ವ್ಯಕ್ತಿತ್ವವನ್ನು ತೌಲನಿಕ ಅಧ್ಯಯನ-ಸಮೀಕ್ಷೆಗಳ ಮೂಲಕ ಹಿಡಿದಿಡುವ ಪ್ರಯತ್ನದಲ್ಲಿ ಯಶಸ್ವಿಯಾಗಿದ್ದಾರೆ. ಇತಿಹಾಸದ ಆಧಾರದ ಮೇಲೆ ಬೇರೆಬೇರೆ ಸಂಶೋಧಕರು ಮಂಡಿಸಿದ ವಿವರಗಳನ್ನು ಕ್ರೋಢೀಕರಿಸಿ ಐತಿಹಾಸಿಕ ಪುರುಷನಾಗಿ ಬಸವಣ್ಣನವರ ಸಿದ್ಧಿ-ಸಾಧನೆಗಳನ್ನು ಅಲ್ಲಿ ಗುರುತಿಸಿದ್ದಾರೆ. ಹೀಗೆ ವಿಭಿನ್ನ ಆಯಾಮಗಳ ಮೂಲಕ ಬಸವಣ್ಣನವರ ಮೇರು ಸದೃಶವಾದ ವ್ಯಕ್ತಿತ್ವದ ಶಿಖರವನ್ನು ಕನ್ನಡಿಗರಿಗೆ ಗೋಚರಿಸುವಂತೆ ತೋರಿಸಿ ಕೊಟ್ಟಿದ್ದಾರೆ. ಇದೀಗ ಪ್ರಕಟಗೊಳ್ಳುತ್ತಿರುವ ಸುರಭಿ (ವಿವಿಧ ಲೇಖನಗಳ ಸರಮಾಲೆ) ಕೃತಿಯನ್ನು ಈ ಹಿನ್ನೆಲೆಯಲ್ಲಿ ಪರೀಕ್ಷಿಸಬೇಕಾಗಿದೆ. ಇಲ್ಲಿ ಒಟ್ಟು ಇಪ್ಪತ್ತು ಲೇಖನಗಳಿವೆ. ಅವುಗಳಲ್ಲಿ ಐದು ಲೇಖನಗಳು ಶೋಧನ ಎಂಬ ಶೀರ್ಷಿಕೆಯ ಅಡಿಯಲ್ಲಿ ಸಂಗ್ರಹಿಸಿದ್ದು ವೀರಶೈವ ಸಾಹಿತ್ಯಕ್ಕೆ ಸಂಬಂಧಿಸಿದ್ದಾಗಿವೆ. ಅವರ ಪ್ರೌಢ ಅಧ್ಯಯನದ ಮುಂದುವರಿಕೆಯಂತಿರುವ ಈ ಲೇಖನಗಳಲ್ಲಿ ಅವರ ತೌಲನಿಕ ಸಮೀಕ್ಷೆಯ ಚಿಂತನಾ ವಿಧಾನ ಇಲ್ಲಿಯೂ ಕಾಣಿಸಿಕೊಂಡಿದೆ. ವೀರಶೈವ ಪುರಾಣಗಳಲ್ಲಿ ಪೌರಾಣಿಕ ಕಲ್ಪನೆ ಪಡಿಮೂಡಿದ ಬಗ್ಗೆ ಲೇಖಕರು ಆಳವಾಗಿ ಚಿಂತಿಸಿದ್ದಾರೆ. ಪುರಾಣದ ಸೃಷ್ಟಿಯ ಹಿನ್ನೆಲೆ, ಭಾರತೀಯ ಪರಂಪರೆಯಲ್ಲಿ ಪುರಾಣಗಳು ಬೆಳೆದು ಬಂದ ಬಗೆ, ಕನ್ನಡ ಸಾಹಿತ್ಯ ಪರಂಪರೆಯಲ್ಲಿ ಈ ದೃಷ್ಟಿಕೋನ ಒಡಮೂಡಿದ ಬಗ್ಗೆ ಸವಿಸ್ತಾರವಾಗಿ ಚರ್ಚಿಸಿ, ವೀರಶೈವ ಪುರಾಣಗಳಿಗೆ ಇವೆಲ್ಲಾ ಹೇಗೆ ಹಿನ್ನೆಲೆಯಾದವು-ಎಂಬುದನ್ನು ನಿರೂಪಿಸಿದ್ದಾರೆ. ಹರಿಹರನ ರಗಳೆಗಳಲ್ಲಿ ಬರುವ ಬಸವಪುರಾಣದ ಕಲ್ಪನೆಗೂ, ಆಂಧ್ರದ ಪಾಲ್ಕುರಿಕೆ ಸೋಮನಾಥನ ಕೃತಿಯಲ್ಲಿ ಕಾಣುವ ಪುರಾಣ ಕಲ್ಪನೆಗಳಿಗೂ ಇರುವ ವ್ಯತ್ಯಾಸಗಳನ್ನು ಅದಕ್ಕೆ ಕಾರಣವಾದ ಅಂಶಗಳನ್ನು ವಿವರಿಸಿದ್ದಾರೆ. ವೈದಿಕ ಸಾಹಿತ್ಯದ ಅಷ್ಟಾದಶ ಪುರಾಣಗಳು, ಜೈನತೀರ್ಥಂಕರರ ಪುರಾಣಗಳು ಹಾಗೂ ವೀರಶೈವ ಪುರಾಣಗಳು ಒಟ್ಟಾರೆ ಭಾರತೀಯ ಸಂಸ್ಕೃತಿಯ ಅಂಗವಾಗಿ ಮೂಡಿ ಬಂದ ಪುರಾಣಗಳ ಬಗೆಗಿನ ಚಿತ್ರಣ ಇಲ್ಲಿನ "ವೀರಶೈವ ಪುರಾಣಗಳಲ್ಲಿ ಪೌರಾಣಿಕ ಕಲ್ಪನೆ"- ಲೇಖನದಲ್ಲಿ ಕಾಣಿಸಿಕೊಂಡಿದೆ. ಹರಿಹರನ ರಗಳೆ ಹಾಗೂ ರಾಘವಾಂಕನ ಚಾರಿತ್ರ್ಯಗಳಿಗಿಂತ ಭಿನ್ನವಾದ ಪೌರಾಣಿಕ ಕಲ್ಪನೆಯ ಎಳೆ ವೀರಶೈವ ಪುರಾಣಗಳಲ್ಲಿ ಬಂದ ರೀತಿ ಕುತೂಹಲಕರ. ಇದಕ್ಕೆ ತೆಲುಗಿನ ಪಾಲ್ಕುರಿಕೆ ಸೋಮನಾಥನ ಕೊಡುಗೆ ಇದೆ- ಎಂಬುದು ಲೇಖಕರ ನಿಲುವು. ಪಾಲ್ಕುರಿಕೆ ಸೋಮನಾಥನು ಬಸವ ಪುರಾಣವನ್ನು ಮಹಾಭಾರತದ ಪರ್ವಗಳಿಗೆ ಹೋಲಿಸಿ ತನ್ನ ಕಾವ್ಯವನ್ನು ಸಮರ್ಥಿಸಿಕೊಂಡಿದ್ದಾನೆ. ಮುಂದೆ ಅವನ ಪರಿಕಲ್ಪನೆಯೇ ಮೂಲವಾಗಿ ಸಿಂಗಿರಾಜ ಪುರಾಣ, ಚೋರ

ಬಸವ ಪುರಾಣ, ಚೆನ್ನ ಬಸವ ಪುರಾಣ, ವಿಜಯಮ್ಮಿಯ ಬಸವಪುರಾಣ, ಸಿದ್ದೇಶ್ವರಪುರಾಣ, ಗುಡ್ಡದಶರಣಮ್ಮ ಪುರಾಣ ಮುಂತಾದ ಪುರಾಣದ ಕಾವ್ಯಗಳ ಪರಂಪರೆಯ ರಚನೆಯು ಕನ್ನಡದಲ್ಲಿ ಮೊದಲುಗೊಂಡಿತು ಎಂಬ ಅವರ ಮಾತುಗಳನ್ನು ಒಪ್ಪಬೇಕಾದ್ದೆ. ಪಾಲ್ಕುರಿಕೆ ಸೋಮನಾಥನ ಬಸವ ಪುರಾಣವನ್ನು ಭೀಮಕವಿಯು ಶಿವತತ್ವ ಪ್ರತಿಪಾದಿತವಾಗುವಂತೆ ಕನ್ನಡಿಸಿದ್ದಂತು ತಿಳಿದೇ ಇದೆ.

"ಸಿಂಗಿರಾಜನ ಬಸವಪುರಾಣ-ಒಂದು ಚಿಂತನೆ" ಹಾಗೂ ಎಂಬ ಪ್ರಬಂಧವು ಲೇಖಕರ ಸಂಶೋಧನಾ ಪ್ರವೃತ್ತಿಯನ್ನು ಪ್ರಚುರ ಪಡಿಸುವ ಎರಡು ಮಾದರಿಗಳಾಗಿವೆ. ಕನ್ನಡ ಸಾಹಿತ್ಯದ ಇತಿಹಾಸದಲ್ಲಿ ಸಿಂಗಿರಾಜ ಹಲವು ಕಾರಣಗಳಿಂದ ಖ್ಯಾತನಾದವನು. ಬಸವನೊಂದಿಗೆ ಆತನ ಹೆಸರು ತಳಕು ಹಾಕಿಕೊಂಡಿರುವುದು ಕೂಡ ಕುತೂಹಲಕರ ಅಂಶವಾಗಿದೆ. ಆತನ ಕುರಿತಂತೆ ಇರುವ ದಂತಕತೆಗಳು ಮುಂದಿನ ಚಿಂತಕರಿಗೆ, ಕವಿಗಳಿಗೆ, ನಾಟಕಕಾರರಿಗೆ ಅದನ್ನು ಪ್ರತಿಮಾ ರೂಪಕವಾಗಿ ಬಳಸಿಕೊಳ್ಳಲು ಸಾಧ್ಯವಾಯಿತು. ಲೇಖಕರು ಸಿಂಗಿರಾಜಪುರಾಣದ ಸೃಷ್ಟಿಗೆ ಪ್ರತ್ಯಕ್ಷವಾಗಿ ಹಾಗೂ ಪರೋಕ್ಷವಾಗಿ ಪ್ರೇರಣೆ ನೀಡಿರುವ ಹರಿಹರ, ಭೀಮಕವಿ ಹಾಗೂ ಲಕ್ಕಣ ದಂಡೇಶರ ಕೃತಿಗಳನ್ನು ಉಲ್ಲೇಖಿಸಿ ಅಲ್ಲಿರುವ ಸಾದೃಶ್ಯಗಳನ್ನು ತೋರಿಸಿ ಕೊಟ್ಟಿದ್ದಾರೆ. ಕ್ರಿ.ಶ. 1500ರ ಆಸು-ಪಾಸಿನ ಸಿಂಗಿರಾಜನು ತನ್ನ ಅಮಳ ಬಸವಚಾರಿತ್ರದಲ್ಲಿ ತಂದಿರುವ ಪವಾಡಗಳನ್ನು ಅವುಗಳ ಹಿನ್ನೆಲೆಯನ್ನು ವಿವರಿಸಿ ಉಳಿದ ಕವಿಗಳಿಗಿಂತ ಇವು ಹೇಗೆ ಭಿನ್ನ ಎಂಬುದನ್ನು ಸಿಂಗಿರಾಜನ ಕೊಡುಗೆ ಎಂಬ ಪ್ರಬಂಧದಲ್ಲಿ ವಿಶ್ಲೇಷಿಸಿದ್ದಾರೆ. ಬಸವಣ್ಣನವರ ವಚನಗಳ ಪ್ರಭಾವವೂ ಸಹ ಈ ಕಾವ್ಯದ ಮೇಲೆ ಹೇಗೆ ಆಗಿದೆ ಎಂಬುದರ ವಿಶ್ಲೇಷಣೆ ಕೂಡ ಸಾಧಾರವಾಗಿದೆ. ಸಂಕಲನದ ಉತ್ತಮ ಲೇಖನಗಳಲ್ಲಿ ಇದೂ ಒಂದೆಂದು ಭಾವಿಸಲು ಅಡ್ಡಿ ಇಲ್ಲ.

ಇದೇ ಬಗೆಯಲ್ಲಿರುವ ಇನ್ನೊಂದು ಸಂಪ್ರಬಂಧವೆಂದರೆ ಕಂಚಿಯ ಶಂಕರಾರಾಧ್ಯರ ಕೊಡುಗೆ-ಎಂಬುದು ಈ ಬರಹದಲ್ಲಿ ಕನ್ನಡದ ಬವಣ್ಣನ ಕತೆಯನ್ನು 14ನೇ ಶತಮಾನದಲ್ಲಿದ್ದ ಶಂಕರಾರಾಧ್ಯರ ಸಂಸ್ಕೃತದಲ್ಲಿ ವಿಶಿಷ್ಟವಾಗಿ ಬಸವ ಪುರಾಣಮ್ ಎಂಬ ಕೃತಿಯನ್ನು ರಚಿಸಿದ್ದಾನೆ. ಇಲ್ಲಿನ ಕಥನದಲ್ಲಿ ಪೌರಾಣಿಕ ಸಂವಿಧಾನದ ಆಧಾರದ ಮೇಲೆ ಬಸವಣ್ಣನ ಇಹ-ಪರಗಳ ಸಂಬಂಧವನ್ನು ಅಳವಡಿಸಿರುವುದು ವಿಶೇಷವಾಗಿದೆ. ಪ್ರಮಥ ಕವಿಯಾದ ಈತನು ಸುಲಲಿತವಾದ, ಸರಳವಾದ ಸಂಸ್ಕೃತ ಛಂದೋವೃತ್ತಗಳನ್ನು ಅನುಸರಿಸಿ ಸ್ತೋತ್ರರೂಪದಲ್ಲಿ ಬಸವಪುರಾಣಮ್ ಕೃತಿಯನ್ನು ರಚಿಸಿ ಬಸವ ಪುರಾಣಕ್ಕೆ ಸಮಕಾಲೀನವಾದ ಕಾವ್ಯದ ಮಹತ್ವವನ್ನು ನೀಡಿದ್ದಾನೆ. 43 ಸರ್ಗ ಹಾಗೂ 4714 ಶ್ಲೋಕಗಳಲ್ಲಿ ಕನ್ನಡಿಗ ಬಸವೇಶ್ವರರ ಅಮೂಲ್ಯವಾದ ಜೀವನ ಗಾಥೆಯನ್ನು ಸೊಗಸಾಗಿ ಸೆರೆ ಹಿಡಿದಿದ್ದಾನೆ. ಲೇಖಕರಿಗೆ ಸಂಸ್ಕೃತ, ಭಾಷಾ ಜ್ಞಾನದರಿವು ಇರುವುದರ ಜೊತೆಗೆ,

ಹಳಗನ್ನಡ ನಡುಗನ್ನಡ ಸಾಹಿತ್ಯದ ನಿಕಟ ಪರಿಚಯವಿರುವುದರಿಂದ ತೌಲನಿಕ ಅಧ್ಯಯನವನ್ನು ನಡೆಸಲು ಸಾಧ್ಯವಾಗಿದೆ. ಹೀಗೆ ಮೇಲಿನ ಐದು ಪ್ರಬಂಧಗಳು ಸುರಭಿ ಕೃತಿಯ ಬಹುಪ್ರಮುಖ ಭಾಗವಾಗಿದೆ. ಇವುಗಳೇ ಈ ಕೃತಿಯ ಔನ್ನತ್ಯಕ್ಕೆ ಕಾರಣವಾಗಿವೆ.

ಶಾಸ್ತ್ರ ಸಾಹಿತ್ಯಕ್ಕೆ ಸಂಬಂಧಿಸಿದ, ಶಾಸ್ತ್ರ ವಿಚಾರಗಳಿಗೆ ಸಂಬಂಧಿಸಿದಂತೆ ಮಹತ್ವದ ಕೃತಿ, ಮಾತು ಮತ್ತು ಬರಹಗಳ ಮತ್ತೆ ಆರು ಲೇಖನಗಳಿವೆ. ಇವು 'ವಿಶ್ಲೇಷಣ' ಎಂಬ ಹೆಸರಿನಲ್ಲಿ ಸೇರ್ಪಡೆಗೊಂಡಿದೆ. ಈ ಲೇಖನಗಳನ್ನು ಕೃತಿಯ ಎರಡನೇ ಘಟ್ಟದ ಲೇಖನಗಳೆಂದು ನಾನು ಪರಿಭಾವಿಸಿದ್ದೇನೆ. ಕನ್ನಡದಲ್ಲಿ ಶಾಸ್ತ್ರಾನುಸಂಧಾನ, ಸಂಶೋಧನಾ ಕ್ಷೇತ್ರಕ್ಕೆ ಮಹತ್ವ, ನಾಟ್ಯ-ನಾಟಕಗಳ ನಡುವಿನ ಅಂತರ, ತತ್ತ್ವಶಾಸ್ತ್ರದ ನೆಲೆಯಲ್ಲಿ ವಿದ್ಯಾದಾನ, ಕಾವ್ಯ ಕುತೂಹಲ- ಈ ಲೇಖನಗಳು ಶ್ರೀಯುತರಿಗೆ ಶಾಸ್ತ್ರ ಸಾಹಿತ್ಯದ ಮೇಲಿರುವ ಒಲವು, ಆಸಕ್ತಿಯನ್ನು ಬಿಂಬಿಸುತ್ತವೆ. ಅವರು ಬೇರೆ-ಬೇರೆ ಸಂದರ್ಭಗಳಲ್ಲಿ ಚಿಂತಿಸಿದ, ಬರೆದ ಲೇಖನಗಳಾಗಿವೆ ಇವು. ಭಾವ-ಭಾಷೆಗಳ ಸಂಬಂಧದ ಬಗ್ಗೆ, ಮಾತು ಕೃತಿಯಾಗುವ ಬಗ್ಗೆ ಅವರದೇ ಆದ ಚಿಂತನೆಯು ಶಾಸ್ತ್ರ ಸಂಧಾನದ ಲೇಖನದಲ್ಲಿ ಬಂದಿದೆ.ಜನಪದರ ಸಾಹಿತ್ಯವೇ ಮುಂದೆ ಶಿಷ್ಟ ಸಾಹಿತ್ಯಕ್ಕೆ ಏರಿದ ಬಗೆಯನ್ನು ಹೇಳುತ್ತಾ ಮೌಖಿಕ ಹಾಗೂ ಲಿಖಿತ ಸಾಹಿತ್ಯದ ನಡುವಿನ ಗೆರೆಯನ್ನು ಗುರುತಿಸುತ್ತಾರೆ. ಸಾಹಿತ್ಯವು ಏಕಕಾಲದಲ್ಲಿ ಆಡುವ ಪರಂಪರೆ ಹಾಗೂ ಬರೆಯುವ ಪರಂಪರೆಗೆರಡರಲ್ಲೂ ಚಲಿಸುತ್ತದೆ-ಎಂದು ಇದಕ್ಕೆ ಉದಾಹರಣೆಯಾಗಿ ಕಾವ್ಯ ಮೀಮಾಂಸಕರ ಮಾತನ್ನು, ಕವಿರಾಜಮಾರ್ಗಕಾರನ ಮಾತನ್ನು ಉಲ್ಲೇಖಿಸುತ್ತಾರೆ. ಅವರ ವಾದಮಂಡನೆಗೆ ಸಂಸ್ಕೃತ ಹಾಗೂ ಕನ್ನಡದ ಉದಾಹರಣೆಗಳು ಸಹಕಾರಿಯಾಗುತ್ತವೆ. ತಾಳ್ತಜೆ ವಸಂತಕುಮಾರ ಅವರ ಸಂಶೋಧನಾ ತರಂಗವನ್ನು ಕುರಿತ ವಿಮರ್ಶೆಯನ್ನು ಬರೆದಿರುವ ಲೇಖಕರು ನಾಟ್ಯ ಮತ್ತು ನಾಟಕಗಳ ನಡುವಿನ ಅಂತರವನ್ನು ಸರಿಯಾಗಿ ಗುರುತಿಸಿದ್ದಾರೆ. ಈ ವಿಭಾಗದ ಲೇಖನಗಳು ಸಾಂದರ್ಭಿಕವಾಗಿ ಬಂದಿದ್ದು, ಆಯಾ ಸಾಂದರ್ಭದ ಮಹತ್ವತೆಯು ಇದಕ್ಕೆ ಲಭಿಸುತ್ತದೆ.

ಲೇಖಕರು ಚಿಂತನಾ ಶೀರ್ಷಿಕೆಯ ಮೂಲಕ ಮತ್ತೊಂದು ಕಡೆಗೆ ಓದುಗರ ಗಮನವನ್ನು ಸೆಳೆಯುತ್ತಾರೆ. ಅಂತಹ ಲೇಖನಗಳೆಂದರೆ, ದಾಸಸಾಹಿತ್ಯಕ್ಕೆ ಸಂಬಂಧಿಸಿದಂತೆ, ಭಕ್ತಿ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಮೂರು ಲೇಖನಗಳನ್ನು ಬರೆದು ಈ ಸಂಕಲನದಸಲ್ಲಿ ಸೇರಿಸಿರುವುದು. ಅವೆಂದರೆ, ದಾಸಸಾಹಿತ್ಯದಲ್ಲಿ ಭಕ್ತಿಯ ಸ್ವರೂಪ, ವಿಜಯದಾಸರ ಕೊಡುಗೆ, ಶ್ರೀರಾಮ ಮತ್ತು ಹನುಮಂತರನಡುವೆ ಇರುವ ಭಕ್ತಿ-ವಾತ್ಸಲ್ಯ-ದಾಸ್ಯಭಾವ-ಅತ್ಮಶೋಧನಾ ಪರಿಯನ್ನು ಸೋದಾಹರಣವಾಗಿ ವಿವರಿಸುತ್ತಾರೆ. ದಾಸರು ಸ್ತುತಿಯ ಮೂಲಕವೇ ಶ್ರೀಹರಿಯನ್ನು ಭಜಿಸಿಕೊಳ್ಳಲು

ಪ್ರಯತ್ನಿಸಿದರು. ಹರಿಸ್ತುತಿಯ ಕೀರ್ತನೆಗಳಲ್ಲಿ ಅಡಕವಾಗಿರುವ ಸಮರ್ಪಣಾ ಭಾವದ ನೆಲೆಗಳನ್ನು ಲೇಖಕರು ಗುರುತಿಸಿದ್ದಾರೆ. ಪುರಂದರ ಕನಕರ ನಂತರ ಬಂದ ಜಗನ್ನಾಥ ದಾಸರು, ಗೋಪಾಲದಾಸರು, ವಿಜಯದಾಸರು ದಾಸಸಾಹಿತ್ಯವನ್ನು ಶ್ರೀಮಂತಗೊಳಿಸಿದ ಬಗೆಯನ್ನು ಶ್ರೀಯುತರು ವಿವರಿಸಿದ್ದಾರೆ. ಭಕ್ತಿಭಾವದ ಕುರಿತಾದ ಅವರ ಚಿಂತನೆಗಳು ಗಮನಾರ್ಹ.

"ಸುರಭಿ" ಕೃತಿಯ ಆಕರ್ಷಕವಾದ ಹೆಸರಾಗಿದೆ. ದುಂಬಿಯೊಂದು ಹೂವಿನ ಮಕರಂದವನ್ನು ಹೀರಿ ಮಧುರವಾದ, ಆರೋಗ್ಯಕರವಾದ ಜೇನನ್ನು ನೀಡುವಂತೆ ಲೇಖಕರು ಕೆಲವು ಕೃತಿಗಳ ಕುರಿತಾದ ತಮ್ಮ ವಿಮರ್ಶಾ ಲೇಖನಗಳನ್ನು ಸೇರಿಸಿದ್ದಾರೆ. ಅವುಗಳಲ್ಲಿ ಮುಖ್ಯವಾದವೆಂದರೆ, ಡಾ.ರಮಾನಂದರ ಕುಮಾರವ್ಯಾಸ ಕೃತಿ–ಲಕ್ಷಣ ಗಾಯಕವಾಡರ ಉಚಲ್ಯ ರೋಬೋಟ್ ರಾದ್ಧಾಂತ ಮುಂತಾದವು ಇವು ಬಹುಮಟ್ಟಿಗೆ ಕೃತಿ ಪರಿಚಯಕ್ಕೆ ಹೆಚ್ಚು ಮಹತ್ವವನ್ನು ಕೊಟ್ಟಿದೆ. ಅಲ್ಲದೆ ಲೇಖಕರ ವಿಭಿನ್ನ ಅಭಿರುಚಿಗಳನ್ನು ಪ್ರಸ್ತುತಪಡಿಸುತ್ತದೆ. ಕುವೆಂಪು ಅವರ ದೇವರು–ಪೂಜಾರಿ ಪು.ತಿ.ನ., ಸಾ.ಶಿ.ಮ. ಅವರ ಪರಿಚಯದ ಲೇಖನಗಳನ್ನು ಗಮನಿಸಿದಾಗ ರಾಮಮೂರ್ತಿಯವರು ಸಹೃದಯರಾಗಿ ಚಿಂತಿಸಬಲ್ಲ ಲೇಖಕರು–ಎಂಬುದು ಖಚಿತವಾಗುತ್ತದೆ. ಈ ಮಾತಿಗೆ ಅವರ ಕುವೆಂಪು–ಪುತಿನ–ಕೆಎಸ್‌ನ–ಅವರುಗಳ ಕಾವ್ಯಗಳಲ್ಲಿ ಅಂತರ್ಗತವಾಗಿರುವ ತಾತ್ವಿಕ ಚಿಂತನೆಗಳನ್ನು, ಪ್ರತಿಭಾಂಶವನ್ನು, ಕವಿತ್ವದ ಹಿರಿಮೆಯನ್ನು ತಮ್ಮ ಮಾತುಗಳಲ್ಲಿ ಹಿಡಿದಿಟ್ಟಿದ್ದಾರೆ.

ರಾಮಮೂರ್ತಿಯವರು ತಮ್ಮ ಲೇಖನಗಳಲ್ಲಿ ಅನೇಕ ಹೊಸ ಅಂಶಗಳನ್ನು ತಿಳಿಸುತ್ತಾರೆ. ವೀರಶೈವ ಧರ್ಮವು ಕರ್ನಾಟಕದಲ್ಲಿ ಆಳವಾಗಿ ಹಾಗೂ ವಿಶಾಲವಾಗಿ ಹಾಕಿದ ಧರ್ಮ. ಆದರೆ ನೆರೆಯ ಪ್ರಾಂತ್ಯಗಳಾದ ಆಂಧ್ರ, ತಮಿಳುನಾಡು, ಮಹಾರಾಷ್ಟ್ರದಲ್ಲಿ ಇದರ ಪ್ರಭಾವ ಸಾಕಷ್ಟಿದೆ. ಕರ್ನಾಟಕ ಹಾಗೂ ಆಂಧ್ರದ ಭಾಗಗಳು ಕಲ್ಯಾಣ ಚಾಲುಕ್ಯ ಹಾಗೂ ಕಳಚೂರ್ಯರ ಕಾಲದಲ್ಲಿ ಒಂದೇ ಅಧಿಪತ್ಯಕ್ಕೆ ಒಳಪಟ್ಟಿದ್ದರಿಂದ ಹೆಚ್ಚು ಕೊಳ್ಳುಕೊಡುಗಳು ಸಾಧ್ಯವಾಗಿದೆ. ತೆಲುಗಿನಲ್ಲಿ ಪಂಡಿತಾರಾಧ್ಯ ಮತ್ತು ಪಾಲ್ಕುರಿಕೆ ಸೋಮನಾಥ ಸರಳವಾದ ತೆಲುಗಿನಲ್ಲಿ ಕಾವ್ಯ ರಚನೆ ನಡೆಯುತ್ತಿತ್ತು. ಆದರೆ ಹರಿಹರ ಹಾಗೂ ರಾಘವಾಂಕ ಪ್ರಭಾವಕ್ಕೆ ಒಳಗಾದ ಸೋಮನಾಥನಿಂದ ಸರಳವಾದ ತೆಲುಗಿನಲ್ಲಿ ಕಾವ್ಯ ರಚನೆ ಮೊದಲುಗೊಂಡಿತು. 13ನೇ ಶತಮಾನವನ್ನು ತೆಲುಗಿನಲ್ಲಿ ಶಿವಕವಿ ಯುಗ ಎಂದೇ ಕರೆಯುತ್ತಾರೆ. ಆಂಧ್ರ ಬ್ರಾಹ್ಮಣರು ವೀರಶೈವ ಆರಾಧ್ಯರಾಗಿ ಪರಿವರ್ತನೆಗೊಂಡರು. ತಮಿಳುನಾಡಿಗೆ ವೀರಶೈವ ತಡವಾಗಿ 14–15ನೇ ಶತಮಾನದಲ್ಲಿ ಪ್ರವೇಶಿಸಿತು.

ಒಟ್ಟಿನಲ್ಲಿ ಡಾ.ಎಸ್.ರಾಮಮೂರ್ತಿ ಶರ್ಮರವರ ಈ ವಿಮರ್ಶಾ ಸಂಕಲನವು ವೈವಿಧ್ಯಮಯವಾಗಿದ್ದು, ಕನ್ನಡ ವಿಮರ್ಶಾ ಲೋಕಕ್ಕೆ ಒಂದು

ಉತ್ತಮ ಕೊಡುಗೆಯಾಗಿದೆ. ಮೂಲತಃ, ಸಂಶೋಧನಾ ವಿದ್ಯಾರ್ಥಿಯಾಗಿರುವ ಅವರ ಚಿಂತನ ಕ್ರಮ ಹಾಗೂ ಆಧಾರ ಸಹಿತವಾದ ವಿಚಾರ ಮಂಡನೆ ಎಲ್ಲಾ ಲೇಖನಗಳಲ್ಲೂ ಎದ್ದು ಕಾಣುತ್ತದೆ. ಅವರ ವಿಭಿನ್ನ ಆಸಕ್ತಿಯ ದಾಖಲೆಯೂ ಇಲ್ಲಿದೆ. ವೀರಶೈವ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಅವರ ವೈಚಾರಿಕ ದೃಷ್ಟಿ ಸ್ವಾಗತಾರ್ಹ. ಅವರಿಂದ ಈ ನಿಟ್ಟಿನಲ್ಲಿ ಇನ್ನಷ್ಟು ಕೃತಿಗಳು ಬರಬೇಕಾಗಿದೆ. ವರ್ತಮಾನ ಕಾಲದಲ್ಲಿ ಬರ ಕಾಣುತ್ತಿರುವ ಸಂದರ್ಭದಲ್ಲಿ ಸಂಶೋಧನ ಬರಹಗಳಿಗೆ ಚೈತನ್ಯ ತುಂಬಲು ಇಂತವರ ಪ್ರಯತ್ನಗಳು ಅಗತ್ಯ..! ಸುರಭಿಕೃತಿಯ ಮೂಲಕ ಶ್ರೀ ರಾಮಮೂರ್ತಿ ಶರ್ಮರು ಈ ಬಗೆಯ ಪ್ರಯತ್ನ ನಡೆಸಿ ಯಶಸ್ವಿಯಾಗಿದ್ದಾರೆ. ಅವರಿಗೆ ಹಾರ್ಧಿಕ ಅಭಿನಂದನೆಗಳು. ಅನಂತ ಕಾಮ ಉನಾದ. ಈ ಎಲ್ಲಾ ಅಂಶಗಳು ರಾಮಮೂರ್ತಿಯವರ ಲೇಖನಗಳಲ್ಲಿ ವಿವರವಾಗಿ ಬಂದಿದೆ.

□

ಕಾಶ್ಮೀರಿ ಸಾಹಿತ್ಯ ಹಾಗೂ ಕನ್ನಡ ಅನುವಾದಗಳು

ಭಾರತದ ದಕ್ಷಿಣದ ಕೇರಳ 'ದೇವರ ಸ್ವಂತ ನಾಡಾ'ದರೆ, ಅದೇ ಉತ್ತರದ ತುತ್ತತುದಿಯಾದ ಕಾಶ್ಮೀರ 'ಭೂಮಿಯ ಮೇಲಿನ ಸ್ವರ್ಗ'ವೆಂದೇ ಪರಿಗಣಿಸಲಾಗುತ್ತಿದೆ. ರಾಷ್ಟ್ರದ ಮುಕುಟ ಮಣಿಯಂತಿರುವ ಕಾಶ್ಮೀರವನ್ನು ನಾಗರೀಕತೆಯ ತೊಟ್ಟಿಲು ಎಂದು ಕೂಡ ಕರೆಯುತ್ತಾರೆ. ಇದು ಸರಸ್ವತಿಯ ತವರೂರು. ಇಲ್ಲಿನ ಲಿಪಿಯಾ ಹೆಸರೇ 'ಶಾರದಾ'. ಜಗತ್ ಪ್ರಸಿದ್ಧ ಶಾರದಾಪೀಠ ಇರುವುದು ಕೂಡಾ ಇಲ್ಲಿಯೇ. ಪ್ರಾಚೀನ ಕಾಲದಿಂದಲೂ ಇಲ್ಲಿ ವಿದ್ಯೆಯ ಪ್ರಸಾರ ಅವಿರತವಾಗಿ ನಡೆಯುತ್ತಿತ್ತು. ಅನೇಕ ಬಗೆಯ ವಿದ್ಯಾಕೇಂದ್ರಗಳಿದ್ದವು. ಸಂಸ್ಕೃತ ಭಾಷೆಗೆ ಅದರಲ್ಲಿ ಅಲಂಕಾರ ಶಾಸ್ತ್ರಕ್ಕೆ ಕಾಶ್ಮೀರ ಕೊಟ್ಟ ಕೊಡುಗೆ ಅಪಾರ. ಕ್ರಿ.ಶ.750ರಲ್ಲಿದ್ದ ವಾಮನ, ಮುಂದೆ ಬಂದೆ ಉದ್ದಟ, ಆನಂದವರ್ಧನ, ಮುಮ್ಮಟ, ಅಭಿನವಗುಪ್ತ, ಸೋಮದೇವ ಮುಂತಾದವರು ಇಲ್ಲಿಗೆ ಸಂಬಂಧಿಸಿದವರು. 12ನೇ ಶತಮಾನದ ಕಲ್ಹಣ 'ರಾಜಾತರಂಗಿಣಿ'ಯಂತೂ ಈ ನಾಡಿನ ಇತಿಹಾಸದ ಮೇಲೆ ಬೆಳಕು ಚೆಲ್ಲುತ್ತದೆ. ಅದರ ಕೊನೆಯ ಎರಡು ಅಧ್ಯಾಯಗಳಂತೂ ಆಗಿನ ಕಾಲದ ಜನಜೀವನದ ಬಗ್ಗೆ, ಆಡಳಿತದ ಬಗ್ಗೆ ವಿಚಾರಗಳಿವೆ. ವಿಶ್ವದ ಬೇರೆಬೇರೆ ಭಾಗಗಳಿಂದ ಶಿಕ್ಷಣಕ್ಕಾಗಿ ಶಿಕ್ಷಾರ್ಥಿಗಳು ಕಾಶ್ಮೀರದ ವಿದ್ಯಾಪೀಠಗಳಿಗೆ ಬರುತ್ತಿದ್ದರೆಂಬ ಉಲ್ಲೇಖವಿದೆ.

ಭೌಗೋಳಿಕವಾಗಿ ಕಾಶ್ಮೀರ ಅತ್ಯಂತ ಪ್ರಮುಖ ಪ್ರದೇಶದಲ್ಲಿದೆ. ಸದಾಕಾಲ ವಿದೇಶಿಯರ ದಾಳಿಗೆ ಒಂದಿಲ್ಲೊಂದು ರೀತಿಯಿಂದ ಗುರಿಯಾಗಿ ಶಾಂತಿ ಕಲಕಿದ ವಾತಾವರಣವೇ ಇಲ್ಲಿ ಹೆಚ್ಚು. ಮಾನವ ದೇಹದ ಕುತ್ತಿಗೆಗೆ ಇದ್ದಂತೆ ಭಾರತ ದೇಶದ ಕುತ್ತಿಗೆ ರೀತಿಯಲ್ಲಿ ಕಾಶ್ಮೀರ ಇದೆ ಎಂದರೆ ತಪ್ಪಾಗದು. ಆಯಕಟ್ಟಿನ ಪ್ರದೇಶವಾದದ್ದರಿಂದ ಕಳೆದ ಸಾವಿರ ವರ್ಷಗಳಿಂದ ಅಲ್ಲಿ ಶಾಂತಿಗಿಂತ ಕ್ಷೋಭೆಯೇ ಹೆಚ್ಚು. ಹೊರ ಜನಾಂಗದವರ ವಿದೇಶಿಯರ ದಬ್ಬಾಳಿಕೆಗೆ ಗುರಿಯಾಗಿ ನಲುಗಿದನಾಡು ಕಾಶ್ಮೀರ. ಇಲ್ಲಿ ಹುಟ್ಟಿದ ಸಾಹಿತ್ಯಕ್ಕೆ ಸಂಬಂಧಿಸಿದಂತೆ ಇತಿಹಾಸದ ಉದ್ದಕ್ಕೂ ಎರಡು ಪ್ರಮುಖ ಧಾರೆಗಳು ಗೋಚರಿಸುತ್ತವೆ. ಮೊದಲಿಗೆ ಕಾಶ್ಮೀರಿ ಭಾಷೆಯ ಸಾಹಿತ್ಯದ ಮೇಲೆ ಸಂಸ್ಕೃತದ ಪ್ರಭಾವ ಬಿದ್ದಿದ್ದರೆ ಮುಂದೆ ಆ ಜಾಗವನ್ನು ಪರ್ಶಿಯನ್ ಭಾಷೆ ಆಕ್ರಮಿಸುತ್ತದೆ. ನಂತರ ಉರ್ದು ಅಲ್ಲಿ ಪ್ರತಿಷ್ಠಾಪನೆಗೊಳ್ಳುತ್ತದೆ.

ಹೀಗಾಗಿ ಕಾಶ್ಮೀರಿ ಭಾಷೆಯ ಜೊತೆಜೊತೆಯಲ್ಲಿ ಒಂದಲ್ಲಒಂದು ಪ್ರೌಢಭಾಷೆ ಇದ್ದು ಅಲ್ಲಿನ ಮಣ್ಣಿನಭಾಷೆಗೆ ಸಿಗಬೇಕಾದ ಸ್ಥಾನ ದೊರೆಯಲೇ ಇಲ್ಲ. ಆದರೂ ಕೂಡಾ ಅಲ್ಲಿನ ನಿವಾಸಿಗಳು ಕಳೆದ 600 ವರ್ಷಗಳಿಂದ ಕಾಶ್ಮೀರಿಭಾಷೆಯನ್ನು ಶ್ರೀಮಂತಗೊಳಿಸುತ್ತಲೇ ಬಂದಿದ್ದಾರೆ. ಜನರ ಮೇಲೆ ಇಲ್ಲಿ ಶೈವಸಿದ್ಧಾಂತ, ಬೌದ್ಧಸಿದ್ದಾಂತ, ಸೂಫಿಸಿದ್ಧಾಂತಗಳೆಲ್ಲವೂ ಕಾಲಕಾಲಕ್ಕೆ ಪ್ರಭಾವ ಬೀರುತ್ತಾ ಬಂದಿವೆ. ಇಲ್ಲಿನವರ ಬದುಕಿನ ಮೇಲೆ ಕೂಡ ಈ ಸಿದ್ಧಾಂತಗಳು ಪ್ರಭಾವಬೀರಿ ಒಂದು ಸುಮನಸ ಸಂಸ್ಕೃತಿಯ ನಿರ್ಮಾಣವಾಗಿದೆ. ಮೂಲ ಕಾಶ್ಮೀರಿಗಳು, ಸುಸಂಸ್ಕೃತರು, ಸರಳಜೀವಿಗಳು, ಅಪಾರ ಪ್ರಕೃತಿ ಪ್ರೇಮಿಗಳು, ಕಷ್ಟ ಸಹಿಷ್ಣುಗಳು ಆಗಿದ್ದಾರೆ. ಈಗ ಮೂಲನಿವಾಸಿಗಳಿಗಿಂತ ಅನ್ಯರೇ ಅಲ್ಲಿ ತುಂಬಿಕೊಂಡಿದ್ದಾರೆ. ಹೀಗಿದ್ದೂ ಕಾಶ್ಮೀರಿ ಸಾಹಿತ್ಯ ಭಾರತೀಯ ಸಾಹಿತ್ಯದ ಪ್ರಪಂಚದಲ್ಲಿ ಗಮನಾರ್ಹ ಸ್ಥಾನ ಗಳಿಸಿದೆ.

ಕಾಶ್ಮೀರಿ ಭಾಷೆಯಲ್ಲಿ ಕಾವ್ಯಕ್ಕೆ ಪ್ರಧಾನಪಟ್ಟ, ಗದ್ಯ ಕಡಿಮೆ. ನಾಗಸೇನ ಎಂಬ ಬೌದ್ಧವಿದ್ವಾಂಸನು ಬರೆದಿರುವ 'ಮಿಲ್ಥಿಂದ್ ಪನ್ನ'ದಲ್ಲಿ ಕಾಶ್ಮೀರಿ ಸಂಸ್ಕೃತಿಯ ಬಗ್ಗೆ, ಸನ್ಯಾಸದ ಬಗ್ಗೆ, ಒಳನೋಟಗಳು ದೊರೆಯುತ್ತವೆ. ಅಲ್ಲಿ ಕವನಗಳ ಮಾದರಿಯಲ್ಲಿರುವ ಕಿರುರಚನೆಗಳನ್ನು 'ವಾಕ್' ಎಂದು ಕರೆಯುತ್ತಾರೆ. 14ನೇ ಶತಮಾನದಲ್ಲಿದ್ದ ಪುರಾಣಾದಿ ಸ್ಥಾನ ಎಂಬಲ್ಲಿ ಹುಟ್ಟಿದ ಲಲ್ಲಾದೇವಿ ನಾನೂರಕ್ಕೂ ಹೆಚ್ಚು 'ವಾಕ್'ಗಳನ್ನು ಬರೆದಿದ್ದಾಳೆ ಎಂದು ಪ್ರತೀತಿ. ಇವುಳನ್ನು ಲಲ್ಲೇಶ್ವರಿ, ಲಲ್ಲಾದೀದಿ ಎಂದೆಲ್ಲಾ ಕರೆಯುತ್ತಾರೆ. ಅಕ್ಕಮಹಾದೇವಿಯಂತೆ ಸಂಸಾರತ್ಯಜಿಸಿ ಸನ್ಯಾಸಿನಿಯಾಗಿ ಆಧ್ಯಾತ್ಮಿಕ ಪ್ರಭೆಯಲ್ಲಿ ಮಿಂಚಿದವಳು. ಸೂಫಿಸಂತ 'ನೂರುದ್ದೀನ್ ನುರಾನಿ'ಯ ಸಮಕಾಲೀನಳಾಗಿದ್ದವಳು. ನೂರಾನಿಯೂ ಕೂಡಾ ಕಾಶ್ಮೀರದಲ್ಲಿ ಜನಪ್ರಿಯ ಸಂತ ಹಾಗೂ ಅನುಭಾವಿ ಕವಿ.

ಕಾಶ್ಮೀರಿ ಸಾಹಿತ್ಯದಲ್ಲಿ ಪ್ರಮುಖವಾಗಿ ನಾಲ್ಕು ಘಟಕಗಳಿವೆ. ಪ್ರಾಚೀನ ಕಾಲದಿಂದ ಕ್ರಿ.ಶ.1550ರವರೆಗಿನ ಮೊದಲ ಘಟ್ಟದಲ್ಲಿ ಶೈವಪಂಥದ ಗುರು ಶ್ರೀಸಿದ್ಧಶ್ರೀಕಾಂತ, ಲಲ್ಲಾದೇವಿ, ನೂರಾನಿ, 'ಬಾಣಾಸುರಕಥಾ' ರಚನೆ ಮಾಡಿರುವ ಭಟ್ಟಾವತಾರಿ ಮುಂತಾದವರು ಕಾವ್ಯರಚನೆ ಮಾಡಿದ್ದಾರೆ. ಮುಂದಿನ 200 ವರ್ಷಗಳಲ್ಲಿ ಪರ್ಷಿಯನ್ ಭಾಷೆಯ ಪ್ರಭಾ ಕಾಶ್ಮೀರಿ ಸಾಹಿತ್ಯದ ಮೇಲಾಯಿತು. ಮಿರ್ಜಾಕ್ ಮಿಲ್ ಉದ್ದೀನ್, ಖ್ವಾಜಾಹಬತ್ ಉಲ್ಲಾ, ನವಕಿಶೋರಿ ಮುಂತಾದವರ ರಚನೆಗಳಿವೆ. ಮೂರನೆಯ ಘಟ್ಟದ 200 ವರ್ಷಗಳಲ್ಲಿ ಭಾವನಾತ್ಮಕವಾದ ರಚನೆಗಳು ಪ್ರಾರಂಭವಾದವು. ಹಾಸ್ಯಗೀತೆಗಳು ಪ್ರಣಯ ಗೀತೆಗಳನ್ನು ಬರೆದ ಕೃಷ್ಣರಾಜಧಾನ್, ಪರಮಾನಂದ, ಮಹಾಮೂದಗಮಿ, ಮಕ್ಮಲ್ ಷಾ, ಶ್ರಾಮಲ್ ಮುಂತಾದವರು ಈ ಕಾಲದ ಖ್ಯಾತನಾಮರು. ಸ್ವಾತಂತ್ರ್ಯೋತ್ತರ ಕಾಲದ ಕಾಶ್ಮೀರಿ ಭಾಷೆಯಲ್ಲಿ ಪದ್ಯ, ಗದ್ಯ, ನಾಟಕ ಪ್ರಬಂಧಗಳು ಸಾಕಷ್ಟು ರಚನೆಯಾಗುತ್ತಿವೆ.

ಮಾಸ್ತರ್ ಜಿಂದಾಕೌಲ್, ದೀನಾನಾಥ್, ನಾದೀಮ್, ಅಬ್ದುಲ್ ರೆಹಮಾನ್ ರಾಹೀ, ಗುಲಾಂನಬಿ ಪಿರಾಕಿ, ಚಮನ್ ಲಾಲ್ ರೈನಾ, ಅಮಿನ್ ಕಮಿಲ್, ಶಫಿಕ್ ಶಾಹುಖ್, ಪದ್ಮಶ್ರೀ ಪುರಸ್ಕೃತ ನಾಟಕಕಾರ ಮೋತಿಲಾಲ್ ಕೆಮ್ಮು ಮುಂತಾದವರು ಆಧುನಿಕ ಸಾಹಿತ್ಯದ ಪ್ರವರ್ತಕರು. 1925ರಲ್ಲಿ ಜನಿಸಿರುವ ಕವಿ ಹಾಗೂ ಸಣ್ಣಕಥೆಗಾರರಾಗಿ ಜನಪ್ರಿಯರಾಗಿರುವ ಪ್ರಸಿದ್ಧ ಸಾಹಿತಿ ಎಂದು ಗುರ್ತಿಸಲ್ಪಟ್ಟಿರುವ ರೆಹಮಾನ್ ರಾಹಿ ಅವರಿಗೆ ಜ್ಞಾನಪೀಠ ಪ್ರಶಸ್ತಿ ಬಂದಿದೆ. ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿಗಳು 1965ರಿಂದ ಮೊದಲ್ಗೊಂಡು ಇಂದಿನವರೆಗೆ 57ಕ್ಕೂ ಹೆಚ್ಚು ಸಾಹಿತಿಗಳಿಗೆ ಲಭಿಸಿವೆ. ಹರಿಕೃಷ್ಣಕೌಲ್, ಮೊಹಿದಿನರಿಷಿ, ರಫಿಕ್ರಾಜ್ ಮುಂತಾದವರು ಅಸಂಖ್ಯ ನಾಟಕ ಹಾಗೂ ಸಣ್ಣಕಥೆಗಳನ್ನು ಬರೆದಿದ್ದಾರೆ. ಕಾಶ್ಮೀರಿ ಸಾಹಿತ್ಯಗಳಲ್ಲಿ ಪ್ರಗತಿಶೀಲರು ಹೆಚ್ಚಿದ್ದು ಜನರ ನೋವಿಗೆ ಮಿಡಿದಿದ್ದಾರೆ. ಡಿ.ಎನ್.ನಾದೀಮ್ ಅವರ ಸಣ್ಣಕಥೆ 'ಜವಾಬಿಕಾರ್ಡ್' ಬಹು ಪ್ರಸಿದ್ಧವಾಗಿದೆ. ಶಫೀಕ್‌ಶಾಹೂಕ್ ಅವರು 47ಕ್ಕೂ ಹೆಚ್ಚು ಕೃತಿಗಳನ್ನು ರಚಿಸಿದ್ದು ವಿಮರ್ಶಕರಾಗಿಯೂ ಖ್ಯಾತಿ ಹೊಂದಿದ್ದಾರೆ. 1950ರಲ್ಲಿ ಕಾಶ್ಮೀರಿ ನಿಘಂಟನ್ನು ರಚಿಸಿದ್ದಾರೆ. 1984ರಲ್ಲಿ ಪ್ರಬಂಧ ಸಂಕಲನ ರಚಿಸಿ ಖ್ಯಾತರಾಗಿರುವ ಡಾ॥ಮೊಹಮದ್ ಜಮಾನ್ ಅಜೂರ್ದಾ ಅವರಿಗೆ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಇದು ಹಿರಿಮೆಗೆ ಕಾರಣವಾಗಿದೆ. ಕಶೂರ್ ಸಮಯ್ ಅವರ 'ವಾಝಲ್ ಕಾಶ್ಮೀರಿ' ಎಂಬ ಕಾವ್ಯಕ್ಕೆ 1990ರಲ್ಲಿ ಕೇಂದ್ರಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. ಇದೇ ರೀತಿ 2015ರಲ್ಲಿ 'ಕೋರೆಕಕೂಡ್' ಎಂಬ ಕಾವ್ಯ ಸಂಕಲನಕ್ಕೆ ಶಾರ್ ರಂಜಾನ್ ಅವರಿಗೆ ಅಕಾಡೆಮಿ ಪ್ರಶಸ್ತಿ ಸಂದಿದೆ. 2017ರಲ್ಲಿ ಅವತಾರ್ ಕೃಷ್ಣ ರಹಬ್ಬತ್ ಅವರಿಗೆ, 2018ರಲ್ಲಿ ಮುಸ್ತಾಕ್ ಅಹಮ್ಮದ್ ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿಯ ಗರಿ ಲಭಿಸಿದೆ. ಹೀಗೆ ವಿಫುಲ ಸಾಹಿತ್ಯ ಸೃಷ್ಟಿಯಾಗುತ್ತಿದ್ದರೂ ಈ ಭಾಷೆ ಅಪಾಯದ ಅಂಚಿನಲ್ಲಿದೆ ಎಂಬ ಭಾವನೆ ಎಲ್ಲಡೆ ಸಾರ್ವತ್ರಿಕವಾಗುತ್ತಿದೆ. ಇದಕ್ಕೆ ಕಾರಣ ಕಾಶ್ಮೀರಿ ಬರಹಗಾರರು. ಒಂದು ದೇವನಾಗರಿಯಲ್ಲಿ ಇಲ್ಲವೇ ಪರ್ಷಿಯನ್ ಲಿಪಿಯಲ್ಲಿ ಸಾಹಿತ್ಯ ರಚನೆ ಮಾಡುತ್ತಿದ್ದಾರೆ. ಪ್ರಾಚೀನವಾದ ಶಾರದಾಲಿಪಿ ಇದ್ದರೂ ಬಳಕೆ ಕಡಿಮೆ. ಪೂರ್ವದಲ್ಲಿ ಸಂಸ್ಕೃತ ಮತ್ತು ಪರ್ಷಿಯನ್ ಈಗ ಉರ್ದುವಿನ ಪ್ರಾಬಲ್ಯದಿಂದ ಕಾಶ್ಮೀರಿಸಾಹಿತ್ಯ ನಿರೀಕ್ಷಿತ ಬೆಳವಣಿಗೆ ಸಾಧಿಸುತ್ತಿಲ್ಲ. ಹಿಂದೆ ಉರ್ದು ಮತ್ತು ಇಂಗ್ಲೀಷ್‌ಗಳಷ್ಟೇ ಅಲ್ಲಿನ ಅಧಿಕೃತ ಭಾಷೆಗಳಾಗಿದ್ದವು. ಈಚೆಗಷ್ಟೇ ಕೇಂದ್ರಸರ್ಕಾರ ಕಾಶ್ಮೀರಿ ಭಾಷೆಯನ್ನು ಆ ರಾಜ್ಯದ ಅಧಿಕೃತ ಭಾಷೆಯನ್ನಾಗಿ ಮಾಡಿದೆ. ಇದರಿಂದಲಾದರೂ ಕಾಶ್ಮೀರಿಭಾಷೆ ಸಾಹಿತ್ಯ ಪುರಾತ್ಥಾನವಾಗಲಿದೆ ಎಂಬುದು ಅಲ್ಲಿನವರ ಬಯಕೆಯಾಗಿದೆ.

ಕಾಶ್ಮೀರಿ ಸಂಸ್ಕೃತಿ ಹಾಗೂ ಸಾಹಿತ್ಯದ ಪರಿಚಯ ಕರ್ನಾಟಕಕ್ಕೆ ಹಾಗೂ ಕನ್ನಡಿಗರಿಗೆ ಸಾಕಷ್ಟು ಆಗಿದೆ. ಅಲಂಕಾರ ಶಾಸ್ತ್ರಕ್ಕೆ ಸಂಬಂಧಿಸಿ ಕಾಶ್ಮೀರದ

ಮೀಮಾಂಸಕರು ಸಂಸ್ಕೃತದಲ್ಲಿ ರಚಿಸಿದ ಕೃತಿಗಳೆಲ್ಲವೂ ಕನ್ನಡಕ್ಕೆ ಒಂದಿಲ್ಲದೊಂದು ರೂಪದಲ್ಲಿ ಬಂದಿದ್ದು ಸರ್ವಮಾನ್ಯಗೊಂಡಿದೆ. ಕಾಶ್ಮೀರದ ಇತಿಹಾಸ ಕುರಿತು ವಿವರವುಳ್ಳ ಕಲ್ಹಣನ 'ರಾಜಾತರಂಗಿಣಿ'ಯನ್ನು ಸಾಹಿತ ಶಿರೋಮಣಿ ವಿದ್ವಾನ್ ನಿರ್ಪಾಜೆ ಭೀಮ್‌ಭಟ್ಟರು ಸೊಗಸಾಗಿ ಕನ್ನಡಿಸಿದ್ದಾರೆ. ಕಾಶ್ಮೀರಿ ಶೈವ ಪರಂಪರೆಯ ಇನ್ನೊಂದು ದೊಡ್ಡ ಹೆಸರಾದ ಶ್ರೀ ಅಭಿನವ ಗುಪ್ತಪಾದ ಆಚಾರ್ಯರ ಆಧ್ಯಾತ್ಮಿಕ ಸಾಧನೆ ಹಾಗೂ ಚಿಂತನೆಗಳನ್ನು ಪರಿಶೀಲಿಸುತ್ತಿರುವಂತ ಕೃತಿಯನ್ನು ಸ್ವಾಮಿ ಶಿವಾತ್ಮಾನಂದರು ಕನ್ನಡದಲ್ಲಿ ಬರೆದಿದ್ದಾರೆ. ಬಹುಶ್ರುತ ಮೇಧಾವಿಗಳಾಗಿರುವ ಅಭಿನವ ಗುಪ್ತರು ತತ್ವಜ್ಞಾನ, ಸೌಂದರ್ಯ ಮೀಮಾಂಸೆ, ಭಾಷಾ ಶಾಸ್ತ್ರ, ಸಂಸ್ಕೃತ ಸಾಹಿತ್ಯ, ವೇದಾಂತ ವಿಚಾರಗಳಲ್ಲಿ ದೊಡ್ಡ ದಾಖಲೆಯನ್ನು ಸಾಧಿಸಿದ್ದು ಈ ಕೃತಿಯ ಮೂಲಕ ಅವರ ಸಾಧನೆಯ ಪರಿಚಯ ಕನ್ನಡಿಗರಿಗೆ ಆಗಿದೆ.

ಕಾಶ್ಮೀರಿಭಾಷೆಯ ಅನೇಕ ಗ್ರಂಥಗಳು ಕನ್ನಡಕ್ಕೆ ಅನುವಾದಗೊಂಡಿವೆ. ಅವುಗಳನ್ನು ಚರ್ಚಿಸುವ ಬದಲು ಕಾಶ್ಮೀರಿಭಾಷೆಯ ಎರಡು ಕೃತಿಗಳನ್ನು ಮಾದರಿಯಾಗಿ ಅವಲೋಕಿಸುವ ಮೂಲಕ ಅಲ್ಲಿನ ಧಾರ್ಮಿಕ, ಸಾಂಸ್ಕೃತಿಕ, ವಿಚಾರಧಾರೆಗಳನ್ನು ಅರಿತುಕೊಳ್ಳಬಹುದಾಗಿದೆ. ಆ ಎರಡೂ ಕೃತಿಗಳೆಂದರೆ 'ಲಲ್ಲಾದೇವಿ ಹಾಗೂ ಪ್ರತಿಬಿಂಬ'. ಒಂದು ಲಲ್ಲಾದೇವಿ ಬರೆದಿರುವ ಕವಿತೆಗಳ ಅನುವಾದವಾದರೆ, ಇನ್ನೊಂದು ಕಾಶ್ಮೀರಿಭಾಷೆಯ ಪ್ರಸಿದ್ಧ ಪ್ರಬಂಧ ರಚನಾಕಾರರಾದ ಮೊಹಮ್ಮದ್ ಜಮಾನ್ ಅಜುರ್ದಾರವರ 19 ಪ್ರಬಂಧಗಳ ಅನುವಾದಿತ ಸಂಕಲನವಾಗಿದೆ. 14ನೇ ಶತಮಾನದಲ್ಲಿದ್ದ ಲಲ್ಲಾದೇವಿಯ 154 'ವಾಕ್'ಗಳನ್ನು ಸುಂದರವಾಗಿ ಕನ್ನಡಕ್ಕೆ ಅನುವಾದಿಸಿದವರು ಕನ್ನಡದ ಖ್ಯಾತ ಕವಿ ಆರ್.ವಿಜಯರಾಘವನ್‌ರವರು. ಶೈವಪಂಥದ ಗುರುವಾದ ಸಿದ್ಧಶ್ರೀಕಾಂತನಿಂದ ದೀಕ್ಷೆ ಪಡೆದ ಲಲ್ಲಾ ಅತ್ತೆಮನೆಯ ಅಸಹನೆಯ ಕಷ್ಟಕೋಟಲೆಗಳಿಗೆ ಗುರಿಯಾಗುತ್ತಾಳೆ. ಕೊನೆಗೆ ಸಂಸಾರವನ್ನು ತ್ಯಜಿಸಿ, ಸನ್ಯಾಸಿನಿಯಾಗಿ ಶಿವನನ್ನು ಕುರಿತು ಹಾಡುತ್ತಾ ಸಂಚರಿಸುತ್ತಾ ಜನಮಾನಸದಲ್ಲಿ ಲಾಲ್‌ದೀದೀಯಾಗಿ ಗೌರವಕ್ಕೆ ಪಾತ್ರಳಾಗುತ್ತಾಳೆ. ಸೂಫಿಸಿದ್ಧಾಂತದ ಸಂತಶೇಖ್ ನೂರುದ್ದೀನ್ ನುರಾನಿಯಷ್ಟೇ ಇವಳೂ ಕೂಡ ಜನಪ್ರೀತಿಗೆ ಗುರಿಯಾಗುತ್ತಾಳೆ. ವಚನ ಚಳುವಳಿಯ ಅಕ್ಕಮಹಾದೇವಿಯಂತೆ ಇವಳು ಅನುಭಾವಿಯಾಗಿ ತನ್ನ ವಾಕ್‌ಗಳಲ್ಲಿ ಶಿವನನ್ನು ಆರ್ತಳಾಗಿ ಪ್ರಾರ್ಥಿಸುತ್ತಾ ತಾತ್ವಿಕ ವಿಚಾರವನ್ನು ತಿಳಿಯಾಗಿ ಕಾಶ್ಮೀರಿಭಾಷೆಯಲ್ಲಿ ತಿಳಿಸಿದವಳು. ಅವಳ ರಚನೆಗಳಲ್ಲಿ ಶೈವಸಿದ್ಧಾಂತದ ಜೊತೆಗೆ ಬೌದ್ಧಧರ್ಮದ ಸೂಫಿಸಿದ್ಧಾಂತಗಳ ಪ್ರಭಾವ ಇರುವುದನ್ನು ಕಾಣಬಹುದು. ಅವಳ ಇನ್ನೂರಐವತ್ತೆಂಟುವಾಕ್'ಗಳನ್ನು ಇಂಗ್ಲೀಷಿಗೆ ಗ್ರಿಯರ್ ಸನ್ ಭಾಷಾಂತರಿಸಿದ್ದಾರೆ. ಅದೇ ರೀತಿ ಆರ್.ಸಿ.ಟೆಂಪಲ್‌ರವರೂ ಕೂಡ 'ವಾಕ್'ಗಳನ್ನು ಭಾಷಾಂತರಿಸಿದ್ದಾರೆ. ರಂಜಿತಾ ಹೊಸಕೋಟೆಯವರು 146 'ವಾಕ್'ಗಳನ್ನು ವಿಶೇಷರೀತಿಯಲ್ಲಿ ಆಂಗ್ಲಭಾಷೆಗೆ

ಅನುವಾದಿಸಿದ್ದಾರೆ. ಶ್ರೀ ವಿಜಯರಾಘವನ್ ಅವರು ರಂಜಿತ ಹೊಸಕೋಟೆ ಹಾಗೂ ಗ್ರೀಯರ್ಸನ್‌ರವರ ಎರಡು ಅನುವಾದಗಳನ್ನು ಆಧಾರವಾಗಿಟ್ಟುಕೊಂಡು ಕನ್ನಡಕ್ಕೆ 154 ವಾಕ್‌ಗಳನ್ನು ಅತ್ಯಂತ ಸೊಗಸಾಗಿ ಪದ್ಯರೂಪದಲ್ಲಿ ನೀಡಿದ್ದಾರೆ. ಪ್ರತಿವಾಕ್‌ನ ಕೆಳಗೆ ಗದ್ಯದಲ್ಲಿ ಅದರ ಸಾರವನ್ನು ಹಾಗೂ ಆ ಪದ್ಯಗಳ ಮಥಿತಾರ್ಥವನ್ನು ನೀಡುವ ಮೂಲಕ ಅವಳ ಸಾಹಿತ್ಯಸೃಷ್ಟಿಯ ಆಳವನ್ನು ಆಶಯವನ್ನು ಕನ್ನಡಿಗರಿಗೆ ಪರಿಚಯಿಸಿದ್ದಾರೆ. ಕನ್ನಡದ ಬೆಡಗಿನ ವಚನದಂತಿರುವ ಆಕೆಯ ರಚನೆಯ ಒಂದೆರಡು ಮಾದರಿಗಳನ್ನು ಗಮನಿಸಬಹುದು. ಅಲ್ಲಮ ಪ್ರಭುವಿನ ವಚನಗಳಂತೆ ಅವು ನಿಗೂಢವೂ, ಅರ್ಥಗರ್ಭಿತವೂ ಆಗಿವೆ.

ತೊಟ್ಟಿಕ್ಕುವ ಹಿಮವನ್ನು ನಿಲ್ಲಿಸಲು ಬಲ್ಲವನಾರು?
ಅಥವಾ ಗಾಳಿಯನ್ನು ತನ್ನ ಬೊಗಸೆಯಲ್ಲಿ ಹಿಡಿಯ ಬಲ್ಲವನಾರು?
ಅವನೇ ತನ್ನ ಪಂಚೇಂದ್ರಿಯಗಳ ಜನಿಸಿದವನು
ಅವನು ಮಾತ್ರವೇ ನಡುರಾತ್ರಿಯಲ್ಲಿ
ಸೂರ್ಯನ ಕಿತ್ತುಕೊಳ್ಳಬಲ್ಲವನು

ಜಾತಿಯೋಗಿ ತಾನು ದೈವಸಾಕ್ಷಾತ್ಕಾರ ಹೊಂದಿಯೂ ಪಂಚಭೂತಗಳನ್ನು ನುಡಿಸಬಲ್ಲ ಅವನು ಹಗಲು ಇರುಳುಗಳ ನಿರಯತಿಗಳಿಗೆ ಅತೀತನಾಗಬಲ್ಲ (ಲಲ್ಲಾದೇವಿ – ಆರ್. ವಿಜಯರಾಘವನ್ ಪುಟ 120)

ಅನುಭಾವಿಕ ಸ್ಥಿತಿಯ ಪರಮ ಮಟ್ಟವನ್ನು ಮುಟ್ಟಿರುವ ಲಲ್ಲಾದೇವಿ ಇಲ್ಲಿ ಒಬ್ಬ ಸಿದ್ಧನ ತುರ್ಯಾವಸ್ಥೆಯನ್ನು ಸಾಧನೆಯನ್ನು ತಿಳಿಸುತ್ತಾಳೆ. ಆರ್.ವಿಜಯರಾಘವನ್ ಅವರ ಅನುವಾದದ ಸತ್ವವನ್ನು ಕೂಡಾ ಕಾಣಬಹುದು. ಲಲ್ಲೇಶ್ವರಿಯ ವಚನಗಳ ಒಳಗೆ ಹುದುಗಿರುವ ಅಂತರಾರ್ಥವನ್ನು ಅವರು ಸಮರ್ಥರಾಗಿ ಇಲ್ಲಿ ಹಿಡಿದಿರಿಸಿದ್ದಾರೆ. ಇದೇ ರೀತಿ ಇರುವ ಇನ್ನೊಂದು ವಾಕ್ ಹೀಗಿದೆ.

ನಾನೇ ಲಲ್ಲಾ ನನ್ನ ಆತ್ಮದ ಮಲ್ಲಿಗೆ
ಹೂದೋಟತಡಿಕೆ ಬಾಗಿಲಿನಿಂದ ಬಂದೆ
ನಾನೇ ಲಲ್ಲಾ ಶಿವಶಕ್ತಿಗಳನ್ನಲ್ಲಿ
ಪ್ರಣಯದುತ್ಕಟ ಬಂಧನದಲ್ಲಿ ಕಂಡೆ
ನಾನು ಮಧುಗೊಳದಲ್ಲಿ ಧುಮುಕಿ
ಆನಂದಾಮೃತವ ಕುಡಿಕುಡಿದೆ
ಹೋದ ಹೆಣ್ಣು ನಾನು ಎದ್ದು ನಡೆದೆ
ಯಾರು ನನಗೇನು?

(ಈ ಕವಿತೆಯ ಸೌಂದರ್ಯವನ್ನು ಗಮನಿಸಿ ಸತ್ತವಳನ್ನು ಬದುಕಿಸುವ ಆನಂದವಿದು ಆಕಾಂಕ್ಷಿತಳಾಗಿ ತಡಿಕೆ ತಗಿದು ಬಂದು ಶಿವಶಕ್ತಿಗಳನು ಪ್ರಣಯದುತ್ಕಟ ಬಂಧನದಲ್ಲಿ ಕಂಡಳಾದರೂ ಅವಳು ಅದನ್ನು ಭವಿಗಳ ಅರ್ಥದ ಕಾಮಕೂಟವನ್ನಾಗಿ ಪರಿಭಾವಿಸುವುದಿಲ್ಲ. ಅವಳಲ್ಲಿ ಅದು ಉದ್ದೀಪಿಸುವುದು ಮನೋ ಆನಂದದ ಸಂಭ್ರಮವನ್ನು, ಅದರ ಅನುಭವಿಸುವುದಕ್ಕಾಗಿಯೇ ಸಾವು ಗೆಲ್ಲುವ ಶಕ್ತಿಯನ್ನು ಕೊಡುವುದು. ಅದೇ ಅವಳ ಯಾರ ಹಂಗಿಲ್ಲದ ಮರುಹುಟ್ಟು.)

(ಲಲ್ಲಾದೇವಿ – ಆರ್. ವಿಜಯರಾಘವನ್ ಪುಟ 68)

ಅನುಭಾವಿ ಮಾತುಗಳನ್ನು ಅಕ್ಷರರೂಪಕ್ಕೆ ಇಳಿಸುವುದು, ಅದರಲ್ಲೂ ಇನ್ನೊಂದು ಭಾಷೆಗೆ ಭಾಷಾಂತರಿಸುವುದು ಕಷ್ಟದ ಕೆಲಸವೇ. ಈ ವಾಕ್‌ನ್ನು ಗಮನಿಸಿದಾಗ ನಮ್ಮ ಅಕ್ಕಮಹಾದೇವಿಯ ವಚನಗಳು ನೆನಪಿಗೆ ಬರುತ್ತವೆ. ಶಿವನನ್ನೇ ಪರಮನೆಂದು ಅಕ್ಕ ನಂಬಿದಂತೆ ಲಲ್ಲೇಶ್ವರಿ ನಂಬಿದ್ದಾಳೆ. ಕಾಶ್ಮೀರದ ಶೈವಪಂಥದ ವಿಶಿಷ್ಟವಾದದ್ದು ಕರ್ನಾಟಕದ ಅನೇಕ ಶೈವಪಂಥಗಳ ಮೇಲೆ ಇದರ ಪ್ರಭಾವ ಇದೆ. ಅಲ್ಲಿ ಅದನ್ನು ತ್ರಿಕಾ ಎಂದು ಕೂಡಾ ಕರೆಯುತ್ತಾರೆ. ಮೂರು ಅಂಶಗಳು ಅಲ್ಲಿ ಪ್ರಧಾನವಾಗಿವೆ. ಈಶ್ವರ, ಶಕ್ತಿ ಮತ್ತು ವ್ಯಕ್ತಿ ವಿತಂಡವಾಗಿರುವ ಅಣುವಿನಂತೆ ಸೂಕ್ಷ್ಮ ಸ್ವರೂಪಿಯಾದ ಮನುಷ್ಯ ವಿಶ್ವ ಸ್ವರೂಪಿಯಾದ ಬ್ರಹ್ಮಾಂಡದೊಂದಿಗೆ ಅನುಸಂಧಾನದಲ್ಲಿ ತೊಡಗಿರುತ್ತಾನೆ. ಇವೆರಡರ ಮಧ್ಯೆಯೇ ಇರುವುದೇ ಶಕ್ತಿ. ಪರಮಾತ್ಮನನ್ನು ಸೇರಲು ಸಹಕರಿಸುವುದೇ ಶಕ್ತಿಯಾಗಿದೆ. ಈ ಬಗೆಯ ಅನುಭವಗಳು ಇವಳ ವಾಕ್‌ಗಳಲ್ಲಿ ಸಾಕಷ್ಟು ಬಂದಿವೆ. ಮಾನವ ದೇಹವು ವಿಶ್ವದ ಅಣು ರೂಪ ಎನ್ನುವುದು ತಾಂತ್ರಿಕ ಶೈವಪಂಥದ ನಂಬಿಕೆಯಾಗಿದೆ.

ಅನುವಾದವನ್ನು ಸೃಜನಶೀಲಸಾಹಿತ್ಯವೆಂದು ವಿದ್ವಾಂಸರು ಪರಿಗಣಿಸುವುದಿಲ್ಲ. ಆದರೆ ಇಂತಹ ಅನುಭಾವಿ ಕೃತಿಗಳ ಅನುವಾದ ಸಮರ್ಥವಾಗಿ ಮಾಡಲು ಸೃಜನಶೀಲತೆ ಅಗತ್ಯ. ಆರ್.ವಿಜಯರಾಘವನ್ ಅವರು ಒಬ್ಬ ಸೃಜನಶೀಲ ಕವಿಯಾದ್ದರಿಂದ ಕನ್ನಡದಲ್ಲಿ ಲಲ್ಲಾದೇವಿಯ 'ವಾಕ್'ಗಳು ಸೃಜನಶೀಲ ಸಾಹಿತ್ಯವಾಗಿ ಹೊರಹೊಮ್ಮಿದೆ ಎಂಬುದಕ್ಕೆ ಮೇಲಿನ ಎರಡು ಉದಾಹರಣೆಗಳು ಸಾಕ್ಷಿ. ಅನುವಾದವೆಂಬುದು ಕಲೆಯೇ? ವಿಜ್ಞಾನವೇ? ಎಂಬೆಲ್ಲಾ ಪ್ರಶ್ನೆಯಿದೆ. ಅನುವಾದಕನಿಗೆ ಕಲೆಯಲ್ಲಿರುವ ಸೃಜನಾತ್ಮಕ ಪ್ರತಿಭೆ ಇರಬೇಕು. ಹಾಗೆ ವಿಜ್ಞಾನದಲ್ಲಿರುವ ಜಾಗೃತ ವಿವೇಕವೂ ಇರಬೇಕು. ಆದುದರಿಂದ ಭಾಷಾಂತರ ಕಲೆಯು ಹೌದು, ಮೂಲಕೃತಿಯ ಹೂರಣವನು ಅಂತಃಸತ್ವವನ್ನು ಗ್ರಹಿಸುವ ಶಕ್ತಿ ಅನುವಾದಕನಿಗೆ ಇರಬೇಕಾಗುತ್ತದೆ. ಕೃತಿಯ ಒಳನೋಟ ಅದರಲ್ಲಿ ಅಡಗಿರುವ ದನಿ ಅದರ ಸಾರವತ್ತಾದ ಬನಿ ಇವೆಲ್ಲವನ್ನೂ ಆತ ತನ್ನ ಭಾಷೆಗೆ ತಂದಾಗ ಮಾತ್ರ ಭಾಷಾಂತರ ಸಾರ್ಥಕವಾಗುತ್ತದೆ. ಅಂತಹ ಕಾರ್ಯವನ್ನು

ಆರ್.ವಿಜಯರಾಘವನ್ ಮಾಡಿ ಕೃತಕೃತ್ಯರಾಗಿದ್ದಾರೆ. ಈ ಕೃತಿಯನ್ನು ಓದಿದಾಗ ಹನ್ನೆರಡನೇ ಶತಮಾನದ ಅಕ್ಕಮಹಾದೇವಿಯ ಈ ಕಥೆಯೇ ಕಾಶ್ಮೀರದಲ್ಲಿ ಲಲ್ಲಾಳ 'ವಾಕ್' ಮೂಲಕ ಹದಿನಾಲ್ಕನೇ ಶತಮಾನದಲ್ಲಿ ಮರುಹುಟ್ಟು ಪಡೆಯುತ್ತದೆ ಎಂಬ ಇಲ್ಲಿನ ಮಾತುಗಳು ಮನೋಜ್ಞವಾಗಿದ್ದು ಲಲ್ಲಾಳ ಆಂತರ್ಯವನ್ನು ಬಿಂಬಿಸುತ್ತದೆ. ಅವಳೇ ನಮ್ಮ ಮುಂದೆ ಬಂದು ನುಡಿದಂತಿದೆ. ಹೀಗೆ ಕನ್ನಡ ಅನುವಾದ ಒಂದರ ಮೂಲಕ ಕಾಶ್ಮೀರದ ಆಧ್ಯಾತ್ಮಕ ಪ್ರಭೆಯನ್ನು ನಾವು ಕಾಣಬಹುದಾಗಿದೆ.

ಡಾ.ಮೊಹಮ್ಮದ್ ಝಮಾನ್ ಅಜುರ್ದಾ ಅವರು ಆಧುನಿಕ ಕಾಶ್ಮೀರಿ ಸಾಹಿತ್ಯದಲ್ಲಿ ಚಿರಪರಿಚಿತರು. ಪ್ರಬಂಧ ಸಾಹಿತ್ಯದ ಪ್ರವರ್ತಕರು ಆಕಾಶವಾಣಿಯಲ್ಲಿ ಇನ್ನೂರಕ್ಕೂ ಹೆಚ್ಚು ಪ್ರಬಂಧರೂಪದ ಉಪನ್ಯಾಸಗಳನ್ನು ನೀಡಿದವರು. ಕಾಶ್ಮೀರಿಪ್ರಬಂಧ ಸಾಹಿತ್ಯಕ್ಕೆ ಚೌಕಟ್ಟನ್ನು, ರೂಪರೇಷೆಯನ್ನು ನೀಡಿದವರು. ಉರ್ದು ಹಾಗೂ ಕಾಶ್ಮೀರಿ ಎರಡೂ ಭಾಷೆಗಳಲ್ಲಿ ಬರೆಯುತ್ತಿರುವ ಸಂವೇದನಾಶೀಲ ಲೇಖಕರು. ಅವರ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪುರಸ್ಕೃತ ಕೃತಿ "ಎಸ್ಸೆ" ಎಂಬುದು ಕನ್ನಡಕ್ಕೆ "ಪ್ರತಿಬಿಂಬ" ಎನ್ನುವ ಹೆಸರಿನಲ್ಲಿ (ಪ್ರತಿಬಿಂಬ ಅನುವಾದ ಡಾ॥ಅನಂತರಾಮ ಉಪಾಧ್ಯ–2018ರ ಸಾಹಿತ್ಯಅಕಾಡೆಮಿ ಪ್ರಕಟಣೆ) ಹೊರಬಂದಿದೆ. ಪ್ರಾಕೃತಿಕ ಸೌಂದರ್ಯದ ನೆಲೆವೀಡಾದ ಕಾಶ್ಮೀರದ ಜನಜೀವನದ ಬಗೆ ಸೂಕ್ಷ್ಮ ಗ್ರಹಿಕೆಯ ಒಳನೋಟ ಡಾ.ಅಜುರ್ದಾ ಅವರಲ್ಲಿದೆ. ಇಲ್ಲಿನ 19 ಪ್ರಬಂಧಗಳಲ್ಲಿ ಹಾಸ್ಯಪ್ರಜ್ಞೆಯ ವಿಡಂಬನೆಯನ್ನು ನಶಿಸುತ್ತಿರುವ ಜೀವನಮೌಲ್ಯದ ಬಗ್ಗೆ ಇರುವ ವ್ಯಥೆಯನ್ನು, ವಿಶಿಷ್ಟ ಚಿಂತನಾ ಕ್ರಮವನ್ನು, ನವಿರಾದ ನಿರೂಪಣಾ ವಿಧಾನವನ್ನು ಕಾಣಬಹುದಾಗಿದೆ. ಮೊಹಮ್ಮದ್ ಅಜುರ್ದಾ ಅವರ ಬರವಣಿಗೆಯಲ್ಲಿ ಪ್ರತಿಮೆಗೆ, ರೂಪಕ್ಕೆ ಪರಮಪಟ್ಟವಿದೆ. ಆದುದರಿಂದಲೇ ಅನುವಾದಿಸುವಾಗ ಎಚ್ಚರಿಕೆ ಇರಬೇಕಾಗುತ್ತದೆ. ಅವರು ಪ್ರಬಂಧಗಳ ಮಧ್ಯೆ ಬಳಸುವ ಅನೇಕ ಸೂಫಿ ಸಂತರ ದ್ವಿಪದಿಗಳನ್ನು, 'ಗಾಲಿಬ್'ನ ಪ್ರಸಿದ್ಧ ಉಕ್ತಿಗಳನ್ನು ಕನ್ನಡಕ್ಕೆ ತರುವುದು ಸವಾಲಿನ ಕೆಲಸ. 'ಕನ್ನಡೀ' ಎಂಬ ಪ್ರಬಂಧದಲ್ಲಿ ಅಂತಃಸಾಕ್ಷಿ ಬಗ್ಗೆ ಅವರ ಯೋಚನಾಲಹರಿ ಹರಳು ಕಟ್ಟಿದೆ. ನಮ್ಮ ಮುಖದಲ್ಲಿ ಕೊಳೆ ತುಂಬಿಕೊಂಡಿದ್ದಾಗ ಕನ್ನಡಿಯ ಮೇಲಿನ ಧೂಳನ್ನು ಒರೆಸುವುದರಿಂದ ಉಪಯೋಗವಿಲ್ಲ ಎಂಬುವುದು ಅವರ ತೀರ್ಮಾನವಾಗಿದೆ. ಕನ್ನಡ ಸಾಹಿತ್ಯದಲ್ಲಿ ಶ್ರೇಷ್ಠತೆಯ ವ್ಯಸನದ ಬಗ್ಗೆ ಜಿಜ್ಞಾಸೆ ಇದೆ. ಕಾಶ್ಮೀರದಲ್ಲಿ ಗತಕಾಲದ ವಸ್ತುವಾಗಬೇಕೆಂಬ ಗೀಳು ಇದೆ. ಅದನ್ನು 'ಓಡುವಮರ' ರೂಪಕದ ಮೂಲಕ "ಯಾವುದೋ ಹಿಂದಕ್ಕೆ ಓಡುತ್ತವೋ ಅವು ದಕ್ಕುವುದಿಲ್ಲ ಬರಿಯ ನೆನಪುಗಳು ಮಾತ್ರ ಉಳಿಯುತ್ತವೆ" ಎಂಬ ತಾತ್ವಿಕ ದೃಷ್ಟಿಕೋನವನ್ನು ನೀಡುತ್ತಾರೆ. ಕಾಶ್ಮೀರ ಮೂಲದ ಟಿ.ಎನ್.ಕೌಲ್‌ರವರು ಇವುಗಳನ್ನು ಇಂಗ್ಲೀಷಿಗೆ ಭಾಷಾಂತರಿಸಿದ್ದು ಅದನ್ನು ಆಧರಿಸಿ ಈ ಪ್ರಬಂಧಗಳನ್ನು ಡಾ.ಉಪಾಧ್ಯರು ಕನ್ನಡಕ್ಕೆ ಅನುವಾದಿಸಿದ್ದಾರೆ.

ಕಾಶ್ಮೀರಿಗಳ ಸಾಮಾಜಿಕ ಬದುಕು ನಮಗಿಂತ ಭಿನ್ನವಾಗಿದೆ. ನಾವು ಬಿಸಿಲಿನ ವಲಯದವರಾದರೆ ಅವರು ಶೀತವಲಯದವರು ಹಿಮಗಾಳಿಯಿಂದ, ಛಳಿಯಿಂದ ಅಲ್ಲಿಯ ಬದುಕು ದುಸ್ತರ. ಆದರೆ ಪಾರಂಪರಿಕ ಜ್ಞಾನ, ಅದರಿಂದ ರೂಢಿಸಿಕೊಂಡ ಸಾಧನೆಗಳು ಹೇಗೆ ಅವರ ಬದುಕನ್ನು ಸಹನೀಯವಾಗಿದೆ ಎಂಬುವುದನ್ನು ನೋಡಲು ಅವರ "ಕಾಂಗ್ರಿ" ಎಂಬ ಪ್ರಬಂಧವನ್ನು ಓದಬೇಕು. ಇಲ್ಲಿ ಮೊದಲಿಗೆ 'ಫಿಹರಾನ್' ಎಂಬ ನಿಲುವಂಗಿಯ ಬಗ್ಗೆ ವಿವರ ಬರುತ್ತದೆ. ಛಳಿಯಿಂದ ರಕ್ಷಿಸಿಕೊಳ್ಳಲು ಈ ನಿಲುವಂಗಿ ತೀರ ಅಗತ್ಯ. ಈ 'ಪಿಹರಾನ್'ದ ಒಳಗೆ ಕಾಂಗ್ರಿಯವನ್ನು ಇಟ್ಟುಕೊಳ್ಳುವ ವ್ಯವಸ್ಥೆ ಇರುತ್ತದೆ. 'ಕಾಂಗ್ರಿ' ಅಗ್ನಿಷ್ಟಿಕೆ ಇದ್ದಂತೆ ಇದನ್ನು ನಿಲವಂಗಿ ಒಳಗೆ ಹೊಲಿದಿರುತ್ತಾರೆ. ತೆಳುವಾದ ಮರದ ಹೊದ್ದಿಕೆಯ ಒಳಗೆ ಜೇಡಿಮಣ್ಣಿನ ಸರಳ ಒಲೆ ಇರುತ್ತದೆ. ಅದರ ಒಳಗೆ ಇದ್ದಿಲ ಚೂರನ್ನು ಹಾಗೆ ಬೆಂಕಿಯೂ ಸಣ್ಣಗೆ ಉರಿಯುತ್ತಾ ಇರುತ್ತದೆ. ಅದುದರಿಂದ ಬಿಸಿ ಶಾಖ ದೇಹವನ್ನು ರಕ್ಷಿಸುತ್ತದೆ. ಇದನ್ನು ಇಟ್ಟುಕೊಳ್ಳಬೇಕಾದರೆ ಕುಕ್ಕುರ್‌ಕಾಲಿನಲ್ಲಿ ಕುಳಿತುಕೊಳ್ಳಬೇಕಾಗುತ್ತದೆ. ಎಲ್ಲಾ ಆಧುನಿಕ ಸೌಕರ್ಯಕ್ಕಿಂತ ಕಡಿಮೆ ಖರ್ಚಿನ, ಆದರೆ ಉತ್ತಮ ಶಾಖ ನೀಡುವ 'ಕಾಂಗ್ರಿ' ಅಲ್ಲಿನ ಸಂಸ್ಕೃತಿಯನ್ನು ರೂಪಿಸಿದೆ. 'ಕಾಂಗ್ರಿ'ಯಿಂದ ಹುಟ್ಟಿಕೊಂಡಿರುವ ಅನೇಕ ಗಾದೆಗಳನ್ನು, ನುಡಿಗಟ್ಟುಗಳನ್ನು, ಜಾನಪದ ಕಥೆಗಳನ್ನು ಲೇಖಕರು ವಿವರವಾಗಿ ನೀಡುವುದರ ಮೂಲಕ ಕಾಶ್ಮೀರಿ ಸಂಸ್ಕೃತಿಗೂ 'ಕಾಂಗ್ರಿ'ಗೂ ಇರುವ ಸಂಬಂಧವನ್ನು ವಿಷದಿಕರಿಸಿದ್ದಾರೆ. ಆಧುನಿಕ ಸಮಾಜದಲ್ಲಿ 'ಕಾಂಗ್ರಿ' ಮೂಲೆ ಗುಂಪಾಗುತ್ತಿರುವುದರ ಬಗ್ಗೆ ಅಜುರ್ದಾ ಅವರಿಗೆ ಖೇದವಿದೆ. ಆಧುನಿಕ ಕುರ್ಚಿ ಟೇಬಲ್ ಮುಂತಾದ ಸಾಧನೆಗಳಿಂದ ನಾವು ಕುಳಿತುಕೊಳ್ಳುವ ಕ್ರಮವೇ ಬೇರೆಯಾಗಿದೆ ಮತ್ತು ನಮ್ಮ ಧಿರಿಸಿನಲ್ಲಾದ ಬದಲಾವಣೆಯಿಂದ 'ಕಾಂಗ್ರಿ' ಇರಿಸಿಕೊಳ್ಳಲು ಜಾಗವೇ ಇಲ್ಲವಾಗಿದೆ. ಆಧುನಿಕವಾಗಿ ಶಾಖಾ ಉತ್ಪನ್ನ ಮಾಡುವ ಹೀಟರ್ಗಳ ಪ್ರವೇಶ 'ಕಾಂಗ್ರಿ'ಗೆ ಸ್ಥಳವಿಲ್ಲವಂತೆ ಮಾಡಿದೆ. ಕಾಂಗ್ರಿಯ ನಿರ್ನಾಮದೊಂದಿಗೆ ಅದರ ಗುಡಿ ಕೈಗಾರಿಕೆ ನಶಿಸಿದೆ. ಅದರೊಂದಿಗೆ ಹಿಂದಿನವರ ಬಾಳಿನ ವಿಧಾನ ಮುಂದಿನವರಿಗೆ ಲಭಿಸಿದಂತಾಗಿದೆ ಎನ್ನುವ ಅಜುರ್ದಾರವರು ಇದೇ ರೀತಿ ಕಾಶ್ಮೀರದ ಆಂಬ್ರ ಸೇಬು, ಮುಷಿಕಾ ಬುಡ್ಡಿ, ಬಿಳಿಯ ಸೇಬು, ಕಲಾತ್ಮಕ ವಸ್ತುಗಳು, ದೇಶೀಯ ಮೀನುಗಳು ಕುಳಿತುಕೊಳ್ಳುವ ಸಾಧನವಾದ 'ಕಂಜೀ' ಮುಂತಾದುವು ಕಣ್ಮರೆಯಾಗುತ್ತಿರುವುದನ್ನು ಪ್ರಸ್ತಾಪಿಸಿ ದೇಶೀಯ ಸಂಸ್ಕೃತಿಯ ನಾಶದ ಬಗ್ಗೆ ಮಮ್ಮಲ ಮರುಗುತ್ತಾರೆ. ಇದು ಕಾಶ್ಮೀರ ಕಥೆಯಲ್ಲ. ಕರ್ನಾಟಕದ ಕಥೆಯೂ ಆಗಿದೆ. ತೀವ್ರ ನಗರೀಕರಣದಿಂದ, ಆಧುನಿಕತೆಯಿಂದ ಹದನಾದ ಗ್ರಾಮೀಣ ಬದುಕು ಪಾರಂಪರಿಕ ಕಲಾತ್ಮಕ ವಸ್ತುಗಳು ಕಣ್ಮರೆಯಾಗಿ ಜನತೆಯ ಜೀವನ ಶೈಲಿ ಬದಲಾಗುತ್ತಿದೆ. ಶ್ರೀಮಂತವಾದ ಸಾಂಸ್ಕೃತಿಕ ಪರಂಪರೆ ನಶಿಸುತ್ತಿದೆ ಎಂಬುವುದೇ ಲೇಖಕರ ಒಳನೋಟವಾಗಿದೆ.

ಡಾ॥ ಮೊಹಮ್ಮದ್ ಜ಼ಮಾನ್ ಅಜುರ್ದಾ ಅವರ 19 ಪ್ರಬಂಧಗಳು ವೈವಿಧ್ಯಮಯವಾಗಿವೆ. ಆಧ್ಯಾತ್ಮಿಕ, ಸಾಮಾಜಿಕ, ಸಾಹಿತ್ಯಕ, ವಿಶ್ಲೇಷಾತ್ಮಕ ಹಿನ್ನೆಲೆಗಳಿಂದ ಇವು ರಚನೆಗೊಂಡಿದೆ. ಕನ್ನಡಿ, 'ಕಾಂಗ್ರಿ' ಹದ್ದು, ಬಣಗಾರ, ಓಡುವ ಮರಗಳು, ನೆರಳು, ಏಣಿ ಮುಂತಾದುವು ಈ ಸಂಕಲನದ ಉತ್ತಮ ಪ್ರಬಂಧಗಳಾಗಿವೆ. ಇವರ ಈ ಪ್ರಬಂಧಗಳಲ್ಲಿ ಜಾನಪದ ಕಿರುಕಥೆಗಳು ಬಂದಿವೆ. ಇಲ್ಲಿ ಕೂಡಾ ಕಾಶ್ಮೀರಿ ಜನರ ಬದುಕಿನ ಪರಿಚಯವಾಗುತ್ತದೆ. 'ಹಗ್ಗ ತಿನ್ನುವ ಹಸು' 'ಬೀರಬಲ್ಲನ ಕುರಿ', 'ಬಂಜೆ ಎಲ್ಲರ ಮಕ್ಕಳನ್ನು ಮುದ್ದಿಸುತ್ತಾಳೆ' ಎಂಬುದರಲ್ಲೆಲ್ಲಾ ಕಾಶ್ಮೀರದ ಅಸ್ಮಿತೆಯನ್ನು ಕಾಣಬಹುದು. ಹಿಂದಿನ ಕಾಲದ ಕಾಶ್ಮೀರಿ ಜಾನಪದ ಕಥೆಗಾರ ಸಾದೀ ಎಂಬುವವನ ಕಿರುಕಥೆಗಳು ಇಲ್ಲಿ ಬಂದಿದ್ದು ಆ ಮೂಲಕ ಕಾಶ್ಮೀರದ ಜಾನಪದ ಬದುಕಿನ ಚಿತ್ರಣವು ಲಭಿಸುತ್ತದೆ. ಆನಂದರಾಮ ಉಪಾಧ್ಯ ಅನುವಾದದಲ್ಲಿ ಇವೆಲ್ಲಾ ಸವಿವರವಾಗಿ ಸಶಕ್ತವಾಗಿ ಬಂದಿವೆ.

ಡಾ.ಅಜುರ್ದಾರವರು ಮೂಲ ಕಾಶ್ಮೀರಿಗಳ ನೋವನ್ನು, ವ್ಯಥೆಯನ್ನು 'ಹದ್ದುಗಳು' ಎಂಬ ಪ್ರಬಂಧದಲ್ಲಿ ಸೊಗಸಾಗಿ ವಿವರಿಸಿದ್ದಾರೆ. ಕನ್ನಡದಲ್ಲಿ ಹೆಚ್.ಜಿ.ಸಣ್ಣಗುಡ್ಡಯ್ಯ 'ಹದ್ದುಗಳು' ಎಂಬ ಪ್ರಬಂಧ ಬರೆದಿದ್ದರೂ ಅದಕ್ಕೂ ಇವರ ಈ ಪ್ರಬಂಧಕ್ಕೂ ಅಜಗಜಾಂತರವಿದೆ. ಲೇಖಕರು ಹದ್ದುಗಳನ್ನು ಒಂದು ರೂಪಕವಾಗಿ ಇಲ್ಲಿ ಬಳಸುತ್ತಾರೆ. ಕಾಶ್ಮೀರದ ಮೂಲನಿವಾಸಿಗಳಂತಿರುವ ಅಲ್ಲಿನ ಪಕ್ಷಿ ಬುಲ್‌ಬುಲ್. ಅಲ್ಲಿನ ಪ್ರಾಕೃತಿಕ ಉದ್ಯಾನವನದಲ್ಲಿ ತನ್ನ ಪಾಡಿಗೆ ತಾನು ಹೂವುಗಳ ಮಕರಂದವನ್ನು ಹೀರುತ್ತಾ ಬದುಕನ್ನು ಸಾಗಿಸುತ್ತಿರುತ್ತದೆ. ಆದೆ ಆ ನಾಡಿಗೆ ಹದ್ದುಗಳ ಪ್ರವೇಶದೊಂದಿಗೆ ಇಡೀ ವಾತಾವರಣವೇ ಬದಲಾಗುತ್ತದೆ. ಹದ್ದುಗಳು ವಲಸೆಯ ಹಕ್ಕಿಗಳಾಗಿದ್ದು. ಕಾಶ್ಮೀರವನ್ನು ಪ್ರವೇಶಿಸಿ ಇಲ್ಲಿನ ಪ್ರಾಕೃತಿಕ ಸಾಂಸ್ಕೃತಿಕ ವಾತಾವರಣವನ್ನೇ ಬದಲಾಯಿಸುತ್ತವೆ. ಕೊನೆಗೆ ಪಾರಮ್ಯವನ್ನು ಗಳಿಸಿ ಸ್ಥಳೀಯ ಸಂಸ್ಕೃತಿಯನ್ನು ನಾಶ ಮಾಡುವ ವಿವರ ಈ ಪ್ರಬಂಧದಲ್ಲಿ ಇದೆ. ಧಾರ್ಮಿಕವಾಗಿ, ಭಾಷಿಕವಾಗಿ, ಸಾಂಸ್ಕೃತಿಕವಾಗಿ, ರಾಜಕೀಯವಾಗಿ, ಸದಾದಾಳಿಗೆ ಗುರಿಯಾಗುವ ನೆಲದ ನೋವನ್ನು ಬಹು ಆರ್ದ್ರವಾಗಿ, ಅಜ಼ುರ್ದಾರವರು ತೋಡಿಕೊಂಡಿದ್ದಾರೆ. ಕನ್ನಡದಲ್ಲಿ ಬಂದಿರುವ ಪ್ರತಿಬಿಂಬ ಇಂತಹ ನೋವಿನ ಮೂಲವನ್ನು ಗ್ರಹಿಸಿ ಅನುವಾದ ಮಾಡಿದ್ದರಿಂದ ಅನುವಾದ ಸಾರ್ಥಕವಾಗುತ್ತದೆ. ಬೆಂಗಳೂರಿನ ಸ್ಥಿತಿಯು ಈಗೀಗ ಇದಕ್ಕಿಂತ ಭಿನ್ನವಿಲ್ಲ ಎನಿಸುತ್ತದೆ. ಪರಭಾಷಿಕರ ಬೃಹತ್ ವಲಸೆಯಿಂದ ಕರ್ನಾಟಕದ ಮೂಲ ಸಂಸ್ಕೃತಿ ಮರೆಯಾಗುತ್ತಿದೆ. ಹೋಳಿ, ಓಣಂ ಆರ್ಭಟೆಯು ಅಪಾರ್ಟಮೆಂಟುಗಳಲ್ಲಿ ಹೆಚ್ಚುತ್ತಿದ್ದು ಆದರ ಮುಂದೆ ನಮ್ಮ ಸಂಕ್ರಾಂತಿ, ಉಗಾದಿಯು ಮಂಕಾಗುತ್ತಿದೆ. ಉತ್ತರ ಭಾರತೀಯರು ಸದಾ ಕಾಳು ಹಾಕಿ ಪೋಷಿಸುವ ಪಾರಿವಾಳಗಳು ಎಲ್ಲೆಲ್ಲೂ ಕಾಣಿಸುತ್ತಿದ್ದು ಇಲ್ಲಿನ ಗುಬ್ಬಿ, ಕಾಗೆ,

ಕಾಜಾಣ, ಮೈನಾಗಳು ಕಣ್ಣಿಗೆ ಗೋಚರವಾಗುವುದು ಕಡಿಮೆಯಾಗಿದೆ. ಜನಪದದ ಕುಣಿತ, ಯಕ್ಷಗಾನ, ಬಯಲಾಟ, ಕೋಲಾಟ, ಹಾಡು, ಹಸೆಗಳು ಮರೆಯಾಗಿ ಗರ್ಭಾ, ಕಥಕ್, ತಮಾಷಾ ಮುಂತಾದುವು ಮುನ್ನೆಲೆಗೆ ಬರುತ್ತಿವೆ.

ಪ್ರತಿಬಿಂಬದ ಹೆಚ್ಚಿನ ಲೇಖನಗಳಲ್ಲಿ ಮನುಷ್ಯರ ನಡುವಳಿಕೆಗಳ ಬಗ್ಗೆ, ಸ್ವಭಾವಗಳ ಬಗೆ ಲೇಖಕರ ಸೂಕ್ಷ್ಮ ಸಂವೇದನೆಗಳನ್ನು ಕಾಣಬಹುದು. 'ಏಣಿ' 'ಛಾಯಾಚಿತ್ರ' 'ಬಣ್ಣಗಾರ' ಮುಂತಾದ ಪ್ರಬಂಧಗಳಲ್ಲಿ ಅಜ಼ರ್ದಾರವರು ಮನುಷ್ಯ ಸ್ವಭಾವದ ಅತಿರೇಕಗಳನ್ನು ವಿಡಂಬಿಸುತ್ತಾರೆ. ಅವರು ಕಟ್ಟಿಕೊಡುವ ಚಿತ್ರಗಳು ರೂಪಾತ್ಮಕವಾಗಿ ಪ್ರತಿಬಿಂಬದೊಂದಿಗೆ ಬರುತ್ತದೆ. ಒಂದು ವಿಷಯವನ್ನು ನಿರೂಪಿಸುವಾಗ ಇನ್ನೊಂದೆಡೆಗೆ, ಬೇರೊಂದು ಸಂಗತಿ ಕಡೆಗೆ ದೃಷ್ಟಿ ನೆಟ್ಟಿರುತ್ತದೆ. ಇದು ಅವರ ಶಕ್ತಿಯೇ ಆಗಿದೆ. ಇಂತಹ ವಿಶಿಷ್ಟ ಕೃತಿಯೊಂದು ಡಾ.ಆನಂದರಾಮ ಉಪಾಧ್ಯರ ಮೂಲಕ ಕನ್ನಡಕ್ಕೆ ಬಂದಿವೆ. ಕನ್ನಡಿಗರಿಗೆ ಕಾಶ್ಮೀರಿ ಸಂಸ್ಕೃತಿಯನ್ನು ಬದುಕನ್ನು ಬಹು ಸೊಗಸಾಗಿ ಈ ಪುಸ್ತಕ ಪರಿಚಯಿಸುತ್ತದೆ. ಈ ಕೃತಿಯಲ್ಲಿ ಡಾ.ಅಜುರ್ದಾರವರು 20 ಪುಟಗಳಷ್ಟು ಧೀರ್ಘ ಮುನ್ನುಡಿಯನ್ನು ಬರೆದಿದ್ದಾರೆ. ಪ್ರಬಂಧ ಸಾಹಿತ್ಯದ ಬಗ್ಗೆ ಅವರಿಗೆ ಇರುವ ವಿಚಾರಧಾರೆಗಳನ್ನು ಇಲ್ಲಿ ಗಮನಿಸಬಹುದು. ಆಧುನಿಕ ಕಾಶ್ಮೀರಿ ಸಾಹಿತ್ಯದ ಬಗ್ಗೆ ಅನೇಕ ವಿವರಗಳನ್ನು ನೀಡಿದ್ದಾರೆ. ಕಾಶ್ಮೀರಿಗಳ ಹಿಂಜರಿಕೆಯ ಗುಣವನ್ನು ಅವರ ಭಾಷೆಯಲ್ಲೂ ಕಾಣಬಹುದು ಎನ್ನುತ್ತಾರೆ. ಅಲ್ಲಿ ಗದ್ಯ ಕಡಿಮೆ ಇದ್ದು ಕವಿತೆಯ ಕಸುವುಗಾರಿಕೆಯಲ್ಲಿ ಭಾಷಾ ಸೌಂದರ್ಯವನ್ನು ಕಾಣಬಹುದು. ಕವಿಗಳಾಗಿ ಕಾಶ್ಮೀರಿಗಳು ಸಫಲರಾಗಿದ್ದಾರೆ ಎನ್ನುತ್ತಾರೆ.

'ಲಲ್ಲಾದೇವಿ' ಮತ್ತು 'ಪ್ರತಿಬಿಂಬ' ಈ ಎರಡು ಪುಸ್ತಕಗಳೂ ಕನ್ನಡಕ್ಕೆ ವಿಚಾರಗಳೆರಡನ್ನೂ ತಿಳಿಸಿ ಕೊಡುತ್ತವೆ. ಒಂದು ಆಧ್ಯಾತ್ಮಿಕ ಹೊಳಹುಗಳನ್ನು ತಿಳಿಸಿದರೆ, ಇನ್ನೊಂದು ಸಾಮಾಜಿಕ ಸಂಗತಿಗಳ ಸಾಹಿತ್ಯ ವಿಚಾರಗಳನ್ನು ತಿಳಿಸುತ್ತವೆ. ಈ ಮೂಲಕ ಕಾಶ್ಮೀರಿಗಳ ಸಮಗ್ರ ಬದುಕಿನ ಪರಿಚಯ ಕನ್ನಡಿಗರಿಗೆ ಆಗುತ್ತದೆ. ಬೆಂಗಳೂರಿನ ವಿಹಾ ಪುಸ್ತಕ ಹಾಗೂ ಕೇಂದ್ರ ಸಾಹಿತ್ಯ ಅಕಾಡೆಮಿಯು ಕನ್ನಡಿಗರ ಕೃತಜ್ಞತೆಗೆ ಪಾತ್ರವಾಗಿವೆ. ಒಂದು ಹದಿನಾಲ್ಕನೇ ಶತಮಾನದ ಧಾರ್ಮಿಕ ಪರಿಸರದ ಚಿತ್ರಣ ನೀಡಿದರೆ, ಇನ್ನೊಂದು ಸ್ವಾತಂತ್ರ್ಯೋತ್ತರ ಕಾಶ್ಮೀರದ ಜನಜೀವನವನ್ನು ಹಾಗೂ ಅಲ್ಲಿನ ಆಚಾರ ವಿಚಾರಗಳ ನಡೆನುಡಿಗಳ ನಂಬಿಕೆ, ಆಚರಣೆಗಳ ವಿವರವನ್ನು ಒದಗಿಸುತ್ತದೆ. ಇವೆರಡನ್ನು ಕನ್ನಡಕ್ಕೆ ಅನುವಾದಿಸುವವರು ಖ್ಯಾತ ಕವಿ ಆರ್.ವಿಜಯರಾಘವನ್ ಹಾಗೂ ಯಕ್ಷಗಾನ ವಿದ್ವಾಂಸ ಡಾ॥ ಆನಂದರಾಮ್ ಉಪಾಧ್ಯರ ಶ್ರಮ ಅಭಿನಂದನೀಯ.

□

ಲೇಖಕರ ಇತರೆ ಕೃತಿಗಳ ಕುರಿತ ಅಭಿಪ್ರಾಯಗಳು

1. ಯಕ್ಷಗಾನದ ಮಹಾಭಾರತ ಪ್ರಸಂಗಗಳು :

ಕನ್ನಡದಲ್ಲಿ ಯಕ್ಷಗಾನ ಕುರಿತು ಸಂಶೋಧನೆ ಮಾಡಿ ವಿಶ್ವವಿದ್ಯಾಲಯದಿಂದ ಪಿ.ಹೆಚ್.ಡಿ. ಪಡೆದವರಲ್ಲಿ ಮೊದಲಿಗರಾಗಿರುವ ಡಾ.ಆನಂದರಾಮ ಉಪಾಧ್ಯರ "ಯಕ್ಷಗಾನ ಮಹಾಭಾರತ ಪ್ರಸಂಗಗಳು" ಎಂಬ ಈ ಪ್ರೌಢಪ್ರಬಂಧವು 1990ರಲ್ಲಿ ಪ್ರಕಟಗೊಂಡಿತ್ತು. ಉಸ್ಮಾನಿಯ ವಿಶ್ವವಿದ್ಯಾನಿಲಯದಲ್ಲಿ ಕನ್ನಡ ಪ್ರಾಧ್ಯಾಪಕರಾಗಿದ್ದ ಡಾ.ಕೆ.ಎಂ.ಕೃಷ್ಣರಾವ್ ಅವರ ಮಾರ್ಗದರ್ಶನದಲ್ಲಿ 1984ರಲ್ಲಿ ಪ್ರಬಂಧ ಸಲ್ಲಿಸಿ, 1985ರಲ್ಲಿ ಈ ಕೃತಿಯಿಂದಾಗಿ ಪದವಿ ಪಡೆದರು. ಪ್ರಸಂಗಗಳನ್ನು ವಿವಿಧ ದೃಷ್ಟಿಕೋನಗಳಿಂದ ಇಲ್ಲಿ ಅಧ್ಯಾಯನಮಾಡಲಾಗಿದ್ದು "ಪ್ರಸಂಗಗಳಲ್ಲಿ ಸಾಮಾಜಿಕ ಅಂಶಗಳು" ಎಂಬ ಪ್ರಬಂಧ ಭಾಗದಲ್ಲಿ ಕನ್ನಡನಾಡಿನ ಗ್ರಾಮೀಣ ಪರಿಸರದ ಯಕ್ಷಗಾನ ಕವಿಗಳು ತಾವು ಕಂಡುಕೊಂಡ ಅನುಭವಗಳನ್ನು ತಮ್ಮ ಪರಿಸರದ ಸಾಮಾಜಿಕ ಚಿತ್ರಣಗಳನ್ನು ಹೇಗೆ ಸಾಂಧರ್ಭಿಕವಾಗಿ ಮತ್ತು ಔಚಿತ್ಯಪೂರ್ಣವಾಗಿ ಪೌರಾಣಿಕ ಪ್ರಸಂಗಗಳಲ್ಲಿ ಅಳವಡಿಸಿಕೊಂಡಿದ್ದಾರೆ ಎಂಬುವುದನ್ನು ಪರಿಶೀಲಿಸಿದ್ದಾರೆ.

ಇದು ಅವರ ಪ್ರೌಢಪ್ರಬಂಧದ ಭಾಗವಾದುದ್ದರಿಂದ ಇಲ್ಲಿ ನೀಡಲಾದ ಉದಾಹರಣೆಗಳು ಮಹಾಭಾರತದ ಪ್ರಸಂಗಗಳಿಂದ ಎತ್ತಿಕೊಂಡತಹವೇ ಆಗಿವೆ. ಇತರ ಪೌರಾಣಿಕ ಪ್ರಸಂಗಗಳಲ್ಲಿಯೂ ಈ ರೀತಿಯ ಸಾಮಾಜಿಕ ಪರಿಸರದ ಚಿತ್ರಣಗಳು ಸಾಕಷ್ಟು ಇವೆ ಎಂಬುವುದನ್ನು ನೆನಪಿಸಿಕೊಳ್ಳಬೇಕಾಗಿದೆ. ಯಕ್ಷಗಾನದ ರಂಗಸ್ಥಳದಲ್ಲಿ ಬರುವ ವೇಷಗಳು ಪೌರಾಣಿಕ ಕಾಲದವೇ. ಆದರೂ ಪ್ರಸ್ತುತ ಪರಿಸರಕ್ಕೆ ಆ ವೇಷಗಳು ಹೊಂದಿಕೊಂಡಿರುವುದನ್ನು ಪ್ರಚಲಿತ ಭಾಷೆಯನ್ನೇ ಆಡುತ್ತಾ ಸಾಮಾನ್ಯ ಜನಜೀವನದ ಸ್ಪಂದನವನ್ನು ಉಳಿಸಿಕೊಂಡಿರುವುದನ್ನು ಆನಂದರಾಮ ಉಪಾಧ್ಯರವರು ಗುರುತಿಸಿದ್ದಾರೆ. ಹೀಗೆ ಯಕ್ಷಗಾನದ ಭೂಮಿಕೆಯೊಂದು ಏಕಕಾಲದಲ್ಲಿ ಅಲೌಕಿಕವು, ಸಮಕಾಲೀನವು ಆಗಿರುವುದನ್ನು ಅವರು ಗುರುತಿಸಿದ್ದಾರೆ. ಯಕ್ಷಗಾನ ಸಂಶೋಧನೆಗೆ ಈ ರೀತಿಯ ವಿಭಿನ್ನ ನೆಲೆಗಳನ್ನು ಆಯಾಮಗಳನ್ನು ಒದಗಿಸಿದ್ದು ವಿಶ್ವವಿದ್ಯಾನಿಲಯದಂತಹ "ಅಕಾಡೆಮಿಕ್" ಹಿನ್ನೆಲೆಯಲ್ಲಿ ಅಧ್ಯಯನ ಎಂಬುವುದು ಗುರುತಿಸಬೇಕಾದ ವಿಷಯ. ಆ ದೃಷ್ಟಿಯಿಂದಲೂ ಈ ಮೊತ್ತಮೊದಲ

ಪಿ.ಹೆಚ್.ಡಿ. ಪ್ರೌಢಪ್ರಬಂಧವಾದ "ಯಕ್ಷಗಾನ ಮಹಾಭಾರತ ಪ್ರಸಂಗಗಳು" ಐತಿಹಾಸಿಕ ಪ್ರಾಮುಖ್ಯವುಳ್ಳದ್ದಾಗಿದೆ.

ಡಾ.ಪಾದೆಕಲ್ಲುವಿಷ್ಣುಭಟ್ಟ (ಯಕ್ಷರಂಗಪತ್ರಿಕೆ)
ಮಾರ್ಚ್ 21 ರ ಸಂಚಿಕೆ

ಮಹಾಭಾರತದ ಐತಿಹಾಸಿಕ ಅಂಶಗಳ ಕಡೆಗೂ ಬೆಳಕು ಚೆಲ್ಲಿ, ಪಾತ್ರಗಳ ಮನೋಧರ್ಮದ ಕುರಿತು ವಿಶ್ಲೇಷಿಸಿದ್ದಾರೆ. "ಧರ್ಮಕ್ಕೆ ಅಂತಿಮ ಜಯವಿದೆ" ಎಂಬ ಮಹಾಭಾರತದ ಸಾರವು ಯಕ್ಷಗಾನದ ಮಹಾಭಾರತ ಪ್ರಸಂಗಗಳಲ್ಲಿ ಪ್ರತಿಫಲಿಸಿದೆ ಎಂಬ ನಿಲುವಿಗೆ ಬಂದಿದ್ದಾರೆ. 94 ಪ್ರಸಂಗಗಳ ಆಶಯವನ್ನು ಇಲ್ಲಿ ವಿಶ್ಲೇಷಿಸಲಾಗಿದೆ. ಕವಿಗಳು ಈ ಪ್ರಸಂಗಗಳಲ್ಲಿ ಪುರಾಣ ಭಂಜನೆಯನ್ನು ಮಾಡದೇ, ಪುರಾಣೀಕರಣವಾದ ಹಾದಿಯಲ್ಲೇ ಸಾಗಿದ್ದಾರೆ ಎನ್ನುವುದು ಗಮನಾರ್ಹ. ಪ್ರಸಂಗಗಳ ಸಾಹಿತ್ಯವಿಮರ್ಶೆ, ಛಂದೋಬಂಧಗಳು, ಗದುಗಿನಭಾರತ, ಜೈಮಿನಿ ಭಾರತಗಳೇ ಮುಂತಾದ ಮಾರ್ಗಕಾವ್ಯಗಳ ಪ್ರಭಾವ ಇತ್ಯಾದಿ ವಿಚಾರಗಳನ್ನು ಇಲ್ಲಿ ಸೋದಾಹರಣವಾಗಿ ಚರ್ಚಿಸಲಾಗಿದೆ. ಮಹಾಭಾರತ ಪ್ರಸಂಗಗಳ ಸಾಂಸ್ಕೃತಿಕ ಅಧ್ಯಯನ ಆಸಕ್ತಿದಾಯಕವಾಗಿದೆ. ಜನಪದ ನಂಬಿಕೆಗಳಾದ ವಿಧಿ, ಭೂತಾರಾಧನೆ, ಜ್ಯೋತಿಷ್ಯ, ದೈವಭಕ್ತಿ ಮುಂತಾದುವುಗಳನ್ನು ಪ್ರಸಂಗ ಪದ್ಯಗಳ ಸಹಿತ ಚರ್ಚಿಸಲಾಗಿದೆ. ಬಡತನ, ಜಾತಿಪದ್ಧತಿ, ವೈವಾಹಿಕ ಪದ್ಧತಿಗಳು, ಅವಿಭಕ್ತ ಕುಟುಂಬಕ್ರಮ ಮುಂತಾದ ಸಾಮಾಜಿಕ ಅಂಶಗಳ ಕಡೆಗೂ ಇಲ್ಲಿ ಗಮನಹರಿಸಲಾಗಿದೆ.

ಮಹಾಭಾರತ ಪ್ರಸಂಗಗಳ ಪ್ರದರ್ಶನದ ಕುರಿತೂ ಇಲ್ಲಿ ವಿವೇಚಿಸಲಾಗಿದೆ. ಭೌಗೋಳಿಕ ಪ್ರದೇಶ, ರೂಡಿಯಲ್ಲಿರುವ ಪ್ರಸಂಗಗಳು, ಹರಿಕೆ ಮೇಳಗಗಳು, ಟೆಂಟ್ ಪ್ರದರ್ಶನಗಳು, ಹಿಮ್ಮೇಳ, ಪ್ರಸಾದನ, ನೃತ್ಯ ಇತ್ಯಾದಿಗಳನ್ನು ಮೂರು ತಿಟ್ಟುಗಳ ಹಿನ್ನೆಲೆಯಲ್ಲಿ ಚರ್ಚಿಸಲಾಗಿದೆ. ಯಕ್ಷಗಾನದ ಗೊಂಬೆಯಾಟ, ಹೂವಿನಕೋಲು, ಕವಿಗಳ ವಿವರಗಳು ಮುಂತಾಗಿ ಯಕ್ಷಗಾನದ ಕುರಿತು ಗಂಭೀರವಾದ ಚರ್ಚೆ ಇರುವಸಂಶೋಧನಾ ಪ್ರಬಂಧಎಂಬುವುದು ಈ ಗ್ರಂಥದಹಿರಿಮೆ.

ಡಾ. ಕಬ್ಬಿನಾಲೆ ವಸಂತ ಭಾರದ್ವಾಜ್

ಯಕ್ಷಗಾನ ಸಾಹಿತ್ಯ ಚರಿತ್ರೆ, ಪುಟ 404, 405

2. ಯಕ್ಷಗಾನ ರಾಮಾಯಣ ಪ್ರಸಂಗಗಳು :

ಜನಪದ ಸಾಹಿತ್ಯ ಪ್ರಕಾರಗಳಲ್ಲಿ ಯಕ್ಷಗಾನಕ್ಕೆ ವಿಶಿಷ್ಟವಾದ ಸ್ಥಾನವಿದೆ.

ಗ್ರಾಮಾಂತರ ಪ್ರದೇಶಗಳ ಜನರಲ್ಲಿ ಹಿಂದೂಸಂಸ್ಕೃತಿ, ಧರ್ಮ, ನಿಷ್ಠೆ ತಿಳುವಳಿಕೆ, ಆಚರಣೆಗಳು ಉಳಿದು ಬಂದಿರುವುದಕ್ಕೆ ಬಹುಮಟ್ಟಿಗೆ ಯಕ್ಷಗಾನ ಪ್ರಸಂಗಗಳು ಕಾರಣ ಎಂಬ ಆನಂದರಾಮ ಉಪಾಧ್ಯರ ಅಭಿಪ್ರಾಯ ಅಂಗೀಕಾರಾರ್ಹವಾಗಿದೆ. ಆದುದರಿಂದ ಯಕ್ಷಗಾನದ ಕೃತಿಗಳ ಪ್ರದರ್ಶನಗಳ ಮೌಲ್ಯ, ಪ್ರಸಾರ ಕಾರ್ಯ, ಪ್ರಯೋಜನ ವಿಶಿಷ್ಟವಾದದ್ದೂ, ಬೆಲೆಯುಳ್ಳದ್ದೂ ಆಗಿದೆ. ಸಮಾಜದಲ್ಲಿ ಸದ್ಗುಣಗಳು ಬೆಳೆಯಲು, ಬೇರೂರಲು, ಜನತೆಯ ಸಂಸ್ಕೃತಿ ಸಂವರ್ಧನೆ ಮಾಡಲು, ಪ್ರಸಂಗಗಳು ನೆರವಾಗಿವೆ ಎಂಬುವುದು ನಿಜ. ಆದುದರಿಂದ ಯಕ್ಷಗಾನ ರಾಮಾಯಣ ಪ್ರಸಂಗಗಳ ಸಾಂಸ್ಕೃತಿಕ ಮೌಲ್ಯ ಅಮೂಲ್ಯ.

ಯಕ್ಷಗಾನ ಪ್ರಸಂಗಗಳನ್ನು ಕುರಿತು ಉಪಾಧ್ಯರವರು ಚೆನ್ನಾಗಿ ಬರೆದಿದ್ದಾರೆ. ಪ್ರಸಂಗಗಳ ವಸ್ತುವೈವಿಧ್ಯ ಅವುಗಳಲ್ಲಿ ರಾಮಾಯಣದ ಸ್ಥಾನ, ರಾಮಾಯಣದ ಕಥೆಯ ವಿವಿಧ ಸನ್ನಿವೇಷಗಳನ್ನು ಆಧರಿಸಿ ಯಕ್ಷಗಾನ ಕವಿಗಳು ಹೀಗೆ ಬಿಡಿಬಿಡಿಯಾದ ಕೃತಿಗಳನ್ನು ರಚಿಸಿದ್ದಾರೆ ಎಂಬುವುದನ್ನು ವಿವರವಾಗಿ ಸಮೀಕ್ಷಿಸಿದ್ದಾರೆ. ಅಲ್ಲದೇ ಅವುಗಳ ಸಾಹಿತ್ಯಿಕ, ತಾತ್ವಿಕ, ಮೌಲ್ಯಗಳನ್ನು ಚರ್ಚಿಸಿದ್ದಾರೆ. ಅವುಗಳಲ್ಲಿನ ರಸಪ್ರತಿಪಾದನೆಯನ್ನು ವಿವೇಚಿಸಿದ್ದಾರೆ. ಅಲ್ಲಿನ ಸಾಮಾಜಿಕ ಅಂಶಗಳನ್ನು ವಿವರಿಸಿದ್ದಾರೆ. ಪಾತ್ರಗಳ ಚಿತ್ರಣವನ್ನು ಸಮಾಲೋಚಿಸಿದ್ದಾರೆ. ಯಕ್ಷಗಾನ ಕವಿಗಳು ಕಲಾದೃಷ್ಟಿಯಿಂದ ಜನಮನರಂಜನೆಗಳ ಗುರಿಯಿಂದ ಪ್ರೌಢಕಾವ್ಯಗಳಲ್ಲಿ ಉಕ್ತವಾದ ಕಥೆಗಳ ಸತ್ವವನ್ನು ತಮ್ಮದೇ ಆದ ರೀತಿಯಲ್ಲಿ ಪ್ರದರ್ಶನ ಯೋಗ್ಯವಾಗುವಂತೆ ಮಾಡುವಲ್ಲಿ ಯಶಸ್ವಿಯಾಗಿದ್ದಾರೆ ಎಂಬ ಲೇಖಕರ ನಿಲುವು ಸರಿಯಾಗಿದೆ.

ಡಾ.ಕೆ.ಎಂ.ಕೃಷ್ಣರಾವ್
(ಕೃತಿಯ ಮುನ್ನುಡಿಯಿಂದ)

3. ಯಕ್ಷದರ್ಶನ :

ಯಕ್ಷಗಾನದ ಕಲಾವಿದರ ಸಂದರ್ಶನಗಳ ಸಂಗ್ರಹ. ಯಕ್ಷಗಾನಕ್ಕೆ ಸಂಬಂಧಿಸಿದ ಜ್ವಲಂತ ಸಮಸ್ಯೆಗಳ ಬಗ್ಗೆ ಪ್ರಶ್ನೆಗಳನ್ನು ಎತ್ತಿ ಯಕ್ಷಗಾನದಲ್ಲಿ ತಮ್ಮ ಬದುಕನ್ನು ತೊಡಗಿಸಿರುವ ಕಲಾವಿದರ ಅನಿಸಿಕೆಗಳನ್ನು ಅಭಿಪ್ರಾಯಗಳನ್ನು ಸಂಗ್ರಹಿಸಿ ಆ ಅಭಿಪ್ರಾಯಗಳ ವಿಶ್ಲೇಷಣೆಗೂ ಲೇಖಕರು ತೊಡಗುವುದರಿಂದ ಈ ಗ್ರಂಥಕ್ಕೆ ವಿಶೇಷ ಮಹತ್ವಪ್ರಾಪ್ತವಾಗಿದೆ.

ಡಾ.ಆನಂದ ರಾಮ ಉಪಾಧ್ಯರು ತಮ್ಮ ಲೇಖನಿಯನ್ನು ಯಕ್ಷಗಾನ ಕಲೆಯಪ್ರಚಾರ ಪರಿಶೀಲನೆಗೆ ಮೀಸಲಾಗಿ ಇರಿಸಿರುವರು. ಈ ಕಲೆಯ ಬಗ್ಗೆ ಅವರಿಗಿರುವ ಪ್ರೀತಿ ಅನನ್ಯವಾದದ್ದು. ಯಾವುದೇ ಸೀಮಿತ ಪರಿಧಿಗೂ ತನ್ನನ್ನು ಬದ್ಧಗೊಳಿಸಿಕೊಳ್ಳದ, ನಿರ್ಮತ್ಸರವಾದ, ಆರ್ದ್ರವಾದ, ಮನೋಧರ್ಮದಿಂದ

ಉಪಾಧ್ಯರು ತಮ್ಮ ಬರವಣಿಗೆಗೆ ಹೃದ್ಯತೆಯನ್ನು ದೊರಕಿಸುತ್ತಾರೆ. ಯಕ್ಷಗಾನದ ಬಗೆಗೆ ಅವರಿಗಿರುವ ಗಾಢ ಅಭಿಮಾನ, ಅವರ ವಿಮರ್ಶೆಯ ಮೊನಚನ್ನು ಮೊಂಡುಮಾಡಿಲ್ಲ. ಆದುದರಿಂದಲೇ "ಯಕ್ಷದರ್ಶನ" ಯಕ್ಷಗಾನಕ್ಕೆ ಸಂಬಂಧಿಸಿದ ಕನ್ನಡದ ಗಮನೀಯ ಕೃತಿಗಳಲ್ಲಿ ಒಂದಾಗುತ್ತದೆ.

ಡಾ.ಹೆಚ್.ಎಸ್.ವೆಂಕಟೇಶಮೂರ್ತಿ

(ಕೃತಿಯಬೆನ್ನುಡಿಯಿಂದ)

4. ಯಕ್ಷಚಿಂತನೆ :

ಇಲ್ಲಿ ಯಕ್ಷಗಾನ ರಂಗಭೂಮಿಗೆ ಸಂಬಂಧಿಸಿದ 20 ಲೇಖನಗಳಿದ್ದರೆ ಉಳಿದವು ಯಕ್ಷಗಾನ ಸಾಹಿತ್ಯ ಹಾಗೂ ಕನ್ನಡ ಸಾಹಿತ್ಯಕ್ಕೆ ಸಂಬಂಧಿಸಿದ ಬರಹಗಳಾಗಿವೆ. "ಏಕವ್ಯಕ್ತಿ ಯಕ್ಷಗಾನ"ದ ಕುರಿತಾದ ನಾಲ್ಕು ಲೇಖನಗಳು "ಯಕ್ಷರಂಗ" ಮಾಸ ಪತ್ರಿಕೆಯ ವಿಶೇಷ ಸಂಚಿಕೆಯಾಗಿ ರಚಿತಗೊಂಡವು.

ಡಾ. ಉಪಾಧ್ಯರಚಿಂತನೆಯಲ್ಲಿ ನಿನ್ನೆ, ಇಂದು, ನಾಳೆಗಳಿವೆ. ಯಕ್ಷಗಾನದ ಶಬ – ಸ್ಪರ್ಶ–ರೂಪ–ರಸ–ಗಂಧಗಳನ್ನು ಗ್ರಹಿಸಿದ ಪಂಚೇಂದ್ರಿಯ ಪ್ರಜ್ಞೆ ಅವರಿಗೆ ಸಿದ್ಧಿಸಿದೆ. ಕಳೆದ ಸುಮಾರು ಅರ್ಧಶತಮಾನದಲ್ಲಿ ಕಂಡುಬಂದ ಯಕ್ಷಗಾನ ಕಲೆಯ ಇತಿಚಿತ್ರ–ಗತಿಚಿತ್ರಗಳನ್ನು ಅವರು ಈ ಸಂಕಲನದಲ್ಲಿ ಸಮರ್ಥವಾಗಿ ಹಿಡಿದಿಟ್ಟಿದ್ದಾರೆ. ಕಲಾಮೀಮಾಂಸೆಯಿಂದ ತೊಡಗಿ, ರಂಗದಲ್ಲಿ ಅದರ ನಿರ್ವಹಣೆಯ ತೊಡಕು, ಸಂಶೋಧನೆಯ ವಿವಿಧ ಮಜಲುಗಳು, ಪರಂಪರೆ ಮತ್ತು ಪ್ರಯೋಗ, ಕಲಾವಿದರ ತಪ್ಪನ್ನು ಹೊರಗಿನ ಪ್ರತಿಕ್ರಿಯೆ ಮುಂತಾದ ವಿಭಿನ್ನ ಪಾತಳಿಗಳಿಂದ ಯಕ್ಷಗಾನವನ್ನು ವಿಶ್ಲೇಷಿಸುವ ಧ್ಯಾನಸ್ಥ ಬರಹಗಳು ಇಲ್ಲಿ ಸಮಾಹಿತ ಗೊಂಡಿವೆ. ಈ ಕಾರಣದಿಂದಾಗಿ ಇದೊಂದು ಸಂಗ್ರಹ ಯೋಗ್ಯವಾದ ಕೃತಿ ಎಂಬ ಡಾ.ವಸಂತ ಭಾರದ್ವಾಜರ ಅಭಿಪ್ರಾಯ ಸರಿಯಾಗಿಯೇ ಇದೆ. ಕಳೆದ ಹದಿನೈದು ವರ್ಷಗಳ ಅವಧಿಯಲ್ಲಿ ಯಕ್ಷಗಾನದ ಕುರಿತು ಅವರ ಯೋಜನೆಗಳು ಮತ್ತು ವಿಚಾರಗಳು "ಯಕ್ಷಚಿಂತನೆ"ಯ ಹೆಸರಿನಲ್ಲಿ ಓದುಗರ ಕೈಸೇರುತ್ತಿದೆ.

ಕಡತೋಕ ಗೋಪಾಕೃಷ್ಣಭಾಗವತ

(ಯಕ್ಷರಂಗಪತ್ರಿಕೆ. ಜನವರಿ 2016ರ ಸಂಚಿಕೆ)

ಡಾ.ಆನಂದರಾಮ ಉಪಾಧ್ಯರಲ್ಲಿ ಯಕ್ಷಗಾನವು ಊರಿನ ಕಲೆಯೆಂಬ ಪ್ರೀತಿ ಮಾತ್ರವಲ್ಲ ಅದು ಕರ್ನಾಟಕದ ಪ್ರಾತಿನಿಧಿಕ ಕಲೆಯಾಗಬೇಕೆಂಬ ಕಳಕಳಿ ಗಾಢವಾಗಿದೆ. "ಸ್ವಾತಂತ್ರ್ಯೋತ್ತರ ಯಕ್ಷಗಾನದ ರಂಗಭೂಮಿ" ಎಂಬ ಮೊದಲಲೇಖನ ಐತಿಹಾಸಿಕ ಮಹತ್ವ ಪಡೆದಿದೆ. ಊಳಿಗಮಾನ ವ್ಯವಸ್ಥೆಯ

ಶಿಥಿಲತೆ ಮತ್ತು ಶೈಕ್ಷಣಿಕ ಪ್ರಗತಿಗಳಿಂದಾಗಿ ಕರಾವಳಿ ಜಿಲ್ಲೆಗಳಲ್ಲಿ ಬದಲಾವಣೆಯ ಗಾಳಿ ಬೀಸಿತೆಂಬುವುದನ್ನು ಗ್ರಹಿಸಿದ ಲೇಖಕರು ತತ್ಫಲವಾಗಿ ಯಕ್ಷಗಾನವು ಪರಿವರ್ತನೆಗೆ ಒಳಗಾಯಿತೆಂಬುದನ್ನು ಯಕ್ಷಗಾನಕ್ಕೆ ಸೃಜನಶೀಲ ಆಯಾಮಗಳನ್ನು ತಂದುಕೊಟ್ಟಂತೆಯೇ, ಸೃಜನಶೀಲತೆಯ ಹುಚ್ಚಿನಲ್ಲಿ ಅನೇಕ ವಿಕೃತಿಗಳು ಬಂದು ಆಟದ ಆನಂದವನ್ನು ಕೆಡಿಸಿದೆಯೆಂದು ಈ ಪುಸ್ತಕ ಪ್ರತಿಪಾದಿಸುತ್ತದೆ. ಯಕ್ಷಗಾನ ಹಾಗೂ ಕನ್ನಡ ಸಾಹಿತ್ಯದ ಸಂಬಂಧಿ ಮಹತ್ವದ ಅಂಶಗಳನ್ನು ದಾಖಲಿಸಿರುವ ಈ ಕೃತಿಯಕ್ಷ ಜಗತ್ತಿನ ಹೆಮ್ಮೆ.

ಲೇಖಕರು ಪ್ರಸ್ತುತ ಕೃತಿಯ ಮೂಲಕ ಒಂದು ಕಾಲಘಟ್ಟದ ಯಕ್ಷಗಾನವನ್ನಷ್ಟೇ ಅಲ್ಲ, ಯಕ್ಷಜಗತ್ತನ್ನು ಮುಂದಿನ ಪೀಳಿಗೆಗೆಧಾರೆ ಎರೆದಿದ್ದಾರೆ. ಸಂಶೋಧನೆ ಯಕ್ಷಗಾನದ ಅಧ್ಯಾಯನ ನಡೆಸುವವರ ಪಾಲಿಗೆ ಉಪಕಾರಿಯಾದ ಈ ಕೃತಿ. ಯಕ್ಷಗಾನ ಸಾಹಿತ್ಯ ದೃಷ್ಟಿಯಲ್ಲಿ ಗಮನೀಯವಾದದ್ದು. ಯಕ್ಷಗಾನ ಪ್ರೇಮಿಗಳು ಕೈವಶ ಇರಿಸಲೇಬೇಕಾದ ಪುಸ್ತಕಗಳಲ್ಲಿ ಇದೂ ಒಂದು.

ಎಂ.ನಾ.ಚೆಂಬಲ್ತಿಮಾರ್, ಸಂಪಾದಕರು.

(ಕಣಿಪುರ ಮಾಸಪತ್ರಿಕೆ ಮಾರ್ಚ್ 2016ರ ಸಂಚಿಕೆ)

5. ಪ್ರತಿಬಿಂಬ :

ಮಹಮದ್ ಝಮಾನ್ ಅಜುರ್ದಾ ಅವರ ಪ್ರಬಂಧ ಸಂಕಲನ "ಎಸ್ಸೆ"ಯ ಕನ್ನಡ ಅವತರಣಿಕೆ. "ಪ್ರತಿಬಿಂಬ" ಎಂಬದು ಖ್ಯಾತ ಯಕ್ಷಗಾನ ವಿದ್ವಾಂಸರಾದ ಡಾ.ಆನಂದರಾಮ ಉಪಾಧ್ಯರು ಭಾಷಾಂತರಿಸಿದ್ದಾರೆ. ಕನ್ನಡ ಪ್ರಬಂಧ ಸಾಹಿತ್ಯದೊಂದಿಗೆ ಈ ಕಾಶ್ಮೀರಿ ಪ್ರಬಂಧ ಕೃತಿಯನ್ನಿಟ್ಟು ತೂಗಿ ನೋಡಲು, ಕಾಶ್ಮೀರಿ ಜನ ಜೀವನದ ಇಣುಕು ನೋಟ ಕನ್ನಡಿಗರಿಗೆ ದೊರೆಯಲು ಸಹಕಾರಿಯಾಗಲಿದೆ. ಕೇಂದ್ರಸಾಹಿತ್ಯ ಅಕಾಡೆಮಿ ಪುರಸ್ಕೃತ ಕಾಶ್ಮೀರಿ ಕೃತಿಯಲ್ಲಿ ವಿಶೇಷವಾದ ಆಳಅಗಲವನ್ನು, ವ್ಯಂಗ್ಯವಿಡಂಬನೆಯನ್ನು, ಪ್ರತಿಮಾಪೂರ್ಣ ನಿರೂಪಣೆಯನ್ನು ಕಾಣಬಹುದು. ದೂರದ ಕಾಶ್ಮೀರ ನೆಲದ ಮೇಲಿನ ಸ್ವರ್ಗ ಎಂದು ಖ್ಯಾತಿಯಾಗಿದೆ. ಆದರೆ ಅಲ್ಲಿನ ಜನರ ಬದಕು, ಅವರ ನೋವು-ನಲಿವು, ಅವರ ವಿಚಾರಧಾರೆ, ಅವರ ಆಚಾರ-ವಿಚಾರಗಳು, ನಮಗಿಂತ ಭಿನ್ನವೇನೂ ಅಲ್ಲ ಎಂಬುವುದು ಈ ಕೃತಿಯಿಂದ ಮನನವಾಗುತ್ತದೆ.

ಸಾಹಿತ್ಯ ಅಕಾಡೆಮಿ ಪ್ರಕಟಣೆ

(ಕೃತಿಯ ಬೆನ್ನುಡಿಯಿಂದ)

* * *

ಸಮಾಹಿತ



ಡಾ. ಆನಂದರಾಮ ಉಪಾಧ್ಯರ 'ಸಮಾಹಿತ'ದ ಎರಡು ವಿಭಾಗದಲ್ಲಿ ಒಟ್ಟು ಇಪ್ಪತ್ತ್ನಾಲ್ಕು ಲೇಖನಗಳಿವೆ. ಮೊದಲ ಭಾಗದಲ್ಲಿ ಹದಿನಾರು ಯಕ್ಷಗಾನ ಸಂಬಂಧಿತ ಬರೆಹಗಳಿದ್ದರೆ ಎರಡನೆಯ ಭಾಗದಲ್ಲಿ ಎಂಟು ವಿವಿಧ ಸಾಹಿತ್ಯಿಕ ಬಿಡಿ ಬರೆಹಗಳಿವೆ. ಈ ಎಲ್ಲಾ ಬರೆವಣಿಗೆಗಳು ಗಂಭೀರ ಚಿಂತನೆಗಳಾಗಿದ್ದು ಸರಳ ನಿರೂಪಣೆಯಿಂದ ಸೊಗಸಾಗಿದ್ದು ವಿಮರ್ಶೆಯೆಂದರೆ ಕೃತಕ ಶಬ್ದಾಡಂಬರ ಎಂಬ ಅಪವಾದದಿಂದ ದೂರವಾಗಿವೆ. ಇಲ್ಲಿನ ಬರೆಹಗಳು ಹಲವು ಕಾರಣಕ್ಕಾಗಿ ಮಹತ್ವದವುಗಳು.

ಉಪಾಧ್ಯರಿಗೆ ಬರೆಹ ನಿತ್ಯದ ಅಭ್ಯಾಸ. ಈಗಾಗಲೇ ಅನೇಕ ಚಿಂತನ, ಸಂದರ್ಶನ, ಸಂಶೋಧನ ಕೃತಿಗಳನ್ನು ಇವರು ಪ್ರಕಟಿಸಿದ್ದಾರೆ. ಅವುಗಳೆಲ್ಲಾ ಅಧ್ಯಯನಾರ್ಹ ಕೃತಿಗಳೆಂದು ಮಾನಿತವಾಗಿವೆ. ಇವರ ಓದು ವಿಸ್ತಾರವಾದದ್ದು . ಬರೆಹದಲ್ಲಿ ವಿಮರ್ಶೆಯ ಚಿಡುಕಿಲ್ಲ, ವಿಸ್ತಾರವೂ ಆಳವೂ ಆದ ನೋಟಗಳಿವೆ. ನೇರ ನಿರೂಪಣೆಯ ಸುಲಲಿತ ಶೈಲಿಯಿಂದಾಗಿ ಲೇಖನಗಳು ಆಕರ್ಷಣೀಯವಾಗಿರುತ್ತದೆ. ಮೊದಲಭಾಗದ ಬರೆಹಗಳು ಪ್ರಸಂಗ ಸಾಹಿತ್ಯದ ಹಲವು ಮುಖಗಳ ಚಿತ್ರಣಗಳಾಗಿದ್ದು ಒಟ್ಟು ವಿವರಗಳನ್ನು ಕ್ರೋಢೀಕರಿಸಿದರೆ ಸಮಗ್ರ ಯಕ್ಷಗಾನ ಸಾಹಿತ್ಯದ ಚಿಂತನೆಗಳು ಏಕತ್ರವಾಗುತ್ತವೆ.

- ಶ್ರೀಧರ ಡಿ. ಎಸ್.

ಯಕ್ಷಕವಿ ಹಾಗೂ ಅರ್ಥಧಾರಿ

(ಮುನ್ನುಡಿಯಿಂದ)

ನೃಪತುಂಗ ಪ್ರಕಾಶನ